
ರಸಿಕ ರುದ್ರತಪಸ್ವಿ

ಲೋಹಿಯಾ



ಸಂಪಾದಕ

ಡಿ ಎಸ್ ನಾಗಭೂಷಣ

ಚಿಕ್ಕಗೌಡ್ರ ನಾಗನಗೌಡ-ಶಿವಮ್ಮ ದತ್ತಿ-ಹದಿನೇಳನೇ ಪ್ರಕಟಣೆ

ರಸಿಕ ರುದ್ರತಪಸ್ವಿ ಲೋಹಿಯಾ

ಸಂಪಾದಕ

ಡಿ.ಎಸ್.ನಾಗಭೂಷಣ

ಲೋಹಿಯಾ ಪ್ರಕಾಶನ

ಬಳ್ಳಾರಿ

Rasika Rudratapasvi Lohia

(A collection of translated articles by different authors on the person and politics of the Indian Socialist leader Dr. Rammanohar Lohia)

Edited by: D.S. Nagabhushana, Vinoba Nagar, Shivamogga-577 204,
Cell: 94492 42294

Published by
Lohiya Prakashana
'Kshitija', Kappagallu Road
Ballari 583 103, Phone: 08392 257412
Cell: 99007 50549

First Impression	:	2020
Copy right	:	Author
Size	:	Demy 1/8
Paper Used	:	80GSM NS Maplitho
Pages	:	Pages: x+110,
Price	:	Rs.51/-
ISBN	:	978-81-87731-60-3
Cover Design	:	Sudhakar Darbe

ರಸಿಕ ರುದ್ರತಪಸ್ವಿ ಲೋಹಿಯಾ
ಡಿ.ಎಸ್.ನಾಗಭೂಷಣ

ಪ್ರಕಾಶಕರು	:	**ಲೋಹಿಯಾ ಪ್ರಕಾಶನ** 'ಕ್ಷಿತಿಜ', ಕಪ್ಪಗಲ್ಲು ರಸ್ತೆ ಬಳ್ಳಾರಿ ೫೮೩ ೧೦೩ ದೂ: 08392–257412, ಮೊ: 99007 50549
ಮುದ್ರಣ	:	**ಎಲ್.ಕೆ.ಪ್ರೆಸ್ ಇಂಕ್, ಬೆಂಗಳೂರು** **ಮೊ: 87629 66760**
ಪುಟವಿನ್ಯಾಸ	:	**ಎಸ್.ಎಸ್.ಗ್ರಾಫಿಕ್ಸ್**, ನೃಪತುಂಗನಗರ ೫೮೩ ೨೦೬ ಸಂಚಾರಿ 94481 66990

ಪ್ರತಿಗಳು ದೊರೆಯುವ ಸ್ಥಳ
ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ
'ನುಡಿ', ಕಲ್ಲಹಳ್ಳಿ ಬಡಾವಣೆ, ಶಿವಮೊಗ್ಗ 577 204
ಮೊ: 94492 42284

ಸಂಪಾದಕರ ಮಾತು

ಸಮಾಜವಾದಿ ಚಿಂತಕ, ರಾಜಕಾರಣಿ ರಾಮಮನೋಹರ ಲೋಹಿಯಾ ಅವರ ಚಿಂತನೆಗಳು ಮತ್ತು ರಾಜಕಾರಣದ ಪರಿ ಅವರು ನಿಧನರಾದ ಐವ್ವತ್ತು ವರ್ಷಗಳ ನಂತರವೂ ನಿರಂತರವಾಗಿ ಮತ್ತು ಆಯಾ ಕಾಲಘಟ್ಟದ ರಾಷ್ಟ್ರಜೀವನದ ಚಲನ ವಲನಗಳಿಗನುಸಾರವಾಗಿ ವಿಭಿನ್ನ ಕ್ಷೇತ್ರಗಳ ಜನರಿಂದ ವಿಭಿನ್ನ ರೀತಿಯ ವ್ಯಾಖ್ಯಾನಗಳಿಗೆ ಒಳಗಾಗುತ್ತಲೇ ಇವೆ. ಇದು ಲೋಹಿಯಾ ಅವರ ವ್ಯಕ್ತಿತ್ವ ಮತ್ತು ರಾಜಕಾರಣ ಎಷ್ಟು ಸಮೃದ್ಧ ಮತ್ತು ಸೃಜನಶೀಲವಾದದ್ದು ಎಂಬುದರ ಸೂಚನೆಯೇ ಆಗಿದೆ. ಅವರು ಪ್ರತಿಪಾದಿಸಿದ ಸಮಾಜವಾದದಂತೆಯೇ ಅವರ ವ್ಯಕ್ತಿತ್ವ ಕೂಡ ವಿಶಿಷ್ಟವಾದದ್ದು. ಹಾಗೆಂದೇ ಕೇವಲ ರಾಜಕೀಯ ವಿಶ್ಲೇಷಕರೇ ಅಲ್ಲದೆ, ಸಾಹಿತ್ಯ ಕಲೆ ಇತ್ಯಾದಿ ಸಾಂಸ್ಕೃತಿಕ ಕ್ಷೇತ್ರಗಳ ದಿಗ್ಗಜರೂ ಇವರ ಆಲೋಚನೆಗಳು ಮತ್ತು ಬರಹಗಳ ಅಭಿಮಾನಿಗಳೂ, ಆತ್ಮೀಯ ಗೆಳೆಯರೂ ಅಗಿದ್ದರು. ಹಾಗೇ ರಾಜಕೀಯಶಾಸ್ತ್ರದ ಶೈಕ್ಷಣಿಕ ವಿದ್ವಾಂಸರೂ, ವ್ಯಾಖ್ಯಾನಕಾರರೂ ಇವರ ಬಗ್ಗೆ ಕುತೂಹಲ ತಾಳಿ ಬರೆದರು. ಅಂತಹ ಕೆಲವರ ಲೇಖನಗಳನ್ನು ಆಯ್ದು ಅವುಗಳ ಕನ್ನಡ ಅನುವಾದಗಳನ್ನು ಇಲ್ಲಿ ಸಂಕಲಿಸಿ ನೀಡುತ್ತಿದ್ದೇನೆ. ಹತ್ತು ವರ್ಷಗಳ ಹಿಂದೆ ಲೋಹಿಯಾ ಅವರ ಜನ್ಮ ಶತಮಾನೋತ್ಸವದ ನೆನಪಿನಲ್ಲಿ ನಾವು ಸಮಾಜವಾದಿ ಒಲವಿನ ಕೆಲವು ಗೆಳೆಯರು ಸೇರಿ ಹುಟ್ಟುಹಾಕಿದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ ಹತ್ತು ವರ್ಷಗಳನ್ನು ಪೂರೈಸಿ ತಮ್ಮ ದಶಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಲೋಹಿಯಾ ಅವರ ನೆನಪಿಗೆ ಇದು ಸೂಕ್ತ ಕೊಡುಗೆಯೆಂದೇ ಭಾವಿಸಿ ಇದನ್ನು ಓದುಗರ ಕೈಗಿಡುತ್ತಿದ್ದೇವೆ.

ಇಲ್ಲಿನ ಲೇಖನಗಳ ಲೇಖಕರ ವೈವಿಧ್ಯ ಮತ್ತು ಅವರು ಬರೆಯಲು ಆಯ್ದುಕೊಂಡಿರುವ ವಿಷಯಗಳೇ, ಸಂದರ್ಭಗಳೇ ಲೋಹಿಯಾ ಅವರ ಬದುಕಿನ ಮೇರೆವರಿಯದ ಎಲ್ಲೆಗಳ ಪರಿಚಯ ಮಾಡಿಕೊಡುವಂತಿದೆ. ಈ ಪುಸ್ತಕದ ಶೀರ್ಷಿಕೆಗೆ ಕಾರಣವಾಗಿರುವ ಮರಾಠಿಯ ಖ್ಯಾತ ಲೇಖಕ ಪು.ಲ. ದೇಶಪಾಂಡೆಯವರು ಲೋಹಿಯಾ ಅವರ

ಒಡನಾಟವನ್ನು ಬಣ್ಣಿಸಿದ ರೀತಿ ನಮ್ಮ ಗೋಪಾಲಕೃಷ್ಣ ಅಡಿಗರು ಅವರನ್ನು ಈತ ರಾಜಕಾರಣಕ್ಕೆ ಬರದಿದ್ದಲ್ಲಿ ಓರ್ವ ಮಹಾಕವಿಯಾಗುತ್ತಿದ್ದ ಎಂದಿದ್ದುದನ್ನು ನೆನಪಿಸುತ್ತದೆ. ಕಲಾವಿದನ ಸೂಕ್ಷ್ಮ ಮನಸ್ಸನ್ನೂ, ಜೀವನ ಪ್ರೀತಿಯನ್ನೂ ಸಮೃದ್ಧವಾಗಿ ಹೊಂದಿದ್ದ ಈ ರಾಜಕಾರಣಿ ಜನಸಮ್ಮುಖ ರಾಜಕಾರಣಿಯೂ ಆಗಿದ್ದ ವಿವಿಧ ಪರಿಗಳನ್ನು ಹಿಂದಿಯ ಖ್ಯಾತ ಲೇಖಕ ಧರ್ಮವೀರ ಭಾರತಿ ತಮ್ಮ ಲೇಖನದಲ್ಲಿ ನಿರೂಪಿಸಿದ್ದಾರೆ. ಉಳಿದಂತೆ ಎಸ್.ಆರ್. ನೆನೆ, ಮಸ್ತ್‌ರಾಂ ಕಪೂರ್, ಜಯಾ ಶ್ರೀವಾಸ್ತವ, ಯೋಗೇಂದ್ರ ಯಾದವ್ ಮತ್ತು ರಜಿನಿ ಭಕ್ಷಿ ಅವರ ಲೇಖನಗಳು ಲೋಹಿಯಾ ಅವರ ರಾಜಕಾರಣದ ಸರ್ವಾವೃತ ಗುಣವನ್ನು ಹಲವು ಪಕ್ಕಗಳಿಂದ ವಿಶ್ಲೇಷಣೆ ಮಾಡುತ್ತವೆ. ಈ ಎಲ್ಲ ಮೂಲ ಲೇಖಕರಿಗೂ ನಮ್ಮ ಕೃತಜ್ಞತೆಗಳು.

ಇನ್ನು ಇವುಗಳ ಅನುವಾದಗಳನ್ನು ನನಗೆ ಗೊತ್ತಿಲ್ಲದ ಮತ್ತು ಗೊತ್ತಿರುವ ಹಲವು ಗೆಳೆಯರು ಮಾಡಿದ್ದಾರೆ. ಕೆಲ ಅನುವಾದಗಳ ಹಲವು ಸುತ್ತಿನ ಪರಿಷ್ಕರಣೆಯ ನಂತರವೂ ಈ ಎಲ್ಲ ಅನುವಾದಗಳು ಸಮನಾಗಿ ಸಮರ್ಥವಾಗಿವೆ ಎಂದು ಹೇಳಲಾರೆನಾದರೂ, ಅವು ಒಟ್ಟಾರೆ ಹೇಳುವುದನ್ನು ಅರ್ಥ ಮಾಡಿಕೊಳ್ಳಲು ತೊಡಕಾಗಲಾರದು ಎಂಬುದು ನನ್ನ ನಂಬಿಕೆ. ನನ್ನ ಹಲವು ಗೆಳೆಯರು ನನ್ನ ಕೋರಿಕೆಯನ್ನು ಮನ್ನಿಸಿ ಸಕಾಲದಲ್ಲಿ ಲೇಖನಗಳನ್ನು ಸೊಗಸಾಗಿ ಅನುವಾದಿಸಿ ಕೊಟ್ಟಿದ್ದಾರೆ. ಅವರೆಲ್ಲರಿಗೂ ನಾನು ಧನ್ಯವಾದಗಳನ್ನು ತಿಳಿಸಬಯಸುತ್ತೇನೆ. ಯೋಗೇಂದ್ರ ಯಾದವ್ ಅವರ ಲೇಖನದ ಅನುವಾದದ ಹೊರತಾಗಿ ಈ ಎಲ್ಲ ಅನುವಾದಗಳೂ ನನ್ನ ಸಂಪಾದಕತ್ವದ 'ಹೊಸ ಮನುಷ್ಯ' ಮಾಸಿಕದಲ್ಲಿ ಪ್ರಕಟವಾದವುಗಳು.

ಪುಸ್ತಕದ ಕೊನೆಯಲ್ಲಿ ಅನುಬಂಧವಾಗಿ ರಾಷ್ಟ್ರ ವಿಭಜನೆ ಕುರಿತ ಲೋಹಿಯಾ ಅವರ ವಿಚಾರಗಳನ್ನು ಸಂಕ್ಷಿಪ್ತವಾಗಿಯಾದರೂ ನಿರೂಪಿಸುವ 'ರಾಷ್ಟ್ರ ವಿಭಜನೆಯ ಅಪರಾಧಿಗಳು' ಎಂಬ ಬರಹವಿದೆ. ಇದು ಅವರ 'Guilty men of India's partiton' ಎಂಬ ಪುಸ್ತಕದ ಆಯ್ದ ಭಾಗವೊಂದರ ಅನುವಾದ. ರಾಷ್ಟ್ರ ವಿಭಜನೆಯ ಬಗ್ಗೆ ಇಂದಿನ ನವ ರಾಷ್ಟ್ರವಾದಿಗಳು ಉದ್ದೇಶ ಪೂರ್ವಕವಾಗಿಯೋ, ಇತಿಹಾಸವನ್ನು ಸರಿಯಾಗಿ ಅರಿಯಲು ಪ್ರಯತ್ನಿಸದ ಉಡಾಫೆಯಿಂದಲೋ, ಸಮಾಜದಲ್ಲಿ ಅರ್ಧ ಸತ್ಯಗಳ ಜೊತೆ ಪೂರ್ಣ ಸುಳ್ಳುಗಳನ್ನು ಹಬ್ಬಿಸುತ್ತಿರುವ ಈ ಹೊತ್ತಿನಲ್ಲಿ ಇದು ಅಗತ್ಯವೆಂದು ಮತ್ತು ನಿಜವಾದ ರಾಷ್ಟ್ರವಾದ ಎಷ್ಟು ಉದಾರ ಮತ್ತು ಸಮಚಿತ್ತವಾಗಿರ ಬೇಕೆಂಬುದನ್ನು ಸೂಚಿಸಲು ಪ್ರಕಟಿಸಲಾಗಿದೆ. ಈ ಬರಹ ಕನ್ನಡದಲ್ಲಿ ಬಂದಿಲ್ಲ ಎಂಬುದು ಇದರ ಸೇರ್ಪಡೆಗೆ ಇನ್ನೊಂದು ಕಾರಣ. ಈ ಪುಸ್ತಕದ ಪ್ರಸ್ತಾವನೆ ಇಟ್ಟೊಡನೆ ಇದನ್ನು ಪ್ರಕಟಿಸಲು ಬಳ್ಳಾರಿಯ ಗೆಳೆಯ ಸಿ. ಚನ್ನಬಸವಣ್ಣ ಸಂತೋಷದಿಂದ ಮುಂದೆ ಬಂದಿದ್ದಾರೆ. ಹಲವು ವರ್ಷಗಳ ಹಿಂದೆಯೇ ತಮ್ಮ ಲೋಹಿಯಾ ಪ್ರಕಾಶನದ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ್ದರೂ, ಲೋಹಿಯಾ

ಕುರಿತ ಪ್ರೀತಿಯಿಂದ ಮತ್ತು ನನ್ನನ್ನು ಕುರಿತ ವಿಶ್ವಾಸದಿಂದ ಈ ಕೃತಿಯನ್ನು ತಮ್ಮ ತಂದೆ–ತಾಯಿಯವರ ನೆನಪಿನ ದತ್ತಿ ಮಾಲೆಯಲ್ಲಿ ಪ್ರಕಟಿಸಲು ಕೂಡಲೇ ಒಪ್ಪಿದರು. ಅವರ ಪ್ರೀತಿಗೆ ನಾನು ಮತ್ತು ನಮ್ಮ ಪ್ರತಿಷ್ಠಾನದ ಇತರ ಸದಸ್ಯರು ಋಣಿಯಾಗಿದ್ದೇವೆ.

ಶ್ರೀಮತಿ ಬಿ.ರಶ್ಮಿ ಅವರು ಈ ಪುಸ್ತಕದ ಪುಟ ವಿನ್ಯಾಸ ಮಾಡಿದ್ದಾರೆ. ಸುಧಾಕರ ದರ್ಬೆಯವರು ಮುಖಪುಟ ರಚನೆ ಮಾಡಿದ್ದಾರೆ. ಶ್ರೀಮತಿಯರಾದ ಕೆ.ಪದ್ಮಾಕ್ಷಿ ಮತ್ತು ಕೆ.ಶ್ರೀದೇವಿ ಅವರು ಅಂತಿಮ ಕರಡು ತಿದ್ದಿದ್ದಾರೆ. ಎಲ್.ಕೆ.ಪ್ರೆಸ್ ಇಂಕ್‌ನ ಎಸ್. ಬಿ.ಲಕ್ಷ್ಮೀಕಾಂತ ಅವರು ತಮ್ಮ ಮುದ್ರಣಾಲಯದಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟಿದ್ದಾರೆ.. ಇವರೆಲ್ಲರಿಗೂ ನಮ್ಮ ಪ್ರತಿಷ್ಠಾನ ಕೃತಜ್ಞವಾಗಿದೆ.

ಓದುಗರು ನಾನು ಬರೆದ ಮತ್ತು ಸಂಪಾದಿಸಿದ ಸಮಾಜವಾದಿ ಸಾಹಿತ್ಯ ಕೃತಿಗಳನ್ನು ಕೊಂಡು ಓದಿ ಪ್ರೋತ್ಸಾಹಿಸಿದಂತೆ ಈ ಪುಸ್ತಕವನ್ನೂ ಪ್ರೋತ್ಸಾಹಿಸುವರು ಎಂದು ಭಾವಿಸುತ್ತೇನೆ.

ಶಿವಮೊಗ್ಗ **ಡಿ.ಎಸ್. ನಾಗಭೂಷಣ**
೧೫.೩.೨೦೨೦

ಪ್ರಕಾಶಕರ ಮಾತು

೨೦೦೨ರಲ್ಲಿ ನಮ್ಮ ತಾಯಿ ನಿಧನವಾದಾಗ ನಮ್ಮ ತಂದೆ-ತಾಯಿಯವರ ಹೆಸರಿ ನಲ್ಲಿ ದತ್ತಿಯೊಂದನ್ನು ಸ್ಥಾಪಿಸಿ, ಆ ದತ್ತಿಯ ನೆರವಿನಿಂದ ಲೋಹಿಯಾ ಪ್ರಕಾಶನದಿಂದ ಪ್ರತಿವರ್ಷವೂ ಒಂದು ಕೃತಿಯನ್ನು ಪ್ರಕಟಿಸಿ, ಆ ಕೃತಿಗೆ ಅತಿ ಕಡಿಮೆ ಬೆಲೆ ನಿಗದಿ ಪಡಿಸಿ, ವ್ಯಾಪಕವಾಗಿ ಓದುಗರಿಗೆ ತಲುಪಿಸಬೇಕೆಂದು ನಿರ್ಧರಿಸಿದೆವು. ನಮ್ಮ ತಂದೆ- ತಾಯಿ ಪುಣ್ಯದಂತೆ ಬಂದು, ಜ್ಞಾನದಂತೆ ಇದ್ದು, ಮುಕ್ತಿಯಂತೆ ಹೋದ ಸಾಮಾನ್ಯ ರಲ್ಲಿ ಸಾಮಾನ್ಯರು. ಕಾಯಕದ ಮೂಲಕ ಎಲ್ಲ ಕಷ್ಟ ಕಾರ್ಪಣ್ಯಗಳನ್ನು ಎದುರಿಸುತ್ತಾ ನಮ್ಮ ಬೆಳೆಸಿ ಲೋಕವನ್ನು ಗೆದ್ದು ಹೋದವರು. ಸುಗ್ಗಿ, ಸಂಕಟಗಳನ್ನು ಸಮಚಿತ್ತ ದಿಂದ ಸ್ವೀಕರಿಸಲು ಕಲಿಸಿದವರು. ಇತಿಮಿತಿಗಳಲ್ಲೆ ಜೀವನವನ್ನು ತೃಪ್ತಿಯಿಂದ ಅನುಭವಿಸಲು ತಿಳಿಸಿದವರು. ಭೋಗದ ಹಸಿವನ್ನೇ ಮುಖ್ಯ ಮಾಡಿಕೊಂಡಿರುವ ಇಂದಿನ ಪೀಳಿಗೆಯನ್ನು ನೋಡಿದಾಗ ಅವರು ಕೊಟ್ಟ ಸಂಸ್ಕಾರದ ಅರ್ಥ ಈಗ ನಮಗೆ ಅಕ್ಷರಸಹ ಆಗುತ್ತಿದೆ.

ಪುಸ್ತಕ-ಸಂಸ್ಕೃತಿಯ ಪ್ರತೀಕ ಎಂದು ಭಾವಿಸಿರುವ ಲೋಹಿಯಾ ಪ್ರಕಾಶನ ಪುಸ್ತಕವನ್ನು ಉದ್ಯಮವೆಂದು ಒಪ್ಪಿ ಅರಗಿಸಿಕೊಳ್ಳಲು ಆಗುತ್ತಿಲ್ಲ. ಪ್ರಾರಂಭದಲ್ಲಿ ನಮ್ಮ ಪ್ರಕಾಶನ ಒಂದು ಓಯಸಿಸ್ ಆಗಿ ಪರಿಣಮಿಸಬಹುದೆಂದು ನಮಗೆ ಅನಿಸಿರಲಿಲ್ಲ. ಅಷ್ಟಕ್ಕೂ ಆ ಓಯಸಿಸ್‌ಗೆ ಲೋಹಿಯಾರ ಚಿಂತನೆ ಹಾಗೂ ಆಶಯಗಳೆ ಬತ್ತದ ಸೆಲೆಗಳಾಗಿದ್ದವು. ಕಳೆದ ಮೂರು ದಶಕಗಳಲ್ಲಿ ಉದಾರೀಕರಣ-ಗೋಳೀಕರಣದ ಪ್ರಭಾವದಿಂದಾಗಿ ಸೇವಾ ವಲಯವೇ ಮಾಯವಾಗಿ, ಶಿಕ್ಷಣೋದ್ಯಮ, ಆರೋಗ್ಯೋದ್ಯಮ, ಮಾಧ್ಯಮೋದ್ಯಮ, ಅಷ್ಟೇ ಏಕೆ ಧರ್ಮವೂ ಕೂಡ ಧರ್ಮೋದ್ಯಮವಾಗಿ ವಿಜೃಂಭಿ ಸುತ್ತಿದೆ.

೧೯೮೦ರಲ್ಲಿ ಪ್ರಾರಂಭವಾದ ಲೋಹಿಯಾ ಪ್ರಕಾಶನ ೨೦೧೫ರ ವರೆಗೆ ೧೮೮೦ ಕೃತಿಗಳನ್ನು ಹೊರತಂದಿದೆ. ಈಗಿನ ಉದ್ಯಮದ ದೃಷ್ಟಿಯಲ್ಲಿ ಅದೇನೂ ದೊಡ್ಡ ಸಂಖ್ಯೆಯಲ್ಲ. ಒಂದು ವರ್ಷದಲ್ಲೆ ನೂರಾರು ಕೃತಿಗಳನ್ನು ಹೊರತರುವ ಉದ್ಯಮಿ

ಗಳು ಹಲವರಿದ್ದಾರೆ. ಲೋಹಿಯಾ ಪ್ರಕಾಶನದ ಕೃತಿಗಳು ಪ್ರತಿವರ್ಷ ಲೋಹಿಯಾರ ಜನ್ಮದಿನ ಮಾರ್ಚ್ ೨೩ರಂದು ನಾಡಿನ ೮-೧೦ ಕೇಂದ್ರಗಳಲ್ಲಿ ಏಕಕಾಲದಲ್ಲಿ ಬಿಡುಗಡೆಗೊಂಡು ಬೆಳಗಾಗುವುದರೊಳಗೆ ಸಮಾನ ಮನಸ್ಕ ಗೆಳೆಯರ ಮೂಲಕ ೧೫-೨೦ ಜಿಲ್ಲೆಗಳ ಓದುಗರಿಗೆ ತಲುಪಿದ್ದವು. ಪ್ರಕಾಶನದ ಶ್ರೇಯಸ್ಸು ಮತ್ತು ಯಶಸ್ಸು ಈ ಸಮಾನ ಮನಸ್ಕ ಗೆಳೆಯರಿಗೆ ಸಲ್ಲುತ್ತದೆ. ಈ ಸಮಷ್ಠಿ ಪ್ರಜ್ಞೆಯಿಂದ ಕೆಲಸ ಮಾಡುತ್ತಿದ್ದ ಪ್ರಕಾಶನ ಹಲವು ಕಾರಣಗಳಿಂದಾಗಿ ಕಳೆದ ಐದು ವರ್ಷಗಳಿಂದ ಸ್ಥಗಿತಗೊಂಡಿದೆ. ಆದರೂ ದತ್ತಿಯ ಮೂರು ಕೃತಿಗಳು ನಾಡೋಜ ಕೋ.ಚೆನ್ನಬಸಪ್ಪನವರ ಅರವಿಂದ ಪ್ರಕಾಶನದಿಂದ ಹೊರಬಂದವು. ಕಳೆದ ವರ್ಷ ಆ ಹಿರಿಯರೂ ಕಾಲವಾದ ಕಾರಣ ಕೃತಿ ಹೊರ ಬರಲಿಲ್ಲ. ಕಳೆದ ಇಪ್ಪತ್ತು ದಿನಗಳ ಹಿಂದೆ ಗೆಳೆಯ ಡಿ.ಎಸ್. ನಾಗಭೂಷಣ ಅವರು 'ರಸಿಕ ರುದ್ರತಪಸ್ವಿ ಲೋಹಿಯಾ' ಹಾಗೂ 'ಸಮಾಜವಾದದ ಸಾಲುದೀಪಗಳು' ಕೃತಿಗಳನ್ನು ಪ್ರಕಟಿಸಲು ಸಲಹೆ ಇತ್ತಾಗ, ಸಂತೋಷದಿಂದ ಪ್ರಕಾಶನಕ್ಕೆ ಮತ್ತೆ ಚಾಲನೆ ಕೊಟ್ಟು, ಪ್ರತಿವರ್ಷ ಕನಿಷ್ಠ ಒಂದು ಪ್ರಕಟಣೆಯನ್ನಾದರೂ ದತ್ತಿಯಿಂದ ಹೊರತರೋಣ ಎಂದು ನಿರ್ಧರಿಸಿದೆವು. ಏಕೆಂದರೆ ಈವರೆವಿಗೆ ದತ್ತಿಯ ಹದಿನಾರು ಪ್ರಕಟಣೆಗಳ ಸುಮಾರು ಒಂದೂವರೆ ಲಕ್ಷ ಪ್ರತಿಗಳು ನಾಡಿನ(ವಿಶ್ವದ)ಮನ-ಮನೆಗಳಿಗೆ ತಲುಪಿದ ಹೆಮ್ಮೆ ಪ್ರಕಾಶನಕ್ಕಿದೆ.

ಈ ಎರಡು ಕೃತಿಗಳನ್ನು ಸಂಪಾದಿಸಿಕೊಟ್ಟ ಗೆಳೆಯ ಡಿ.ಎಸ್.ನಾಗಭೂಷಣ ಅವರಿಗೆ, ಎಂದಿನಂತೆ ಅರ್ಥಪೂರ್ಣ ಮುಖಪುಟ ವಿನ್ಯಾಸ ಮಾಡಿಕೊಟ್ಟ ಕಲಾವಿದ ಸುಧಾಕರ ದರ್ಬೆ ಅವರಿಗೆ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಎಲ್.ಕೆ.ಪ್ರೆಸ್ ಇಂಕ್‌ನ ಎಸ್.ಬಿ.ಲಕ್ಷ್ಮೀಕಾಂತ್ ಅವರಿಗೆ ಪ್ರಕಾಶನ ಋಣಿಯಾಗಿದೆ. ಕನ್ನಡದ ಓದುಗರು ಎಂದಿನಂತೆ ಈ ಕೃತಿಗಳನ್ನು ಸ್ವೀಕರಿಸುತ್ತಾರೆಂದು ನಂಬಿದ್ದೇವೆ.

ಮಾರ್ಚ್ ೧೬, ೨೦೨೦ ಸಿ.ಚನ್ನಬಸವಣ್ಣ
ಬಳ್ಳಾರಿ ಪ್ರಕಾಶನದ ಪರವಾಗಿ

ಪರಿವಿಡಿ

೧

ರಸಿಕ ರುದ್ರತಪಸ್ವಿ ಲೋಹಿಯಾ

ಪು.ಲ. ದೇಶಪಾಂಡೆ

ಈ ಜಗತ್ತಿನಲ್ಲಿ ಸತ್ಯವನ್ನು ಅನುಸರಿಸಿ, ಧೈರ್ಯದಿಂದ ಬದುಕಬೇಕಾದರೆ, ಒಬ್ಬಂಟಿಗನಾಗಿ ಬಾಳುವ ಸಿದ್ಧತೆ ಬೇಕು. ಡಾ. ಲೋಹಿಯಾ ಅವರು ಹೀಗೆ ಒಬ್ಬಂಟಿಗನಾಗಿ ಜೀವನದಲ್ಲಿಯ 'ಸತ್' ಹುಡಕಲು ಹೊರಟ ಸಂನ್ಯಾಸಿಗಳಾಗಿದ್ದರು. ಜೊತೆಗಾರರಾಗಿ ಅವರೊಡನೆ ನೀವು ಬಂದರೂ ಸೈ, ಬರದಿದ್ದರೂ ಸೈ, ಈ ಮನೋಭಾವದಿಂದ ನಡೆಯುವವರು ಅವರು. ಸಲ್ಲದ ಸಂದರ್ಭಗಳಲ್ಲಿ ಸತ್ಯವನ್ನಾಡುವ ಚಾಳಿಯಿದ್ದ ಈ ಮನುಷ್ಯ 'ನ ಬ್ರೂಯಾತ್ ಸತ್ಯಂ ಅಪ್ರಿಯಂ'ದಂತಹ ಸಂಭಾವಿತ ಮಾತುಗಳನ್ನು ಅರಿಯದವನು. ರಸಿಕನಾದರೂ ಒರಟ. ಆನಂದವನ್ನು ಸಂಚಯಿಸುವವನಾದರೂ ವಿರಕ್ತನು. ಜೀವನದಲ್ಲಿಯ ಸೌಂದರ್ಯವನ್ನು ಉತ್ಕಟತೆಯಿಂದ ಅಪ್ಪುವವನು, ಅಷ್ಟೇ ಅಲಿಪ್ತನು. ಅತ್ಯಂತ ಆಕರ್ಷಕ ಅಂತರಂಗದವನು, ಅಷ್ಟೇ ಭೀತಿದಾಯಕ ಬಹಿರಂಗದವನು. ಪ್ರೀತಿಯಿಂದ ಭೆಟ್ಟಿಯಾಗಲು ಬಂದರೂ ಪೆಟ್ಟು ಹಾಕಲು ಬಂದಂತೆ ಬರುವವನು. ಈ ಒಡ್ಡೊಡ್ಡಾದ ಬಹು ಮಡಿಕೆಗಳ ವ್ಯಕ್ತಿತ್ವವು ವಾಸ್ತವಿಕವಾಗಿ ಡಾ. ಕೇತ್ಕರ್,

ವಿಸೂಭಾವೂ ರಾಜವಾಡೇ, ಜ್ಯೋತಿಬಾ ಫುಲೇ ಇಂತಹವರ ಹಾಗೆ ಮರಾಠಿ ಮಣ್ಣಿನಲ್ಲಿಯೇ ಆಕಾರ ತಾಳಲು ಯೋಗ್ಯವಾಗಿತ್ತು. ಗಡಕಯವರು ಬಣ್ಣಿಸಿದ,

ಗಡಸು ದೇಶವು, ಗಟ್ಟಿಗ ದೇಶವು, ಕಲ್ಲಿನದೇ ಈ ದೇಶ!
ನಯನಾಜೂಕಿನ, ಕೋಮಲ ದೇಶವು,
ಹೂವುಗಳದೂ ಈ ದೇಶ!!

ಎಂಬ ವರ್ಣನೆ ಮಹಾರಾಷ್ಟ್ರದವರಂತೆಯೇ ಡಾಕ್ಟರ್ ಲೋಹಿಯಾ ಅವರ ವ್ಯಕ್ತಿತ್ವಕ್ಕೂ ಸರಿಹೊಂದಬಹುದಿತ್ತು.

ಲೋಹಿಯಾ ಅವರ ಒರಟುತನಕ್ಕೆ ಅತಿಯಾಗಿ ಪ್ರಸಿದ್ಧಿ ದೊರಕಿತು. 'ಹಣ ತೆತ್ತು ಗೋಳುಗರೆಯಲು' ಹಚ್ಚುವ ಸಂಪ್ರದಾಯದ ಪತ್ರಕರ್ತರು ಗೋಡೆಗಳ ನಂತರ ಗೋಡೆಗಳನ್ನು ನಿರ್ಮಿಸಿ–ನಿಜವಾಗಿ ಹೇಳಬೇಕಾದರೆ ಗೋಡೆಗಳ ಹಿಂದೆ ಅಡಗಿ – ಅವರ ಪ್ರತಿಮೆಯನ್ನು ವಿಕೃತಗೊಳಿಸುವ ಎಷ್ಟೋ ಸಂದರ್ಭಗಳನ್ನು ಸಾಧಿಸಿಕೊಂಡರು. ಲೋಹಿಯಾ ಅವರು ಕೂಡ 'ಗಚ್ಛ ಸೂಕರ ಭದ್ರಂ ತೇ' ಎಂಬ ರೀತಿಯಲ್ಲಿ ತಮ್ಮ ಮೇಲೆ ರಾಡಿಯನ್ನು ಚೆಲ್ಲಲು ಅವರಿಗೆ ಸಾಕಷ್ಟು ಸಂದರ್ಭಗಳನ್ನು ಒದಗಿಸಿಕೊಟ್ಟರು.

ಹೊಸ ಪೀಳಿಗೆಯ ಮುಂದೆ ಚಿತ್ರಿಸಲಾಗುತ್ತಿದ್ದುದು, ಮತ್ತು ಪಾರ್ಲಿಮೆಂಟಿನಲ್ಲಿ ಸರಕಾರಕ್ಕೆ ವಿರೋಧಿಗಳಾಗಿ ನಿಂತ ಲೋಹಿಯಾ, ನಲ್ವತ್ತೆರಡರ ಚಳುವಳಿಯಲ್ಲಿ ಕಾರಾಗೃಹದಲ್ಲಿ ವಿಪರೀತ ಕಷ್ಟಗಳನ್ನು ಸಹಿಸಿದ ಲೋಹಿಯಾ ಮರೆಯಾಗಿದ್ದರು. ಅಮೆರಿಕೆಯಿಂದ ಆಯಾತವಾಗುವ ಆಧುನಿಕ ಸಂಸ್ಕೃತಿಯ ಮೇಲೆ ಶ್ರದ್ಧೆಯನ್ನಿಟ್ಟು ಬಾಳುವವರಿಗೆ ಲೋಹಿಯಾ ಅವರು 'ಕ್ರೂಡ್' ಆಗಿ ಕಾಣುತ್ತಿದ್ದರು. "ಅಂಗ್ರೇಜಿ ಹಟಾವ್' ಎಂದೆನ್ನುವ ಮನುಷ್ಯನಿಗೆ ಸುಸಂಸ್ಕೃತನೆಂದು ಹೇಗೆ ಕರೆಯವುದು? ಮಮ್ಮಿ–ಡ್ಯಾಡಿ–ಸಂಸ್ಕೃತಿಯ ಜನರಿಗೆ ಅವರು ಗ್ರಾಮ್ಯರಾಗಿ ತೋರುತ್ತಿದ್ದರು. ಭೋಜನದ ಬಳಿಕ ತಾಂಬೂಲಸೇವನೆಯನ್ನು ಮಾಡಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸವಿಯುವ ಸಾಂಸ್ಕೃತಿಕ ಸ್ವಾತಂತ್ರ್ಯವಾದಿಗಳಿಗೆ ಲೋಹಿಯಾ ಅರಸಿಕರಾಗಿ ಕಾಣುತ್ತಿದ್ದರು. ಲೆನಿನ್–ಮಾರ್ಕ್ಸ್‌ವಾದಿ ಪುರಾಣಪಂಥೀಯರಿಗೆ ಅವರು ವ್ಯಕ್ತಿವಾದಿಗಳಾಗಿ ಕಾಣುತ್ತಿದ್ದರು. ನವಶ್ರೀಮಂತ ಆಂಗ್ಲ ಭಾರತೀಯರಿಗಂತೂ ಅವರ ಮೇಲೆ ಅದೆಷ್ಟು ಕೋಪ! 'ರೀಡರ್ಸ್ ಡೈಜೆಸ್ಟ್'ನಲ್ಲಿಯ ಹಾಸ್ಯ ಚುಟುಕುಗಳು, 'ಲೈಫ್' ಪತ್ರಿಕೆಯಲ್ಲಿನ ಚಿತ್ರಗಳು, ಮತ್ತು 'ಟೈಮ್ಸ್'ನಲ್ಲಿಯ ತಲೆಬರಹಗಳು ಇವುಗಳ ಹೊರತಾಗಿ 'ಕಲ್ಚರ್' ಜನರ ವಾಚನದ ವ್ಯಾಪ್ತಿ ಮುಂದೆ ಹೋಗಿರುವುದಿಲ್ಲ. ಕ್ಲಬ್‌ಗಳಲ್ಲಿ ವ್ಹಿಸ್ಕಿಯ ಜೊತೆಗೆ ಬಾಯಿ ಚಪ್ಪರಿಸಲು ಇಷ್ಟು 'ಶಿಕ್ಷಣ'ವು ಸಾಕಾಗುತ್ತದೆ. ಮಹಿಳೆಯರಿಗೆ ಲೇಟೆಸ್ಟ್ ಫ್ಯಾಶನ್‌ನ ಬಗ್ಗೆ ಮಾಹಿತಿ ಪೂರೈಸಲು ಭಾರತದಲ್ಲಿಯ ಮತ್ತು ಇಂಗ್ಲೆಂಡ್–ಅಮೆರಿಕಾದಿಂದ ಬರುವ ಇಂಗ್ಲಿಷ್ ಮಾಸ ಪತ್ರಿಕೆಗಳಿರುತ್ತವೆ. ಪಿಂಕಿ ಮತ್ತು ಡಿಂಕಿಗೆ ಹಾರರ್ ಕಾಮಿಕ್ಸ್ ಮತ್ತು ಮರ್ಡರ್ ಸ್ಟೋರೀಸ್‌ಗಳ ಮೇವನ್ನು ಒಗೆದು ಬಿಟ್ಟರೆ ಆ

ಪಾಳೆಯವು ಸದ್ದಿಲ್ಲದೆ ಕೂತುಕೊಳ್ಳುತ್ತದೆ. ಇಂತಹ ನಾಜೂಕಿನ ಜನರಿಗೆ 'ಅಂಗ್ರೇಜಿ ಹಟಾವ್' ಎಂದೆನ್ನುವ ಲೋಹಿಯಾ ಕ್ರ್ಯಾಕ್, ಬ್ಯಾಕ್‌ವರ್ಡ್, ಜಂಗ್ಲೀ, ಕ್ರೂಡ್ ಎಂದು ಅನಿಸುವುದು ಅತ್ಯಂತ ಸ್ವಾಭಾವಿಕವೇ ಆಗಿತ್ತು.

ಸ್ವಾತಂತ್ರ್ಯ ಬಂದಾಯಿತು. ಆದರೆ ಇಂದಿಗೂ ಭಾರತವು ಭಾರತೀಯ ಭಾರತ ಮತ್ತು ಆಂಗ್ಲ ಭಾರತ ಎಂಬ ಅಗೋಚರ ಭಾಗಗಳಲ್ಲಿ ಬೇರ್ಪಟ್ಟಿದೆ. ಭಾರತೀಯ ಭಾರತದಲ್ಲಿ ಭಾಷೆಗನುಗುಣವಾಗಿ ಪ್ರಾಂತ್ಯ ರಚನೆಯಾದುದರಿಂದ ಹೊಸ ತುಡಿತಗಳು ನಿರ್ಮಾಣಗೊಂಡಿವೆ. ಆಂಗ್ಲ ಭಾರತೀಯರಲ್ಲಿ ಹಾಗೆ ನೋಡಿದರೆ ಒಗ್ಗಟ್ಟಿದೆ. ಈ ದೇಶೀ ಜನರ ಕೈಯಲ್ಲಿ ಪ್ರಭುತ್ವವು ಕೈಜಾರಿ ಹೋಗಬಾರದೆಂಬ ಕಾರಣಕ್ಕಾಗಿ ಅವರಿಗೆ ಇಂಗ್ಲೀಷ್ ಭಾಷೆಯು ಬೇಕಾಗಿದೆ. ರಾಷ್ಟ್ರೀಯತ್ವದ, ಆತ್ಮಗೌರವದ ಬೆಲೆಯನ್ನು ತೆತ್ತು ಅವರು ತಮ್ಮ ಮಕ್ಕಳ ಒಳಹೊರಗನ್ನೆಲ್ಲ ಪಾಶ್ಚಾತ್ಯ ಬಣ್ಣದಿಂದ ಬಳಿದುಬಿಟ್ಟಿದ್ದಾರೆ. ಇಂಗ್ಲಿಷ್ ಬರುವವನು ತಮ್ಮವನು, ಬರದಿದ್ದವನು ಕೇವಲ 'ಕೂಲಿ'ಯಾಗುವ ಇಲ್ಲವೆ ಹೆಚ್ಚೆಂದರೆ ನಾಟಕದಲ್ಲಿ 'ಬೋರಾ' ಆಗುವ ಪಾತ್ರಧಾರಿಯಾಗುತ್ತಾನೆ ಎಂಬುದು ಆ ಮಕ್ಕಳಿಗೆ ಕಲಿಸಿದ ಪಾಠ. ನಾಳೆ ದೇಶೀ ಭಾಷೆಗಳಲ್ಲಿಯೇ ರಾಜ್ಯಕಾರ್ಯಭಾರವು ಆರಂಭವಾದರೆ ಮುಖ್ಯವಾಗಿ ಕಾನ್ವೆಂಟ್‌ಗಳಲ್ಲಿ ಕಲಿತ, ರಾಮ–ಕೃಷ್ಣರಿಗಿಂತ ಜೇಮ್ಸ್ ಬಾಂಡ್‌ನೊಡನೆ ಹೆಚ್ಚು ಸಲಿಗೆ ಇರುವ ಆಂಗ್ಲ ಭಾರತೀಯರ ಪಾಡೇನು? ತಿಂಗಳಿಗೆ ಮೂರುನೂರು ರೂಪಾಯಿಗಳನ್ನು ತೆರಬೇಕಾಗುವ ತುಟ್ಟಿಯಾದ ಶಾಲೆಗಳಲ್ಲಿ ಈ ಹೊಸ ಪ್ರಜೆಗಳನ್ನು ರೂಪಿಸಲು ಹಾಕಲಾಗಿದೆ. ಇಡಿಯ ಜ್ಞಾನಭಂಡಾರವು ಇಂಗ್ಲಿಷ್‌ನಲ್ಲಿದೆ. ಆದ್ದರಿಂದ ಇಂಗ್ಲಿಷ್ ಇಲ್ಲದಿದ್ದರೆ ಜ್ಞಾನವಿಲ್ಲ ಎಂಬುದು ಅವರ ಯುಕ್ತಿವಾದ. ಹೇಗಿದ್ದರೂ ಇಂಗ್ಲಿಷ್ ಜನರು ಇಂಗ್ಲಿಷ್ ಅನ್ನು ಬಿತ್ತಿ ಹೋಗಿದ್ದಾರೆ. ಏಕೆ ಅದರ ಮರಗಳನ್ನು ಕಿತ್ತೆಸೆಯಬೇಕು? ಇಂಗ್ಲಿಷರು ಕ್ರಿಶ್ಚಿಯನ್ ಧರ್ಮೋಪದೇಶಕರನ್ನೂ ಕರೆತಂದಿದ್ದರು. ನಿಜವಾಗಿಯೂ ನಾವೆಲ್ಲರೂ ಕ್ರಿಶ್ಚಿಯನ್‌ರೇ ಏಕಾಗಬಾರದು? ಇದಕ್ಕಿಂತ ರಶಿಯಾ ಇಲ್ಲವೇ ಅಮೇರಿಕಾ, ಇಲ್ಲದಿದ್ದರೆ ಇತ್ತೀಚೆಗಿನ ಚೀನಾ ಇವುಗಳದೇ ಒಂದು ಭಾಗ ಎಂದೇಕೆ ನಾವು ತಿಳಿದು ಬದುಕಬಾರದು? ಈ ಭಾರತೀಯತ್ವದ ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ತೊಂದರೆ ಬೇಕಾಗಿರುವುದಾದರೂ ಏಕೆ?

ದುರ್ದೈವವಿಷ್ಟೇ, ಈ ಇಂಗ್ಲಿಷ್‌ಪರರಲ್ಲಿ ಹೆಚ್ಚು ಜನರ ಇಂಗ್ಲಿಷ್ ಪ್ರೇಮವು ನೌಕರಿ ಪಡೆಯುವ ವ್ಯಾಪಕ ಸೌಲಭ್ಯದ ಕಾರಣದಿಂದಾಗಿಯೇ ಇರುತ್ತದೆ. ಹಾಗೆಯೇ ಹಿಂದೂ ಧರ್ಮವನ್ನು ಬಿಟ್ಟು ಅನ್ಯ ಧರ್ಮಗಳನ್ನು ಸ್ವೀಕರಿಸಿದವರ ಮತಾಂತರಗಳೂ ಪಾರಮಾರ್ಥಿಕ ಕಾರಣಗಳಿಗಿಂತ ಆಧಿಕವಾಗಿ ಐಹಿಕ ಅಭ್ಯುದಯಕ್ಕಾಗಿಯೇ ಆಗಿವೆ. ಕೆಲವು ನೌಕರಿಗಾಗಿ, ಕೆಲವಂತೂ ಪುನರ್ಲಗ್ನ ಇಲ್ಲವೆ ವಿವಾಹವಿಚ್ಛೇದನೆಯ ಸೌಕರ್ಯಕ್ಕಾಗಿಯೂ! ಈ ಇಂಗ್ಲಿಷ್‌ವಾದಿಗಳಿಗೆ ಜ್ಞಾನದ ಬಗ್ಗೆ ಎಳ್ಳಷ್ಟೂ ತವಕವಿಲ್ಲ,

ಡಾ.ಲೋಹಿಯಾ ಅವರು ಇಂಗ್ಲಿಷ್ ಭಾಷೆಯ ಪಂಡಿತರಾಗಿದ್ದರೆಂಬದು ಅವರಿಗೆ ಗೊತ್ತೂ ಇಲ್ಲ. ಇಂಗ್ಲಿಷ್ ಲೇಖನದಲ್ಲಿಯ ಇಲ್ಲವೆ ಮಾತಿನಲ್ಲಿಯ ವ್ಯಾಕರಣಕ್ಕೆ ಸಂಬಂಧಿಸಿದ ಕ್ಷುಲ್ಲಕ ತಪ್ಪನ್ನೂ ಕೂಡ ಅವರು ಒಡನೆಯೇ ಗ್ರಹಿಸುತ್ತಿದ್ದರು. ಯುರೋಪಿಯನ್ ಸಂಸ್ಕೃತಿಯನ್ನು ಮತ್ತು ಇತಿಹಾಸವನ್ನು ಅವರು ಆಳವಾಗಿ ಅಭ್ಯಸಿಸಿದ್ದರು. ಜರ್ಮನ್ ಭಾಷೆಯನ್ನು ಚೆನ್ನಾಗಿ ಅರಿತಿದ್ದರು. ಅನೇಕ ಭಾರತೀಯ ಭಾಷೆಗಳನ್ನು ಬಲ್ಲವರಾಗಿದ್ದರು. ಉತ್ತರ ಭಾರತದವರು ದಕ್ಷಿಣದ ಒಂದಾದರೂ ಭಾಷೆಯನ್ನು ಕಲಿಯಬೇಕು ಎಂದು ಆಗ್ರಹದಿಂದ ಅವರು ಪ್ರತಿಪಾದಿಸುತ್ತಿದ್ದರು.

ಲೋಹಿಯಾ ಇಂಗ್ಲಿಷ್ ಭಾಷೆಯ ವಿರೋಧಿಗಳಾಗಿರಲಿಲ್ಲ. ಆ ಭಾಷೆಯನ್ನು ಈ ದೇಶದ ರಾಜ್ಯಭಾರದ ಭಾಷೆಯನ್ನಾಗಿ ಮಾಡಬಾರದೆಂದು ಅವರ ಮತ. ದೇಶದಲ್ಲಿಯ ಶೇಕಡ ತೊಂಭತ್ತು ಜನರಿಗೆ ಯಾವ ಭಾಷೆಯ ಗಂಧಗಾಳಿ ಇಲ್ಲವೋ ಆ ಭಾಷೆಯಲ್ಲಿ ರಾಜ್ಯ ಕಾರಬಾರವನ್ನು ಮಾಡುವುದೆಂದರೆ ಶೇಕಡ ಹತ್ತು ಜನರು ಇನ್ನುಳಿದ ಶೇಕಡ ತೊಂಭತ್ತು ಜನರನ್ನು ಆಳುವುದು. ಅಂದರೆ ಇವರು ಹೊಸ ಮೊಗಲ್‌ರಂತೆ. ಇಂತಹ ಮೊಗಲ್‌ರ ವಿರುದ್ಧ ಲೋಹಿಯಾ ರೊಚ್ಚಿಗೇಳುತ್ತಿದ್ದರು. ಈ ರೊಚ್ಚು ಅನೇಕ ವಿಧಗಳಲ್ಲಿ ಪ್ರಕಟವಾಗುತ್ತಿತ್ತು. ಇಂಗ್ಲಿಷ್ ಭಾಷೆಯ ಒತ್ತಾಯ ನಮಗೆ ತಪ್ಪಾಗಿ ಕಾಣುವುದಿಲ್ಲ. ಆ ಅನ್ಯಾಯದ ವಿರುದ್ಧ ಮಾಡಿದ ಪ್ರತಿಭಟನೆ ತಪ್ಪಾಗಿ ಕಾಣುತ್ತದೆ. ವಾದಿ, ಪ್ರತಿವಾದಿ ಇಲ್ಲವೆ ಆರೋಪಿಗಳಿಗೆ ಎಳ್ಳಷ್ಟೂ ತಿಳಿಯದ ಅಂಗ್ರೇಜಿ ಭಾಷೆಯಲ್ಲಿ ಮೊಕದ್ದಮೆಗಳನ್ನು ನಡೆಸಲಾಗುತ್ತದೆ. ನ್ಯಾಯದಾನವು ಅಂಗ್ರೇಜಿ ತಿಳಿಯುವ ವಕೀಲ ಮತ್ತು ನ್ಯಾಯಾಧೀಶ ಇವರ ನಡುವಿನ ಖಾಸಗಿ ವಿಷಯವಿದ್ದಂತೆ. ಮನುಷ್ಯನ ಜೀವನ್ಮರಣದ ಪ್ರಶ್ನೆಯಾಗಿದ್ದರೂ ಅವನಿಗೆ ತಿಳಿಯದಂತೆ ನ್ಯಾಯಾಲಯದ ಕೆಲಸವನ್ನು ನಡೆಸುವುದು ನಮಗೆ ಅಮಾನುಷವಾಗಿ ಕಾಣುವುದಿಲ್ಲ. ಆದರೆ ಇಂತಹ ಅಮಾನುಷ ವೃತ್ತಿಯನ್ನು ಖಂಡಿಸುವ ಲೋಹಿಯಾ ಅವರು ನಮಗೆ ಶಿಷ್ಟಾಚಾರ ವಿಹೀನರೆಂದು ಕಾಣುತ್ತಿದ್ದರು. ಅವರು ಪರಕೀಯ ಭಾಷೆಯ ಒತ್ತಡದಿಂದ ಮೂಕರಾದ, ಭೀತಿಗ್ರಸ್ತರಾದ, ಬಡತನದಿಂದ ಪೀಡಿತರಾದ, ಮಾನವತೆಯ ಪ್ರಾಥಮಿಕ ಅಧಿಕಾರಗಳಿಂದಲೂ ವಂಚಿತರಾದ ಸಾಮಾನ್ಯರ ಪ್ರತಿನಿಧಿಗಳಾಗಿದ್ದರು.

ರೇಗಿದಾಗ ಲೋಹಿಯಾ ಅವರು ಎರ್ರಾಬಿರ್ರಿಯಾಗಿ ಮಾತಾಡುತ್ತಿದ್ದರು. ಆಗ ಅವರು ಲೋಹಿಯಾ ಆಗಿ ಇರುತ್ತಿರಲಿಲ್ಲ – ಬಳಲಿದ, ಉಪೇಕ್ಷಿತ, ಹಸಿದ, ಸಾಮಾನ್ಯ ಭಾರತೀಯನ ಜೀವ ಸಂಚಾರ ಅವರ ದೇಹದಲ್ಲಿ ಆಗುತ್ತಿದ್ದಿತು. ಹಸಿದ ಮನುಷ್ಯನ ಬಗೆಗಿರುವ ಕಳವಳವು ದೆವ್ವ ಬಡಿದಂತೆ ಅವರನ್ನು ಬಾಧಿಸುತ್ತಿತ್ತು. ಅವರ ಗಲಾಟೆ ಅವರದ್ದಾಗಿರುತ್ತಿರಲಿಲ್ಲ. ಲೋಹಿಯಾ ಎಂಬ ಗಿಡವನ್ನೇರಿ ಕುಳಿತ ಈ ದೇಶದಲ್ಲಿಯ ಕೋಟಿ ಕೋಟಿ ಅರೆನಗ್ನ, ಅರೆಹೊಟ್ಟೆಯ, ಅರೆಮಾನವನ ಬದುಕನ್ನು ಬದುಕುವ, ಜೀವಂತ ಪಿಶಾಚಿಗಳು ಮಾತಾಡುತ್ತಿದ್ದವು. ಹಸಿವೆಯಿಂದ ಬೆಂದ, ರೋಸಿದ

ಪಿಶಾಚಿಗಳಿಗಾಗಿ ತನ್ನ ದೇಹದ ಆಲದ ಮರವನ್ನು ಒಡ್ಡುವ ಈ ಮನುಷ್ಯ ನಮ್ಮಿಂದ ಹೊರಟು ಹೋಗಿದ್ದಾನೆ. ದಿಲ್ಲಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಅವರು ಕೊನೆಯುಸಿರೆಳೆದರು. ಸಾಮಾನ್ಯ ಜನರ ಬಗ್ಗೆ ಅತ್ಯಂತ ಒಲವಿದ್ದ ಈ ಅಸಾಮಾನ್ಯ ಮನುಷ್ಯ ಭಾರತದಲ್ಲಿಯ ಸಾಮಾನ್ಯರ ಪಾಲಿಗೆ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಅಡ್ಡಾಡುವ ವಿಧಿರಾಯನ ಬಾಯಿಗೆ ಸಿಕ್ಕಿ ಹೋಗಿಬಿಟ್ಟ. ಬದುಕಿನಲ್ಲಿ ಎಂತಹ ಮಾನ ಮರ್ಯಾದೆಗಳನ್ನೂ ಅವರು ಅಪೇಕ್ಷಿಸಲಿಲ್ಲ. ಸಾವು ಬೇಡಿ ಬರುವುದಿಲ್ಲ. ಆದರೆ ಅವರು ಯಾರಿಗೂ ಸಿಗಲೂ ಇಲ್ಲ. ಅವರಿಗಾಗಿ ಸುರಿಸಿದ ಕಣ್ಣೀರುಗಳು ಮಾತ್ರ ನಿಜವಾಗಿದ್ದವು. ಫಕೀರನಂತೆ ಬದುಕಿದ; ಫಕೀರನಂತೆಯೇ ಸತ್ತ.

ಅನ್ಯಾಯದ ವಿರುದ್ಧ ಸಿಡಿದೇಳುವ ವ್ಯಕ್ತಿತ್ವ ಇದು. ಪ್ರಖರವಾಗಿದ್ದುದು ನಿಜ, ಆದರೆ ಈ ವಿಷ್ಣುದಾಸನು ಮೇಣಕ್ಕಿಂತಲೂ ಮಿದುವಾಗಿಯೂ ಆಗುತ್ತಿದ್ದನು, ಪಾರ್ಲಿಮೆಂಟಿನಲ್ಲಿಯ ಲೋಹಿಯಾ ಅವರನ್ನು ನೋಡುವವರಿಗೆ ಈ ಮನಸ್ಸಿನ ಪರಿಚಯವಿರಲಿಲ್ಲ. ಅವರ ಸಹವಾಸದ, ಅವರ ಅಂತರಂಗದಲ್ಲಿ ಇಣುಕಿ ನೋಡುವ ಸುಯೋಗವು ಎಲ್ಲರಿಗೂ ಹೇಗೆ ಲಭಿಸಬೇಕು? ಜಾತಕದಲ್ಲಿ ಇಡಲಾಗುವ ನವಿಲು ಗರಿಗಳಂತೆ ಆ ಇಣುಕು ನೋಟಗಳನ್ನು ನಾನು ಜತನವಾಗಿಟ್ಟಿದ್ದೇನೆ. ನಲವತ್ತೆರಡರ ಅವರು, ನನ್ನ ಪೀಳಿಗೆಯ ಹೀರೋ! ಅಚ್ಯುತರಾವ್ ಪಟವರ್ಧನ್, ಲೋಹಿಯಾ, ಜಯಪ್ರಕಾಶ್, ಎಸ್.ಎಮ್.ಮೆಹೆರ್ ಅಲಿ, ಅರುಣಾ ಅಸಫ್ ಅಲಿ ಇವರು ನಮ್ಮ ದೇವ್ ಆನಂದ್ ಮತ್ತು ಮೀನಾಕುಮಾರಿಗಳಾಗಿದ್ದರು! ಆದರೆ ಆ ವೇಳೆಗೇ ದೂರದಿಂದ ವೇದಿಕೆಯ ಮೇಲೆ ಅವರನ್ನು ನೋಡುವುದು ಅವರ ಪರಾಕ್ರಮಗಳನ್ನು ಓದುವುದು, ಒಬ್ಬರಿಗೊಬ್ಬರಿಗೆ ಹೇಳುವುದು, ಇಷ್ಟೇ. ಪ್ರತ್ಯಕ್ಷ ಭೆಟ್ಟಿಯ ಯೋಗವು ಮಾತ್ರ ಬಹಳ ತಡವಾಗಿ ಬಂತು.

ನನ್ನ ಸ್ನೇಹಿತನೊಬ್ಬನ ಮನೆಯಲ್ಲಿ ಅವರ ಸಹವಾಸದಲ್ಲಿ ನಿಜವಾಗಿಯೂ "ಅವಿದಿತಗತಯಾಮಾ ರಾತ್ರಿರೇವ ವರಾಸೀತ್" ಅನ್ನುವಂತೆ ಆಯಿತು. ಮುಂಬಯಿಯ ಭಾಷೆಯಲ್ಲಿ ಹೇಳಬೇಕಾದರೆ, ಭಯ್ಯಾ ಬಂದು 'ಬಾಯಿ ದೂಧ್' ಎಂದಾಗ ಅರಿವಾಯಿತು ರಾತ್ರಿ ಮುಗಿಯಿತೆಂದು. ಲೋಹಿಯಾ ಅವರೊಂದಿಗೆ ನನ್ನದು ಅದು ಮೊದಲ ಭೆಟ್ಟಿ, ಜಾರ್ಜ್ ಫರ್ನಾಂಡಿಸ್ ಮುಂತಾದ ಇತರ ಸಂಯುಕ್ತ ಸಮಾಜವಾದಿ ಪಕ್ಷದ ಸ್ನೇಹಿತರಿದ್ದರು. ಹಾಗೆ ನೋಡಿದರೆ, ಅದರಲ್ಲೂ ರಾಜಕೀಯ ಪಕ್ಷವೆಂದರೆ ನನಗೆ ಸೇರದ ವಿಷಯ. ಲೋಹಿಯಾ ಅವರು ಸಮಾಜವಾದ ಎಂಬ ವಿಷಯದ ಮೇಲೆ ನನ್ನ ಮೌಖಿಕ ಪರೀಕ್ಷೆಯನ್ನು ಆರಂಭಿಸಿದರೆ ಏನಾಗಬಹುದು, ದೇವರೇ ಗತಿ ಎಂದು ಮನಸ್ಸಿನಲ್ಲಿ ಭೀತಿಯನ್ನು ತಾಳಿಯೇ ನಾನು ಆ ಸ್ನೇಹಿತರ ಮನೆಗೆ ಹೋದೆ. ತನ್ನ ಓಣಿಯಲ್ಲಿ ಪ್ರತಿಷ್ಠೆಯನ್ನು ಗಳಿಸಿದ ರಾಜಕೀಯ ಪಕ್ಷದ ಒಬ್ಬ ಪ್ರಾಥಮಿಕ ಕಾರ್ಯಕರ್ತನೂ ಕೂಡ ಯಾವಾಗಲೂ ಒಂದು ಅದೃಶ್ಯವಾದ ವೇದಿಕೆಯ

ಮೇಲೆ ನಿಂತಿರುವನೆಂದ ಬಳಿಕ ಲೋಹಿಯಾ ಅವರಂತೂ ಅದೆಷ್ಟು ಹಿರಿಯ ಮನುಷ್ಯ! ನೆಹರೂ ಅವರಿಗೆ ಕೂಡ ಅಂಜದವ.

ಆ ರಾತ್ರಿ ಲೋಹಿಯಾ ಅವರು ನನಗೆ ಪ್ರಚಂಡ ಆಘಾತವನ್ನೇ ಉಂಟು ಮಾಡಿದರು. ಹೆಚ್ಚೆಂದರೆ ಗ್ಲೂಕೋ ಬಿಸ್ಕತ್ತು, ಅಲ್ಯೂಮಿನಿಯಮ್ ತಟ್ಟೆಯಲ್ಲಿ ಕರಿದ ಅವಲಕ್ಕಿ, ಹಸಿರು ಸಿಪ್ಪೆಯ ಮಾಗದ ಬಾಳೆಹಣ್ಣು ಮತ್ತು ಕೆನೆಗಟ್ಟಿರುವ ತಣ್ಣಗಿನ ಚಹವಷ್ಟೇ ಸಿಗಬಹುದೆಂಬ ಅಪೇಕ್ಷೆಯಿಂದ ಹೋದರೆ ಮನೆಯ ಯಜಮಾನರು ಮಾತ್ರ ಮೂವತ್ತೆರಡು ಕೋರ್ಸುಗಳ ಚೀನೀ ಭೋಜನವನ್ನು ತಯಾರು ಮಾಡಿಟ್ಟಿದ್ದರೆ ಅಲ್ಲಿ ಹೋಗುವವನ ಸ್ಥಿತಿ ಹೇಗಾಗಬೇಡ? ಆ ರಾತ್ರಿ ನನ್ನ ಸ್ಥಿತಿಯೂ ಥೇಟ್ ಹಾಗೇ ಆಯಿತು.

ಲೋಹಿಯಾಗೆ ಆ ಜಪಾನಿ ಗೇಶಾ 'ನನಗೆ ಈವರೆಗೆ ಭೆಟ್ಟಿಯಾದ ಜನರಲ್ಲಿ ನೀವು ನನಗೆ ಎಲ್ಲರಿಗಿಂತ ಅದ್ಭುತವಾಗಿ ಕಂಡಿದ್ದೀರಿ!' ಎಂದು ಅಂದಿದ್ದಳಂತೆ. ಈ ಮಾತನ್ನೆ ನಾನೂ ಇಂದಿಗೂ ಆ ರಾತ್ರಿಯ ನೆನಪಾದೊಡನೆ ಈ ಮನುಷ್ಯನಿಗೆ ಅನ್ನುತ್ತೇನೆ. ಚಿತ್ರ, ಶಿಲ್ಪ, ಸಾಹಿತ್ಯ, ನಾಟ್ಯ, ಇತಿಹಾಸ, ತತ್ವಜ್ಞಾನ–ಲೋಹಿಯಾ ಅವರ ಜೀವನವನ್ನು ಸಮೃದ್ಧಗೊಳಿಸುವ ಅವೆಷ್ಟು ವಿಷಯಗಳು! ಇವೆಲ್ಲವುಗಳ ಜೊತೆ ಅವರ ಮಾತಿನ ಗಾರುಡಿ! ಅವರು ಆ ರಾತ್ರಿಯನ್ನು ತಮ್ಮ ರಸಿಕತೆಯಿಂದ ಬೆಳಗಿಸಿದರು. ಅನುಭವದ ಅಮೃತ ಕುಂಭಗಳು ಬರಿದಾಗುತ್ತಿದ್ದವು. ಅವರು ಪ್ರಶ್ನೆಗಳೆತ್ತಿ ಕೆರಳಿಸುತ್ತಿದ್ದರು. ಗೇಲಿ ಮಾಡುತ್ತಿದ್ದರು. ಒಂದೇ ಕ್ಷಣದಲ್ಲಿ ಅವರು ನನ್ನನ್ನು ನಿಸ್ಸಂಕೋಚ–ನಿರಾಂತಕರನ್ನಾಗಿ ಮಾಡಿಬಿಟ್ಟಿದ್ದರು. ಗಂಟೆ–ಎರಡು ಗಂಟೆಗಳ ನಂತರ ಅಲ್ಲಿಗೆ ಬಂದವರಿಗೆ ನಾವಿಬ್ಬರೂ ಹಿಂದೊಮ್ಮೆ ಒಂದೇ ಓಣಿಯಲ್ಲಿ ಗೋಲಿ ಆಟವಾಡುವ ಗೆಳೆಯರಾಗಿದ್ದಿರಬಹುದೆಂದು ಅನಿಸಿರಲು ಸಾಕು. ಇದು ಲೋಹಿಯಾ ಅವರ ಮಾಟ. ಅವರು ತಾವೇ ಅಂತರವನ್ನು ಕಡಿದು ಹಾಕುತ್ತಾ ಸಮೀಪ ಬರುತ್ತಿದ್ದರು. ಚಡಪಡಿಸುವ ಕಷ್ಟವನ್ನು ಕೊಡುತ್ತಿರಲಿಲ್ಲ. ಆ ರಾತ್ರಿ ಈ ಹಿರಿದಾದ ಮನುಷ್ಯನ ದರ್ಶನವು ನನಗಾಯಿತು.

ಲೋಹಿಯಾ ಅವರಲ್ಲಿಯ 'ಕವಿ'ಯನ್ನು ನಾನು ಕಂಡೆ. 'ದೀದಾವರ'ನನ್ನು ಕಂಡೆ. ಈತ ಬಣ್ಣ, ರಸ, ಗಂಧ, ಸ್ಪರ್ಶ, ನಾದಗಳ ಇಷ್ಟು ಲೋಭಿಯಾಗಿರಬಹುದೆಂದು ನನಗೆ ಕಲ್ಪನೆ ಇರಲಿಲ್ಲ. ನಮ್ಮ ರಾಜಕೀಯ ಪುಢಾರಿಗಳ ಅರಸಿಕತ್ವವು ಹೊಗಳು ವಂತಹದು. ತಮ್ಮ ಮಂತ್ರಿಪದವಿ ಇಲ್ಲವೆ ಸಾದಾ ಎಂ.ಎಲ್.ಎ ಪದವಿಯನ್ನು ಮರೆತು ದೇವರ ದರ್ಶನವನ್ನು ತೆಗೆದುಕೊಳ್ಳುವುದು ಕೂಡ ನಮ್ಮ ಎಷ್ಟೋ ರಾಜಕೀಯ ಮುಖಂಡರಿಗೆ ಸಾಧ್ಯವಿಲ್ಲ. ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷರೆಂದು ಅವರಲ್ಲಿ ಕೆಲ ಜನರು ವೇದಿಕೆಯ ಮೇಲೆ ಕೂತಿದ್ದನ್ನು ನೋಡಿದಾಗ ನನ್ನಲ್ಲಿ ನಮ್ಮ ಮತ್ತು ನಮ್ಮ ಸಂಸ್ಕೃತಿಯ ಬಗೆಗೆ ಕರುಣೆ ಮೂಡುತ್ತದೆ. ಇಲ್ಲಿ ನೋಡಿದರೆ ಗಡಸು, ಅಸಭ್ಯ,

ಜಗಳಗಂಟ ಇಂತಹ ದೂಷಣೆಗಳಿಂದ ಅಲಂಕೃತನಾಗಿದ್ದ ಮನುಷ್ಯ ಭಾರತೀಯ ಶಿಲ್ಪದ ಬಗ್ಗೆ ಮಾತಾಡುತ್ತಿದ್ದ. ಯೂರೋಪಿಯನ್ ಚಿತ್ರಕಲೆಯ ಸೂಕ್ಷ್ಮ ಅಂಶಗಳನ್ನು ವಿಶದಪಡಿಸುತ್ತಿದ್ದ. ಗಯಟೆಯ ವಾಙ್ಮಯದಲ್ಲಿನ ಹಿರಿತನದಿಂದ ಮೈಮರೆಯುತ್ತಿದ್ದ. ಭಾರತೀಯ ಲೋಕವಾಙ್ಮಯದಲ್ಲಿಯ ಆತ್ಮೀಯತೆಯಿಂದ ಭಾವಪರವಶನಾದಂತೆ ಮಾತಾಡುತ್ತಿದ್ದ. ಇದೆಲ್ಲ ಸ್ನೇಹಭಾವನೆಯಿಂದಲೇ ನಡೆದಿತ್ತು. ಗುರುಶಿಷ್ಯ ಸಂಬಂಧದಲ್ಲಿ ಅಲ್ಲ. ಶಿಕ್ಷಣವು ಕೊಡುವವನ ಮತ್ತು ಸ್ವೀಕರಿಸುವವವನ ಗೆಳೆತನದ ಪಾತಳಿಗೆ ಬಂದಾಗಲೇ ಅದು ಈ ಹೃದಯದಿಂದ ಆ ಹೃದಯಕ್ಕೆ ದಾಟುತ್ತದೆ. ಬೌದ್ಧಿಕಗಳು ರೂಕ್ಷ. ಹಾರ್ದಿಕಗಳು ಬೇಕು. ಅವುಗಳಲ್ಲಿ ಜ್ಞಾನವು ದ್ರವಿಸಿ ಮನಸ್ಸಿನಲ್ಲಿ ಇಳಿದು ಬರುತ್ತದೆ. 'ಕಾವ್ಯಶಾಸ್ತ್ರವಿನೋದನಿ' ಎಂಬಲ್ಲಿಯ ವಿನೋದದ ಮಹತ್ವದ ಸ್ಥಾನವು ಇಂತಹ ಸಮಯದಲ್ಲಿ ಅರ್ಥವಾಗುತ್ತದೆ. ಕಾವ್ಯ ಶಾಸ್ತ್ರಗಳು ಹಣೆಗೆ ಗಂಟುಗಳನ್ನಿಟ್ಟು ನಡೆದಾಗ ಆ ಚರ್ಚೆಗಳಿಂದ ಜ್ಞಾನಪ್ರದರ್ಶನದ ಅಹಂಕಾರವು ಹೊರಬರುವುದು ಕಾಣುತ್ತದೆ. ಇವೆಲ್ಲ ನಗುನಗುತ್ತ ಸಾಗಿದಾಗಲೇ ಆ ಚರ್ಚೆಗಳು ರುಚಿಕರವಾಗುತ್ತವೆ. ಸುವಾಸಿತವಾಗುತ್ತವೆ.

ಡಾಕ್ಟರರು ವಿದ್ವಾಂಸರಾಗಿದ್ದರು. ಆದರೆ 'ಭಾರಿ' ಪಂಡಿತರಾಗಿರಲಿಲ್ಲ. ಭಾರಿತನವು ಮೇಧಾವಿತನದ ಲಕ್ಷಣ. ಅರಗದ ಅನ್ನದಿಂದ ಕೊಬ್ಬು ಉಂಟಾಗುತ್ತದೆ. ಅರಗದ ವಿದ್ವತ್ತಿನಿಂದ ಪಾಂಡಿತ್ಯದ ಜಡತ್ವ ಒದಗುತ್ತದೆ. ಪಾಂಡಿತ್ಯವು ಅರಗಿದಾಗ ಪಂಡಿತನೂ ಕೂಡ ಎಷ್ಟು ಸಹಜವಾಗಿ ವ್ಯವಹರಿಸುತ್ತಾನೆಂಬುದು ಡಾಕ್ಟರ್‌ರಂತಹರೊಡನೆ ಮಾತಾಡಿದಾಗಲೇ ಅರಿವಾಗುತ್ತದೆ. ಸುತ್ತಲಿನ ಸಮುದಾಯವು ಸಣ್ಣದೇ ಇರಲಿ ಅಥವಾ ಪ್ರಚಂಡ ಸಭೆಯೇ ಇರಲಿ ಲೋಹಿಯಾ ಅವರ ಅಲ್ಲಿಯ ನಡೆನುಡಿಗಳಲ್ಲಿಯ ಸಹಜತೆಯು ವಿಲಕ್ಷಣವಾಗಿರುತ್ತಿತ್ತು. ಇನ್ನೊಬ್ಬರು ಹೇಳುವುದನ್ನು ಕೇಳುವಾಗ ಅತ್ಯಂತ ಗಂಭೀರತೆಯಿಂದ ಎಲ್ಲ ಶಕ್ತಿಗಳೂ ಶ್ರವಣೇಂದ್ರಿಯದಲ್ಲಿ ಒಂದುಗೂಡಿದಂತೆ ಕೇಳುತ್ತಿದ್ದರು. ಮಾತಾಡಲು ಆರಂಭ ಮಾಡಿದೊಡನೆ ಬಿಚ್ಚು ಬಯಲಾಗುತ್ತಿದ್ದರು.

ದಿಲ್ಲಿಗೆ ನಾನು ನಾಟ್ಯಪ್ರಯೋಗಗಳನ್ನು ಮಾಡಲು ಹೋಗಿದ್ದೆ, ಲೋಹಿಯಾ ಅವರು ಪ್ರಯೋಗಗಳನ್ನು ನೋಡಿದರು. ನನ್ನನ್ನೂ, ನನ್ನ ಎಲ್ಲ ಸಂಗಡಿಗ ಕಲಾವಿದರನ್ನು ತಮ್ಮ ಮನೆಗೆ ಚಹಾಪಾನಕ್ಕಾಗಿ ಕರೆದರು. ಅಲ್ಲಿ ಹೋದರೆ. ದಿಲ್ಲಿಯಲ್ಲಿಯ ಸಾಹಿತ್ಯ ಮತ್ತು ಕಲಾಕ್ಷೇತ್ರಗಳಲ್ಲಿಯ ನೂರು-ನೂರೈವತ್ತು ಹೆಸರಾದ ಜನರು ಹಾಜರಾಗಿದ್ದರು. ಮನೆಯ ಮುಂದಿನ ಹುಲ್ಲು ಮೈದಾನದಲ್ಲಿ ಸಮೂಹ ನೆರೆದಿತ್ತು. ಈ ಸನ್ಯಾಸಿಯ ಮನೆಯಲ್ಲಿಯ, ಗೃಹಸ್ಥಾಶ್ರಮಿಯನ್ನೂ ನಾಚಿಸುವಂತಹ ಅತಿಥ್ಯವನ್ನು ನಾನೆಂದಿಗೂ ಮರೆಯಲಾರೆ. ಆ ಎಲ್ಲ ಬಂಧುಗಳ ಆದರೋಪಚಾರಗಳನ್ನು ಸ್ವತಃ ಮಾಡುತ್ತಿದ್ದರು. ಆಗ್ರಹದಿಂದ ಸಾಹಿತ್ಯ ಮತ್ತು ಇನ್ನಿತರ ಕಲೆಗಳಿಗೆ ಸಂಬಂಧಿಸಿದ ಚರ್ಚೆಗಳು ನಡೆದಿದ್ದವು. ರಾಜಕಾರಣದ ಬಗ್ಗೆ ವಾದವಿವಾದಗಳು ಜರುಗಿದ್ದವು. ವಿವಿಧ ಮತಗಳ ಜನರು ಆ

ಸಮಾರಂಭದಲ್ಲಿ ಪಾಲುಗೊಂಡಿದ್ದರು. ಲೋಹಿಯಾ ಅವರ ರಾಜಕೀಯ ಪಕ್ಷದೊಡನೆ ನನಗಿನಿತೂ ಸಂಬಂಧವಿಲ್ಲ. ಅದು ಇರಬೇಕೆಂದು ಅವರು ಎಂದಿಗೂ ತಪ್ಪಿಕೂಡ ಸೂಚಿಸಲಿಲ್ಲ. ಅವರ ಕಲಾಭಿರುಚಿಯು ಉಚ್ಚಮಟ್ಟದ್ದಿತ್ತು. ಆದ್ದರಿಂದ ಕಲಾವಿದರನ್ನು ಪಕ್ಷದ ಪ್ರಚಾರದ ಕಿನ್ನರಿ ಬಾರಿಸಲು ಹಚ್ಚುವ ಕಲಾಹೀನ ವಿಚಾರವು ಅವರ ಮನಸ್ಸಿಗೆ ಸೋಕುವುದೂ ಶಕ್ಯವಿರಲಿಲ್ಲ. ಅವರೊಂದಿಗೆ ಆದ ಭೆಟ್ಟಿಯಿಂದಾಗಿ ನನಗೆ ಮೇಲಿಂದ ಮೇಲೆ ಅನಿಸುವುದೇನೆಂದರೆ ಈ ಬಹಿರಂಗದಲ್ಲಿ ಒರಟಾದ ಮನುಷ್ಯನ ಅಂತರ್ಯದಲ್ಲಿಯ ಸೌಂದರ್ಯಾಭಿಜ್ಞತೆಯ ದರ್ಶನವನ್ನು ಅಧಿಕಾಧಿಕ ಜನರಿಗೆ ಮಾಡಿಕೊಡಬಹುದಾದರೂ ಹೇಗೆ? ಈ ಪುಸ್ತಕದ ಮೂಲಕ ಸ್ವಲ್ಪಮಟ್ಟಿಗೆ ಆ ಯೋಗ ಬಂದಿದೆ.. ಆದರೆ ಅದೆಷ್ಟು ತಡವಾಗಿ!

ಉತ್ತಮ ಕಲಾನಂದಕ್ಕಾಗಿ ಹಾತೊರೆಯುವ ಲೋಹಿಯಾ, ಮಾನವತೆಯಿಂದ ತುಂಬಿ ತುಳುಕುವ ಲೋಹಿಯಾ, ತತ್ವಚಿಂತಕ ಲೋಹಿಯಾ, ಬುದ್ಧಿಜೀವಿ ಲೋಹಿಯಾ, ಜೀವನಾಸಕ್ತ ಲೋಹಿಯಾ, ಹೀಗೆ ಸರ್ವಸಾಮಾನ್ಯ ಜನರಿಂದ ಮರೆಯಾಗಿದ್ದ ಅವರ ಅಂತರಂಗದ ವಿವಿಧ ರೂಪಗಳೂ ಮುಂದಿನ ಪುಟಗಳಲ್ಲಿ ಕಾಣಬಹುದು. ಈ ಲೇಖನಗಳಿಗೆ ರಾಜಕಾರಣದ ಮಧ್ಯೆ ಬಿಡುವು ಎಂದು ಅವರು ಪರಿಹಾಸದಿಂದ ಹೇಳಿದ್ದಾರೆ. ಇದು ಅವರ ಭಾಷೆಯಲ್ಲಿ ಒಂದು ಪ್ರಕಾರದ 'ಹುಡುಗಾಟಿಕೆ' ಆಗಿದೆ. ಲೋಹಿಯಾ ಅವರೆಂದಿಗೂ ಮುಖವಾಡವನ್ನು ಧರಿಸಲಿಲ್ಲ; ಆದ್ದರಿಂದ ಅದನ್ನಿಳಿಸಿ ಬದಿಗಿಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವರ ಎಲ್ಲ ಕಾರುಬಾರು ಬಟ್ಟಬಯಲು. ಅವೆಷ್ಟೋ ಪರದೇಶೀಯ ಸಂಸ್ಕಾರಗಳನ್ನು ಅರಗಿಸಿಕೊಂಡ ಈ ಮನುಷ್ಯ ಅಪ್ಪಟ 'ದೇಸಿ'ಯಾಗಿದ್ದನು. ಒಳಗೆ-ಹೊರಗೆ ಬೇರೆಯಾಗಿರಲಿಲ್ಲ. ಮನಸ್ಸಿನಲ್ಲಿ ಬಂದದ್ದು, ಮುಖದಿಂದ ಹೊರಬಿತ್ತು-ಹೀಗಿತ್ತು ಅವರ ರೀತಿ. ಅಂದ ಬಳಿಕ ಆ ಪ್ರಹಾರ ನೆಹರೂ ಅವರ ಮೇಲೆಯೋ, ಇನ್ನುಳಿದ ಬೇರೆ ಯಾರ ಮೇಲೆಯೋ ಎನ್ನುವುದರ ಪರಿವೆ ಅವರಿಗೆ ಇರಲಿಲ್ಲ. ಹಟತೊಟ್ಟು ಪ್ರಿಯವಾಗುವ ಹಂಬಲ ಇರದವನಿಗೆ 'ಅಪ್ರಿಯ'ನಾಗುವ ಭೀತಿ ಏಕೆ?

ಸ್ತ್ರೀ ಸೌಂದರ್ಯಕ್ಕೆ ಸುಮ್ಮನೆ ಉಚ್ಚ ಉದಾತ್ತತೆಯ ಸುಳ್ಳು ಮಡಿವಸ್ತ್ರವನ್ನು ಉಡಿಸುವ ಪ್ರಯತ್ನವನ್ನು ಅವರೆಂದಿಗೂ ಮಾಡಲಿಲ್ಲ. ಝುಗಝುಗನೆ ಮಿನುಗುವ ಸೌಂದರ್ಯ ಮತ್ತು ಮನೆಯ ಒಳಾಂಗಣದಲ್ಲಿ ಉರಿಯುವ ಮಂದ ದೀಪದ ಬತ್ತಿಯ ಮಿಣಮಿಣಸುವ ಸೌಂದರ್ಯ ಇವುಗಳಲ್ಲಿಯ ವ್ಯತ್ಯಾಸವನ್ನು ಅವರು ಅರಿತವರಾಗಿದ್ದರು. ಅಮೇರಿಕೆಯಲ್ಲಿ ಒಂದು ಭಾಷಣದ ಪ್ರಸಂಗದಲ್ಲಿ ಆ ಅಮೇರಿಕನ್ ಹೆಂಗಸರಿಗೆ, ಅಮೇರಿಕನ್ ಹೆಣ್ಣು ಹೇಗೆ ರಾಜಕನ್ಯೆಯಂತೆ ಥಳಥಳಿಸುತ್ತಾಳೆ ಎಂದು ಹೇಳಿದರು. ಮತ್ತು ಆ ಸಂದಣಿಯಲ್ಲಿ ನಟರಾಜ ವಶೀ ಅವರ ಪತ್ನಿ ಅವರ ಕಣ್ಣಿಗೆ ಬಿದ್ದಳು. ರಾಜಕನ್ಯೆಯರ ಆ ಬೆಡಗಿನ ಸಮಾರಂಭದಲ್ಲಿ ಸೌಮ್ಯ, ಶೀತಲವಾದ

ಸೌಂದರ್ಯವು ಅವರಿಗೆ ಕಂಡಿತು. ಆಗ ಒಮ್ಮೆಲೇ ಅವರು ಆ ಅಮೇರಿಕನ್ ಹೆಂಗಸರನ್ನುದ್ದೇಶಿಸಿ, "ನೀವು ರಾಜಕನ್ಯೆಯರು ನಿಜ. ಆದರೆ ನಮ್ಮ ಭಾರತೀಯ ಸ್ತ್ರೀಯರು ದೇವಕನ್ಯೆಯವ ರಂತೆ ಸುಂದರವಾಗಿರುತ್ತಾರೆ." ಎಂದರು. ನಮ್ಮ ಹೊಲಗದ್ದೆಗಳಲ್ಲಿ ಕಷ್ಟಪಡುವ 'ವಲ್ಕಲೇನಾಪಿ ತನ್ವೀ' ಎಂಬಂತೆ ಕಾಣುವ ನೂರಾರು ಕೃಷಿಕನ್ನೆಯರು, ಗಿರಿಜಾ, ಮತ್ಸ್ಯಗಂಧಾ ಇವರೆಲ್ಲರೂ ಯಾರ ಕಣ್ಮುಂದಿನಿಂದ ಥಟ್ಟನೆ ಹಾಯ್ದು ಹೋಗಬಹುದೋ ಅಂತಹವರಿಗೆ ಮಾತ್ರ ಡಾಕ್ಟರರ ಈ ಸೌಂದರ್ಯ ಚಿಕಿತ್ಸೆಯ ಮರ್ಮವು ಸಹಜವಾಗಿ ತಿಳಿಯಬಹುದು.

ಅಸಾಮಾನ್ಯ ಅನುಭೂತಿಗಳ ಅಪಾರ ಆಕರ್ಷಣೆ ಇದ್ದ ಮನುಷ್ಯ, ಈತ ಅಮೇರಿಕೆಗೆ ಹೋಗುವಾಗ ಗ್ರೇಟಾ ಗಾರ್ಬೋ ಮತ್ತು ಐನ್‌ಸ್ಟೀನ್ ಅವರನ್ನು ಭೆಟ್ಟಿಯಾಗುವ ತೀವ್ರ ಇಚ್ಛೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೋಗಿದ್ದ. ಎಲ್ಲ ಬದಿಗಳಿಂದಲೂ ತನ್ನ ಬಾಳನ್ನು ಪರಿಪೂರ್ಣವನ್ನಾಗಿ ಮಾಡಬೇಕು ಎನ್ನುವ ಹಠದ ಬೇರೆ ಇನ್ನಾವ ಉದಾಹರಣೆ ಬೇಕು? 'ಉತ್ಕಟ ಭವ್ಯವೆಲ್ಲವನ್ನೂ ಸ್ವೀಕರಿಸಬೇಕು, ಸಪ್ಪೆಯಾದುದನೆಲ್ಲ ತ್ಯಜಿಸಬೇಕು' ಎಂಬ ಸಮರ್ಥ ರಾಮದಾಸರ ಈ ಮಾತುಗಳಲ್ಲಿಯೇ ಅವರ ವ್ಯಕ್ತಿತ್ವದ ಸಾರವಿದೆ. ಖಾಸಗಿ ಇಲ್ಲವೆ ಸಾರ್ವಜನಿಕ ಜೀವನದಲ್ಲಿಯ ನಿಸ್ಸತ್ತ್ವತೆಯಿಂದ ಅವರು ಕೆರಳುತ್ತಿದ್ದರು. ದೇವರು ಮತ್ತು ದೈವ, ಎರಡೂ ದುರ್ಬಲರಿಗೆ ಘಾತಕವಾಗಿರುತ್ತವೆ. ರಾಜಕಾರಣದ ಅರ್ಥವನ್ನು ಈಗ ಕೇವಲ 'ಮುಚ್ಚುಮರೆಸುವ'ದರಲ್ಲೇ ಕಂಡುಕೊಳ್ಳುವ ಇಂದಿನ ಕಾಂಗ್ರೆಸ್‌ದೊಂದಿಗೆ ಇಂತಹ ಮನುಷ್ಯನು ಹೇಗೆ ಸರಿಹೊಂದುವನು? ಲೋಹಿಯಾ ಅವರ ಸ್ವಭಾವಕ್ಕೆ ಹೊಸ ಸಾಮಾಜಿಕ ಪರಿವರ್ತನೆಗಳು ಹಿತಕರವಾಗುವಂತಹವು. ಆದರೆ ಮೂಲಧಾರೆ ಮಾತ್ರ ಸಂಪೂರ್ಣ ಭಾರತೀಯ. "ರಾಮ, ಕೃಷ್ಣ ಮತ್ತು ಶಿವ ಎಂದರೆ ಭಾರತೀಯರಿಗೆ ಬಿದ್ದ ಪರಿಪೂರ್ಣತೆಯ ಕನಸುಗಳು." ಇಂತಹ ಸೂತ್ರಮಯ ವಾಕ್ಯವು ಅಕಾರಣವಾಗಿ ಬರುವುದಿಲ್ಲ. ಈ ಲೇಖನದ ಕೊನೆಗಿರುವ ಅವರ ಪ್ರಾರ್ಥನೆಯಂತೂ ಸರಿಯಾಗಿ ವಿವೇಕಾನಂದರ ಸ್ಮರಣೆಯನ್ನು ತಂದುಕೊಡುತ್ತದೆ. ಭಾರತಮಾತೆಯ ಕಡೆಗೆ ಬಾಲಕನ ಆರ್ತತೆಯಿಂದ ಕೊಡುಗೆಯನ್ನು ಬೇಡುವ ವ್ಯಾಕುಲ ಲೋಹಿಯಾರವರ ದರ್ಶನವು ಅಲ್ಲಿ ಆಗುತ್ತದೆ.

"ತಾಯಿ ಭಾರತಿಯೇ ನಮಗೆ ಶಿವನ ಮತಿಯನ್ನು ಕೊಡು, ಕೃಷ್ಣನ ಅಂತಃಕರಣವನ್ನು ಕೊಡು, ರಾಮನ ಕೃತಿಶಕ್ತಿಯನ್ನು ಕೊಡು. ಅಪರಿಮಿತ ಮನಸ್ಸನ್ನೂ ಕೊಟ್ಟು ನಮ್ಮನ್ನೂ ರೂಪಿಸು. ಉನ್ಮೇಷಶಾಲಿಯಾದ ಹೃದಯವನ್ನು ಕೊಡು. ಆದರೆ ಬದುಕಿನಲ್ಲಿ ಮಾತ್ರ ತಾಳ್ಮೆ-ಮಿತಿಗಳನ್ನು ದಯಪಾಲಿಸು." ಉಪನಿಷತ್ ಕಾಲದಲ್ಲಿನ ಋಷಿಗಳಾದರೂ ಬೇರೆ ಏನನ್ನು ಬೇಡಿದ್ದರು? ಈ ಕಳವಳ ಸಂತರದು, ರಾಜಕೀಯ ಮುಖಂಡನದಲ್ಲ. ಭಾರತೀಯರ ಸಾಂಸ್ಕೃತಿಕ ಪರಂಪರೆಯು ರಾಮ, ಕೃಷ್ಣ ಮತ್ತು

ಶಿವ ಇವರಿಂದ ಬಂದುದು ಎಂದು ಹೇಳುವಾಗ ಲೋಹಿಯಾ ಅವರಿಗೆ ಸಮಾಜವಾದ ಅಡ್ಡ ಬರುವುದಿಲ್ಲ. ಏಕೆಂದರೆ ಅವರಿಗೆ ರಾಮ, ಕೃಷ್ಣ ಮತ್ತು ಶಿವ ಈ ಜೀವನದ ಬಗೆಗಿರುವ ಮೂರು ದೃಷ್ಟಿಕೋನಗಳಲ್ಲಿನ ವಿಶ್ವಾತ್ಮಕತೆಯು ಕಂಡುಬರುತ್ತದೆ. ಹುಸಿ ಸೆಕ್ಯೂಲರ್ ಜನರಿಗೆ ಇವು ಹಿಂದು ದೇಶದ ಹೆಸರುಗಳೆಂದು ಅನಿಸಬಹುದು. ಅವುಗಳನ್ನು ಹೀಗೆ ಜಾಹೀರು ರೀತಿಯಿಂದ ಉಚ್ಚರಿಸುವದೇ? ಶಿವ ಶಿವಾ, ರಾಮ ಗೋವಿಂದಾ!

ಲೋಹಿಯಾ ಅವರು ಭಾರತೀಯ ತತ್ವಜ್ಞಾನದಲ್ಲಿಯ ಕರ್ಮಯೋಗವನ್ನು ಆಚರಿಸಿ ತೋರಿಸಿದರು. ಕಬೀರನ ಒಂದು ಪದ್ಯದಲ್ಲಿ ಅವನು. "ತನ್ನ ಮನೆಯನ್ನು ಸುಟ್ಟು, ಅದರ ವಿಭೂತಿಯನ್ನುಳಿದು ತಯಾರಾಗಿದ್ದವನೇ ನನ್ನ ಬೆನ್ನ ಹಿಂದೆ ಬರಬೇಕು" ಎಂದು ಘೋಷಿಸಿದ್ದನು. ಮಹಾತ್ಮ ಗಾಂಧಿಯವರ ಹಿಂದೆ ಆ ಕಾಲದಲ್ಲಿ ಅಸಂಖ್ಯ ಉಗ್ರತಪಸ್ವಿಗಳು ಹೊರಟರು. ಪ್ರಭುತ್ವದ ಮೇನಕೆ-ಊರ್ವಶಿಯರು ಅವುಗಳಲ್ಲಿಯ ಅನೇಕರ ತಪೋಭಂಗವನ್ನು ಮಾಡಿದರು. ವಿನೋಬಾ, ಜಯಪ್ರಕಾಶ, ಸಾನೆ ಗುರೂಜಿ, ಯುಸುಫ್ ಮೆಹರ ಅಲಿ, ಅಣ್ಣಾಸಾಹೇಬ ಸಹಸ್ರಬುದ್ಧೆ ಇವರಂತಹ ಅಪವಾದ ಸ್ವರೂಪ ತಪಸ್ವಿಗಳು ತಮ್ಮ ವ್ರತದಿಂದ ದೂರ ಸರಿಯಲಿಲ್ಲ. "ಸಾಧನಾನಾಮ್ ಅನೇಕತಾ" ಇರಬಹುದು; ಆದರೆ ತಪಸ್ಸು ಮುಂದುವರೆಯಿತು.

ಲೋಹಿಯಾ ಅವರು ಇಂತಹ ಯಾತ್ರೆಯಲ್ಲಿಯ ಪಥಿಕರು. ಭಯವಿರಹಿತ ಚಿತ್ತ ಸ್ವತಂತ್ರವಾಯಿತು. ಗೋವೆಯ ಸಂಕಟ ಚುಚ್ಚುತ್ತಿತ್ತು. ಆ ಪಾಶವಿ ಪ್ರಭುತ್ವದ ವಿರುದ್ಧ ಈ ಒಬ್ಬನೇ ಒಬ್ಬ ಮನುಷ್ಯನು ತೋಳನ್ನು ತಟ್ಟಿ ಎದುರಾದನು. ಗೋವೆಯ ಚಿಕ್ಕಪುಟ್ಟ ಮಕ್ಕಳೆಲ್ಲರೂ ಬಾಕಿಬಾಬ ಬೋರಕರ್‌ರ ಹಾಡನ್ನು ಹಾಡುತ್ತಾ ಸೆಟೆದು ನಿಂತರು, "ಗೊಯಾಂತ್ ಲೋಹಿಯಾ ಆಯ್ಲೋರೇ"(ಗೋವೆಗೆ ಲೋಹಿಯಾ ಬಂದರೋ ಬಂದರು!) "ಗೋವಿಂದಾ ಬಂದನೋ ಬಂದಾ, ಗೋಕುಲದಲ್ಲಿ ಆಯ್ತು ಆನಂದಾ " ಭೀತಿಯು ತೊಲಗದಿದ್ದರೆ ಆನಂದವಾಗುವುದಿಲ್ಲ. ಹೊಟ್ಟೆಯ ಪಾತ್ರೆಯಲ್ಲಿ ಭೀತಿ ಇದ್ದರೆ ಆನಂದವು ಹುಳಿತಾಗುತ್ತದೆ. ಕಂಸನ ಭಯ ಹೋದಾಗಲೇ ಗೋಕುಲ ದಲ್ಲಿ ಆನಂದವಾಯಿತು. ಪೋರ್ಚುಗೀಸರ ಭಯ ಕಳೆದೊಡನೆ ಗೋವೆಯಲ್ಲಿ ಆನಂದವಾಯಿತು. ಇಂದಿಗೆ ಪಣಜಿಯ ಬಂದರದ ಮೇಲೆ ಸಿಂಧುಸಾಗರದತ್ತ ದೃಷ್ಟಿಯನ್ನಿಟ್ಟ ವಿಗ್ರಹವನ್ನು ಸ್ಥಾಪಿಸಬೇಕು, ಈ ಅಭಯಕಾರಿ ರಾಮಮನೋಹರ ಲೋಹಿಯಾ ಅವರದು! ಆದರೆ ಈ ಕೆಲಸವನ್ನು ಮಾಡುವವರು ಯಾರು? ಸಾರ್ವಜನಿಕ ಸ್ಮೃತಿಯು ಅಲ್ಪಾವಧಿಯದು. ಲೋಹಿಯಾ ಅವರು ಭಯವಿಹೀನ, ವಾಸನಾರಹಿತ ಮತ್ತು ನೈರಾಶ್ಯವಿರದ ಮನಸ್ಸೇ ಯೋಗ್ಯ ವಿಚಾರ ಮಾಡುತ್ತದೆ ಎನ್ನುತ್ತಾರೆ. ಸತ್ಯದ ಉಪಾಸಕನ ಸಾಧನಾತ್ರಯ ಇದು. ಲೋಹಿಯಾ ಅವರ ಕಣ್ಣುಗಳಲ್ಲಿ ಈ ತರದ ನಿರ್ಭಯತೆ ಇತ್ತು. ಈ ಅಸಂಗ್ರಹ ವೃತ್ತಿಯ ಮನುಷ್ಯನು ಬಿಟ್ಟು ಹೋದ ಆಸ್ತಿ

ಏನಾಗಿತ್ತು? ಐದೇಳು ಟ್ರಂಕುಗಳ ತುಂಬ ಪುಸ್ತಕಗಳು ಮತ್ತು ಅಸಂಖ್ಯ ಗೆಳೆಯರು. ಸಂಗ್ರಹವೇ ಇರದೆಡೆಯಲ್ಲಿ ಅಪಹರಣದ ಭೀತಿ ಹೇಗಿರಲು ಸಾಧ್ಯ? ಆದ್ದರಿಂದಲೇ ದಿಲ್ಲಿಯಲ್ಲಿಯ ಪ್ರಭುತ್ವಕ್ಕಾಗಿ ಮತ್ತು ಶ್ರೀಮಂತಿಕೆಗಾಗಿ ಹಾತೊರೆಯುವ ಸಂಧಿಸಾಧುಗಳು ಐತಿಹಾಸಿಕ ಕಾಲದಿಂದಲೂ ಇಂದಿನವರೆಗೆ ನಡೆದು ಬಂದ ಹೇಸಿಕೆ ಹುಟ್ಟಿಸುವ ಲೀಲೆಗಳನ್ನು ನೋಡಿ ಅವರೆಂದಿದ್ದಾರೆ; "ಈ ನಗರಭವಾನಿ(ನಾಯಕಸಾನಿಯು ಗೆದ್ದವರ ಮುಂದೆ ತನ್ನ ಸ್ತನಗಳನ್ನು ಎಂದೆಂದಿಗೂ ಒಡ್ಡಿರುತ್ತಾಳೆ)" ಭಿಕ್ಷಾಪಾತ್ರೆಯಲ್ಲಿ ಅನ್ನಧಾನ್ಯಗಳನ್ನು ಚೆಲ್ಲುವ ಪರದೇಶಿ ಚೆಲುವರ ಮುಂದೆ ಸಿಂಗರಿಸಿಕೊಳ್ಳಲಿಕ್ಕೆ ಈಕೆ ತನಗಾಗಿ ನೀರಿನಂತೆ ಹಣವನ್ನು ಸೂರೆ ಮಾಡುತ್ತಾಳೆ. ಆದರೆ ಲಕ್ಷಾವಧಿ ಭಾರತೀಯ ನಾಗರೀಕರು ಒಂದುಗೂಡುವ ತೀರ್ಥಕ್ಷೇತ್ರಗಳಲ್ಲಿ ಆಧುನಿಕ ಕಕ್ಕಸುಗಳ ಸೌಲಭ್ಯವೂ ಇಲ್ಲ. ಒಳ್ಳೆಯ ರಸ್ತೆಗಳೂ ಇಲ್ಲ. ದಿಲ್ಲಿಯಲ್ಲಿಯ ಚಾಣಕ್ಯಪುರಿ ಥಳಥಳನೆ ಹೊಳೆಯುತ್ತದೆ. ಆದರೆ ಈ ಸಾಕ್ಷಾತ್ ದೇವಪುರಿಗಳಲ್ಲಿ ಮಾತ್ರ ಉತ್ತಮ ಫ್ಲಶಿಂಗ್‌ದ ವ್ಯವಸ್ಥೆ ಮಾಡಬೇಕು, ಉಳಿಯಲಿಕ್ಕೆ ಭವ್ಯ ಹೋಟೆಲುಗಳನ್ನು ಕಟ್ಟಬೇಕು, ಆಧುನಿಕ ಸೌಕರ್ಯಗಳ ಲಾಭವು ನಮ್ಮ ಬಡ ಜನತೆಗೂ ಸಿಗಬೇಕು ಎಂಬ ಚಿಂತೆ, ಕರಿ ಶೇಠಜಿಗಳನ್ನು ರಮಿಸುವ ವಾರಾಂಗನಾ ಸಂಸ್ಕೃತಿಯ ಜೋಪಾಸನೆಯನ್ನು ಮಾಡುತ್ತಿರುವ ದಿಲ್ಲಿಗೆ ಕಾಡುವುದಿಲ್ಲ. ಕಾರಣವೇನೆಂದರೆ ದಿಲ್ಲಿಯು ಇಂದಿಗೂ ಮೊಗಲ್‌ಕಾಲದ್ದೇ ರಾಜಧಾನಿಯಾಗಿದೆ. ಅದು ಲೋಕಧಾನಿಯಾಗಿಲ್ಲ. ರಾಷ್ಟ್ರಪತಿಗಳ ಕೈಯ್ಯಿಂದ ಶಾಲನ್ನು ತೊಡಿಸಿ ಶಾಲೆಯ ಮಾಸ್ತರರ ಸತ್ಕಾರವಾಗುತ್ತದೆ, ಆದರೆ ಅವರಿಗೆ ಉಳಿದುಕೊಳ್ಳಲು 'ಅಶೋಕ್ ಹೋಟೆಲ್' ಸರಕಾರಿಯಾಗಿದ್ದರೂ ಸಿಗುವುದಿಲ್ಲ. 'ಗುರು ಬ್ರಹ್ಮ'ರನ್ನು ಚಳಿಮಳೆಯಲ್ಲಿಯೂ ಹರಕಲು ಗುಡಾರಗಳಲ್ಲಿರಿಸಿ ಕಳಿಸಲಾಗುತ್ತದೆ. ಗೌರವರ್ಣದ ಅತಿಥಿಗಳ ಸುವ್ಯವಸ್ಥೆ ಮಾತ್ರ ಅಶೋಕ್ ಹೋಟೆಲಿನಲ್ಲಿ! ಏಕೆಂದರೆ ಅವರು ಖುಷಿಯಿಂದ ಕೊಡುವ ಬಕ್ಷೀಸು ಡಾಲರ್ಸ್ ಇಲ್ಲವೇ ರೂಬಲ್ಸ್‌ನಲ್ಲಿ. ಅಲ್ಲದೆ, ತೀರ್ಥಕ್ಷೇತ್ರಗಳಲ್ಲಿ ಲಕ್ಷಾವಧಿ ಭಾರತೀಯರು ಒಂದುಗೂಡಿದರೂ ಅವರೆಲ್ಲರೂ ಮುಖ್ಯವಾಗಿ ಹಿಂದೂ ಅಲ್ಲವೆ? ಸೆಕ್ಯೂಲರ್ ದೇಶದಲ್ಲಿ ಅವರಿಗಾಗಿ ಸೌಲಭ್ಯಗಳನ್ನು ಕಲ್ಪಿಸಿದರೆ ಕುಲಕ್ಕೆ ಕಳಂಕ ಹತ್ತೀತು! ಮಿಶನರಿ ಶಾಲೆಗಳಲ್ಲಿ ಆಧುನಿಕತೆಯ ಹೆಸರಿನಲ್ಲಿ ಪರೋಕ್ಷವಾಗಿ ರಾಷ್ಟ್ರದ್ರೋಹಿ ಪಾಠಗಳನ್ನು ಕಲಿಸುವ ಬಗ್ಗೆ ಬರೆಯಲು ಅವರು ಹಿಂಜರಿಯಲಿಲ್ಲ. ಜನರಲ್ಲಿಯ ಜಾತಿಭೇದದ ಬಗೆಗೆ ಅವರಿಗಿರುವ ಜಿಗುಪ್ಸೆಯನ್ನು ಅವರು ನಿಸ್ಸಂದಿಗ್ಧ ಶಬ್ದಗಳಲ್ಲಿ ವ್ಯಕ್ತಮಾಡಿದ್ದಾರೆ. ಸತ್ಯ ಹೇಳುವ ಮುಜುಗರವನ್ನು ಅವರೆಂದೂ ಅನುಭವಿಸಲಿಲ್ಲ. ಕಾರಾಗೃಹದ ಕಷ್ಟಗಳನ್ನು ಸಹಿಸುತ್ತಾ ಅವರಿಗೆ ಯೋಗಸಾಧನೆ ಅವಗತವಾಗಿತ್ತು. ,"ಶುಚೀನಾಂ ಶ್ರೀಮತಾಂ ಗೇಹೆ ಯೋಗ ಭ್ರಷ್ಟೋಭಿಜಾಯತೇ" ಎಂಬ ಗೀತೆಯಲ್ಲಿಯ ವಚನವು ಇಲ್ಲಿ ನೆನಪಾಗುತ್ತದೆ. ಶಂಕರಾಚಾರ್ಯ, ರಾಮಕೃಷ್ಣ, ಇವರಂತಹ ಪವಿತ್ರ ಮತ್ತು ಶ್ರೀಮದ್ ವಿಭೂತಿಗಳ ಮನೆಯಾಗಿದ್ದುದು ನಮ್ಮ ದೇಶ. ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ–

ಹೀಗೆ ನಾಲ್ಕು ದಿಕ್ಕುಗಳು ಒಂದೇ ಅದ್ವೈತ ತತ್ವಜ್ಞಾನದಿಂದ ಪ್ರಭಾವಿತಗೊಂಡ ಖಂಡಪ್ರಾಯ ಈ ಅಖಂಡ ಭಾರತಭೂಮಿಯಿಂದು, "ಯಮುನೆಯ ದಡದಲ್ಲಿ ಹುಟ್ಟಿದ ಕೃಷ್ಣನ ಅಂತ್ಯವು ದ್ವಾರಕಾನಗರಿಯ ಸಮುದ್ರದಂಡೆಯಲ್ಲಾದರೆ ಆ ಸಮುದ್ರ ತೀರದ ಮೇಲೆ ಜನ್ಮ ತಾಳಿದ ಮೋಹನದಾಸನ ದೇಹಾಂತವು ಯಮುನೆಯ ಅಂಚಿನಲ್ಲಿ" ಎನ್ನುವಂತಹ ಯೋಗವು ಪೂರ್ವ ಪಶ್ಚಿಮಗಳನ್ನು ಸಂಧಿಸಿಬಿಡುತ್ತದೆ. ಕೇರಳದಲ್ಲಿಯ ಕಾಲಡಿಯ ಒಬ್ಬ ಮಹಾನ್ ನಂಬೂದರಿ, ಕಾಶ್ಮೀರದ ಶ್ರೀನಗರದಲ್ಲಿ ಶಂಕರನಿಗೆ ಸ್ತೋತ್ರಾಭಿಷೇಕವನ್ನು ಮಾಡಿ ಉತ್ತರ ದಕ್ಷಿಣಗಳನ್ನು ಜೋಡಿಸುತ್ತಾನೆ. ಇಂತಹ ಈ ದೇಶದ ಅಖಂಡತ್ವವನ್ನು ರಾಮ, ಕೃಷ್ಣ, ಶಿವ ಇವರ ಸಮನ್ವಯದ ತತ್ವಜ್ಞಾನದಿಂದ ಸಂಘಟಿಸಬೇಕಲ್ಲದೆ ಮತ್ತಾವುದರಿಂದ? ಮನಸ್ಸು ಒಂದಾಗಬೇಕಾಗುತ್ತದೆ ಮತ್ತು ಮನಸ್ಸನ್ನು ಒಂದುಗೂಡಿಸಬೇಕಾದರೆ ತತ್ವಜ್ಞಾನಕ್ಕಿಂತ ಬೇರೆ ಸಿಮೆಂಟಿಲ್ಲ. ಇದನ್ನು ಕಂಡುಕೊಂಡವರ ಬದುಕು ನಿಜವಾದ ಅರ್ಥದಲ್ಲಿ ಶ್ರೀಮಂತವಾಗುತ್ತದೆ. ಎಲ್ಲ ಭಾರತೀಯರ ಜಡತೆಯನ್ನು ಝಾಡಿಸಿ ಅವರನ್ನು ಒಂದೆಡೆಗೆ ತರುವ ಶಿವನನ್ನು ಸಮರ್ಥರು ಶ್ರೀಮಾನ್ ಯೋಗಿ ಎಂದಿದ್ದರೆ, ಅದು ಈ ಅರ್ಥದಿಂದಲೇ.

ಇಂತಹ ಆಧ್ಯಾತ್ಮಿಕ ಮತ್ತು ಸೌಂದರ್ಯ ಸಂಚಯ ಮಾಡುವ ಶ್ರೀಮಂತಿಕೆಯ ಅಸಂಖ್ಯ ಪ್ರಮಾಣಗಳೂ ಮುಂದಿನ ಪುಟಗಳಲ್ಲಿ ಅಡಿಗಡಿಗೆ ಹರಡಿವೆ. ಶ್ರೀಪಾದರಾವ್ ಕೇಳಕರ್ ಮತ್ತು ಅವರ ಸಹಧರ್ಮಿಣಿ ಸೌ.ಇಂದೂತಾಯಿ ಕೇಳಕರ್ ಇವರು ಲೋಹಿಯಾ ಅವರ ಈ ವಿಚಾರಧಾರೆಯನ್ನು ಮರಾಠಿಯಲ್ಲಿ ತಂದಿದ್ದಾರೆ. ಮರಾಠಿ ತಿಳಿದಿರುವ ವಾಚಕರ ಮೇಲೆ ಅವರು ಉಪಕಾರ ಮಾಡಿದ್ದಾರೆ. ಈ ಲೇಖನಗಳನ್ನು ನಾನು ಮೊದಲು ಇಂಗ್ಲಿಷ್‌ನಲ್ಲಿ ಓದಿದ್ದೆನು. ಡಾಕ್ಟರರ ಇಂಗ್ಲಿಷ್ ಶೈಲಿಯು ವಿಲಕ್ಷಣ ಆಕರ್ಷಕವಾಗಿದೆ. ಲೇಖನಗಳನ್ನೋದುವಾಗ ತಮ್ಮ ಭೇದಕ ಕಣ್ಣುಗಳಿಂದ, ತುಟಿಗಳನ್ನು ತುಂಟತನದಿಂದ ತಿರುಚುತ್ತ, ಆ ದಪ್ಪ ಹುಬ್ಬುಗಳನ್ನು ಬಗ್ಗಿಸುತ್ತ, ಹಿಗ್ಗಿಸುತ್ತ ಮಾತಾಡುವ ಲೋಹಿಯಾ ಅವರು ಸತತವಾಗಿ ನನ್ನ ಕಣ್ಮುಂದೆ ಬರುತ್ತಿದ್ದರು. ಅತ್ಯಂತ ಪಾರದರ್ಶಕವಾದ ಅವರ ಲೇಖನ ಇದು.

ದಿಲ್ಲಿಯಲ್ಲಿ ಅವರೊಂದಿಗೆ ಆದ ನನ್ನ ಕೊನೆಯ ಭೇಟಿಯಲ್ಲಿ ಅವರು ನನ್ನ ಮನೆಗೆ ಬರುವ ವಚನ ನೀಡಿದ್ದರು. ಅವರು ಹೀಗೆ ಕೇವಲ ಪುಸ್ತಕದ ಕಪಾಟಿನಲ್ಲಿ ಬಂದು ವಾಸಿಸಬಹುದು ಮತ್ತು ಬರಿಯೆ ಪುಟಗಳ ಹಿಂದಿನಿಂದಲೇ ಮಾತಾಡುತ್ತ ಇರಬಹುದೆಂಬುದು ನನ್ನ ಕನಸಿನಲ್ಲಿಯೂ ಬಂದಿರಲಿಲ್ಲ. ಈಗ ಅವರ ಸಹವಾಸದಲ್ಲಿ ರಾತ್ರಿಯನ್ನು ಕಳೆಯುವುದೆಂದರೆ ಅವರ ಪುಸ್ತಕಗಳನ್ನು ತೆರೆದು ಕೂತುಕೊಳ್ಳುವುದು, ಮಾನಸಪೂಜೆಯಂತೆ ಮಾನಸಭೆಟ್ಟಿಯನ್ನು ಪಡೆಯುವುದು, ಎಂದಿಷ್ಟೇ ಉಳಿದಿದೆ. ಅವರ ನಿಧನದ ಬಗ್ಗೆ ಶೋಕಿಸುವುದು ನಮ್ಮ ಧರ್ಮಶಾಸ್ತ್ರಗಳ ವಿರುದ್ಧವಾಗುತ್ತದೆ. ಸನ್ಯಾಸಿಯ ಮೃತ್ಯುವಿಗಾಗಿ ಶೋಕ ಮಾಡಲಾಗದು. ಅವರ ಅಮರತ್ವವನ್ನು

ಅಲ್ಲಗಳೆದಂತಾಗುತ್ತದೆ. ಕಾಲಪುರುಷನಿಗೆ ಎಂದಿಗೂ ಅಳುಕದ, ಅಷ್ಟೇ ಏಕೆ, ನನ್ನದೂ ನಿನ್ನದೂ ಒಂದು ಸಣ್ಣ ಭೆಟ್ಟಿಯಾದಂತಾಯಿತು ಬಿಡು ಎಂದು ಅವನನ್ನುದ್ದೇಶಿಸಿ ಹೇಳುವ, ಯೋಗಿಯ ಅಲಿಪ್ತತನವನ್ನು ಬಾಳಿನಲ್ಲಿ ಮೆರೆಯುವ ಈ ಮನುಷ್ಯನನ್ನು ಮರಣದ ದಾರಿಯಲ್ಲಿ ಒಯ್ಯುವ ಅವಸರ ಆ ಕಾಲಪುರುಷನಿಗೆ ಇಷ್ಟೇಕೆ ಆಗಿತ್ತು? ಅಂತೂ ಕಾಲವು ಇಂತಹದೇನನ್ನಾದರೂ ವಿಪರೀತ ಮಾಡದಿದ್ದರೆ "ಕಾಲಾಯ ತಸ್ಮೈ ನಮಃ" ಎಂದು ಅವನಿಗೆ ಕಡ್ಡಾಯದ ನಮಸ್ಕಾರವನ್ನಾದರೂ ಯಾರು ಮಾಡುವರು? ಪ್ರಭುತ್ವದ ಕೆಟ್ಟ ಚಾಳಿಗಳು ಅವನಿಗೂ ಅಂಟಿವೆ.

(ಪು.ಲ. ದೇಶಪಾಂಡೆ ಮರಾಠಿಯ ಬಹುಮುಖ ಪ್ರತಿಭೆಯ ಲೇಖಕ ವಿನೋದ ಬರಹಗಾರ, ವಾಗ್ಮಿ, ನಾಟಕ ಹಾಗೂ ಸಿನಿಮಾ ರಂಗಗಳ ಲೇಖಕ ಮತ್ತು ನಟ)

(ಕನ್ನಡಕ್ಕೆ: ಆನಂದ ವರ್ಟಿ/ಕೆ. ಶ್ರೀದೇವಿ)

◆◆

೨

ನಾ ಕಂಡ ಡಾ. ಲೋಹಿಯಾ

ಧರ್ಮವೀರ ಭಾರತಿ

ಲೋಹಿಯಾರೊಂದಿಗೆ ನನ್ನ ಮೊದಲ ಭೇಟಿ ತುಂಬ ರೋಮಾಂಚನಕಾರಿಯಾಗಿತ್ತು. ನಾವು ಅವರನ್ನು ಭೇಟಿ ಮಾಡುವ ಸಮಯ ಹಾಗೂ ದಿನಾಂಕವನ್ನು ಜಿತೇಂದ್ರಸಿಂಹರು ಮೊದಲೆ ಗೊತ್ತುಪಡಿಸಿದ್ದರು. ನಮ್ಮ ಊರಿನಿಂದ ಅವರಿರುವ ಸ್ಥಳ ಸುಮಾರು ೧೮-೧೯ ಕಿಲೋಮೀಟರ್ ದೂರದಲ್ಲಿತ್ತು. ಸೈಕಲ್ ಅಥವಾ ಕುದುರೆ ಗಾಡಿಯಿಂದ ಹೋದರೆ ಸುಮಾರು ಒಂದು ಗಂಟೆಯ ದಾರಿ. ಶನಿವಾರ ಬೆಳಗ್ಗೆ ೮ ಗಂಟೆಗೆ ಅವರನ್ನು ಭೇಟಿಯಾಗುವುದೆಂದು ನಿಗದಿಪಡಿಸಲಾಗಿತ್ತು. ನಾವು ನಾಲ್ಕೈದು ಜನ ಸಾಹಿತಿ ಮಿತ್ರರು ಮುಂಜಾನೆ ಬೇಗನೆ ಎದ್ದು ಅವರ ಭೇಟಿಗೆ ಹೊರಟೆವು.

ಆಗ ಲೋಹಿಯಾರವರು ಇದ್ದ ಸ್ಥಳವೂ ವಿಲಕ್ಷಣವಾಗಿತ್ತು. ಅವರು ನೆಹರೂ ಸರ್ಕಾರದ ಅತಿಥಿಯಾಗಿ ನೈನಿ ಜೈಲಿನಲ್ಲಿದ್ದರು. ಅವರು ಮಾಡಿದ ಕೆಲವು ಭಾಷಣಗಳು ಆಕ್ಷೇಪಾರ್ಹವೆಂದು ಘೋಷಿಸಿ ಅವರ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಅದು ಸ್ವತಂತ್ರ ಭಾರತದ

ಒಂದು ವಿಲಕ್ಷಣ ಘಟನೆಯಾಗಿತ್ತು. ಗಾಂಧೀಜಿಯ ಅಹಿಂಸಾ ಮಂತ್ರವನ್ನು ಪಠಿಸುವ ನೆಹರೂ ಸರ್ಕಾರ ಒಬ್ಬ ದೇಶಭಕ್ತ ಸ್ವಾತಂತ್ರ್ಯದ ಸೇನಾನಿಯನ್ನು ಕ್ಷುಲ್ಲಕ ಕಾರಣಕ್ಕಾಗಿ ಜೈಲಿನಲ್ಲಿ ಕೂಡಿಹಾಕಿತ್ತು.

ಯಮುನಾ ನದಿಯ ಕೆಂಬಣ್ಣದ ಉಕ್ಕಿನ ಸೇತುವೆಯ ಮೇಲಿನಿಂದ ನಮ್ಮ ಕುದುರೆ ಗಾಡಿ ಸಾಗುತ್ತಿದ್ದಾಗ ನಾನು, "ಹೇಗಿದ್ದಿರಬಹುದು ಲೋಹಿಯಾರನ್ನು ಬಂಧಿಸಿಟ್ಟ ಜೈಲಿನ ಆ ಕೋಣೆ? ಹೇಗೆ ಕಳೆಯುತ್ತಿರಬಹುದು ಲೋಹಿಯಾರವರು ಜೈಲಿನ ಆ ಕೋಣೆಯಲ್ಲಿ? ಒಂದು ಕಾಲಕ್ಕೆ ನೆಹರೂ, ಮೌಲಾನಾ ಅಬ್ದುಲ್ ಕಲಮ್ ಆಜಾದ್ ಮುಂತಾದವರು ಬಂಧಿತರಾಗಿದ್ದುದು ಅದೇ ನೈನಿ ಸೆರೆಮನೆಯಲ್ಲಿ. ಯಾವ ಸೆರೆಮನೆಯಿಂದ ನೆಹರೂ ತಮ್ಮ ಮಗಳಿಗೆ ನೂರಾರು ಪತ್ರಗಳನ್ನು ಬರೆದಿದ್ದರೋ ಅದೇ ನೈನಿ ಸೆರೆಮನೆಯಲ್ಲಿ ತಮ್ಮ ಮಿತ್ರನೊಬ್ಬನನ್ನು ಬಂಧಿಸಿಟ್ಟಿದ್ದಾರೆ. ಕಾರಣ ತಮ್ಮ ಸರ್ಕಾರದ ವಿರುದ್ಧವಾಗಿರುವ ಕೆಲವು ಹೇಳಿಕೆಗಳು. ಇದು ನಮಗೆ ದೊರೆತ ಸ್ವಾತಂತ್ರ್ಯದ ಕುರುಹೆ?" ಎಂದು ಯೋಚಿಸುತ್ತಿದ್ದೆ.

ಹೀಗೆ ಯೋಚಿಸುತ್ತಿರುವಾಗಲೇ ಕಬ್ಬಿಣದ ದೈತ್ಯಾಕಾರದ ಗೇಟನ್ನು ದಾಟಿ ನಮ್ಮ ಕುದುರೆ ಗಾಡಿ ಜೈಲಿನ ಆವರಣವನ್ನು ಪ್ರವೇಶಿಸಿತ್ತು. ನಾವು ಕೈದಿಗಳ ವಾರ್ಡುಗಳನ್ನು ದಾಟಿ ಹೋಗುತ್ತಿದ್ದಾಗ ಅವರು ತಾವು ಮಾಡುತ್ತಿದ್ದ ಕೆಲಸವನ್ನು ನಿಲ್ಲಿಸಿ ಕುತೂಹಲದಿಂದ ನಮ್ಮತ್ತಲೇ ನೋಡುತ್ತಿದ್ದರು. ನಮ್ಮ ಜೊತೆಯಲ್ಲಿದ್ದ ವಾರ್ಡನ್, ಇವರೆಲ್ಲ ಡಾಕ್ಟರ್ ಸಾಹೇಬರನ್ನು ಕಾಣಲು ಬಂದಿದ್ದಾರೆ ಎಂದು ಹೇಳಿದಾಗ ಅವರು ತುಂಬ ಗೌರವದಿಂದ ನಮಗೆ ನಮಸ್ಕರಿಸಿ ಪುನಃ ತಮ್ಮ ಕೆಲಸದಲ್ಲಿ ತೊಡಗಿದರು. ಡಾಕ್ಟರ್ ಸಾಹೇಬರೊಂದಿಗೆ ಅವರ ಗೆಳೆತನ ಈಗಾಗಲೇ ಏರ್ಪಟ್ಟಂತಿತ್ತು.

ತೆರೆದಿರುವ ಪೋರ್ಟಿಕೋದಲ್ಲಿ ವಿಶಾಲವಾದ ಕಿಟಕಿಗಳಿರುವ ಒಂದು ಕೋಣೆ. ಒಳಗೊಂದು ಮರದ ಹಲಗೆ. ಅದರ ಮೇಲೊಂದು ಕಂಬಳಿ ಮತ್ತು ಒಂದು ಶುಭ್ರವಾದ ಬೆಡ್ ಶೀಟ್. ಮೇಲೊಂದು ತಲೆದಿಂಬು. ಆ ಹಾಸಿಗೆಯ ಮೇಲೆ ಕುಳಿತಿದ್ದರು ಲೋಹಿಯಾ. ಖಾದಿ ಪಂಚೆ, ಖಾದಿ ಶರ್ಟು, ಗೌರವರ್ಣ, ಚಿಕ್ಕದಾಗಿದ್ದರೂ ಹೊಳಪುಳ್ಳ ಕಣ್ಣುಗಳು, ದಪ್ಪವಾದ ತುಟಿಗಳಲ್ಲಿ ತೆಳುವಾದ ಮಂದಹಾಸ. ಪರಸ್ಪರರ ಪರಿಚಯವಾಯಿತು. ನಮ್ಮೊಂದಿಗೆ ನಡೆಸಿದ ಸಂಭಾಷಣೆಯಲ್ಲಿ ದೇಶಕ್ಕೆ ನಮ್ಮಂತಹ ತರುಣ ಬರಹಗಾರರ ಅವಶ್ಯಕತೆ ತುಂಬ ಇದೆ ಎಂಬ ಭಾವವನ್ನು ಅವರು ನಮ್ಮಲ್ಲಿ ಮೂಡಿಸಿದರು. ಇನ್ನಾವುದೇ ಸಂದರ್ಭವಾಗಿದ್ದರೆ ಅವರ ಪ್ರಶಂಸಾತ್ಮಕವಾದ ಮಾತಿನಿಂದ ನಾವು ಉಬ್ಬಿ ಹೋಗುತ್ತಿದ್ದೆವೇನೋ; ಆದರೆ ಈ ಯಕ್ಷಿಣಿಗಾರ ನಮ್ಮ ಮೇಲೆ ಅದೇನು ಮೋಡಿ ಮಾಡಿದ್ದನೋ ನಮ್ಮ ಮೇಲೆ ನಿಜವಾಗಿಯೂ ಒಂದು ಹೊಣೆಗಾರಿಕೆ ಇದೆ ಎಂಬುದನ್ನು ಅಂದು ನಾವು ಮನಗಂಡಿದ್ದೆವು. ಪ್ರಸ್ತುತ ವ್ಯವಸ್ಥೆಯನ್ನು ಬದಲಿಸಲು ನಾವು ಏನ್ನಾದರೂ ಮಾಡಲೇಬೇಕು ಎಂದು ನಮಗೆ ಅನಿಸಿತು. ಬಿಳಿ

ಕಾಲರಿನ ನಮ್ಮ ವ್ಯಕ್ತಿತ್ವ ಹಾಗೂ ತುಳಿಯಲ್ಪಟ್ಟ ಭಾರತೀಯ ಜನಮಾನಸದ ನಡುವೆ ಇದ್ದ ಮುಚ್ಚಿದ ಕದವನ್ನು ತೆರೆದಿದ್ದರು.

ಆ ದಿನ ನಮ್ಮೊಡನೆ ಅವರು ರಾಜನೀತಿಯನ್ನು ಕುರಿತು ಮಾತನಾಡಲಿಲ್ಲ. ನೆಹರೂ ಅವರನ್ನು ಕುರಿತು ಮಾತನಾಡಲಿಲ್ಲ. ತಮ್ಮ ಪಕ್ಷದ ಬಗೆಗೂ ಮಾತನಾಡಲಿಲ್ಲ. ಅಂದು ಅವರು ಮಾತನಾಡಿದ್ದು ಸಾಹಿತ್ಯದ ಬಗ್ಗೆ, ಕವಿತೆಯ ಬಗ್ಗೆ, ನಮ್ಮ ಕುಟುಂಬಗಳ ಯೋಗಕ್ಷೇಮದ ಬಗ್ಗೆ. ಸಾಹಿತ್ಯ, ಭಾಷೆ, ಮಾನವನ ಯಾತನೆಗಳ ಬಗ್ಗೆ ಅವರಿಗೆ ತಮ್ಮದೇ ಆದ ದೃಷ್ಟಿಕೋನವಿತ್ತು. ಲೋಹಿಯಾರವರು ಒಂದು ವೇಳೆ ವಿಮರ್ಶಕ ರಾಗಿದ್ದರೆ ಉಚ್ಚಕೋಟಿಯ ಸಾಹಿತ್ಯದ ವಿಮರ್ಶಕರು ಕೂಡ ಗಂಟುಮೂಟೆ ಕಟ್ಟಬೇಕಾಗುತ್ತಿತ್ತು ಎಂದು ನನಗನಿಸಿತು. ಯಾವ ದಿನಬಳಕೆಯ ಪದಗಳನ್ನು ಸಾಹಿತ್ಯದಲ್ಲಿ ನಿರುಪಯುಕ್ತ ಎಂದು ಭಾವಿಸಿ ನಾವು ಬಿಟ್ಟುಬಿಡುತ್ತೇವೆಯೋ ಅವೇ ಪದಗಳನ್ನು ಬಳಸಿ ಅವರು ಸಾಹಿತ್ಯದ ಕ್ಲಿಷ್ಟ ವಿಷಯಗಳನ್ನು ಓತಪ್ರೋತವಾಗಿ ಚರ್ಚಿಸುತ್ತಿದ್ದರು.

ನಮ್ಮ ಮಾತುಕತೆಗಳು ನಡೆಯುತ್ತಿದ್ದಾಗಲೇ ಒಬ್ಬ ವ್ಯಕ್ತಿ ನಾಟಕೀಯವಾಗಿ ಲೋಹಿಯಾರವರ ಕೋಣೆಯನ್ನು ಪ್ರವೇಶಿಸಿದ. ಕಪ್ಪು ಬಣ್ಣ, ಧಡೂತಿ ಶರೀರ, ದಪ್ಪ ಮೀಸೆ, ಭಯ ಹುಟ್ಟಿಸುವಂತಹ ಗಂಭೀರ ಮುಖಭಾವ, ಕೈಯಲ್ಲಿ ಮಿರಿಮಿರಿ ಮಿಂಚುತ್ತಿದ್ದ ಹಿಡಿಕೆಯುಳ್ಳ ಕಪ್ಪು ಬೆತ್ತ. ಆತನನ್ನು ಕಂಡು ಸಹಜವಾಗಿಯೆ ನಾವೆಲ್ಲ ಹೆದರಿದೆವು. ಆದರೆ ಲೋಹಿಯಾರವರು ಆ ವ್ಯಕ್ತಿಯನ್ನು ಪರಿಚಯಿಸುತ್ತ, "ಹೆದರಬೇಕಾದ ಕಾರಣವಿಲ್ಲ. ಇವರು ನಮ್ಮ ಅಸಿಸ್ಟೆಂಟ್ ಜೈಲರ್ ಸಾಹೇಬರು. ತುಂಬ ಒಳ್ಳೆಯವರು. ಇವರೂ ನಿಮ್ಮಂತೆ ಒಬ್ಬ ಲೇಖಕರು. ಒಳ್ಳೆಯ ಕತೆಗಾರರು. 'ಪರವಾನಾ' ಎಂಬ ಕಾವ್ಯನಾಮದಿಂದ ಬರೆಯುತ್ತಾರೆ" ಎಂದು ಹೇಳಿದರು.

ಲೋಹಿಯಾರವರ ಬಾಯಿಯಿಂದ ತಮ್ಮ ಪ್ರಶಂಸೆಯನ್ನು ಕೇಳಿ ಜೈಲರ್ ಸಾಹೇಬರು ಉಬ್ಬಿಹೋದರು. ಬೆತ್ತವನ್ನು ಕೈಯಲ್ಲಿ ಹಿಡಿದೇ ನಮಗೆಲ್ಲ ನಮಸ್ಕರಿಸಿದರು. "ಇವರ ಕತೆಗಳು ನಿಮ್ಮ ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟವಾಗುವುದಿಲ್ಲ. ಆದರೆ ಅವರಿಗೆ ತಮ್ಮದೇ ಆದ ಓದುಗರಿದ್ದಾರೆ" ಎಂದು ಹೇಳುತ್ತ ಲೋಹಿಯಾರವರು ಯಾವ ಆತ್ಮೀಯತೆಯಿಂದ ಸಾಹಿತ್ಯದ ಬಗ್ಗೆ ನಮ್ಮೊಂದಿಗೆ ಮಾತನಾಡುತ್ತಿದ್ದರೋ ಅದೇ ಆತ್ಮೀಯತೆಯಿಂದ ಒಬ್ಬ ಕೈದಿ ಹಾಗೂ ಜೈಲರನ ಸಂಬಂಧವೇನು? ಎನ್ನುವ ಬಗೆಗೂ ಮಾತನಾಡತೊಡಗಿದರು. ಆಗ ಜೈಲರ್ ಸಾಹೇಬರು ಡಾಕ್ಟರ್ ಸಾಹೇಬರ ಬಗ್ಗೆ ತಮಗಿರುವ ಶ್ರದ್ಧೆಯನ್ನು ಸೂಚಿಸಲು ಕೃತಜ್ಞತಾಭಾವದಿಂದ ನತಮಸ್ತಕರಾಗಿ ಕುಳಿತುಬಿಟ್ಟರು. ಕೈದಿ ಗುರುವಾಗಿ ಮಾರ್ಗದರ್ಶನ ಮಾಡುತ್ತಿದ್ದರೆ ಜೈಲರ್ ಶಿಷ್ಯನಾಗಿ ಅವರ ಚರಣಗಳ ಅಡಿಯಲ್ಲಿ ಕುಳಿತಿದ್ದ. ಇಂತಹ ಅಪರೂಪದ ದೃಶ್ಯ ಯಾವ ಜೈಲಿನಲ್ಲಿ ತಾನೇ ನೋಡಲು ದೊರಕೀತು?

ಸಮತೆ

ಜವಾಹರಲಾಲ ನೆಹರೂ, ರಾಜಾಜಿ, ಇಂಡೋನೇಶಿಯದ ರಾಷ್ಟ್ರಪತಿಗಳಾಗಿದ್ದ ಸುಕರ್ಣೊ, ಶೇಖ್ ಮುಜಿಬುರ್ ರಹಮಾನ್ ಹೀಗೆ ನಾನು ಅನೇಕ ರಾಜನೀತಿಜ್ಞರನ್ನು ಭೇಟಿ ಮಾಡಿದ್ದೇನೆ. ಅವರಿಂದ ಪ್ರಭಾವಿತನೂ ಆಗಿದ್ದೇನೆ. ಆದರೆ ಡಾ.ಲೋಹಿಯಾರವರು ನನ್ನ ಮೇಲೆ ಬೀರಿದಷ್ಟು ಪ್ರಭಾವವನ್ನು ಇನ್ನಾರೂ ಬೀರಲಿಲ್ಲ. ಅವರ ಮೊದಲ ಭೇಟಿಯ ನಂತರ ನನಗೆ ಬಾಣಭಟ್ಟನ ಆತ್ಮಕಥೆ ಎಂಬ ಗ್ರಂಥದಲ್ಲಿ ಓದಿದ ಈ ಮಾತು ನೆನಪಾಯಿತು, 'ಯಾರಿಗೂ ಹೆದರಬೇಡ. ಶಾಸ್ತ್ರಗಳಿಗೂ ಕೂಡ, ಗುರುವಿಗೂ ಕೂಡ'. ಇಂತಹ ಒಂದು ನಿರ್ಭೀತಿಯನ್ನು ಅವರು ನನ್ನಲ್ಲಿ ಹುಟ್ಟಿಸಿದ್ದರು. ಅವರ ಸಾಹಿತ್ಯವನ್ನು ಓದುತ್ತಾ ಹೋದಂತೆ, ಅವರನ್ನು ಪುನಃ ಪುನಃ ಭೇಟಿಯಾಗುತ್ತ ಸಾಗಿದಂತೆ ನನ್ನಲ್ಲಿ ಈ ನಿರ್ಭೀತಿಯೂ ಹೆಚ್ಚುತ್ತಾ ಹೋಯಿತು.

ಆದರೆ ಈ ನಿರ್ಭೀತಿ ಉಚ್ಛೃಂಕಲ ಉದ್ದಂಡತೆಯಾಗಿ ಮಾರ್ಪಡದಂತೆ ಅವರ ವಿಚಾರಧಾರೆ ಕಡಿವಾಣವನ್ನು ಹಾಕಿತ್ತು. ಅವರು ಹೇಳುತ್ತಿದ್ದರು, "ಯಾರನ್ನು ನೀವು ತೀರ ಕ್ಷುಲ್ಲಕ ಅಥವಾ ನಿರುಪಯುಕ್ತ ಎಂದು ಭಾವಿಸುತ್ತೀರೋ ಅವನಿಗೂ ತನ್ನದೇ ಆದ ಒಂದು ಅಸ್ತಿತ್ವವಿದೆ. ಅವನ ಜೀವಿತಕ್ಕೂ ಒಂದು ಉದ್ದೇಶವಿದೆ ಎಂಬುದನ್ನು ಮರೆಯಬೇಡಿ. ಕೇವಲ ಸಂಪತ್ತಿನ ಸಮಾನ ಹಂಚಿಕೆಯಿಂದ ಸಮಾಜದಲ್ಲಿ ಸಮಾನತೆ ಉಂಟಾಗಲಾರದು. ಶಾಸನಗಳಿಂದಲೂ ಸಮಾನತೆಯನ್ನು ತರಲಾಗದು. ಅದಕ್ಕಾಗಿ ಜನರ ಹೃದಯಗಳ ಪರಿವರ್ತನೆಯಾಗಬೇಕು. ಒಂದು ರಾಜಕೀಯ ಪಕ್ಷವನ್ನು ಕ್ರಾಂತಿಕಾರಿಯನ್ನಾಗಿ ಮಾಡುತ್ತೇವೆ ಎಂದು ಹೊರಡುವುದಕ್ಕೆ ಮುಂಚೆ ನಮ್ಮ ಚಾರಿತ್ರ್ಯವನ್ನು ಕ್ರಾಂತಿಕಾರಿಯನ್ನಾಗಿ ಮಾಡಿಕೊಳ್ಳಬೇಕು. ಕ್ರಾಂತಿಯೆಂಬುದು ಒಳಗಿನಿಂದ ಹೊರಗೆ ಗತಿಶೀಲವಾಗುವಂತೆ, ಹೊರಗಿನಿಂದ ಒಳಗೂ ಗತಿಶೀಲವಾಗಬೇಕು. ಆಗ ಮಾತ್ರ ಮಾನವನ ಯಾತನೆಯನ್ನು ತಿಳಿಯಬಹುದು". ಇದು ಸಮಾನತೆಯ ಬಗ್ಗೆ ಲೋಹಿಯಾರವರ ವಿಚಾರಧಾರೆಯಾಗಿತ್ತು. ಆದ್ದರಿಂದಲೇ ಲೋಹಿಯಾರವರು ನೆಹರೂ ಅವರಿಗಿಂತಲೂ ಗಾಂಧೀಜಿಗೆ ತುಂಬ ಹತ್ತಿರವಾಗಿದ್ದರು. ಗಾಂಧೀಜಿಗೆ ತುಂಬ ಪ್ರಿಯವಾಗಿದ್ದ 'ವೈಷ್ಣವ ಜನ ತೋ ತೇನೆ ಕಹಿಯೇ ಜೋ ಪೀಡ ಪರಾಯಿ ಜಾಣೇರೇ' ಎಂಬ ಮಾತು ಲೋಹಿಯಾರವರಿಗೆ ಬಹು ಆಪ್ಯಾಯಮಾನವಾಗಿತ್ತು. ನೆಹರೂ ಕೇವಲ ಭಾರತ ದರ್ಶನ ಮಾಡಿದರೆ ಲೋಹಿಯಾ ಭಾರತದೊಂದಿಗೆ ಏಕಾಕಾರವಾಗಿದ್ದರು.

ಸ್ವಾತಂತ್ರ್ಯ

ಲೋಹಿಯಾರವರ ದೃಷ್ಟಿಯಲ್ಲಿ ಕೇವಲ ರಾಜಕೀಯ ಸ್ವಾತಂತ್ರ್ಯವಷ್ಟೇ ನಿಜವಾದ ಸ್ವಾತಂತ್ರ್ಯವಾಗಿರಲಿಲ್ಲ. ಮಾನವೀಯತೆಯನ್ನು ಕುಂಠಿತಗೊಳಿಸುವ ಎಲ್ಲ ಬಗೆಯ

ಗುಲಾಮಗಿರಿಯಿಂದ ಮುಕ್ತವಾಗುವುದೇ ನಿಜವಾದ ಸ್ವಾತಂತ್ರ್ಯವೆಂದು ಅವರು ನಂಬಿದ್ದರು.

ಈ ಶತಮಾನದ ಐದನೆಯ ದಶಕದ ವರ್ಷಗಳು ಭಾರತದ ಇತಿಹಾಸದಲ್ಲಿ ತುಂಬ ಮಹತ್ವಪೂರ್ಣವಾಗಿದ್ದವು. ಆಗತಾನೇ ದೊರೆತ ಸ್ವಾತಂತ್ರ್ಯದ ಹುರುಪು ಜನರಲ್ಲಿತ್ತು. ಅಲಹಾಬಾದ್ ಪ್ರಗತಿಶೀಲ ಹಿಂದಿ ಸಾಹಿತ್ಯದ ಕೇಂದ್ರವಾಗಿತ್ತು. ಆಗ ನಾನು ಅಲಹಾಬಾದಿನಲ್ಲೇ ಇದ್ದೆ. ಅಲ್ಲಿ ಪ್ರಗತಿಶೀಲ ಲೇಖಕರ ಸಂಘ ಎಂಬುದೊಂದು ಇತ್ತು. 'ಪರಿಮಳ' ಎಂಬ ಮತ್ತೊಂದು ಸಾಹಿತ್ಯ ಸಂಘವಿತ್ತು. ಈ ಎರಡೂ ಸಂಘಗಳ ಮೇಲೆ ಲೋಹಿಯಾರವರ ಗಾಢವಾದ ಪ್ರಭಾವವಿತ್ತು. ಈ ಎರಡೂ ಸಂಘಗಳಿಗೆ ಲೋಹಿಯಾ ಸ್ವತಃ ಎಂದೂ ಬರುತ್ತಿರಲಿಲ್ಲ. ಆದರೆ ಇಲ್ಲೇನು ನಡೆಯುತ್ತಿದೆ, ನಾವೇನು ಬರೆಯುತ್ತಿದ್ದೇವೆ ಎಂಬುದೆಲ್ಲ ಅವರಿಗೆ ಗೊತ್ತಿರುತ್ತಿತ್ತು. ಆದರೆ ಯಾರಿಗೂ ಸಲಹೆಯನ್ನು ಕೊಡುವ ತಪ್ಪನ್ನು ಅವರು ಮಾಡುತ್ತಿರಲಿಲ್ಲ. ತಾನು ಗುರುವೆಂಬ ಭಾವ ಅವರಲ್ಲಿ ಇರಲೇ ಇಲ್ಲ. ಆದರೆ ಲೇಖಕ ಶಿಷ್ಯರ ಒಂದು ದೊಡ್ಡ ಪೀಳಿಗೆಯನ್ನೇ ಅವರು ಸೃಷ್ಟಿಸಿದ್ದರು. ಈ ಪೀಳಿಗೆ ತನಗೆ ಸರಿಕಂಡ ವಿಚಾರಧಾರೆಯನ್ನು ವ್ಯಕ್ತಪಡಿಸುವಲ್ಲಿ ಸ್ವತಂತ್ರವಾಗಿತ್ತು. ಅವರು ನಮಗೆ ಮಾರ್ಗದರ್ಶಕರಾಗಿರಲಿಲ್ಲ. ಬದಲಾಗಿ ನಮಗೆ ಸರಿಕಂಡ ಮಾರ್ಗವನ್ನು ನಾವೇ ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅವರು ನಮಗೆ ನೀಡಿದ್ದರು. ಆದ್ದರಿಂದಲೇ ನಮ್ಮ ಪೀಳಿಗೆಯ ಲೇಖಕ ಬಳಗ ಇನ್ನಾರದೋ ವಿಚಾರಧಾರೆಯಿಂದ ಪ್ರಭಾವಿತಗೊಳ್ಳದೆ, ಇನ್ನಾರೋ ಹಾಕಿದ ಕಾಲುದಾರಿಯ ಮೇಲೆ ನಡೆಯದೆ ತನ್ನ ವಿವೇಕದಿಂದ ತನ್ನ ದಾರಿಯನ್ನು ತಾನೇ ಕಂಡುಕೊಳ್ಳುವಲ್ಲಿ ಸಮರ್ಥವಾಗಿತ್ತು.

ನಾನು ಅಲಹಾಬಾದನ್ನು ತೊರೆದು ಮುಂಬೈಗೆ ಬಂದ ಮೇಲೆ ಲೋಹಿಯಾರ ಭೇಟಿ ಮುಂಬೈನಲ್ಲಿ ಆಗತೊಡಗಿತು. ಒಂದು ಸಲ ಅವರು ಮುಂಬೈಗೆ ಬಂದಾಗ ನನ್ನ ಬಗ್ಗೆ ತುಂಬ ಚಿಂತಿತರಾಗಿದ್ದಂತೆ ಕಂಡಿತು. ಏಕೆಂದರೆ ಆಗ ನನ್ನ ಮೊದಲನೆಯ ವೈವಾಹಿಕ ಸಂಬಂಧ ಮುರಿದುಹೋಗಿತ್ತು. ನಾನು ಆರಂಭಿಸಬೇಕೆಂದಿದ್ದ ಹೊಸ ಬಗೆಯ ಜೀವನ ಅಲಹಾಬಾದಿನ ನನ್ನ ಅನೇಕ ಸಾಹಿತ್ಯ ಮಿತ್ರರಿಗೆ ಸರಿಯೆನಿಸಿರಲಿಲ್ಲ. ನಾನು 'ಧರ್ಮಯುಗ' ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡ ಬಗ್ಗೆಯೂ ಟೀಕೆ ಟಿಪ್ಪಣಿಗಳು ಸಾಗಿದ್ದವು. ಕೌಟುಂಬಿಕ ಜೀವನದಿಂದ ಮುಕ್ತರಾಗಿದ್ದು ಸದಾ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ತಮ್ಮ ತಲೆಯಲ್ಲಿ ತುಂಬಿಕೊಂಡಿದ್ದ ಅವರು ನನ್ನ ವೈಯಕ್ತಿಕ ಜೀವನದಂತಹ ಚಿಕ್ಕ ವಿಷಯದಲ್ಲೂ ಅಷ್ಟು ಮುತುವರ್ಜಿ ವಹಿಸಿದ್ದನ್ನು ಕಂಡು ನನಗೆ ತುಂಬ ಆಶ್ಚರ್ಯವಾಯಿತು. ಕೌಟುಂಬಿಕ ಜೀವನದಲ್ಲಿ ತುಂಬ ನಿರಾಸೆಗೊಂಡಿದ್ದ ನನ್ನಲ್ಲಿ ಹೊಸ ಆಸೆಯನ್ನು ಮೂಡಿಸುವ ಕಾರ್ಯವನ್ನು ಅವರು ಕೈಗೊಂಡರು.

ದೆಹಲಿ, ಹೈದರಾಬಾದ್ ಮತ್ತು ಲಖನೌ ಇವು ಅವರ ಕಾರ್ಯಕ್ಷೇತ್ರಗಳಾಗಿದ್ದರೆ, ಮುಂಬೈ ಅವರ ಕಾರ್ಯಕ್ಷೇತ್ರದೊಂದಿಗೆ ವಿಶ್ರಾಂತಿಧಾಮವೂ ಆಗಿತ್ತು. ಮುಂಬೈಯಲ್ಲಿ ಜಾರ್ಜ್ ಫರ್ನಾಂಡಿಸ್, ಮೃಣಾಲ ಗೋರೆ, ದಿನಕರ ಸಾಕ್ರಿಕರ್, ಇಂದುಮತಿ ಕೇಳ್ಕರ್ ಇವರ ಮಧ್ಯೆ ಇದ್ದಾಗ ತಮ್ಮೆಲ್ಲ ದುಗುಡವನ್ನು ಅವರು ಮರೆಯುತ್ತಿದ್ದರು. ಮುಂಬೈ ಲೋಹಿಯಾ ಅವರಿಗೆ ತುಂಬ ಪ್ರಿಯವಾಗಿತ್ತು. ರಾಜಕೀಯ ಕಪಟ ವಂಚನೆಗಳಿಲ್ಲದ, ಮುಕ್ತ ಮನಸ್ಸಿನ, ಸದಾ ಕೆಲಸದಲ್ಲಿ ತೊಡಗಿರುವ ಮುಂಬೈಯ ಜನ ಅವರಿಗೆ ತುಂಬ ಪ್ರಿಯರಾಗಿದ್ದರು. ಮುಂಬೈಯ ಕಡಲತೀರದ ಸೂರ್ಯಾಸ್ತವನ್ನು ನೋಡುವುದೆಂದರೆ ಲೋಹಿಯಾರಿಗೆ ಬಲು ಹಿಗ್ಗು. ಚರ್ಚ್‌ಗೇಟ್ ಬಳಿಯ 'ಬಾಂಬೆಲಿ' ಅವರ ಮೆಚ್ಚಿನ ಸ್ಥಳವಾಗಿತ್ತು. ಒಂದು ದಿನ ಅವರ ಕಛೇರಿಯಿಂದ ಫೋನ್ ಬಂತು. ಸರಿಯಾದ ಸಮಯಕ್ಕೆ ಬಾಂಬೆಲಿ ತಲುಪಿದೆ. ಅಂದು ಶ್ರೀಮತಿ ಕೇಳ್ಕರರೊಂದಿಗೆ ನನ್ನ ಪರಿಚಯವಾಯಿತು. ಒಂದು ರಾಜ್ಯದಲ್ಲಿ ಅವರ ಸೋಷಲಿಸ್ಟ್ ಪಕ್ಷ ಅಧಿಕಾರವನ್ನು ವಹಿಸಿಕೊಂಡಿತ್ತು. ಅದಕ್ಕಾಗಿ ನಾನು ಅವರನ್ನು ಅಭಿನಂದಿಸತೊಡಗಿದಾಗ ಸ್ವಲ್ಪ ಸಿಟ್ಟಿಗೆದ್ದು ಹೇಳಿದರು,"ಅಷ್ಟೇಕೆ ಅವಸರ? ಸ್ವಲ್ಪ ದಿನ ಕಾದು ನೋಡೋಣ, ಆ ಮೇಲೆ ಅಭಿನಂದಿಸುವಿರಂತೆ. ಈಗ ಕೇವಲ ಕಾಂಗ್ರೆಸ್ಸಿನೊಡನೆ ಹೋರಾಡುತ್ತಿದ್ದೇನೆ. ಇನ್ನು ಮುಂದೆ ಕಾಂಗ್ರೆಸ್ಸಿನೊಂದಿಗೆ ಅಧಿಕಾರಾರೂಢವಾದ ನನ್ನ ಪಕ್ಷದ ಘಟಕದೊಂದಿಗೂ ಹೋರಾಡಬೇಕಾದೀತೇನೋ! "ತಮ್ಮ ಪಕ್ಷ ಅಧಿಕಾರದಲ್ಲಿ ಬಂದುದಕ್ಕೆ ಪ್ರಸನ್ನಚಿತ್ತರಾಗುವುದಕ್ಕೆ ಬದಲಾಗಿ ಅವರು ಅಂದು ತುಂಬ ಉದಾಸೀನರಾಗಿದ್ದರು. ಅಧಿಕಾರದ ಗದ್ದುಗೆಯನ್ನೇರಿದ ಬಳಿಕ ಪಕ್ಷದ ಮೌಲ್ಯಗಳು ಉಳಿಯಬಲ್ಲವೆ? ಎಂಬ ಚಿಂತೆ ಬಹುಶಃ ಅವರನ್ನು ಕಾಡುತ್ತಿದ್ದಿರಬೇಕು. ಸೋಲು ಎಂದೂ ಅವರನ್ನು ಅಧೀರಗೊಳಿಸಲಿಲ್ಲ. ಗೆಲುವು ಎಂದೂ ಅವರಲ್ಲಿ ಅಹಂಭಾವವನ್ನುಂಟುಮಾಡಲಿಲ್ಲ. ತಾವೇ ಕಟ್ಟಿದ ಮನೆಯ ಗೋಡೆಯಲ್ಲಿ ಎಲ್ಲೇ ಬಿರುಕು ಕಾಣಿಸಿದರೂ ಇಡೀ ಗೋಡೆಯನ್ನೇ ಉರುಳಿಸಬಲ್ಲ ವ್ಯಕ್ತಿತ್ವ ಅವರದಾಗಿತ್ತು. ಅವರ ವ್ಯಕ್ತಿತ್ವದ ಆಳವಾದ ಜ್ಞಾನವಿಲ್ಲದವರಿಗೆ ಅವರ ವ್ಯಕ್ತಿತ್ವದ ತುಂಬ ವಿರೋಧಾಭಾಸ ಕಂಡುಬರುತ್ತಿತ್ತು. ಅವರ ವಕ್ತವ್ಯ ಹಾಗೂ ನಿರ್ಣಯಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದವರಿಗೆ ಅವರ ವರ್ತನೆ ನಕಾರಾತ್ಮಕವಾಗಿ ಗೋಚರಿಸುತ್ತಿತ್ತು. ವಿಶೇಷವಾಗಿ ಇಂಗ್ಲಿಷ್ ಭಾಷೆ ಮತ್ತು ಇಂಗ್ಲಿಷ್ ಮಾನಸಿಕತೆಯನ್ನು ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡ ಬುದ್ಧಿಜೀವಿಗಳಿಗೆ ಅವರು ಯಾವಾಗಲೂ ಒಂದು ಒಗಟಾಗಿಯೇ ಉಳಿದರು. ಇಂಗ್ಲಿಷ್ ಪತ್ರಿಕೆಗಳಂತೂ ಅವರಿಗೆ ತುಂಬ ಅನ್ಯಾಯವನ್ನೇ ಮಾಡಿದವು. ಭಾರತದ ಸುಶಿಕ್ಷಿತ ಜನವರ್ಗದ ಮನಸ್ಸಿನಲ್ಲಿ ಅವರ ವ್ಯಕ್ತಿತ್ವದ ತಪ್ಪು ಚಿತ್ರಣ ಮೂಡುವಂತೆ ಮಾಡಿದವು. ದೇಶದಲ್ಲಿ ನಮ್ಮ ಪರಿಸ್ಥಿತಿ ಹೇಗೇ ಇರಲಿ, ಪಶ್ಚಿಮದಲ್ಲಿ ಮಾತ್ರ ನಮ್ಮ ಘನತೆಗೆ ಕುಂದುಬರಬಾರದು, ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಬೇಕು

ಎಂಬ ನೆಹರೂ ಯುಗದ ಮಾನಸಿಕತೆ ಅವರಿಗೆ ಹಿಡಿಸುತ್ತಿರಲಿಲ್ಲ. ಅವರು ಮೌಲಿಕ ಪರಿವರ್ತನೆಯನ್ನು ಇಷ್ಟಪಡುತ್ತಿದ್ದರೆ ವಿನಾ ಕೇವಲ ಬಾಹ್ಯ ಥಳುಕುಬಳುಕನ್ನಲ್ಲ. ಮುಖವಾಡವನ್ನು ಧರಿಸಿ ಕುರೂಪವನ್ನು ಮುಚ್ಚಿಕೊಳ್ಳುವುದು ಅವರಿಗೆ ಇಷ್ಟವಿರಲಿಲ್ಲ. ಅಂತೆಯೇ ಎರವಲು ವಿಚಾರಧಾರೆಯ ಢೋಂಗಿ ಬುದ್ಧಿಜೀವಿಗಳನ್ನು ಕಂಡರೆ ಲೋಹಿಯಾರಿಗೆ ಆಗುತ್ತಿರಲಿಲ್ಲ.

ಅವರು ಪಾರ್ಲಿಮೆಂಟನ್ನು ಪ್ರವೇಶಿಸಿದ ಮೇಲೆ ಈ ಢೋಂಗಿ ಬುದ್ಧಿಜೀವಿಗಳ ಮುಖವಾಡವನ್ನು ಕಳಚಿ ಎಸೆಯತೊಡಗಿದರು. ಇಂಗ್ಲಿಷ್ ಮಾನಸಿಕತೆಯ ವಿರೋಧಿ ಯಾಗಿದ್ದಂತೆ ಅವರು ಹಿಂದಿ ಮಾನಸಿಕತೆಯ ವಿರೋಧಿಯೂ ಆಗಿದ್ದರು. ಹಿಂದಿಯು ಪ್ರಾದೇಶಿಕ ಭಾಷೆಗಳ ಮೇಲೆ ಸವಾರಿ ಮಾಡುವುದನ್ನು ಕೂಡ ಅವರು ಸಹಿಸುತ್ತಿರಲಿಲ್ಲ. ಹಿಂದಿಯ ಹೆಸರಿನಲ್ಲಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ರಾಜಕಾರಣಿಗಳು, ಸಾಹಿತಿಗಳು ಹಾಗೂ ಪತ್ರಕರ್ತರನ್ನು ಕಂಡರೆ ಅವರಿಗೆ ಆಗುತ್ತಿರಲಿಲ್ಲ. ಒಮ್ಮೆ ಹಿಂದಿಯನ್ನು ಕುರಿತು ಅವರ ಹಾಗೂ ಸೇಠ ಗೋವಿಂದದಾಸರ ನಡುವೆ ಪಾರ್ಲಿಮೆಂಟಿನಲ್ಲಿ ಕಹಿಯಾದ ಮಾತಿನ ಚಕಮಕಿ ಉಂಟಾಗಿತ್ತು. ಲೋಹಿಯಾರವರ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳುವಲ್ಲಿ ಇಂಗ್ಲಿಷ್ ಪತ್ರಿಕೋದ್ಯಮಿಗಳು ಮಾಡಿದ ತಪ್ಪನ್ನೇ ಕೆಲವು ಹಿಂದಿ ಪತ್ರಿಕೋದ್ಯಮಿಗಳೂ ಮಾಡಿದರು.

ಸೌಂದರ್ಯ

ಸಮತೆ ಹಾಗೂ ಸ್ವಾತಂತ್ರ್ಯದೊಂದಿಗೆ ಸೌಂದರ್ಯವನ್ನು ಮೇಳೈಸದಿದ್ದರೆ ಲೋಹಿಯಾರ ವ್ಯಕ್ತಿತ್ವ ಪೂರ್ಣವಾಗದು. ಲೋಹಿಯಾರವರಿಗೆ ಬಾಹ್ಯ ಸೌಂದರ್ಯ ಕ್ಕಿಂತಲೂ ಆಂತರಿಕ ಸೌಂದರ್ಯವೇ ಹೆಚ್ಚು ಪ್ರಿಯವಾಗಿತ್ತು. ಅವರೊಬ್ಬ ಉತ್ತಮ ಕಲಾವಿಮರ್ಶಕರಾಗಿದ್ದರು ಕೂಡ. 'ಜನ' ಎಂಬ ಪತ್ರಿಕೆಯಲ್ಲಿ ಭಾರತೀಯ ವಾಸ್ತುಶಿಲ್ಪ ಹಾಗೂ ಮೂರ್ತಿ ಕಲೆಯ ಬಗ್ಗೆ ಅವರದೊಂದು ಲೇಖನಮಾಲೆ ಪ್ರಕಟವಾಗಿತ್ತು. ಒಬ್ಬ ಉತ್ತಮ ಕಲಾಸಮೀಕ್ಷಕನಿಗೂ ಕೂಡ ಭಾರತದ ವಾಸ್ತು ಸೌಂದರ್ಯದ ಬಗ್ಗೆ ಅವರಷ್ಟು ಜ್ಞಾನವಿರಲಿಕ್ಕಿಲ್ಲ ಎಂದು ಆ ಲೇಖನಮಾಲೆಯನ್ನೋದಿದ ಯಾರಾದರೂ ಹೇಳಬಹುದಾಗಿತ್ತು. ಪೌರಾಣಿಕ ಪಾತ್ರಗಳಾದ ರಾಮ, ಕೃಷ್ಣ, ಶಿವ, ಸೀತೆ, ವಿಶ್ವಾಮಿತ್ರ ಮುಂತಾದವರನ್ನು ಅವರು ನೋಡುವ ದೃಷ್ಟಿಕೋನವೇ ಬೇರೆಯಾಗಿತ್ತು. ಅವರ ಸೌಂದರ್ಯಾನುಭೂತಿ ಕಲ್ಲಿನಲ್ಲಿ ಕೆತ್ತಿದ ವಿಗ್ರಹಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಪ್ರತಿನಿತ್ಯ ಪ್ರತಿಕ್ಷಣ ತಮ್ಮ ಎದುರಿನಲ್ಲಿ ಘಟಿಸುವ ಘಟನೆಗಳ ಸುಂದರ ಕ್ಷಣಗಳಲ್ಲಿಯೂ ಅವರು ಸೌಂದರ್ಯವನ್ನು ಅರಸುತ್ತಿದ್ದರು. ಮುಂಬೈಗೆ ಬಂದಾಗಲೆಲ್ಲ ಕಡಲತೀರದ ಕೇಸರಿ ಸೂರ್ಯಾಸ್ತ ನೋಡುವುದನ್ನು ಅವರು ಮರೆಯುತ್ತಿರಲಿಲ್ಲ. ಆಗ ಜುಹು ಬೀಚಿನಲ್ಲಿ ಈಗಿನಷ್ಟು ದೊಡ್ಡ ಹೋಟೆಲುಗಳೂ ಜನದಟ್ಟಣೆಯೂ ಇರಲಿಲ್ಲ. ಅಲ್ಲಿ ಹಳೆಯ ಮಾದರಿಯ ಲತಾಗೃಹಗಳನ್ನು ಹೋಲುವ ಪ್ರಶಾಂತವಾದ ಕೆಲವು

ಸಾಲುಕೋಣೆಗಳಿದ್ದವು. ಸಾಮಾನ್ಯವಾಗಿ ಮುಂಬೈಗೆ ಬಂದಾಗ ಲೋಹಿಯಾರವರು ಅಲ್ಲೇ ತಂಗುತ್ತಿದ್ದರು.

ಒಂದು ಸಲ ಅಲ್ಲಿಂದ ಲೋಹಿಯಾರವರ ಫೋನ್ ಬಂತು. "ಒಂದೆರಡು ಗಂಟೆ ಬಿಡುವು ಮಾಡಿಕೊಂಡು ಬರುವಿರಾ?" ಫೋನಿನಲ್ಲಿ ಅವರು ಕೇಳಿದರು.

"ಏಕೆ? ಅಂಥ ವಿಶೇಷವೇನಿದೆ?" ನಾನು ಕೇಳಿದೆ.

"ಏನಿಲ್ಲ. ಮರಳಿನ ಮೇಲೆ ಕುಳಿತು ಸೂರ್ಯಾಸ್ತ ನೋಡಬೇಕೆನಿಸುತ್ತದೆ."

ನಾನು ಹೋದೆ. ಅವರು ಅಂದು ತುಂಬು ಮೂಡಿನಲ್ಲಿದ್ದರು. ಜುಹು ಹೋಟೆಲಿನ ಅಂಗಳದಲ್ಲಿ ನಾವೆಲ್ಲ ಕುಳಿತೆವು. ಅವರೇ ಎಲ್ಲರಿಗೂ ಚಹಾ ತರಿಸಿಕೊಟ್ಟರು. ಚಹಾ ಕುಡಿಯುತ್ತಿದ್ದಾಗ ಏಕೋ ಮಾತು ರಾಮಾಯಣದ ಕಡೆಗೆ ಹೊರಳಿತು. ತಟ್ಟನೇ ಅವರೆಂದರು, "ರಾಮನು ಕಡಲತೀರದ ಸೂರ್ಯಾಸ್ತವನ್ನು ಕಂಡಿದ್ದನೋ ಇಲ್ಲವೋ. ಏಕೆಂದರೆ ರಾಮ ಕಂಡದ್ದು ರಾಮೇಶ್ವರದ ಕಡಲ ತೀರವನ್ನು. ಅದಂತೂ ಪೂರ್ವ ತೀರದಲ್ಲಿದೆ".

"ಆದರೆ ರಾಮ ಲಂಕೆಗೂ ಹೋಗಿದ್ದನಲ್ಲ. ಲಂಕೆ ಒಂದು ದ್ವೀಪ. ಅಲ್ಲಿ ಸೂರ್ಯೋದಯ ಸೂರ್ಯಾಸ್ತ ಎರಡನ್ನೂ ಕಾಣಬಹುದಲ್ಲ?" ನಾನೆಂದೆ. "ಮನೆಗೆ ಹೋದ ಮೇಲೆ ಒಮ್ಮೆ ವಾಲ್ಮೀಕಿ ರಾಮಾಯಣವನ್ನು ಸ್ವಲ್ಪ ತಿರುವಿ ಹಾಕಿ, ಅದರಲ್ಲಿ ಕಡಲತೀರದ ಸೂರ್ಯಾಸ್ತದ ವರ್ಣನೆ ಎಲ್ಲಿಯಾದರೂ ಬಂದಿದ್ದರೆ ನನಗೆ ಬರೆದು ತಿಳಿಸಿ" ಎಂದವರು ಹೇಳಿದರು. ನಂತರ ಸೂರ್ಯೋದಯ ಹಾಗೂ ಸೂರ್ಯಾಸ್ತಗಳ ಬಗ್ಗೆ ಒಂದು ದೊಡ್ಡ ವ್ಯಾಖ್ಯಾನವನ್ನೇ ನೀಡಿದರು. ಅಂದು ಸೌಂದರ್ಯಾನುಭೂತಿಯ ಬಗ್ಗೆ, ರಸಗಳ ಬಗ್ಗೆ ಲೋಹಿಯಾರವರು ಅದೆಷ್ಟು ಮಾತನಾಡಿದರೋ! ಸೂರ್ಯ ಗೋಳದ ಅಂಚು ಜಲರಾಶಿಯನ್ನು ಸ್ಪರ್ಶಿಸುತ್ತಿದ್ದಂತೆಯೇ ಅವರು ತುಂಬ ಭಾವುಕರಾಗಿ ತಮ್ಮ ಕುರ್ಚಿಯಿಂದೆದ್ದು ಮರಳಿನ ಮೇಲೆ ಕುಳಿತುಕೊಂಡರು. "ಭೂಮಿಯ ಸ್ಪರ್ಶ ತುಂಬ ಆಪ್ಯಾಯಮಾನ. ನೆಲದಲ್ಲಿ ಕುಳಿತಾಗ ತಾಯಿಯ ಮಡಿಲಲ್ಲಿ ಕುಳಿತಂತೆ ಆಗುತ್ತದೆ" ಎಂದರು. ಮಾತುಮಾತಿನಲ್ಲಿ ಅವರಿಗೆ ನನ್ನನ್ನು ಛೇಡಿಸಬೇಕೆನಿಸಿತೇನೋ, ನನ್ನನ್ನುದ್ದೇಶಿಸಿ ಹೇಳಿದರು "ನಿಮ್ಮ ಕುರ್ಚಿ ಎತ್ತರವಾಗಿದೆ ಡಾಕ್ಟರ್, ಆದರೆ ಈ ಮರಳಿನ ರಾಶಿ ಅದಕ್ಕಿಂತಲೂ ಎತ್ತರವಾಗಿದೆ. ಇದನ್ನು ಅರಿತು ನಡೆದರೇನೇ ಚೆನ್ನಾಗಿ ಕೆಲಸ ಮಾಡುವಿರಿ".

ಆಗ ಅವರನ್ನು ಕೆಣಕಬೇಕೆಂದೇ ನಾನೆಂದೆ, "ಆದ್ದರಿಂದಲೇ ಅಲ್ಲವೇ ಜನಕ ಮಹಾರಾಜರು 'ವಿದೇಹ'ರಾಗಿ ತಮ್ಮ ಸಿಂಹಾಸನದ ಮೇಲೆ ಕೂಡುತ್ತಿದ್ದುದು? ಆದರೆ ನಮ್ಮ ಪ್ರಜಾರಾಜ್ಯದ ಇಂದಿನ ಜನಕ ಮಹಾರಾಜರು ಆ ಮಾತನ್ನೇ ಮರೆತಿದ್ದಾರೆ. ಅದೇ ಇಂದಿನ ಈ ಎಲ್ಲ ದುಃಸ್ಥಿತಿಗೆ ಕಾರಣ".

ನನ್ನ ಮಾತಿನಿಂದ ಅವರು ಇನ್ನಷ್ಟು ಮೂಡಿನಲ್ಲಿ ಬಂದರು. ರಾಜರ್ಷಿ ವಸಿಷ್ಠ ಮತ್ತು ಜನಪ್ರತಿನಿಧಿಯಾದ ವಿಶ್ವಾಮಿತ್ರ ಇವರ ಉದಾಹರಣೆಯನ್ನು ಬಳಸಿಕೊಂಡು ಸಮಕಾಲೀನ ರಾಜಕೀಯವನ್ನು ತ್ರೇತಾಯುಗದ ರಾಜಕೀಯಕ್ಕೆ ಹೋಲಿಸಿದರು. ಅಂದು ನಾವು ಚರ್ಚಿಸಿದ ವಿಷಯಗಳಿಗೆ ಲೆಕ್ಕವೇ ಇಲ್ಲ. ಬದಲಿಸುತ್ತಿರುವ ಸೌಂದರ್ಯದ ಪ್ರತಿಮೆಗಳು, ಖಜುರಾಹೋ ಶಿಲ್ಪ, ಅಜಂತಾದ ವರ್ಣಚಿತ್ರಗಳು, ಕಾಂಗಡಾ ಚಿತ್ರಕಲೆಯ ನಾಯಕಿಯರು ಹೀಗೆ ಅನೇಕ ವಿಷಯಗಳನ್ನು ಕುರಿತು ಅವರು ಚರ್ಚಿಸಿದರು.

"ನಾನು ದಕ್ಷಿಣ ಭಾರತವನ್ನು ಹೆಚ್ಚಾಗಿ ಸುತ್ತಿಲ್ಲ. ಈ ಬಾರಿ ನನ್ನೊಂದಿಗೆ ಬನ್ನಿ. ನನ್ನ ದೃಷ್ಟಿಯಿಂದ ದಕ್ಷಿಣ ಭಾರತದ ದೇವಾಲಯಗಳ ವಾಸ್ತುಶಿಲ್ಪವನ್ನು ನೋಡುವಿರಂತೆ" ಎಂದೂ ಹೇಳಿದರು. ಆದರೆ ಆ ಅವಕಾಶ ದೊರೆಯಲೇ ಇಲ್ಲ.

ಅವರು ದೆಹಲಿಗೆ ಮರಳಿದ ಮೇಲೆ ಅಸ್ವಸ್ಥರಾದರು. ದಲಿತರ, ಪೀಡಿತರ ನೋವಿಗೆ ಧ್ವನಿಯಾಗಿದ್ದ ಅವರು ಒಂದು ದಿನ ಭೌತಿಕವಾಗಿ ಇಲ್ಲವಾದರು. ಈ ಸುದ್ದಿ ಇಡೀ ದೇಶವನ್ನು ವ್ಯಾಕುಲಗೊಳಿಸಿತು. ಅಂದು ಜುಹುಬೀಚಿನ ಮೇಲೆ ನಾನು ಅವರೊಂದಿಗೆ ಕಳೆದ ಸಂಜೆಯೇ ನಮ್ಮ ಅಂತಿಮ ಸಂಜೆಯಾಗಿತ್ತು.

ಸಮತೆ, ಸ್ವಾತಂತ್ರ್ಯ ಮತ್ತು ಸೌಂದರ್ಯ ಎಂಬ ತ್ರಿವಿಧ ಆಯಾಮಗಳ ಮೂರ್ತಸ್ವರೂಪರಾಗಿದ್ದ ಲೋಹಿಯಾ ಜನಸಾಮಾನ್ಯರ ಪಾಲಿಗೆ ಮಾತ್ರ ಕೇವಲ ಒಬ್ಬ ಸಮಾಜವಾದಿ ನಾಯಕರಾಗಿದ್ದರು.

(ಧರ್ಮವೀರ ಭಾರತಿ ಹಿಂದಿಯ ಪ್ರಸಿದ್ಧ ಕಥೆಗಾರ, ಕಾದಂಬರಿಕಾರ, ನಾಟಕಕಾರ ಮತ್ತು ಕವಿ. ಅತ್ಯಂತ ಜನಪ್ರಿಯ ಹಿಂದಿ ಸಾಪ್ತಾಹಿಕ 'ಧರ್ಮಯುಗ'ದ ಪ್ರಧಾನ ಸಂಪಾಕರಾಗಿದ್ದವರು)

(ಕನ್ನಡಕ್ಕೆ: **ಮುರಲೀಧರ ಕುಲಕರ್ಣಿ**)

◆◆

೩

ಗಾಂಧಿ ಮತ್ತು ಲೋಹಿಯಾರೆಂಬ ನಿರಂತರ ಆಶಾವಾದಿಗಳು

ಎಸ್. ಆರ್ ನೆನೆ

ಇಡೀ ಇಪ್ಪತ್ತನೇ ಶತಮಾನದ ರಾಜಕೀಯ, ಕೇವಲ ಒಬ್ಬ ವ್ಯಕ್ತಿಯ ಸಾಹಸ–ಪ್ರಯತ್ನಗಳ ಮೊತ್ತ: ಆ ಮಹಾನ್ ವ್ಯಕ್ತಿಯೇ ಮಹಾತ್ಮ ಗಾಂಧಿ. ಬ್ರಿಟಿಷರ ಆಳ್ವಿಕೆಯಿಂದ ಭಾರತವು ಸ್ವಾತಂತ್ರ್ಯವನ್ನು ಪಡೆಯಬೇಕಿದ್ದ ತುರ್ತಿನ ಸಂದರ್ಭದಲ್ಲಿ, ತಮ್ಮ ಬದುಕನ್ನು ಸಾರ್ವಜನಿಕ ಸೇವೆಗಳಿಗೆ ಮೀಸಲಿರಿಸಲು ಗಾಂಧಿಯವರಿಂದ ಪ್ರೇರಿತರಾದ ಸಾವಿರಾರು ಭಾರತೀಯರಲ್ಲಿ ಲೋಹಿಯಾ ಕೂಡ ಒಬ್ಬರು. ಡಾ. ಲೋಹಿಯಾ, ತಾವೇ ಹೇಳಿಕೊಂಡಂತೆ, ಇಬ್ಬರು ಮಹನೀಯರಿಂದ ಪ್ರೇರಿತರಾಗಿದ್ದರು; ಸಂಪೂರ್ಣವಾಗಿ ಗಾಂಧಿಯವರಿಂದ ಮತ್ತು ತಕ್ಕಮಟ್ಟಿಗೆ ನೆಹರೂ ಅವರಿಂದ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮುನ್ನಡೆಸುತ್ತಿದ್ದ ರಾಜಕೀಯ ಪಕ್ಷವನ್ನು ಸೇರಬಯಸಿದ್ದ ಡಾ.ಲೋಹಿಯಾರನ್ನು ಗಾಂಧಿಯವರಿಗೆ ಪರಿಚಯಿಸಿದ್ದು ಗಾಂಧಿಯವರ ಆಪ್ತರಾಗಿದ್ದ ಜಮ್ನಾಲಾಲ್ ಬಜಾಜ್ ಅವರು. ಡಾ. ಲೋಹಿಯಾ ಅವರು ಗಾಂಧೀ ರಾಜಕೀಯ ಸಿದ್ಧಾಂತಗಳ

ಬಗ್ಗೆ ಹೆಚ್ಚಿನ ತಿಳುವಳಿಕೆಯುಳ್ಳವರಾಗಿದ್ದರು ಮತ್ತು 'ಉಪ್ಪಿನ ತೆರಿಗೆ ಮತ್ತು ಸತ್ಯಾಗ್ರಹ' ಎಂಬ ವಿಷಯದ ಮೇಲೆ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದ್ದರು ಎಂಬುದನ್ನು ಮೊದಲೇ ಗಾಂಧಿಯವರಿಗೆ ತಿಳಿಸಲಾಗಿತ್ತು. ಹಾಗಾಗಿ ಡಾ. ಲೋಹಿಯಾ ಅವರು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸದಸ್ಯತ್ವ ಪಡೆಯುವಲ್ಲಿ ಗಾಂಧಿ ಪ್ರಮುಖ ಪಾತ್ರ ವಹಿಸಿದರು. ೧೯೩೬ರಲ್ಲಿ ನೆಹರೂ, ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಅವರು ಡಾ. ಲೋಹಿಯಾರನ್ನು ಕಾಂಗ್ರೆಸ್‌ನ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿಯನ್ನಾಗಿ ನೇಮಿಸಿದರು.

ಹೀಗೆ ನೇಮಕಗೊಂಡ ಸ್ವಲ್ಪ ಸಮಯದಲ್ಲೇ, ಪಕ್ಷಕ್ಕಿಂತ ಗಾಂಧಿ ಹೆಚ್ಚು ಪ್ರಭಾವಶಾಲಿ ಆಗಿದ್ದರು ಎಂಬುದನ್ನು ಲೋಹಿಯಾ ಕಂಡುಕೊಂಡರು. ಇದನ್ನರಿತ ಮೇಲೂ ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಕಾಲಕಾಲಕ್ಕೆ ಗಾಂಧಿಯವರೊಂದಿಗೆ ಧೈರ್ಯವಾಗಿ ಚರ್ಚಿಸಲು ಅವರು ಹಿಂಜರಿಯಲಿಲ್ಲ. ೧೯೩೪-೧೯೩೯ರ ನಡುವಿನ ಐದು ವರ್ಷಗಳ ಅವಧಿಯಲ್ಲಿ ಗಾಂಧಿಯವರಿಗೆ ಲೋಹಿಯಾರ ಬೌದ್ಧಿಕ ಪ್ರಾಮಾಣಿಕತೆ, ರಾಜಕೀಯ ದೃಷ್ಟಿಕೋನ ಮತ್ತು ತಮ್ಮ ನಾಯಕತ್ವದ ಬಗೆಗಿನ ನಿಷ್ಠೆಯನ್ನು ಪರೀಕ್ಷಿಸುವ ಅನೇಕ ಸಂದರ್ಭಗಳು ಎದುರಾಗಿದ್ದವು. ಲೋಹಿಯಾರ ತಾರುಣ್ಯ ಮತ್ತು ವ್ಯಕ್ತಿತ್ವದ ಸಮಗ್ರತೆ ಗಾಂಧಿಯವರ ಮೇಲೆ ಹೆಚ್ಚು ಪ್ರಭಾವವನ್ನು ಬೀರಿದ್ದವು. ಹಾಗೆಯೇ ಹಲವಾರು ಸಂದರ್ಭಗಳಲ್ಲಿ ಗಾಂಧಿ, ತಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದುದನ್ನು ಲೋಹಿಯಾ ನಗುಮುಖದಿಂದಲೇ ಸ್ವೀಕರಿಸುತ್ತಿದ್ದರು. ಒಂದಲ್ಲಾ ಒಂದು ದಿನ ತಮ್ಮ ಕನಸುಗಳನ್ನು ಸಾಕಾರಗೊಳಿಸುವರೆಂಬ ಆಸೆ ಹೊತ್ತು, ಎಲ್ಲ ಮಹಾಪುರುಷರೂ, ಭರವಸೆ ಮೂಡಿಸುವ ಯುವಜನರ ಮೇಲೆ ಹೆಚ್ಚಿನ ಪ್ರೀತಿಯುಳ್ಳವರಾಗಿರುತ್ತಾರಷ್ಟೆ. ಗಾಂಧಿ ಕೂಡ ಇದರಿಂದ ಹೊರತಾಗಿರಲಿಲ್ಲ. ನಿಧಾನವಾಗಿ ಲೋಹಿಯಾ ಗಾಂಧಿಯವರ ಗೌರವಕ್ಕೆ ಹೆಚ್ಚೆಚ್ಚು ಪಾತ್ರರಾಗುತ್ತಾ ಹೋದರು. ೧೯೩೭-೩೮ರ ಅವಧಿಯಲ್ಲಿ ಹೊಸದಾಗಿ ಸ್ಥಾಪನೆಯಾಗಿದ್ದ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿಯಿಂದ ಆರಂಭವಾದ ಪತ್ರಿಕೆಗೆ ಲೋಹಿಯಾ ಸಂಪಾದಕರಾದರು. ಆ ಪತ್ರಿಕೆಗೆ ಗಾಂಧಿ ನಿಯಮಿತವಾಗಿ ಬರೆಯುತ್ತಿದ್ದರು ಮತ್ತು ತಮ್ಮದೇ 'ಹರಿಜನ' ಪತ್ರಿಕೆಯಲ್ಲಿ ಲೋಹಿಯಾರ ಲೇಖನಗಳನ್ನೂ ಪ್ರಕಟಿಸುತ್ತಿದ್ದರು.

ಯುದ್ಧವಿರೋಧೀ ಭಾಷಣವನ್ನು ಮಾಡಿದ ಆರೋಪದ ಮೇಲೆ ಮೊದಲ ಬಾರಿಗೆ ಡಾ.ಲೋಹಿಯಾ ಸೆರೆಮನೆ ಸೇರಿದ ವಿಷಯ ತಿಳಿದ ಗಾಂಧಿ ಹೀಗೆ ಹೇಳಿದ್ದರು: "ಡಾ.ಲೋಹಿಯಾ ಸೆರೆಮನೆಯಲ್ಲಿರುವವರೆಗೂ ನಾನು ಸುಮ್ಮನೆ ಕುಳಿತಿರಲಾಗುವುದಿಲ್ಲ. ಅವರಿಗಿಂತ ಧೈರ್ಯಶಾಲಿ ಮತ್ತು ಸರಳ ವ್ಯಕ್ತಿಯನ್ನು ನಾನಿದುವರೆಗೂ ಕಂಡಿಲ್ಲ. ಹಿಂಸೆಯನ್ನು ಅವರು ಎಂದೂ ಪ್ರತಿಪಾದಿಸಿಲ್ಲ. ಅವರೇನು ಮಾಡಿದ್ದಾರೋ ಅದು ಅವರ ಗೌರವ ಮತ್ತು ಘನತೆಯನ್ನು ಹೆಚ್ಚಿಸಿದೆ". ಡಾ.ಲೋಹಿಯಾ ಅವರು ಮುಂಬೈನಲ್ಲಿ

ಭೂಗತರಾಗಿದ್ದ ತಾಣದಿಂದ ಬಂಧಿತರಾದ ಸಂದರ್ಭದಲ್ಲಿ ಮತ್ತೊಮ್ಮೆ ಇದೇ ರೀತಿಯ ಗೌರವ ಕಾಳಜಿಗಳನ್ನು ವ್ಯಕ್ತಪಡಿಸಿದ್ದರು ಗಾಂಧಿ. ಲೋಹಿಯಾರನ್ನು ಎರಡು ವರ್ಷ(೧೯೪೪-೪೬) ಲಾಹೋರಿನ ಜೈಲಿನಲ್ಲಿಟ್ಟು ತೀವ್ರವಾಗಿ ಹಿಂಸಿಸಿದ್ದರು. ಗಾಂಧಿಯ ಒತ್ತಡಕ್ಕೆ ಮಣಿದ ಬ್ರಿಟಿಷ್ ಸರ್ಕಾರ ಲೋಹಿಯಾರನ್ನು ಲಾಹೋರಿನ ಸೆರೆಮನೆಯಿಂದ ಬಿಡುಗಡೆ ಮಾಡಿತು.

ಗಾಂಧೀ ಮತ್ತು ಲೋಹಿಯಾರ ಒಗ್ಗೂಡುವಿಕೆಯೆಂದರೆ; ಒಬ್ಬ ಗುರು ಮತ್ತವನ ನೆಚ್ಚಿನ ಶಿಷ್ಯ, ಸುದೀರ್ಘವಾದ, ನಿಗೂಢವಾದ ಸಂಬಂಧವೊಂದಕ್ಕೆ ಒಳಪಡುವ ಒಂದು ಸಾಹಸಗಾಥೆ. ಇಲ್ಲಿ ಶಿಷ್ಯನ ಬೌದ್ಧಿಕ ಪ್ರಾಮಾಣಿಕತೆ, ಲೋಕದೃಷ್ಟಿ ಮತ್ತು ಶೀಲಗಳ ಬಗ್ಗೆ ಗುರುವಿಗೆ ಅರಿವಿದ್ದೇ ತನ್ನ ಶಿಷ್ಯನನ್ನು ತಿದ್ದುತ್ತಿರುತ್ತಾನೆ, ವಿವೇಚನೆಯಿಲ್ಲದೆ ನಡೆದುಕೊಂಡಾಗ ಗದರಿಸುತ್ತಿರುತ್ತಾನೆ ಮತ್ತು ಸಣ್ಣ ಸಣ್ಣ ಹುಚ್ಚುತನಗಳನ್ನು ಆಗಾಗ್ಗೆ ಕ್ಷಮಿಸುತ್ತಿರುತ್ತಾನೆ. ಪರಸ್ಪರರಿಂದ ಪಡೆದುಕೊಳ್ಳಲು ಹಿಂಜರಿಯದೇ ಜೊತೆಜೊತೆಗೇ ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಉತ್ಕೃಷ್ಟಗೊಳ್ಳುತ್ತಾ ಸಾಗುತ್ತಾರೆ. ಗಾಂಧಿಯವರಿಗೆ ಅಂತಹ ಅನೇಕ ಶಿಷ್ಯಂದಿರಿದ್ದರು. ವಿನೋಬಾ ಭಾವೆ, ಮಹದೇವ ದೇಸಾಯಿ, ಜವಾಹರ್ ಲಾಲ್ ನೆಹರೂ, ಚಿತ್ತರಂಜನ್ ದಾಸ್, ವಲ್ಲಭಭಾಯಿ ಪಟೇಲ್ ಇವರುಗಳು ಅವರ ಹೆಸರಾಂತ ಶಿಷ್ಯರುಗಳಲ್ಲಿ ಕೆಲವರು. ಆದರೆ ಡಾ.ಲೋಹಿಯಾ ನಿಜವಾಗಿ ಗಾಂಧಿಯವರ ಹೃದಯವನ್ನು ಗೆದ್ದಿದ್ದರು ಎಂಬುದಕ್ಕೆ ಗಾಂಧಿಯವರು ಆಡಿರುವ "ಡಾ.ಲೋಹಿಯಾರ ಬೌದ್ಧಿಕ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ಅವರ 'ಶೀಲ'ವನ್ನು-ಅಂದರೆ ಅವರ ನಡತೆ ಮತ್ತು ದೃಢತೆಯನ್ನು-ತುಂಬಾ ಗೌರವಿಸುತ್ತೇನೆ" ಎಂಬ ಮಾತುಗಳೇ ಸಾಕ್ಷಿ. ಲೋಹಿಯಾ ಕೂಡ ತನ್ನಂತೆಯೇ ಒಬ್ಬ ನಿಷ್ಠಾವಂತ ಆದರ್ಶವಾದಿ ಹಾಗೂ ಅಪರೂಪದ ದಾರ್ಶನಿಕ ಮತ್ತು ಅವರಿಗೆ ಅಧಿಕಾರ ಮತ್ತು ಅದು ತಂದುಕೊಡುವ ಸುಖ-ಸೌಲಭ್ಯಗಳಲ್ಲಿ ಆಸಕ್ತಿ ಇರಲಿಲ್ಲ ಎಂಬುದು ಗಾಂಧಿಯವರಿಗೆ ಗೊತ್ತಿತ್ತು. ನೆಹರೂ ಸ್ವತಂತ್ರ ಭಾರತದ ಆಡಳಿತದ ಚುಕ್ಕಾಣಿ ಹಿಡಿಯಲು ಅದಾಗಲೇ ಸಿದ್ಧವಿದ್ದಾಗ, ಆಗಿನ್ನೂ ನಲವತ್ತರೊಳಗಿನ ಯುವಕನಾಗಿದ್ದ ಡಾ.ಲೋಹಿಯಾ, ಗಾಂಧಿಯವರ ಸಿದ್ಧಾಂತಗಳನ್ನು ಆಧುನೀಕರಿಸುವ ಮತ್ತು ಭಾರತದ ಜನರ ಆರ್ಥಿಕ ಮತ್ತು ಆಧ್ಯಾತ್ಮಿಕ ಕಾಳಜಿಗಳನ್ನು ಬದಲಾದ ಕಾಲಕ್ಕೆ ತಕ್ಕಂತೆ ರೂಪಿಸುವ ಕಾರ್ಯದಲ್ಲಿ ಮಗ್ನರಾಗಿದ್ದರು. ಅಲ್ಲದೇ ಚುರುಕು ಬುದ್ಧಿಯ ರಾಜಕಾರಣಿಯಾಗಿದ್ದ ಗಾಂಧಿಯವರು ಆಗಲೇ ಡಾ.ಲೋಹಿಯಾರನ್ನು ನೆಹರೂ ಅವರಿಗೆ ಸಮರ್ಥ ಪ್ರತಿಶಕ್ತಿಯಾಗಿಯೂ, ಭಾರತೀಯರನ್ನು ಮುನ್ನಡೆಸಬಹುದಾದ ಬದಲೀ ಶಕ್ತಿಯಾಗಿಯೂ ಪರಿಗಣಿಸಿದ್ದಿರಬಹುದು. ಗಾಂಧಿಯವರು ತಮ್ಮ ಎರಡನೇ ಉತ್ತರಾಧಿಕಾರಿಯಾಗಿ ಡಾ.ಲೋಹಿಯಾರನ್ನು ಹೆಸರಿಸಿದ್ದರೂ ಹೆಚ್ಚಿನವರು ಯಾರೂ ಆಶ್ಚರ್ಯಪಡುತ್ತಿರಲಿಲ್ಲ.

೧೯೪೬ರ ಮಧ್ಯದಿಂದೀಚೆಗೆ ಬೆಳವಣಿಗೆಯಾದ ಒಂದು ಹೃದಯಸ್ಪರ್ಶಿಯಾದ ಸಂದರ್ಭ, ಗಾಂಧಿ ಮತ್ತು ಡಾ.ಲೋಹಿಯಾರನ್ನು ಇನ್ನೂ ಹತ್ತಿರ ತಂದಿತು. ಭಾರತ ಇಬ್ಭಾಗವಾಗುವುದಾದರೆ ಮಾತ್ರ ಸ್ವಾತಂತ್ರ್ಯ ಎಂಬ ಬ್ರಿಟಿಷರ ಷರತ್ತಿಗೆ ನೆಹರೂ ಮತ್ತು ಪಟೇಲ್ ಇಬ್ಬರೂ ಒಪ್ಪಿಗೆಯನ್ನು ಸೂಚಿಸಿದ್ದರು ಎಂಬುದು ಎಲ್ಲರಿಗೂ ತಿಳಿದ ಸಂಗತಿಯೇ. ಗಾಂಧಿ, ಮತ್ತು ಕಾಂಗ್ರೆಸ್‌ನ ಇನ್ನಿತರ ಹಲವಾರು ಪ್ರಮುಖ ನಾಯಕರು ಮತ್ತು ಸಮಾಜವಾದಿ ಪಕ್ಷದ ಎಲ್ಲ ನಾಯಕರೂ ಸಂಪೂರ್ಣವಾಗಿ ಈ ವಿಭಜನೆಯ ಪ್ರಸ್ತಾಪವನ್ನು ವಿರೋಧಿಸಿದ್ದರು. ಆದರೂ ನೆಹರೂ ಮತ್ತು ಪಟೇಲ್, ಗಾಂಧಿ ಈ ವಿಭಜನೆಯನ್ನು ಒಪ್ಪಿಕೊಳ್ಳದೆ ಬೇರೆ ನಿಜವಾದ ದಾರಿ ಇಲ್ಲದಂತಹ ಪರಿಸ್ಥಿತಿಯನ್ನು ನಿರ್ಮಿಸಿದ್ದರು. ಇನ್ನು ಗಾಂಧಿಯ ಅವಶ್ಯಕತೆ ಹೆಚ್ಚಿಲ್ಲ ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಚೌಕಾಶಿಯಲ್ಲಿ ಈ ವಿಭಜನೆಯನ್ನು ಒಪ್ಪುವ ಮೂಲಕ ತಮ್ಮ ಜೀವಮಾನದ ಮುಖ್ಯವಾದ ಕೆಲಸವನ್ನವರು ಮಾಡಿದರು ಎಂಬುದನ್ನು ಇದು ಸೂಚಿಸುತ್ತದೆಯೇ? ಸಿದ್ಧಾಂತದ ಎದುರು ಅನುಕೂಲಸಿಂಧುತ್ವವೇ ಗೆದ್ದು, ಸೋತವನು ತನ್ನ ಗಾಯವನ್ನು ತಾನೇ ವಾಸಿಮಾಡಿಕೊಳ್ಳಲೆಂದು ಬಿಟ್ಟು ಮುನ್ನಡೆಯುವಂಥ ಸಾರ್ವಕಾಲಿಕ ಸಂದಿಗ್ಧತೆಯೇ? ಭಾರತದ ಸ್ವಾತಂತ್ರ್ಯ ಮತ್ತು ವಿಭಜನೆಯ ದಿನಾಂಕವನ್ನು ಪ್ರಕಟಿಸಿದ ಕೂಡಲೇ ಹಿಂದೂ ಮುಸ್ಲಿಂ ಸಮುದಾಯಗಳ ನಡುವೆ ರಕ್ತಪಾತದ ಗಲಭೆಗಳು ಭುಗಿಲೆದ್ದವು. ಅದರಲ್ಲೂ ವಿಶೇಷವಾಗಿ ಪೂರ್ವ ಮತ್ತು ಪಶ್ಚಿಮ ಬಂಗಾಳ ಪ್ರಾಂತಗಳು, ಪಂಜಾಬ್ ಮತ್ತು ಭಾರತದ ಇತರ ಪ್ರಮುಖ ನಗರಗಳಲ್ಲಿ ನಡೆದ ಗಲಭೆಯು ತೀವ್ರ ಸ್ವರೂಪದ್ದಾಗಿತ್ತು.

'ರಾಷ್ಟ್ರ ವಿಭಜನೆಯ ಅಪರಾಧಿಗಳು' ಎಂಬ ತಮ್ಮ ಗಮನಾರ್ಹ ಪುಸ್ತಕದಲ್ಲಿ ಲೋಹಿಯಾ ತಾವು ೧೯೪೬ರ ಮಧ್ಯಭಾಗದವರೆಗೆ ಆರಾಧನಾ ಭಾವದಿಂದ ಕಂಡ ನೆಹರೂರನ್ನು ವಿಭಜನೆಯ ಮುಖ್ಯ ಅಪರಾಧಿ ಎಂದು ದೂಷಿಸಿದರು. ದೇಶ ವಿಭಜನೆಗೆ ನೆಹರೂ ಸಮ್ಮತಿಸಿದ ಸಂಗತಿ, ಮನಸ್ಸಿನಲ್ಲಿ ಕಹಿಯನ್ನುಳಿಸುವುದರೊಂದಿಗೆ ಲೋಹಿಯಾರನ್ನು ನೆಹರೂ ಅವರಿಂದ ತುಂಬಾ ದೂರಮಾಡಿಬಿಟ್ಟಿತು. ಇರಲಿ, ಈ ವಿಷಯಕ್ಕೆ ಆಮೇಲೆ ಮತ್ತೆ ಬರೋಣ.

೧೯೪೬ರ ಜೂನ್ ತಿಂಗಳಲ್ಲಿ ಡಾ. ಲೋಹಿಯಾ, ಗೋವಾದಲ್ಲಿ, ಪೋರ್ಚುಗೀಸರ ಗುಲಾಮಗಿರಿಯಿಂದ ವಿಮೋಚನೆಗೊಳ್ಳಲು ಸ್ವತಂತ್ರ ಜ್ಯೋತಿಯನ್ನು ಬೆಳಗಿದಾಗ, ನೆಹರೂ ಮತ್ತು ಪಟೇಲ್‌ರ ನಿಲುವಿಗೆ ವಿರುದ್ಧವಾಗಿ ಗಾಂಧಿ, ಲೋಹಿಯಾರಿಗೆ ಹೃತ್ಪೂರ್ವಕ ಬೆಂಬಲವನ್ನು ಸೂಚಿಸಿದ್ದರು. ಮುಂದಿನ ಸ್ವತಂತ್ರ ಭಾರತದ ಪ್ರಧಾನಿ ಮತ್ತು ಉಪಪ್ರಧಾನಿಯಾದ ಈ ಇಬ್ಬರು ಕಾಂಗ್ರೆಸ್ ಮುಂದಾಳುಗಳು ಒಳಗೊಂಡಿರುವುದರಿಂದ ಈ ವಿಷಯದ ಕುರಿತು ಹೆಚ್ಚು ವಿವರವಾಗಿ ತನಿಖೆ ಮಾಡಬೇಕು, ಹಾಗೆಯೇ ಮಹಾತ್ಮಾ ಗಾಂಧಿಯವರ ಬದುಕಿನ ಕೊನೆ ದಿನಗಳನ್ನು

ಇಲ್ಲಿ ಸ್ಮರಿಸಿಕೊಳ್ಳಬೇಕು ಎಂದು ಸೂಚಿಸುತ್ತೇನೆ. ದೇಶ ವಿಭಜನೆಯ ದುರಂತಮಯ ನಿರ್ಧಾರದಿಂದಾಗಿ ಹತಾಶೆ, ದುಃಖ ಮತ್ತು ಶೋಕಾಚರಣೆಯ ಸಂಕಷ್ಟಗಳಿಗೊಳಗಾದ ಕಾಲಘಟ್ಟವದು. ಅಂತಹ ಸಂಕಷ್ಟದ ದಿನಗಳಲ್ಲಿ ಗಾಂಧಿ, ತಮ್ಮೆಲ್ಲ ಶಿಷ್ಯಂದಿರನ್ನು ಬಿಟ್ಟು ಡಾ.ಲೋಹಿಯಾರನ್ನು ತಮ್ಮ ಬಳಿ ಇರಲು ಆಯ್ಕೆ ಮಾಡಿಕೊಂಡಿದ್ದರು.

ಲಾಹೋರಿನ ಜೈಲಿನಲ್ಲಿ ಚಿತ್ರಹಿಂಸೆಗಳ ಶಿಕ್ಷೆಗೊಳಗಾಗಿ ಬಿಡುಗಡೆಗೊಂಡಿದ್ದ ಲೋಹಿಯಾ ತಮ್ಮ ಸ್ನೇಹಿತ ಜೂಲಿಯಸ್ ಮೆನೆಜ್ಝಸ್‌ರನ್ನು ಕಾಣಲು ಮತ್ತು ಹಸಿರಿನಿಂದ ತುಂಬಿದ್ದ ಗೋವಾದಲ್ಲಿ ಸ್ವಲ್ಪ ಕಾಲ ವಿಶ್ರಾಂತಿ ಪಡೆಯಲು ಬಂದಿಳಿದಿದ್ದರು. ಹಾಗೆ ಅವರು ಅಲ್ಲಿಗೆ ಬಂದಿದ್ದ ಸುದ್ದಿ ಹೇಗೋ ಹರಡಿ ಅವರನ್ನು ಭೇಟಿಮಾಡಲು ತಂಡೋಪತಂಡವಾಗಿ ಜನರು ಬರತೊಡಗಿದರು. ಗೋವಾದ ಜನರು, ತಾವು ಹೇಗೆ ಪೋರ್ಚುಗೀಸರ ಸಾಮ್ರಾಜ್ಯಶಾಹಿ ಮತ್ತು ಮಧ್ಯಯುಗೀನ ಕ್ರೌರ್ಯಕ್ಕೆ ಒಳಪಟ್ಟಿದ್ದೇವೆ ಎಂಬುದನ್ನು ಮತ್ತು ಅದಕ್ಕಾಗಿಯೇ ಆಗ್ನೇಯ ಆಫ್ರಿಕಾದ ಮೊಝಾಂಬಿಕ್‌ನಿಂದ ಕರೆಸಿಕೊಂಡಿರುವ ವಿಶೇಷ ಪೊಲೀಸರನ್ನು ನೇಮಕ ಮಾಡಲಾಗಿದೆ ಎಂಬ ವಿಷಣ್ಣ ವರದಿಗಳನ್ನು ಲೋಹಿಯಾರಿಗೆ ಕೊಡತೊಡಗಿದರು. ನಾಗರಿಕ ಸ್ವಾತಂತ್ರ್ಯವಂತೂ ಅಲ್ಲಿ ಇರಲೇ ಇಲ್ಲ. ಪೊಲೀಸರ ಪೂರ್ವಾನುಮತಿಯಿಲ್ಲದೇ ಮದುವೆಯ ಕರೆಯೋಲೆಯನ್ನೂ ಸಹ ಮುದ್ರಿಸುವುದು ಸಾಧ್ಯವಿರಲಿಲ್ಲ. ಆ ಪರಿಸ್ಥಿತಿಯಲ್ಲಿ ಅವರು ಗೋವಾ ವಿಮೋಚನಾ ಚಳುವಳಿಯನ್ನು ಮುನ್ನಡೆಸಲು ಲೋಹಿಯಾರನ್ನು ಕೇಳಿಕೊಂಡರು. ಭೌಗೋಳಿಕವಾಗಿ ಭಾರತದಿಂದ ಬೇರ್ಪಡಿಸಲಾಗದಂತಹ ಗೋವಾ ಪ್ರಾಂತ್ಯದ ಸ್ವಾತಂತ್ರ್ಯ ಚಳುವಳಿಯನ್ನು ಪಕ್ಕಕ್ಕೆ ಸರಿಸಿ ಅಲಕ್ಷಿಸುವ ಮೂಲಕ ಕಾಂಗ್ರೆಸ್ ಪಕ್ಷ ದೊಡ್ಡ ಪ್ರಮಾದವೊಂದನ್ನು ಮಾಡಿದೆ ಎಂಬುದನ್ನು ಡಾ.ಲೋಹಿಯಾ ತಕ್ಷಣವೇ ಅರ್ಥ ಮಾಡಿಕೊಂಡರು. ೧೫೧೫ರಲ್ಲೇ, ಅಂದರೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ಭಾರತಕ್ಕೆ ಕಾಲಿಡುವ ಸುಮಾರು ೧೫೦ ವರ್ಷಗಳ ಹಿಂದೆಯೇ ಗೋವಾ ಗುಲಾಮಗಿರಿಗೊಳಪಟ್ಟಿತ್ತು. ಹಿಂದೂ ದೇವಾಲಯಗಳನ್ನು ಅಪವಿತ್ರಗೊಳಿಸುವಂತಹ, ಬಲಾತ್ಕಾರದ ಮತಾಂತರದಂತಹ, ಧಾರ್ಮಿಕ ನಂಬಿಕೆಗಳನ್ನು ಕೆದಕಿ ಕೊಲ್ಲುವಂತಹ, ಸಂಪೂರ್ಣವಾಗಿ ನಾಗರಿಕ ಸ್ವಾತಂತ್ರ್ಯವನ್ನು ಹತ್ತಿಕ್ಕುವಂತಹ ಪೋರ್ಚುಗೀಸರ ಅನೇಕ ದೌರ್ಜನ್ಯಗಳಿಂದ ಗೋವಾದ ಜನರು ಬಹಳವಾಗಿ ನೊಂದಿದ್ದರು. ಆದ್ದರಿಂದ ಭಾರತದ ಜನತೆಯಂತೆಯೇ, ಗೋವಾದ ಜನರೂ ಸ್ವಾತಂತ್ರ್ಯಕ್ಕೆ ಅರ್ಹರಾಗಿದ್ದರೆಂಬುದಕ್ಕೆ ಅನುಮಾನವೇ ಇರಲಿಲ್ಲ ಮತ್ತು ಭಾರತದ ಸ್ವಾತಂತ್ರ್ಯ ದಿನಕ್ಕಿಂತ ಒಂದು ದಿನವೂ ತಡಮಾಡುವಂತಹದ್ದಾಗಿರಲಿಲ್ಲ. ಭಾರತದ ಜನರೆಲ್ಲರೂ ಸೇರಿ ಗೋವಾ ವಿಮೋಚನಾ ಚಳುವಳಿಗೆ ಸಹಕಾರ ನೀಡಲೇಬೇಕಾಗಿತ್ತು.

ಗೋವಾ ಜನರ ಕರೆಯನ್ನು ಮನ್ನಿಸಿ ಡಾ.ಲೋಹಿಯಾ, ಪೋರ್ಚುಗೀಸ್ ಪ್ರಾಂತ್ಯದ ರಾಜಧಾನಿಯಾಗಿದ್ದ ಪಣಜಿಯಲ್ಲಿ ಸೇರಿದ್ದ ಸಭೆಯನ್ನುದ್ದೇಶಿಸಿ, ಜೂನ್ ೧೮ರಂದು

ಮಾಡಿದ ಭಾಷಣ ಅದ್ಭುತ ಯಶಸ್ಸು ಗಳಿಸಿತು. ಸರ್ಕಾರದ ಪೂರ್ವಾನುಮತಿಯಿಲ್ಲದೇ ಯಾವುದೇ ಸಭೆ ಸಮಾರಂಭಗಳು ನಡೆಯುವಂತಿರಲಿಲ್ಲವಾದ ಕಾರಣ, ಈ ಸಭೆ ನಡೆದದ್ದನ್ನು ಕೇಳಿ ಪೋರ್ಚುಗೀಸ್ ಗವರ್ನರ್‌ಗೆ ಆಘಾತವಾಯಿತು. ಈ ಸಭೆಯ ಯಶಸ್ಸಿನಿಂದ ಉತ್ತೇಜಿತರಾದ ಗೋವಾದ ಜನರು ತಮ್ಮ ಸ್ವಾಭಿಮಾನವನ್ನು ಪುನಃ ಕಂಡುಕೊಂಡದ್ದಲ್ಲದೇ ತಮ್ಮ ಮೇಲೆ ಹೂಡಿದ್ದ ಸರ್ವಾಧಿಕಾರಶಾಹಿಯ ನೊಗವನ್ನು ಕಿತ್ತೊಗೆಯಲು ನಿರ್ಧರಿಸಿದರು. ಜೂನ್ ೧೮ರಂದು ಮಡಗಾಂವ್‌ನಲ್ಲಿ ಮತ್ತೊಂದು ಸಭೆ ಏರ್ಪಾಡಾಗಿತ್ತು. ಇಡೀ ಪ್ರಾಂತ್ಯದ ಜನರು ಸಾವಿರಾರು ಸಂಖ್ಯೆಯಲ್ಲಿ ಮಡಗಾಂವ್‌ನತ್ತ ಚಲಿಸಿದರು. ಸಭೆಯನ್ನುದ್ದೇಶಿಸಿ ಮಾತನಾಡುವ ಮೊದಲೇ ಪೊಲೀಸರು ಲೋಹಿಯಾರನ್ನು ಬಂಧಿಸಿದರು ಮತ್ತು ಮರುದಿನವೇ ಗೋವಾದ ಗಡಿಯಲ್ಲಿ ಅವರನ್ನು ಬಿಡುಗಡೆ ಮಾಡಿದರು. ಮುಂದಿನ ಮೂರು ದಿನಗಳಲ್ಲಿ ಗೋವಾದೆಲ್ಲೆಡೆ ಬೃಹತ್ ಪ್ರತಿಭಟನಾ ಪ್ರದರ್ಶನಗಳು ನಡೆದವು. ಬಹಳಷ್ಟು ಜನರನ್ನು ಬಂಧಿಸಿದರು. ಜನಸಂದಣಿಯನ್ನು ಚದುರಿಸಲು ಪೊಲೀಸರು ಲಾಠೀಚಾರ್ಜ್ ಮಾಡಬೇಕಾಯಿತು. ಪೊಲೀಸರ ಈ ಸ್ವೇಚ್ಛಾಚಾರದ ಲಾಠೀಚಾರ್ಜ್‌ನ್ನು ಪ್ರತಿಭಟಿಸಿ ಪಣಜಿ ಮತ್ತಿತರ ನಗರಗಳಲ್ಲಿ ಸಂಪೂರ್ಣ ಬಂದ್ ಆಚರಿಸಲಾಯಿತು.

ಡಾ. ಲೋಹಿಯಾರ ಈ ಕಾರ್ಯವನ್ನು ಸಂಪೂರ್ಣವಾಗಿ ಅನುಮೋದಿಸಿದ್ದು ಗಾಂಧಿ ಮಾತ್ರ. ಅಲ್ಲದೇ ಜೂನ್ ೨೬ರಂದು ತಮ್ಮ 'ಹರಿಜನ'ದಲ್ಲಿ ಹೀಗೆ ಬರೆದರು: "ಗೋವಾ ಜನರ ನಾಗರಿಕ ಸ್ವಾತಂತ್ರ್ಯಕ್ಕಾಗಿ ಡಾ.ಲೋಹಿಯಾ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಕೇವಲ ಬ್ರಿಟಿಷ್ ಸರ್ಕಾರದ ಮೌನ ಸಮ್ಮತಿಯಿಂದಾಗಿ ಅಸ್ತಿತ್ವದಲ್ಲಿರುವ ಈ ಪುಟ್ಟ ಪೋರ್ಚುಗೀಸ್ ವಸಾಹತುವು ಬ್ರಿಟಿಷ್ ಸರ್ಕಾರದ ಕೆಟ್ಟ ನಡಾವಳಿಕೆಗಳನ್ನು ಅನುಕರಿಸಿ ನಿಭಾಯಿಸಿಕೊಂಡು ಹೋಗುವುದು ಸಾಧ್ಯವಿಲ್ಲ. ಬ್ರಿಟಿಷರೊಂದಿಗೆ ಇರಬಹುದಾದ ಯಾವುದೇ ಒಪ್ಪಂದದ ಮಾರ್ಗವನ್ನವಲಂಬಿಸದೇ ಪೋರ್ಚುಗೀಸ್ ಸರ್ಕಾರವು ಈ ಕಾಲಘಟ್ಟದ ಲಕ್ಷಣಗಳನ್ನು ಅರಿತು ಗೋವಾ ನಿವಾಸಿಗಳೊಂದಿಗೆ ಗೌರವಯುತವಾಗಿ ಚರ್ಚಿಸಬೇಕೆಂದು ಸಲಹೆ ನೀಡುತ್ತಿದ್ದೇನೆ. ಭಾರತದ ಜನತೆ, ಬಲಿಷ್ಠ ಬ್ರಿಟಿಷ್ ಪ್ರಭುತ್ವದ ಮೇಲಿನ ಭಯವನ್ನು ತೊರೆದಂತೆಯೇ ಗೋವಾ ನಿವಾಸಿಗಳೂ ಕೂಡ ಪೋರ್ಚುಗೀಸ್ ಪ್ರಭುತ್ವದ ಮೇಲಿನ ಭಯವನ್ನು ತೊರೆಯಬೇಕು".

ಭಾರತಕ್ಕೆ ಹಿಂತಿರುಗಿದ ನಂತರ ಲೋಹಿಯಾ, ಗೋವಾ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸಿ ಬಿರುಸಿನ ಪ್ರಚಾರವನ್ನು ಕೈಗೊಂಡರು. ೧೯೪೬ರ ಜುಲೈ ೬ರಂದು ಎಐಸಿಸಿ ಸಭೆ ಸೇರಿತು. ಜುಲೈ ೧೦ರಂದು ನೆಹರೂ ಪತ್ರಿಕಾಗೋಷ್ಠಿಯನ್ನು ಕರೆದು ಹೇಳಿಕೆ ಕೊಟ್ಟರು: "ಕಾಂಗ್ರೆಸ್ ತನ್ನ ಗಮನವನ್ನೆಲ್ಲ ಭಾರತದ ಸ್ವಾತಂತ್ರ್ಯ ಹೋರಾಟದ ಮೇಲೆ ಕೇಂದ್ರೀಕರಿಸಿದ್ದರಿಂದ, ಸಣ್ಣ ಸಣ್ಣ ವಿಷಯಗಳ ಕಡೆಗೆ ಗಮನ ಕೊಡಲು

ಸಮಯವಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ಮೇಲೆ, ಅದು ತನ್ನ ಮುಖದ ಮೇಲಿನ ಈ 'ಸಣ್ಣ ಮೊಡವೆ'ಯೊಂದನ್ನು ಒಂದೇ ಬೆರಳಿನಿಂದ ಹೊಸಕಿಹಾಕಬಹುದು. ಗೋವಾದಲ್ಲಿ ಯಾವುದೇ ಚಳುವಳಿಯನ್ನು ಮಾಡುವ ಅಗತ್ಯವಿರಲಿಲ್ಲ. ಬ್ರಿಟಿಷರು ಭಾರತದಿಂದ ಕಾಲ್ತೆಗೆದರೆ, ಗೋವಾದ ಮೇಲಿನ ಪೋರ್ಚುಗೀಸ್ ಪ್ರಾಬಲ್ಯವು ತಾನಾಗಿಯೇ ಮಾಯವಾಗುತ್ತದೆ".

ನೆಹರೂ ಅವರ ನಿಲುವಿನಿಂದ ತೃಪ್ತರಾಗದ ಲೋಹಿಯಾ, ಗೋವಾ ಜನತೆಯನ್ನು ತುರ್ತಾಗಿ ಬೆಂಬಲಿಸಲೇಬೇಕಾದುದು ಅಗತ್ಯ ಎಂಬ ವಿಷಯವನ್ನೆತ್ತಿದರು. ಅದಕ್ಕೆ ಪೂರಕವಾಗಿ ಗೋವಾದ ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧಿಯವರು ಕೊಟ್ಟ ಬೆಂಬಲದ ಕುರಿತು ಪ್ರಸ್ತಾಪಿಸಿದರು. ಹಾಗೆಯೇ ವಲ್ಲಭಭಾಯಿ ಪಟೇಲರ "ನನಗೂ ಗೋವಾ ಚಳುವಳಿಗೂ ಸಂಬಂಧವಿಲ್ಲ" ಎಂಬ ಹೇಳಿಕೆಗೆ ತಮ್ಮ ಅಸಮಾಧಾನವನ್ನು ಸೂಚಿಸಿದರು. ಗೋವಾ ಜನತೆಯ ಆಶೋತ್ತರಗಳನ್ನು ಗೌರವಿಸಬೇಕು ಮತ್ತು ಈಗಲಾದರೂ ಅವರ ರಕ್ಷಣೆಗೆ ಮುಂದಾಗಬೇಕು ಎಂಬುದನ್ನು ನೆಹರೂ ಮತ್ತು ಪಟೇಲರಿಗೆ ನೆನಪಿಸಿದರು.

ಪೋರ್ಚುಗೀಸ್ ಗೌರ್ನರ್ ಜನರಲ್, ಜೂನ್ ೨೬ರ ಗಾಂಧಿಯ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ ಹೀಗೆ ಬರೆದರು: "ಗೋವಾದ ಆಂತರಿಕ ವ್ಯವಹಾರಗಳಲ್ಲಿ ಗಾಂಧಿ ಅನಗತ್ಯವಾಗಿ ಹಸ್ತಕ್ಷೇಪ ಮಾಡಿದ್ದಾರೆ. ಪೋರ್ಚುಗೀಸ್ ವಸಾಹತುಗಳಲ್ಲಿ ನಾಗರಿಕ ಹಕ್ಕುಗಳಿಗೆ ಯಾವುದೇ ಅಪಾಯವಿಲ್ಲ. ಕೆಲವು ಅತೃಪ್ತ ಜನರು ಗೋವಾದಲ್ಲಿ ಶಾಂತಿಭಂಗ ಮಾಡುತ್ತಿದ್ದಾರೆ. ಪೋರ್ಚುಗೀಸರು ಗೋವಾಕ್ಕೆ ಬಂದದ್ದೇ ಸಮಾನತೆ ಮತ್ತು ಭ್ರಾತೃತ್ವ ಎಂಬ ದೈವವಾಣಿಗಳನ್ನು ಪಸರಿಸುವ ಏಕೈಕ ಉದ್ದೇಶದಿಂದ."

ಅದಕ್ಕೆ ೧೯೪೬ರ ಆಗಸ್ಟ್ ೨ರ 'ಹರಿಜನ'ದಲ್ಲಿ ಗಾಂಧಿ ಹೀಗೆ ಉತ್ತರಿಸುತ್ತಾರೆ: "....ನಾನು ನೋಡಿರುವಂತೆ ಮತ್ತು ತಿಳಿದಿರುವಂತೆ ಗೋವಾದಲ್ಲಿನ ಪರಿಸ್ಥಿತಿ ಅಷ್ಟೇನೂ ಬೋಧನಾತ್ಮಕವಾಗಿಲ್ಲ. ಸಂಪೂರ್ಣವಾದ ನಾಗರಿಕ ಸ್ವಾತಂತ್ರ್ಯವಿದೆ ಮತ್ತು ಅಲ್ಲಿನ ದಂಗೆಯು ಕೆಲ ಅತೃಪ್ತರಿಗೆ ಮಾತ್ರ ಸೀಮಿತವಾದದ್ದು ಎಂಬ ನಿಮ್ಮ ಹೇಳಿಕೆಯನ್ನು ನಾನು ಪುರಸ್ಕರಿಸದೇ ಇರುವುದಕ್ಕೆ ಕ್ಷಮೆ ಇರಲಿ. ಆ ಭಾಗದ ಜನರಿಂದ ವೈಯಕ್ತಿಕವಾಗಿ ಮತ್ತು ಪತ್ರಿಕೆಗಳ ಮೂಲಕ ನನಗೆ ಸಿಕ್ಕಿರುವ ಮಾಹಿತಿಯು ನಿಮ್ಮ ಹೇಳಿಕೆಗೆ ವಿರುದ್ಧವಾದದ್ದನ್ನೇ ಖಚಿತಪಡಿಸುತ್ತದೆ. ಡಾ.ಲೋಹಿಯಾರ ರಾಜಕೀಯ ದೃಷ್ಟಿಕೋನಗಳು ನನ್ನದಕ್ಕಿಂತ ಭಿನ್ನವಾಗಿದ್ದರೂ ಅವರು ಗೋವಾಕ್ಕೆ ಹೋಗಿ ನೇರವಾಗಿ ಅದರ ಮುಖದ ಮೇಲಿನ ಕಪ್ಪುಚುಕ್ಕೆಯನ್ನು ಅಳಿಸುವ ಪ್ರಯತ್ನ ಮಾಡಿ ನನ್ನ ಅಪಾರವಾದ ಮೆಚ್ಚುಗೆಯನ್ನು ಗಳಿಸಿದ್ದಾರೆ.... ಯಾವುದೇ ಗುಂಪು ಅಥವಾ ಮನುಷ್ಯ, ನಾಗರಿಕ ಸ್ವಾತಂತ್ರ್ಯ ಮತ್ತು ಆತ್ಮಗೌರವವನ್ನು ಕಳೆದುಕೊಂಡು ಬದುಕಲು ಸಾಧ್ಯವಿಲ್ಲ. ಡಾ.ಲೋಹಿಯಾ ಈಗ ಅಂತಹ ಆತ್ಮಗೌರವದ ಜ್ಯೋತಿಯನ್ನು ಬೆಳಗಿಸಿದ್ದಾರೆ.

ಗೋವಾದ ಜನತೆ ಅದನ್ನು ಆರಿಸಲು ಬಿಡುವುದಿಲ್ಲ. ನೀವು ಮತ್ತು ಗೋವಾ ನಿವಾಸಿಗಳಿಬ್ಬರೂ ಜ್ಯೋತಿಯನ್ನು ಬೆಳಗಿಸಿದ ಡಾಕ್ಟರ್‌ಗೆ ಕೃತಜ್ಞರಾಗಿರಬೇಕು. ಪರೋಪಕಾರ ಮತ್ತು ನಾಗರಿಕ ಸ್ವಾತಂತ್ರ್ಯಗಳ ಬಗೆಗಿನ ನಿಮ್ಮ ದೃಷ್ಟಿಕೋನವನ್ನು ಪುನರ್ವಿಮರ್ಶಿಸಿಕೊಳ್ಳುವಿರೆಂದು ಮತ್ತು ಆಫ್ರಿಕಾದ ಪೊಲೀಸರನ್ನು ಹಿಂದಕ್ಕೆ ಕಳುಹಿಸಿ, ಸ್ವ ಇಚ್ಛೆಯಿಂದ ನಾಗರಿಕ ಸ್ವಾತಂತ್ರ್ಯದ ಬಗೆಗಿನ ಬದ್ಧತೆಯನ್ನು ಘೋಷಿಸಿಕೊಂಡು, ಗೋವಾದ ಜನತೆ ತಮ್ಮ ಸರ್ಕಾರವನ್ನು ತಾವೇ ರಚಿಸಿಕೊಳ್ಳಲು ಅನುವು ಮಾಡಿಕೊಡುವಿರೆಂದು ಆಶಿಸುತ್ತೇನೆ. ಹಾಗೆಯೇ, ಹೊಸ ಸರ್ಕಾರ ರಚನೆಗೆ ಮತ್ತು ಅಲ್ಲಿನ ನಿವಾಸಿಗಳಿಗೆ ಸಹಾಯ ಮಾಡಲು ಅನುಭವಸ್ಥ ಭಾರತೀಯರನ್ನು ಆಹ್ವಾನಿಸುತ್ತೀರೆಂದು ಭಾವಿಸುತ್ತೇನೆ.".

ಸೆಪ್ಟೆಂಬರ್ ೨೮ರಂದು ಡಾ.ಲೋಹಿಯಾ, ಗಾಂಧಿಯವರನ್ನು ಭೇಟಿಯಾಗಿ ಗೋವಾದ ಸ್ವಾತಂತ್ರ್ಯ ಚಳುವಳಿಯ ಪ್ರಗತಿಯ ಬಗೆಗೆ ವಿವರ ಕೊಟ್ಟರು. ಆನಂತರ ಅವರು ಗೋವಾದ ಜನತೆಗೆ ಕೊಟ್ಟ ಭರವಸೆಯನ್ನು ಈಡೇರಿಸಲು ಅಲ್ಲಿಗೆ ಮತ್ತೆ ಹಿಂದಿರುಗುವ ನಿರ್ಧಾರವನ್ನು ಪ್ರಕಟಿಸಿದರು. ಅವರು ಕೋಲಂ ರೈಲ್ವೇ ಸ್ಟೇಷನ್‌ಗೆ ಬಂದಿಳಿಯುತ್ತಿದ್ದಂತೆ ಪೋರ್ಚುಗೀಸ್ ಪೊಲೀಸರು ಅವರನ್ನು ಬಂಧಿಸಿ, ರಹಸ್ಯವಾಗಿ ಅವರನ್ನು ಎಗ್ವಾಡ ಕೋಟೆಗೆ ಕರೆದೊಯ್ದರು. ಸೆಪ್ಟೆಂಬರ್ ೨೯ರಿಂದ ಅಕ್ಟೋಬರ್ ೮, ೧೯೪೬ರವರೆಗೆ ಅವರನ್ನು ಅಲ್ಲಿಯೇ ಇರಿಸಲಾಗಿತ್ತು. ನಾಗರಿಕ ದೇಶಗಳಲ್ಲಿ ರಾಜಕೀಯ ಕೈದಿಗಳಿಗೆ ನೀಡಬೇಕಿದ್ದ ಕನಿಷ್ಠ ಸೌಲಭ್ಯಗಳನ್ನೂ ಅವರಿಗೆ ನಿರಾಕರಿಸಿ ಚಿತ್ರಹಿಂಸೆ ಕೊಡಲಾಯಿತು. ಬದುಕುಳಿಯಲು ಬೇಕಾಗುವಷ್ಟು ಮಾತ್ರದ ಸಣ್ಣ ಕಿಂಡಿಯಿರುವ, ಕತ್ತಲೆಯ ಏಕಾಂತ ಸೆರೆಮನೆಯಲ್ಲಿ ಅವರನ್ನು ಕೂಡಿಹಾಕಿದ್ದರು. ನಂತರದಲ್ಲಿ ಅವರನ್ನು ಗೋವಾದ ಗಡಿಯಲ್ಲಿ ಬಡುಗಡೆ ಮಾಡಲಾಯಿತು. ಆ ಸಂದರ್ಭದಲ್ಲಿ ಅವರನ್ನು ಹಾಗೆ ಬಿಡುಗಡೆ ಮಾಡಿದ್ದು ಕೂಡ ಒಂದು ಪವಾಡವೇ. ಆಗ ದೆಹಲಿಯಲ್ಲಿ ನೆಹರೂ ನೇತೃತ್ವದ ಮಧ್ಯಂತರ ಸರ್ಕಾರವಿತ್ತು. ಡಾ.ಲೋಹಿಯಾರನ್ನು ಹೇಗಾದರೂ ಬಿಡುಗಡೆಗೊಳಿಸಬೇಕೆಂದು ಗಾಂಧಿ ನೆಹರೂರನ್ನು ಕೇಳಿಕೊಂಡರು. ಆದರೆ ಪೋರ್ಚುಗೀಸ್ ಸರ್ಕಾರದೊಂದಿಗೆ ಶಿಷ್ಟಾಚಾರದ ಒಪ್ಪಂದಗಳೇನೂ ಇಲ್ಲದ್ದರಿಂದಲೋ ಏನೋ ನೆಹರೂ ಈ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸಲು ನಿರಾಕರಿಸಿದರು. ಆಗ ಗಾಂಧಿ ಘೋಷಿಸಿದರು: "ಡಾ.ಲೋಹಿಯಾ ಸಾಮಾನ್ಯ ವ್ಯಕ್ತಿಯಲ್ಲ. ಡಾ.ಲೋಹಿಯಾ ಮಾತ್ರವಲ್ಲ, ಭಾರತದ ಆತ್ಮವೇ ಸೆರೆಮನೆಯಲ್ಲಿದೆ". ಹಾಗೆಯೇ ಡಾ.ಲೋಹಿಯಾರ ಬಿಡುಗಡೆಗೆ ಪೋರ್ಚುಗೀಸ್ ಸರ್ಕಾರದ ಮೇಲೆ ಒತ್ತಡ ತರುವಂತೆ ಭಾರತದ ಆಗಿನ ವೈಸ್‌ರಾಯ್ ಲಾರ್ಡ್ ವೇವೆಲ್‌ಗೆ ಗಾಂಧಿ ಪತ್ರ ಬರೆದರು. ಗಾಂಧಿಯ ಈ ಪ್ರಯತ್ನಗಳ ಫಲವಾಗಿ ಡಾ.ಲೋಹಿಯಾರನ್ನು ೧೯೪೬ರ ಅಕ್ಟೋಬರ್ ೯ರಂದು ಬಿಡುಗಡೆ ಮಾಡಲಾಯಿತು. ಬಿಡುಗಡೆಯಾದ ತಕ್ಷಣವೇ ಡಾ.ಲೋಹಿಯಾ,

ಗೋವಾ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಿಗೆ ಪತ್ರ ಬರೆದರು: “ನಾನು ಗೋವಾದ ಯಾವ ಕಾನೂನನ್ನೂ ಉಲ್ಲಂಘಿಸಿಲ್ಲ. ಪೊಲೀಸರು ಯಾವುದೇ ಕಾರಣವನ್ನು ಕೊಡದೇ ನನ್ನನ್ನು ಬಂಧಿಸಿದರು. ಸರಿಯಾಗಿ ಗಾಳಿಯೂ ಆಡದಂತಹ ಕತ್ತಲ ಕೋಣೆಯೊಳಗೆ ನನ್ನನ್ನು ಅಕ್ರಮವಾಗಿ ಕೂಡಿಟ್ಟಿದ್ದರು. ಆದ್ದರಿಂದ ಅವರು ಕ್ಷಮೆ ಯಾಚಿಸಬೇಕು ಮತ್ತು ಅಕ್ರಮವಾಗಿ ಬಂಧಿಸಿಟ್ಟಿದ್ದರಿಂದಾದ ಹಾನಿಯನ್ನು ತುಂಬಿಕೊಡಬೇಕು.”

ಗಾಂಧಿ, ತಮ್ಮ ‘ಹರಿಜನ’ ಪತ್ರಿಕೆಯಲ್ಲಿ, ‘ಮತ್ತೆ ಡಾ.ಲೋಹಿಯಾ’ ಎಂಬ ಶೀರ್ಷಿಕೆಯಡಿ ಈ ಪತ್ರವನ್ನು ಪ್ರಕಟಿಸಿ, ಅಡಿಟಿಪ್ಪಣಿಯಲ್ಲಿ ಹೀಗೆ ಬರೆದರು: “ಡಾ. ಲೋಹಿಯಾರ ಕಲ್ಪನೆಯನ್ನು ನೋಡಿ ನನಗೆ ನಗು ಬರುತ್ತದೆ. ಅವರ ಹಿಂದೆ ಏನಾದರೂ ಪ್ರಭುತ್ವದ ಬಲವಿದ್ದಿದ್ದರೆ, ಬಹುಶಃ ಗೋವಾದ ಅಧಿಕಾರಿಗಳು ತಕ್ಷಣ ಕ್ಷಮೆ ಯಾಚಿಸಿ, ನಷ್ಟವನ್ನು ತುಂಬಿಕೊಡುವ ಭರವಸೆ ಕೊಡುತ್ತಿದ್ದರೇನೋ. ಅವಮಾನಿತನಾದ, ಗಾಯಗೊಂಡ ಯಾವುದೇ ಸಾಮಾನ್ಯ ವ್ಯಕ್ತಿಯಾದರೂ ಸರಿಯೇ, ಹೀಗೆ ಆದ ನಷ್ಟಗಳಿಗೆ ಕೇಳಿ ಪಡೆದುಕೊಳ್ಳುವುದು ಸಾಮಾನ್ಯವೇ. ಡಾ. ಲೋಹಿಯಾ ಸಾಮಾನ್ಯ ಮನುಷ್ಯರೇನಲ್ಲ. ಆಗಲಿ, ಭಾರತದಲ್ಲಿ ರಾಷ್ಟ್ರೀಯ ಸರ್ಕಾರವಿದೆ. ಖಂಡಿತವಾಗಿಯೂ ಅವರೂ ಕೂಡ ಎಲ್ಲರಂತೆಯೇ ಸೂಕ್ಷ್ಮ ಮನಸ್ಸಿನವರಾಗಿದ್ದಾರೆ. ಅವರು ಈಗಾಗಲೇ ತಮ್ಮ ಪ್ರತಿಭಟನೆಯನ್ನು ಸಲ್ಲಿಸಿ, ತನ್ನ ರೀತಿನೀತಿಗಳನ್ನು ತಿದ್ದಿಕೊಳ್ಳಲು ಪೋರ್ಚುಗೀಸ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದರೆ ನಾನು ಆಶ್ಚರ್ಯ ಪಡಬೇಕಾಗಿಲ್ಲ. ಏನೇ ಆಗಲಿ, ರಾಷ್ಟ್ರೀಯ ಸರ್ಕಾರಕ್ಕೆ ಮತ್ತು ಘಾಸಿಗೊಳಗಾಗಿರುವ ಡಾ.ಲೋಹಿಯಾರಿಗೆ ಸಾರ್ವಜನಿಕ ಅಭಿಪ್ರಾಯದ ಬೆಂಬಲವಿರಲಿ.”

೧೯೪೬ರ ಅಕ್ಟೋಬರ್ ಕೊನೆಯ ಹೊತ್ತಿಗೆ ಡಾ.ಲೋಹಿಯಾ, ಗೋವಾ ವಿಮೋಚನೆಗಾಗಿ ಸತ್ಯಾಗ್ರಹ ಹೂಡಲು ತಯಾರಿ ಮಾಡಿಕೊಳ್ಳುವುದಕ್ಕಾಗಿ ಬೆಳಗಾಂಗೆ ಬಂದು ಗಡಿ ಪ್ರದೇಶಗಳಲ್ಲಿ ಸಂಚಾರ ಮಾಡಿದರು. ಬಹಳಷ್ಟು ಸ್ವಯಂಸೇವಕರು ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಮುಂದೆ ಬಂದರು. ಆದರೆ ೧೯೪೬ರ ನವೆಂಬರ್ ಮೊದಲ ವಾರದಲ್ಲೇ ಡಾ.ಲೋಹಿಯಾ, ಗಾಂಧಿಯಿಂದ, ‘ತಕ್ಷಣ ಬಂದು ಕಾಣಬೇಕೆಂಬ’ ಟೆಲಿಗ್ರಾಂ ಸ್ವೀಕರಿಸಿದರು. ಈ ಮಧ್ಯೆ, ಅಂದರೆ ೧೯೪೬ರ ನವೆಂಬರ್ ಕೊನೆಯ ಹೊತ್ತಿಗೆ, ಗಾಂಧಿ ನೌಖಾಲಿಯನ್ನು ತಲುಪಿದ್ದರು.

ಲೋಹಿಯಾ ಕೂಡ ೧೯೪೬ರ ಕೊನೆಯ ಹೊತ್ತಿಗೆ ನೌಖಾಲಿಗೆ ಬಂದರು. ಅವರು ಮತ್ತೆ ಗೋವಾ ಪ್ರವೇಶಿಸದಂತೆ; ಅದರ ಬದಲಿಗೆ ನೆಹರೂ ತನ್ನ ರಾಜತಾಂತ್ರಿಕ ಪ್ರಯತ್ನಗಳಿಂದ ಈ ವಿಚಾರದಲ್ಲಿ ಮುಂದುವರಿಯಲು ಬಿಡುವಂತೆ ಗಾಂಧಿ, ಲೋಹಿಯಾರ ಮನವೊಲಿಸಿದರು. ಡಾ.ಲೋಹಿಯಾ ಮತ್ತೆ ಗೋವಾ ಪ್ರವೇಶಿಸಿದರೆ ಬಂಧನವಾಗುತ್ತಿದ್ದುದು ಖಚಿತವಿತ್ತು. ಏನೇ ಆಗಲಿ, ಅವರು ಅನಿರ್ದಿಷ್ಟವಾಗಿ

ಪೋರ್ಚುಗೀಸ್ ಸೆರೆಮನೆಯಲ್ಲಿ ಕಾಲಕಳೆಯುವುದು ಗಾಂಧಿಗೆ ಇಷ್ಟವಿರಲಿಲ್ಲ. ಆ ಪರಿಸ್ಥಿತಿಯಲ್ಲಿ ಡಾ.ಲೋಹಿಯಾ ಮೌನವಾಗಿ ಇದೆಲ್ಲವನ್ನೂ ಒಪ್ಪಿಕೊಂಡರು. ಗಾಂಧಿಯ ಆಗ್ರಹದ ಮೇರೆಗೆ ಕಲ್ಕತ್ತಾದಲ್ಲಿ, ತದನಂತರ ದೆಹಲಿಯಲ್ಲಿನ ಅವರ ಶಾಂತಿ ಕಾಪಾಡುವ ಕೆಲಸಗಳಲ್ಲಿ ಸಹಕರಿಸುತ್ತಾ ಕೊನೆಯವರೆಗೂ ಅಂದರೆ ೧೯೪೮ರ ಜನವರಿ ೩೦ರಂದು ಅವರ ಹತ್ಯೆಯಾಗುವವರೆಗೂ ಅವರೊಡನೆ ಉಳಿದರು.

ಇತ್ತಕಡೆ ಗೋವಾದಲ್ಲಿ ಬಹಳಷ್ಟು ಬೆಳವಣಿಗೆಗಳಾಗಿದ್ದವು. ಒಂದು ಮಾತನ್ನು ಹೇಳಿ ಈ ವಿಷಯವನ್ನು ಇಲ್ಲಿಗೆ ನಿಲ್ಲಿಸಬೇಕು. ಅದೆಂದರೆ ನೆಹರೂ ಮತ್ತು ಪಟೇಲ್ ಇಬ್ಬರೂ ಅಷ್ಟು ಹೊತ್ತಿಗೆ ಅನುಕೂಲಸಿಂಧು ರಾಜಕಾರಣವನ್ನು ಆಶ್ರಯಿಸಿದ್ದರು ಎಂಬುದು. ಪಟೇಲ್, ಗೋವಾದ ವಿಮೋಚನೆ ಭಾರತದ್ದಷ್ಟೇ ಮುಖ್ಯವೆಂದು ಒಪ್ಪಿಕೊಂಡರೂ ಆ ಚಳುವಳಿಯು ಕಾಂಗ್ರೆಸ್ ಮುಂದಾಳತ್ವದಲ್ಲಿ ನಡೆಯಬೇಕೇ ಹೊರತು ಲೋಹಿಯಾ ನಾಯಕತ್ವದಲ್ಲಿ ಅಲ್ಲ ಎಂಬ ನಿಲುವು ತಳೆದಿದ್ದರು. ಇತ್ತ ನೆಹರೂ, ಭಾರತ ಸರ್ಕಾರವು ಪೋರ್ಚುಗಲ್ ಮೇಲೆ, ಗೋವಾ ಬಿಟ್ಟು ಹೋಗಲು ಅಂತಾರಾಷ್ಟ್ರೀಯ ಒತ್ತಡವನ್ನು ತರಬಹುದು ಮತ್ತು ಹೇಗಾದರೂ ಫ್ರಾನ್ಸ್ ಮತ್ತು ಪೋಪ್ ಈ ಪರಿಸ್ಥಿತಿಯಲ್ಲಿ ನಮ್ಮನ್ನು ಬೆಂಬಲಿಸುತ್ತಾರೆ ಎಂಬ ನಿಲುವು ತಳೆದರು. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರಾಗಿದ್ದ ವಿ.ಕೆ.ಕೃಷ್ಣ ಮೆನನ್ ಅವರಿಗೆ ನೆಹರೂ ಪತ್ರವನ್ನೂ ಬರೆದರು. ಆದರೆ ಅವರು ನಿಜ ಜೀವನದಲ್ಲಿ ಏನನ್ನೂ ಮಾಡಲಿಲ್ಲ. ೧೯೬೧ರ ಡಿಸೆಂಬರ್‌ನಲ್ಲಿ ಸಾರ್ವತ್ರಿಕ ಚುನಾವಣೆ ನಡೆಯುವ ಹಿಂದಿನ ದಿನ ಸಾಯಂಕಾಲದವರೆಗೂ ಏನೆಂದರೆ ಏನೂ ಮಾಡಲಿಲ್ಲ. ಅಂತೂ ಕೊನೆಗೆ ಗೋವಾ ವಿಮೋಚನೆಗಾಗಿ ಮಿಲಿಟರಿ ಕಾರ್ಯಾಚರಣೆ ನಡೆಸುವ ನಿರ್ಧಾರ ತೆಗೆದುಕೊಂಡರು. ೧೯೬೧, ಡಿಸೆಂಬರ್ ೧೯ರಂದು ಭಾರತೀಯ ಸಶಸ್ತ್ರ ಪಡೆಗೆ ಗೋವಾ ಪ್ರಭುತ್ವವು ಶರಣಾಯಿತು. ಅದರ ಮುಂದಿನ ವರ್ಷವೇ ಅಂದರೆ ಚೀನಾ ಆಕ್ರಮಣದಿಂದ ಘೋರವಾಗಿ ಆಘಾತಗೊಳ್ಳುವ ಸ್ವಲ್ಪ ಮೊದಲೇ ನೆಹರೂ ಅವರ ಈ ದ್ವಿಮುಖ ನೀತಿ ಬಯಲಾಗಿ ಅವರಿಗೆ ಬೇಸರವನ್ನು ತಂದಿತ್ತು. ಆನಂತರ ಆದ ಆಘಾತದಿಂದ ನೆಹರೂ, ೧೯೬೪ರಲ್ಲಿ ಸಾಯುವವರೆಗೂ ಚೇತರಿಸಿಕೊಳ್ಳಲೇ ಇಲ್ಲ.

ಪೋರ್ಚುಗೀಸ್ ಸೆರೆಮನೆಯಿಂದ ಪವಾಡವೆನಿಸುವ ಹಾಗೆ ಲೋಹಿಯಾರನ್ನು ಬಿಡುಗಡೆಗೊಳಿಸಲು ಗಾಂಧಿ ಶತಪ್ರಯತ್ನವನ್ನು ಏಕೆ ಮಾಡಿದರು? ೧೯೪೬ರ ಅಕ್ಟೋಬರ್‌ನಲ್ಲಿ ಡಾ.ಲೋಹಿಯಾ ಮತ್ತೆ ಗೋವಾ ಪ್ರವೇಶಿಸುವುದನ್ನು ಏಕೆ ತಡೆದರು? ಉತ್ತರ ಸರಳ ಮತ್ತು ಸ್ಪಷ್ಟ. ಡಾ.ಲೋಹಿಯಾ ಅವರು ಭಾರತದ ಆತ್ಮ ಮತ್ತು ಭಾರತದ ಪ್ರಜಾತಂತ್ರದ ಭವಿಷ್ಯದ ದೃಷ್ಟಿಯಿಂದ ಅವರ ಉಪಸ್ಥಿತಿ ಅನಿವಾರ್ಯ ಅಗತ್ಯ ಎಂದು ಗಾಂಧಿ ತಿಳಿದಿದ್ದರು. ಅರ್ಥವಾಗುವ ಹಾಗೆಯೇ, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗೌರವಿಸುವಂತೆ ಮತ್ತು ಸಂರಕ್ಷಿಸಿಕೊಳ್ಳುವಂತೆ ಜನತೆಯ

ಆತ್ಮಾಭಿಮಾನವನ್ನು ಪುನಶ್ಚೇತನಗೊಳಿಸುವುದು ಅವರ ಆಶಯವಾಗಿತ್ತು. ಬ್ರಿಟಿಷ್ ಆಳ್ವಿಕೆಯಡಿಯಲ್ಲಿ ತಮ್ಮ ಸ್ಥೈರ್ಯ, ಭರವಸೆ ಮತ್ತು ಆತ್ಮ ವಿಶ್ವಾಸಗಳನ್ನು ಕಳೆದುಕೊಂಡಿದ್ದ ಭಾರತದ ಜನತೆಯ ಮನೋಭೂಮಿಕೆಯನ್ನು ಬೆಳಗಬಲ್ಲಂತಹ ಭವಿಷ್ಯದ ನಾಯಕ ಲೋಹಿಯಾ ಎಂಬುದು ಗಾಂಧಿಯವರಿಗೆ ಚೆನ್ನಾಗಿ ಗೊತ್ತಿತ್ತು. ಬಹುಶಃ ಇಷ್ಟು ಹೊತ್ತಿಗೆ, ಗಾಂಧಿ, ತನ್ನ ನಂತರ ತನ್ನ ಸ್ಥಾನವನ್ನು ತುಂಬಬಲ್ಲ, ಪ್ರಜಾಪ್ರಭುತ್ವದ ಆತ್ಮಸಾಕ್ಷಿಯಾಗಬಲ್ಲ ಮತ್ತು ಪ್ರಜಾತಂತ್ರದ ಕಾವಲುಗಾರನಾಗಬಲ್ಲ ಶಕ್ತಿ ಡಾ.ಲೋಹಿಯಾರಿಗಿದೆ ಎಂದು ಗುರುತಿಸಿದ್ದರು.

ಆಗಲೇ ಹೇಳಿದಂತೆ, ೧೯೪೬ರ ನವೆಂಬರ್‌ನಿಂದ ಗಾಂಧಿ ಮತ್ತು ಲೋಹಿಯಾ ಒಟ್ಟಿಗಿದ್ದರು. ಕಲ್ಕತ್ತಾದಲ್ಲಿರುವಾಗ, ಮುಸ್ಲಿಮರ ಪ್ರದೇಶಗಳಿಗೆ ಹೋಗಿ, ದ್ವೇಷದಿಂದ ಒಳಗೊಳಗೇ ಕುದಿಯುತ್ತಿರುವ, ಹೆಚ್ಚಿನ ಹಾನಿಗೊಳಗಾಗಿ ಕುಗ್ಗಿಹೋಗಿರುವ ಸಮುದಾಯಗಳನ್ನು ಸಂತೈಸುವಂತೆ ಗಾಂಧಿ ಲೋಹಿಯಾರನ್ನು ಕೇಳಿಕೊಂಡರು. ಇಲ್ಲಿ, ತಾಂಡವವಾಡುತ್ತಿದ್ದ ಎಗ್ಗಿಲ್ಲದ ದ್ವೇಷ ಮತ್ತು ಸೇಡಿನ ಭಾವನೆಗಳನ್ನು ಹೇಗೆ ತಹಬಂದಿಗೆ ತರಬೇಕೆಂಬುದನ್ನು ಡಾ.ಲೋಹಿಯಾ, ಗಾಂಧಿಯೊಡನೆಯ ದಿನನಿತ್ಯದ ಮೇಲ್ವಿಚಾರಣೆಗಳಲ್ಲಿ ಕಲಿತರು. ಆಗಿದ್ದ ಕಷ್ಟಕರ ಪರಿಸ್ಥಿತಿಗಳಲ್ಲಿ ಮುಂದೇನು ಮಾಡಬೇಕೆಂಬುದರ ಬಗ್ಗೆ ಸರಿಯಾದ ನಿರ್ಧಾರ ಕೈಗೊಳ್ಳುವ ಶಕ್ತಿ ಮತ್ತು ಅಗತ್ಯ ಧೈರ್ಯ, ಎರಡೂ ಡಾ.ಲೋಹಿಯಾರಿಗಿತ್ತೆಂಬುದು ಗಾಂಧಿಯವರಿಗೆ ಗೊತ್ತಿತ್ತು. ದೆಹಲಿಯಲ್ಲಿ ತೀವ್ರ ಗಲಭೆಗಳು ಭುಗಿಲೆದ್ದಾಗ, ಗಾಂಧಿ, ತಮ್ಮ ಜೊತೆಯಲ್ಲೇ ಇದ್ದು ಶಾಂತಿ ಕೆಲಸಗಳಲ್ಲಿ ಸಹಕರಿಸಬೇಕೆಂದು ಡಾ.ಲೋಹಿಯಾರನ್ನು ಆಗ್ರಹಿಸಿದರು. ಆಗ ಪಂಜಾಬ್‌ನಿಂದ ಸಾವಿರಾರು ನಿರಾಶ್ರಿತರು ಬಂದಿದ್ದು, ಪರಿಸ್ಥಿತಿ ತುಂಬಾ ಹದಗೆಟ್ಟಿತ್ತು. ಡಾ.ಲೋಹಿಯಾ, ತಮ್ಮ ' ಮಹಾತ್ಮ ಗಾಂಧಿ ಕುರಿತ ಉಪಕಥೆಗಳು' ಎಂಬ ಅದ್ಭುತ ಲೇಖನದಲ್ಲಿ ಗಾಂಧಿ, ತಮಗೆ ದೆಹಲಿಯಲ್ಲಿ ಹತಾಶೆಯ ಸಂದರ್ಭದ ಕರ್ತವ್ಯವೇನೆಂಬುದರ ಸಮಗ್ರ ಅರ್ಥವನ್ನು ಕಲಿಸಿದ ಬಗೆಯನ್ನು ವಿವರಿಸಿದ್ದಾರೆ: ಪುಂಡರು, ದಂಗೆಕೋರರು ಮತ್ತು ಕಿಚ್ಚು ಹಚ್ಚುವವರ ವಿರುದ್ಧದ ನಾಗರಿಕ ಪ್ರತಿರೋಧ, ಅಗತ್ಯವಿರುವವರಿಗೆ ಸಕಾಲದಲ್ಲಿ ಸಹಾಯ, ಮತ್ತು ದಂಗೆಯಿಂದ ಜರ್ಝರಿತರಾದ ಸಮುದಾಯಗಳಿಗೆ ಭರವಸೆ.... ಇತ್ಯಾದಿ. ದೆಹಲಿಯಲ್ಲಿ ಡಾ.ಲೋಹಿಯಾರ ಶಾಂತಿ ಪ್ರಯತ್ನಗಳು ಸಾರ್ಥಕವಾಗದೇ ಇರಲಿಲ್ಲ. ಆಗಸ್ಟ್ ೧೫, ೧೯೪೭ ಭಾರತ ಸ್ವತಂತ್ರಗೊಂಡ ದಿನ, ದೆಹಲಿಯಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರ ಅಪ್ಪಿಕೊಂಡು ಸಂಭ್ರಮಿಸಿದರು. ಆ ಕ್ಷಣ, ಒಂದು ವರ್ಷದಿಂದ ಸಂಚಯವಾಗಿದ್ದ ಕಹಿ ಮತ್ತು ಮತಾಂಧತೆಯ ಭಾವನೆಗಳು ಮಾಯವಾಗಿದ್ದವು. ಡಾ.ಲೋಹಿಯಾ ಇಡೀ ರಾತ್ರಿ ಮೆರವಣಿಗೆಯನ್ನು ಏರ್ಪಡಿಸಿದ್ದು ಭಾರೀ ಯಶಸ್ಸು ಗಳಿಸಿತು. ಅದು ಹಿಂದೂ ಮುಸ್ಲಿಂ ಐಕ್ಯತೆಗೆ ಇದ್ದ ಅಡೆತಡೆಗಳನ್ನು ತೊಡೆದುಹಾಕಿತ್ತು. ಆದರೆ ಅದು ಹೆಚ್ಚು

ಕಾಲ ಉಳಿಯಲಿಲ್ಲ. ಮತ್ತೆ ದೆಹಲಿಯಲ್ಲಿ ದಂಗೆಗಳು ಸ್ಫೋಟಿಸಿ, ಲೋಹಿಯಾ, ಗಾಂಧಿಯವರೊಂದಿಗೆ ಶಾಂತಿ ಕಾರ್ಯಾಚರಣೆಗಳಲ್ಲಿ ಸಹಕರಿಸುತ್ತಾ ಅಲ್ಲಿಯೇ ಇರಬೇಕಾಯ್ತು.

ಗಾಂಧಿಯವರು ಲೋಹಿಯಾರ ಟೀ, ಕಾಫಿ ಕುಡಿಯುವ ಮತ್ತು ಸಿಗರೇಟ್ ಸೇದುವ ಚಟಗಳ ಸಹಿತ ಅವರ ಅವ್ಯವಸ್ಥಿತ ಅಲೆಮಾರಿ ಜೀವನ ಶೈಲಿಯನ್ನು ತಿದ್ದಲು ಪ್ರಯತ್ನಿಸಿದ್ದರೆಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಸಹೋದ್ಯೋಗಿಗಳು ಮತ್ತು ತಮ್ಮ ಹಿತೈಷಿಗಳೊಡನೆಯ ಲೋಹಿಯಾ ಸಂಬಂಧಗಳಲ್ಲಿ ಬೆಚ್ಚನೆಯ ಸ್ನೇಹಶೀಲತೆ ಮತ್ತು ಸಹಾನುಭೂತಿಯನ್ನು ತುಂಬಲೆತ್ನಿಸಿದರು ಗಾಂಧಿ. 'ಇವರೊಂದಿಗೆ ಏಗುವುದು ಕಷ್ಟ' ಎನ್ನುವಂತಹ ವ್ಯಕ್ತಿತ್ವವಾಗಿದ್ದ ಡಾ.ಲೋಹಿಯಾರನ್ನು, ಒಪ್ಪುವಂತಹ ಮತ್ತು ಸ್ನೇಹಪರ ವ್ಯಕ್ತಿಯನ್ನಾಗಿ ಬದಲಾಯಿಸಲು ನೆಹರೂ ಕೂಡ ಪ್ರಯತ್ನಿಸಿದ್ದಂತೆ ಕಾಣುತ್ತದೆ. ಒಂದು ದಿನ ಗಾಂಧಿ, ಡಾ.ಲೋಹಿಯಾರಿಗೆ, ತಾವು ಕಠಿಣ, ಬಹು ನಿರೀಕ್ಷೆಗಳ, ನಿಗಾ ಇಟ್ಟಿರುವ; ಆದರೂ ಕರುಣೆ ಮತ್ತು ಸಹಾನುಭೂತಿಯಿಂದ ಸಲಹುವ ತಂದೆಯಾಗಬಯಸುವುದಾಗಿ ಹೇಳಿದರು. ಮತ್ತೊಂದು ಸಂದರ್ಭದಲ್ಲಿ, ಯಾವುದಕ್ಕೂ ಜಗ್ಗದ ಹಠಮಾರಿ ಧೋರಣೆಯನ್ನು ಕೈಬಿಟ್ಟು, ನೆಹರೂ ಮತ್ತು ಪಟೇಲರೊಂದಿಗೆ ವ್ಯವಹಾರ ಮಾಡುವಂತೆ ಲೋಹಿಯಾರ ಮನವೊಲಿಸಲು, ಸುಮಾರು ೪೫ ನಿಮಿಷಗಳ ಕಾಲ ಗಾಂಧಿ ಪ್ರಯತ್ನ ಪಟ್ಟಿದ್ದರು. ಲೋಹಿಯಾರನ್ನು ಕುರಿತ ಗಾಂಧಿಯವರ ಕೆಲ ಆಗ್ರಹಗಳು ಅವರು ಸರ್ಕಾರವನ್ನು ಸೇರಿ ಮುಂದೆ ನಿಂತು ಭಾರತದ ಸಮಸ್ಯೆಗಳನ್ನು ಬಗೆಹರಿಸುವಂತೆ ಪ್ರೇರೇಪಿಸುವ ಪರೋಕ್ಷ ಉದ್ದೇಶಗಳನ್ನೇನಾದರೂ ಹೊಂದಿದ್ದವೆ? ಅದೇನೇ ಇರಲಿ, ಸರ್ಕಾರದೊಳಗಿನ ಯಾವ ಅಧಿಕಾರ ಸ್ಥಾನವೂ ಬೇಡವೆಂದು ನಿರಾಕರಿಸುವ ಲೋಹಿಯಾರ ಕಮ್ಯುನಿಸ್ಟ್ ಮಾದರಿ ಚಿಂತನೆಯು ಪ್ರಶ್ನಾರ್ಹವೇ ಹೌದು. ಬ್ರಿಟಿಷರ ವಿರುದ್ಧದ ಹೋರಾಟದ ಆಕ್ರಮಣಕಾರೀ ಶೈಲಿ ಮತ್ತು ಅದಕ್ಕೆ ವ್ಯತಿರಿಕ್ತವಾಗಿ ನಮ್ಮದೇ ಚುನಾಯಿತ ಸರ್ಕಾರದ ವಿರುದ್ಧದ ಹೋರಾಟ ವಿಧಾನಗಳ ನಡುವೆ ವ್ಯತ್ಯಾಸವಿರಬೇಕೆಂಬುದನ್ನು ಗಾಂಧಿ ಲೋಹಿಯಾಗೆ ರಾಜಕೀಯ ಶಿಸ್ತಿನ ಪಾಠವಾಗಿ ಹೇಳಿರುವ ಸಾಧ್ಯತೆಯೂ ಇದೆ.

ಗಾಂಧಿ ಭಾರತೀಯರ ಚಾರಿತ್ರ್ಯದ ಮೇಲೆ ಗಮನವಿಟ್ಟಿರುವ 'ಭಾರತದ ಕಾವಲುಗಾರ' ಎಂದು ಡಾ.ಲೋಹಿಯಾ ಪರಿಗಣಿಸಿದ್ದರಿಂದ, ಅವರ ಆಗ್ರಹಗಳೆಲ್ಲವನ್ನೂ ಅವರು ಸರಿಯಾದ ಅರ್ಥದಲ್ಲೇ ಸ್ವೀಕರಿಸಿದರು. ವಾಸ್ತವವಾಗಿ, ಪ್ರತಿ ದೇಶದಲ್ಲೂ ಒಬ್ಬ ಗಾಂಧಿಯಂಥ ನೈತಿಕ 'ಕಾವಲುಗಾರ' ಇರಬೇಕೆಂದು ಲೋಹಿಯಾ ಬಯಸಿದ್ದರು. ಜೀವನದ ರಹಸ್ಯಗಳನ್ನು ತಿಳಿದುಕೊಳ್ಳುವುದೇ ನಮ್ಮ ಬದುಕಿನ ಮುಖ್ಯ ಗುರಿಯಾಗಿದ್ದು, ಅದಕ್ಕೆ ಅಡೆ ತಡೆಗಳಾಗುವಂತಹ ದೋಷಗಳಿಂದ ಲೋಹಿಯಾ ಮುಕ್ತವಾಗಬೇಕೆಂಬುದು ಗಾಂಧಿಯವರ ಬಯಕೆಯಾಗಿತ್ತು. ಈ ನೀತಿ ಸಂಹಿತೆಯ ತಿಳುವಳಿಕೆ ಮತ್ತು ವ್ಯಕ್ತಿ

ಚಾರಿತ್ರ್ಯ ಜೊತೆಯಾಗಿ ಹೋಗುತ್ತವೆಂದು ಲೋಹಿಯಾ ತಮ್ಮ 'ಮಹಾತ್ಮ ಗಾಂಧಿ ಕುರಿತ ಉಪಕಥೆಗಳು' ಎಂಬ ತಮ್ಮ ಲೇಖನದಲ್ಲಿ ಸಾಕ್ಷೀಕರಿಸುತ್ತಾರೆ.

ಗಾಂಧಿ, ಭವಿಷ್ಯದಲ್ಲಿ ಡಾ.ಲೋಹಿಯಾರಿಗಾಗಿ ಯಾವ ಪಾತ್ರವನ್ನು ಕಡೆದಿದ್ದರೋ ನಮಗೆ ಗೊತ್ತಿಲ್ಲ. ನಮಗೆ ಗೊತ್ತಿರುವುದೇನೆಂದರೆ, ಈ ದೇಶದ ಸೇವೆಯಲ್ಲಿ ಯಾವುದೋ ಸವಾಲಿನ ಪಾತ್ರವೊಂದನ್ನು ನಿರ್ವಹಿಸುವುದಕ್ಕಾಗಿ ಗಾಂಧಿ ಲೋಹಿಯಾರನ್ನು ಅಣಿಮಾಡುತ್ತಿದ್ದರು ಎಂಬುದು. ಆದರೆ, ವಿಧಿ ನಿಯಾಮಕವೇ ಬೇರೆಯಾಗಿದ್ದಿತು. ಲೋಹಿಯಾ ಅವರು ಯಾವ ಪಾತ್ರವನ್ನು ನಿರ್ವಹಿಸಬೇಕೆಂದು ಗಾಂಧಿ ಬಯಸಿದ್ದರೋ ಆ ಕೊನೆಯ ಬಯಕೆಯನ್ನು ಅವರು ಬಹಿರಂಗಪಡಿಸುವ ಮುನ್ನವೇ ಅವರು ಹತ್ಯೆಯಾಗಿ ಹೋದರು. ಇತಿಹಾಸದ ದೃಷ್ಟಿಯಿಂದ ಇದು ತುಂಬಾ ಮುಖ್ಯವಾದ ವಿಷಯ. ಏಕೆಂದರೆ, ಕಾಂಗ್ರೆಸ್ ಪಕ್ಷದ (ಆಗ ಆಡಳಿತ ಪಕ್ಷವೂ ಆಗಿದ್ದ) ಎಲ್ಲರೂ ಗಾಂಧಿಯ ಆಶಯಗಳನ್ನು ಗೌರವಿಸಲೇಬೇಕಿತ್ತು.

ಗಾಂಧಿಯ ಸಾವಿನಿಂದ ಡಾ.ಲೋಹಿಯಾ, ಒಬ್ಬ ತಂದೆಯನ್ನು ಕಳೆದು ಕೊಂಡಂತಾಯಿತು. ಅವರು ಅನಾಥರಾದರು. ಅವರ ಬಗೆಗೆ ಕಾಳಜಿ ಮಾಡುವವರು ಯಾರೂ ಇರಲಿಲ್ಲ. ಅಲ್ಲಿಂದ ಮುಂದೆ, ಅವರು ಅಪ್ಪಟ ಅಲೆಮಾರಿಯಂತೆ ಬದುಕಿದರು. ಹಲವು ಮನೋಲಹರಿಗಳ ವ್ಯಕ್ತಿಯಾದರು. ಒಮ್ಮೆ ಹಠಮಾರಿ ವಿದ್ವಾಂಸನಂತೆ, ಮತ್ತೊಮ್ಮೆ ಬಿರುಗಾಳಿಯಂತಹ ಸಮಾಜವಾದಿಯಂತೆ, ಮಗದೊಮ್ಮೆ ಕಟ್ಟನಿಟ್ಟಿನ ನೈತಿಕ ನಿಲುವಿನ ವ್ಯಕ್ತಿಯಂತೆ ಮತ್ತು ಮೂರ್ತಿಭಂಜಕನಂತೆ, ಕಲೆ, ಭಾಷೆ ಮತ್ತು ಸಾಹಿತ್ಯ ರಸಿಕನಂತೆ, ಮಹಿಳೆಯರ ಸೌಂದರ್ಯ ಮತ್ತು ಅವರ ಸಾಮಾಜಿಕ ಉನ್ನತಿಯ ಪ್ರಾಮುಖ್ಯತೆಯ ಅಭಿಮಾನಿಯಂತೆ... ಒಟ್ಟಿನಲ್ಲಿ ಅವರು ನಿಗೂಢ ವ್ಯಕ್ತಿಯಾದರು. ಅವರು ಯಾರಿಗೂ ಉತ್ತರದಾಯಿಯಾಗಿರದ, ಯಾವುದಕ್ಕೂ ಲಕ್ಷ್ಯಕೊಡದ ವ್ಯಕ್ತಿಯಾದರು. ಆದರೂ.... ಮುಂದಿನ ಅವರ ಬದುಕಿನ ಇಪ್ಪತ್ತು ವರ್ಷಗಳ ಬದುಕಿನಲ್ಲಿ ಸಾರತಃ ಒಂದು ಸದುದ್ದೇಶದ ಆದರ್ಶವಾದಿಯಾಗಿ, ಗಾಂಧಿಯಂತೆ, ನಿರಂತರ ಆಶಾವಾದಿಯಾಗಿ ಉಳಿದರು. ಈ ನಿರಂತರ ಆಶಾವಾದಿತ್ವವೇ ಅವರಿಬ್ಬರ ಅನೂಹ್ಯ ಸಂಬಂಧವನ್ನು ಬಲಗೊಳಿಸಿದ್ದೆಂದು ಕಾಣುತ್ತದೆ. ಅನಿರೀಕ್ಷಿತವಾಗಿ ಸಿಡಿಲೆರಗಿದಂತೆ ಆದ ಗಾಂಧಿ ಹತ್ಯೆಯಿಂದ ಡಾ.ಲೋಹಿಯಾ ಅನಾಥರಾದದ್ದರಿಂದ ಭಾರತದ ರಾಜಕೀಯ ಘಾಸಿಗೊಂಡಿತು. ಬಹುಶಃ ಲೋಹಿಯಾ, ತನಗಾಗಿ ನಿಗದಿಪಡಿಸಿದ್ದ ಪಾತ್ರವನ್ನು ಗಾಂಧಿ ಬಹಿರಂಗಪಡಿಸುವರೆಂಬ ಭರವಸೆಯಿಂದ ಕಾಯುತ್ತಿದ್ದರೆಂದು ಕಾಣುತ್ತದೆ. ಗಾಂಧಿ ಹಾಗೆ ಬಯಸಿದ್ದೇ ಆಗಿದ್ದರೆ, ಅವರಿಗೆ ಮಾತ್ರ, ಹೆಚ್ಚು ಸೌಮ್ಯವಾದ ಲೋಹಿಯಾರನ್ನು ನೆಹರೂ ಜಾಗದಲ್ಲಿ ಅನುಸ್ಥಾಪಿಸಲು ಸಾಧ್ಯವಿತ್ತು.

ಆದರೆ ಲೋಹಿಯಾರ ಮಟ್ಟಿಗೆ ತನ್ನ ಹಿರಿಯಣ್ಣನೊಬ್ಬನ ಹಿತವಚನವಿಲ್ಲದೆ ತಾವು ಎಷ್ಟು ದುಃಖಿ ಮತ್ತು ಅಸಹಾಯಕರೆಂಬುದು ಅವರಿಗೆ ಮನದಟ್ಟಾಗಿತ್ತು.

೧೯೬೭ರಲ್ಲಿ ತಮ್ಮ ಸಾವಿನ ಕೆಲವು ವಾರಗಳ ಮುಂಚೆಯಷ್ಟೇ ಅದು ಪ್ರೊ. ಸಮರ್ ಗುಹಾರಲ್ಲಿ ಕಳಕಳಿಯಿಂದ ಕೇಳಿಕೊಂಡಿದ್ದರು: 'ಸಮರ್‌ಬಾಬು, ನೀವು ಮೊದಲು ಹೋಗಿ ಜಯಪ್ರಕಾಶರನ್ನು ಕರೆತನ್ನಿ. ನಾನು ಒಡೆಯಬಲ್ಲೆ, ಆದರೆ ಬೀಳಿಸಲಾರೆ. ಸದ್ಯದ ಪ್ರಭುತ್ವವನ್ನು ಯಾರಾದರೂ ಬೀಳಿಸಬಲ್ಲವರಿದ್ದರೆ ಅವರು ಜೆಪಿ ಮಾತ್ರ. ದಯವಿಟ್ಟು ಹೋಗಿ ಜೆಪಿಯನ್ನು ಕರೆತನ್ನಿ'.

ಆತ್ಮೀಯ ಸ್ನೇಹಿತ ಮತ್ತು ಮಾಜಿ ಲೋಕಸಭಾ ಸದಸ್ಯರಾದ ಪ್ರೊಫೆಸರ್ ಸಮರ್ ಗುಹಾ ಅವರು, ಗಾಂಧಿ ಮತ್ತು ಡಾ.ಲೋಹಿಯಾರ ಐಕ್ಯತೆಯನ್ನು ಬಹು ಸುಂದರವಾಗಿ ಬಣ್ಣಿಸಿರುವುದು ಹೀಗೆ: "ಯುವಕ ಲೋಹಿಯಾರ ಮೇಲೆ ಮಹಾತ್ಮತೆಯ ಪ್ರಭಾವಳಿಯ ಮತ್ತು ಗಾಂಧಿಯವರ ಹೀರಿಕೊಳ್ಳುವಂತಹ ಪ್ರೀತಿಯ ಪರಿಣಾಮ ಎಷ್ಟು ದಟ್ಟವಾಗಿತ್ತೆಂದರೆ, ಲೋಹಿಯಾ ಯಾವ ಕಾಲಘಟ್ಟದಲ್ಲೂ ಆ ಮುದುಕನ ಭಾವನಾತ್ಮಕ ಸೆಳೆತದಿಂದ ಪಾರಾಗಲು ಸಾಧ್ಯವಾಗಲೇ ಇಲ್ಲ; ಲೋಹಿಯಾ ಹಲವು ಬಾರಿ ದಾರಿ ತಪ್ಪಿದ ಪಥಿಕನಂತೆ ಕಾಣುತ್ತಿದ್ದರಾದರೂ, ಅವರ ಮೇಲೆ ಗಾಂಧಿಯ ಕಾಣದ ಸಂಯಮಶೀಲತೆಯ ಪ್ರಭಾವ ಕೆಲಸ ಮಾಡುತ್ತಲೇ ಇರುತ್ತಿತ್ತು. ಈ ಅಶಾಂತ ವ್ಯಕ್ತಿಗೆ ಗಾಂಧಿ ಪರಮ ಗಂತವ್ಯವಾಗಿದ್ದರು.

ಡಾ.ಲೋಹಿಯಾ ಆಧುನಿಕ ಗಾಂಧಿಯಾಗಲು ಬಯಸಿದ್ದರೇ...?

(ಸಾರ್ವಜನಿಕ ಆರೋಗ್ಯ ಮತ್ತು ಕೃಷಿ ವಲಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆಗಳನ್ನು ಕೈಗೊಂಡಿರುವ ಲೇಖಕ ಡಾ.ನೆನೆ ಅವರು ೧೯೪೦ರ ದಶಕದಲ್ಲೇ ಸಮಾಜವಾದಿ ಆಂದೋಲನದಿಂದ ಆಕರ್ಷಿತರಾಗಿ ರಾಷ್ಟ್ರೀಯ ಸೇವಾದಳದ ಸದಸ್ಯರಾದವರು. ಸಮಾಜವಾದ ಭಾರತೀಯ ಜ್ಞಾನ ಪರಂಪರೆಯನ್ನು ಅವಗಣಿಸಿದೆ ಎಂದು ಭಾವಿಸಿರುವ ನೆನೆಯವರು, ಲೋಹಿಯಾ ಮಾತ್ರ ಇದಕ್ಕೆ ಅಪವಾದವೆಂದು ಅಭಿಪ್ರಾಯಪಟ್ಟು ಅವರ ಚಿಂತನೆ ಕುರಿತಂತೆ ವಿಶೇಷ ಅಧ್ಯಯನ ಮಾಡಿದ್ದಾರೆ. ಈ ಲೇಖನ ಅವರ ಕೃತಿಯಿಂದ ಆಯ್ದ ಒಂದು ಅಧ್ಯಾಯ.)

(ಕನ್ನಡಕ್ಕೆ: **ಟಿ.ಎಲ್. ರೇಖಾಂಬ**)

◆◆

೪

ಲೋಹಿಯಾ:
ಭಾರತೀಯ ರಾಜಕಾರಣದ ಉಜ್ವಲ ತಾರೆ

ಮಸ್ತ್‌ರಾಂ ಕಪೂರ್

ಡಾ॥ ಲೋಹಿಯಾ ಭಾರತದ ರಾಜಕಾರಣದ ದಿಗಂತದಲ್ಲಿ ಪ್ರಜ್ವಲಿಸಿ ಮರೆಯಾದ ಅನನ್ಯ ತಾರೆ. ಕೆಲವರ ದೃಷ್ಟಿಯಲ್ಲಿ ಅದು ಭಾರೀ ಅನಾಹುತದ ಮುನ್ಸೂಚನೆಯಾದ ಆಕಾಶ ಕಾಯ. ಆದರೆ ಮತ್ತೆ ಹಲವರಿಗೆ ಅದು ನಂಬಿಕೆಯ ಹೊಸ ರಾಜಕಾರಣದ ಆಶಾಕಿರಣ. ಸ್ಥಾಪಿತ ಹಿತಾಸಕ್ತಿಯ ಅಳುವ ವರ್ಗದ ನಿಂದನೆ ಮತ್ತು ತಿರಸ್ಕಾರದ ಶಿಲುಬೆ ಯನ್ನು ಹೆಗಲ ಮೇಲೆ ಹೊತ್ತ ಈ ಸಂತ ಅವಿರತವಾಗಿ ಕಲ್ಲುಗೋಡೆಗಳನ್ನು ಒಡೆದು ಸೃಜನಶೀಲ ಹಠದೊಂದಿಗೆ ಹೊಸದನ್ನು ನಿರ್ಮಿಸುತ್ತಾ ನಡೆದರು. ನಿಸ್ತೇಜಗೊಂಡಿದ್ದ ರಾಜಕೀಯ ಸಾಂಸ್ಕೃತಿಕ ಪರಿಸರದಲ್ಲಿ ನವಚೇತನವನ್ನು ಮೂಡಿಸಲು ಶ್ರಮಿಸಿದರು.

ಗಾಂಧೀಜಿಯವರಂತೆ ಲೋಹಿಯಾ ಕೂಡ ತಮ್ಮ ಆತ್ಮಚರಿತ್ರೆ ಬರೆದಿದ್ದರೆ ಅವರ ವ್ಯಕ್ತಿತ್ವವನ್ನು ರೂಪಿಸಿದ ಹಿನ್ನಲೆಯನ್ನು ಪ್ರಭಾವಗಳನ್ನು ನಾವು ತಿಳಿಯಬಹುದಾಗಿತ್ತು. ಆದರೆ ಆತ್ಮ ಚರಿತ್ರೆ ಬರೆಯುವ ಆಲೋಚನೆ

ಲೋಹಿಯಾರಲ್ಲಿ ಸುಳಿಯಲೇ ಇಲ್ಲ. ಇತರರು ತಮ್ಮ ಬಗ್ಗೆ ಬರೆಯುವುದನ್ನೂ ಅವರು ಪ್ರೋತ್ಸಾಹಿಸಲಿಲ್ಲ. ಅವರ ಭಾಷಣಗಳಲ್ಲಿ ಬರಹಗಳಲ್ಲಿ ಅಲ್ಲಲ್ಲಿ ಸುಳಿದುಹೋದ ಆತ್ಮವೃತ್ತಾಂತಾತ್ಮಕ ಸುಳಿವುಗಳ ಆಧಾರದಿಂದ ನಾವು ಲೋಹಿಯಾ ಅವರ ವೈಯಕ್ತಿಕ ಬದುಕಿನ ಚಿತ್ರಣವನ್ನು ಕಟ್ಟಿಕೊಳ್ಳಬೇಕು. ತಮ್ಮ ವೈಯಕ್ತಿಕ ಬದುಕು ಮತ್ತು ಅನುಭವ ಗಳನ್ನು ಯಾರೊಂದಿಗೂ ಹಂಚಿಕೊಳ್ಳದೆ ಮನದ ಹಗೇವಿನಲ್ಲಿ ಅವನ್ನೆಲ್ಲಾ ಸಂಗ್ರಹಿಸಿಟ್ಟು ಲೋಹಿಯಾ ಹೊರಟು ಹೋದರು. ಹುಟ್ಟು ಎಂಬುದು ಆಕಸ್ಮಿಕ, ಅದರೊಂದಿಗೆ ತಳುಕು ಹಾಕಿಕೊಂಡಿರುವ ಪೂರ್ವಾಗ್ರಹಗಳ ನೆಲೆಯಿಂದ ಒಬ್ಬ ಮನುಷ್ಯನನ್ನು ಅರ್ಥೈಸಲು ಪ್ರಯತ್ನಿಸುವುದು ಜಾತಿ, ವರ್ಗ, ಲಿಂಗಾಧಾರಿತ ತಾರತಮ್ಯಗಳನ್ನು ಸಮರ್ಥಿಸಿದಂತೆಯೇ ಎಂಬುದು ಲೋಹಿಯಾ ಅವರ ನಂಬಿಕೆಯಾಗಿತ್ತು. ವ್ಯಕ್ತಿಯೊಬ್ಬನ ವರ್ತಮಾನದ ವ್ಯಕ್ತಿತ್ವ ಏನಿದೆಯೋ ಅದರ ಆಧಾರದಲ್ಲಷ್ಟೇ ಅವನನ್ನು ಅರ್ಥೈಸಬೇಕೆಂಬುದು ಲೋಹಿಯಾರ ವಿಚಾರವಾಗಿತ್ತು. ಈ ವಿಚಾರದಲ್ಲಿ ಅವರು ಸಾರ್ತ್ರೆಯಂತಹ ಅಸ್ತಿತ್ವವಾದಿಗಳಿಗೆ ಹತ್ತಿರದವರು ಎಂದು ಹೇಳಬಹುದು.

ಲೋಹಿಯಾ ಅವರ ವ್ಯಕ್ತಿತ್ವವನ್ನು ಸಹ ನಾವು ಅವರ ಚಟುವಟಿಕೆ, ಬದ್ಧತೆ ಮತ್ತು ಇಚ್ಛಾಶಕ್ತಿಗಳ ಮುಖಾಂತರವೇ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬಹುದು. ಲೋಹಿಯಾ ಹೇಳುತ್ತಿದ್ದರು, ಪ್ರಸಿದ್ಧ ವ್ಯಕ್ತಿಯೊಬ್ಬರ ಪ್ರತಿಮೆಯನ್ನೋ ಅಥವಾ ಸ್ಮಾರಕವನ್ನೋ ಸ್ಥಾಪಿಸಬೇಕಾದ ಸಂದರ್ಭದಲ್ಲಿ ಆ ವ್ಯಕ್ತಿ ಮರೆಯಾದ ಕನಿಷ್ಠ ೩೦೦ ವರ್ಷಗಳ ನಂತರವಷ್ಟೇ ಅದನ್ನು ಮಾಡಬೇಕು; ಹಾಗಾದಾಗ ಮಾತ್ರ ಆ ವ್ಯಕ್ತಿಯ ತತ್ಕಾಲೀನ ಜನಪ್ರಿಯತೆ ಮಸುಕಾಗಿ ಆತನ ನಿಜವಾದ ಕೊಡುಗೆಯ ಆಧಾರದ ಮೇಲೆ ಆತನನ್ನು ಅಳೆಯುವುದು ಸಾಧ್ಯ ಎಂದು. "ನನ್ನ ಮರಣಾನಂತರವಷ್ಟೇ ಜನ ನನ್ನನ್ನು ಅರ್ಥಮಾಡಿಕೊಳ್ಳುವುದು" ಎಂಬುದಾಗಿ ಅವರೇ ಹೇಳುತ್ತಿದ್ದರು. 'ರಾಮ, ಕೃಷ್ಣ ಮತ್ತು ಶಿವ' ಎಂಬ ತಮ್ಮ ಪುಸ್ತಕದಲ್ಲಿ ಅವರು ಭಾರತದ ಮೂವರು ಪುರಾಣ ಪುರುಷರಾದ ರಾಮ, ಕೃಷ್ಣ ಮತ್ತು ಶಿವನ ಜೊತೆ ಮೂರು ತತ್ವಗಳಾದ ಮಿತ, ಅಮಿತ ಮತ್ತು ಆಯಾಮಾತೀತತೆಯನ್ನು ಸಮೀಕರಿಸಿ ಸಾಕ್ಷಾತ್ಕರಿಸಿಕೊಂಡಿದ್ದರು. ಅವರ ಪ್ರಕಾರ ರಾಮ ಶಿಸ್ತಿಗೆ ಒಳಪಟ್ಟವನು, ನಿಯಮಗಳಿಂದ ಮಿತಿಗೊಳಿಸಲ್ಪಟ್ಟವನು. ಆದರೆ ಕೃಷ್ಣ ಎಲ್ಲಾ ಮಿತಿಗಳನ್ನು ದಾಟಿ ತನ್ನ ಅಮಿತ ಪ್ರೀತಿಯ ಮೂಲಕ ಇಡೀ ಮನುಷ್ಯ ಕುಲವನ್ನೇ ಆವರಿಸಿದನು, ಶಿವನಾದರೋ ಕಾಲ ದೇಶಗಳ ಆಯಾಮಗಳನ್ನು ಮೀರಿ ಭೂತ ಅಥವಾ ವರ್ತಮಾನದಲ್ಲಿ ಸಮರ್ಥನೆ ಹುಡುಕದೆ ಕಾಲಪ್ರವಾಹದ ಒಂದು ಕ್ಷಣವನ್ನು ಅನಂತತೆಯನ್ನಾಗಿ ಪರಿವರ್ತಿಸುತ್ತಾನೆ. ಈ ತ್ರಿಮೂರ್ತಿಗಳಲ್ಲಿ ಶಿವನ ಶೈಲಿಯೇ ಲೋಹಿಯಾರನ್ನು ಪ್ರಭಾವಿಸಿದ್ದು.

ಅವರು ಪ್ರಜಾಸೋಷಲಿಸ್ಟ್ ಪಕ್ಷದಿಂದ ಹೊರಬಂದು ಪ್ರತ್ಯೇಕ ಸಮಾಜವಾದಿ ಪಕ್ಷವನ್ನು ಸ್ಥಾಪಿಸಬಯಸಿದ ಸಂದರ್ಭದಲ್ಲಿ ಮಿತಿಗಳುಳ್ಳ ಶಿಸ್ತಿನ ವಿಧಾನವನ್ನು ಅನುಸರಿಸಲು ಪ್ರಯತ್ನಿಸಿದರು. ಪಕ್ಷಕ್ಕೆ ಕಟ್ಟುನಿಟ್ಟಿನ ನೀತಿ ನಿಯಮಗಳನ್ನು ಅಳವಡಿಸಲು

ಪ್ರಯತ್ನಿಸಿದರು. ಇದರಿಂದ ಬೇಸರಗೊಂಡ ಲೋಹಿಯಾ ಅವರ ಕೆಲವು ಆಪ್ತರು ಪಕ್ಷವನ್ನೇ ತ್ಯಜಿಸುವ ನಿರ್ಧಾರ ಕೈಗೊಂಡಾಗ ಅನಿವಾರ್ಯವಾಗಿ ಅವರು ಬಿಗಿಯನ್ನು ಸಡಿಲಿಸಬೇಕಾಯಿತು. ಇದರ ಪರಿಣಾಮವಾಗಿ ಪರಿಸ್ಥಿತಿ ಮತ್ತೊಂದು ಅತಿಯನ್ನು ತಲುಪಿ ಅವರು ಕಾಂಗ್ರೆಸ್ ವಿರೋಧಿ ಗುಂಪಿನ ಜೊತೆ ಸಾರಾಸಗಟು ಹೊಂದಾಣಿಕೆಗೆ ಸಿಲುಕಬೇಕಾಯಿತು. ಮೂಲಭೂತವಾಗಿ ಸಮಾಜವಾದಿ ಸಿದ್ಧಾಂತಕ್ಕೆ ವಿರೋಧ ವಾಗಿರುವವರನ್ನೂ ಅವರು ಒಪ್ಪಿಕೊಳ್ಳಬೇಕಾಯಿತು. ವೈಯಕ್ತಿಕ ಬದುಕಿನಲ್ಲಿಯೂ ಸಹ ಅವರು ತಮ್ಮನ್ನು ನಿಯಮಗಳಿಗೆ, ಸಮಯಪಾಲನೆಗೆ ಒಳಪಡಿಸುವಂತಹ ಕರ್ತವ್ಯಗಳಿಂದ ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಬೇಕಾಯಿತು. ರಾಮನಿಗಿಂತ ಕೃಷ್ಣನ ಶೈಲಿ ಲೋಹಿಯಾ ಅವರನ್ನು ಹೆಚ್ಚು ಆಕರ್ಷಿಸಿತು. ಏಕೆಂದರೆ ಕೃಷ್ಣ ಎಲ್ಲ ಬಂಧನಗಳಿಂದ ಬಿಡಿಸಿಕೊಂಡು ಪ್ರೀತಿಯನ್ನು ಸರ್ವರಿಗೂ ಮುಕ್ತವಾಗಿ ಹಂಚಿದವನು. ಕೃಷ್ಣನ ಎರಡು ಅಥವಾ ಹೆಚ್ಚು ಸಂಬಂಧಗಳು, ಇಬ್ಬರು ಅಪ್ಪಂದಿರು, ಇಬ್ಬರು ಅಮ್ಮಂದಿರು, ಎರಡು ಹೆಸರುಗಳು, ಎರಡು ನಗರಗಳು, ಅಸಂಖ್ಯಾತ ಪ್ರೇಮಿಗಳು ಲೋಹಿಯಾರಿಗೆ ಇಷ್ಟವಾದಂಥವು. ಲೋಹಿಯಾ ಸಹ ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ಹಲವು ತಾಯಂದಿರ ಪ್ರೀತಿಯನ್ನು ಗಳಿಸಿದವರು. ಅವರಿಗೆ ಒಂದೇ–ತಮ್ಮದೇ–ಊರೆಂಬುದು ಇರಲಿಲ್ಲ. ಅವರ ದೇಶಪ್ರೇಮ ಸಹ ಭೌಗೋಳಿಕ ಗಡಿರೇಖೆಗಳಿಂದ ನಿರ್ಬಂಧಿಸಲ್ಪಟ್ಟದ್ದಲ್ಲ. ಮನುಷ್ಯನಿಗೆ ಯಾವುದೇ ಗಡಿಯ ನಿರ್ಬಂಧವಿಲ್ಲದೆ ತನ್ನ ಆಯ್ಕೆಯ ದೇಶದಲ್ಲಿ ವಾಸಿಸುವ, ಸತ್ತಾಗ ಸಮಾಧಿಯಾಗುವ ಹಕ್ಕು ಇರಬೇಕೆಂದು ಪ್ರತಿಪಾದಿಸಿದವರು ಲೋಹಿಯಾ. ಭಾರತಮಾತೆಯ ಬಗೆಗೆ ಅವರ ಪ್ರೀತಿ ಎಂಬುದು ಇಡೀ ಭೂಮಿಯ ಮೇಲಿನ ಪ್ರೀತಿ ಇಡೀ ಮನುಕುಲದ ಮೇಲಿನ ಪ್ರೀತಿಯೂ ಆಗಿತ್ತು.

ಆದರೆ ಅವರ ವ್ಯಕ್ತಿತ್ವ ಎರಕಗೊಂಡದ್ದು ಇಡೀ ಮನುಕುಲದ ರಕ್ಷಣೆಗಾಗಿ ವಿಷವನ್ನುಂಡ ಶಿವನ ಮಾದರಿಯಲ್ಲಿ. ಪರಿಣಾಮದ ಬಗ್ಗೆ ಚಿಂತಿಸದೆ ಭಸ್ಮಾಸುರನನ್ನು ಸೃಷ್ಟಿಸಿದ, ಹೆಂಡತಿಯ ಹೆಣವನ್ನು ಹೆಗಲಲ್ಲಿ ಹೊತ್ತು ಅಲೆದ, ಮೂರನೆಯ ಕಣ್ಣಿಂದ ಕೆಡುಕನ್ನು ಸುಟ್ಟ, ತಾಂಡವ ನೃತ್ಯದಿಂದ ಭೂಮಿಯನ್ನೇ ನಡುಗಿಸಿದ, ಶೋಷಿತರ, ನಿರ್ಲಕ್ಷಿತರ ಜೊತೆ ತನ್ನನ್ನು ಸಮೀಕರಿಸಿಕೊಂಡ ಶಿವನ ಪರಿ ಲೋಹಿಯಾರಿಗೆ ಆಪ್ತವಾದುದಾಗಿತ್ತು. ಶಿವನಂತೆ ಲೋಹಿಯಾರ ಬದುಕು ಕೂಡ ಒಡೆಯುವ ಮತ್ತು ಕಟ್ಟುವ, ಪ್ರೀತಿ ಮತ್ತು ಸಿಟ್ಟಿನ, ಭೌತವಾದ ಮತ್ತು ಆಧ್ಯಾತ್ಮವಾದ, ಮೂರ್ತತೆ ಮತ್ತು ಅಮೂರ್ತತೆಯ ತತ್ಕಾಲೀನತೆ ಮತ್ತು ಅನಂತತೆಯಂತಹ ವಿಚಿತ್ರ ವೈರುಧ್ಯಗಳ ಸಂಗಮವಾಗಿತ್ತು.

ಪರಸ್ಪರ ವಿರುದ್ಧವಾದ ಎರಡು ಪ್ರಧಾನ ಧಾರೆಗಳ ನಡುವಿನ ಸಂಘರ್ಷವೇ ಭಾರತೀಯ ಜೀವನದ ಪ್ರಧಾನ ಲಕ್ಷಣ. ಇವನ್ನು ಶಿವ ಮತ್ತು ವಿಷ್ಣು ಸಂಸ್ಕೃತಿಗಳೆಂದು ಕರೆಯಬಹುದು. ವಿಷ್ಣು ಸಂಸ್ಕೃತಿಗೆ ಸೇರಿದವರು ಖುಷಿ ಮತ್ತು ಹೆಚ್ಚುತ್ತಿರುವ ಸಂಪತ್ತಿನ

ಆಳುವ ವರ್ಗದ ಶ್ರೀಮಂತರು. ಲಕ್ಷ್ಮಿಯ ಆರಾಧನೆ, ಧನದಾಹ, ಕ್ಷೀರಸಾಗರ ಅಥವಾ ವೈಕುಂಠದಂತಹ ವಿಶೇಷ ವ್ಯವಸ್ಥೆಗಳಿಂದ ಸುಖಪಡುವುದು ಇವರ ಪ್ರಧಾನ ಲಕ್ಷಣ. ತಾನು ಹುಟ್ಟಿದ ಕೆಸರಿನಿಂದ ದೂರಿವಿದ್ದು, ತುಸುವೂ ಕೆಸರನ್ನು ಮುಟ್ಟದಿರುವ ಕಮಲ ಈ ಸಂಸ್ಕೃತಿಯ ಚಿಹ್ನೆ. ಒಂದು ಕೈಯಲ್ಲಿ ತಮ್ಮ ಪ್ರಚಾರ ಸಾಧನವಾದ ಶಂಖವನ್ನು ಮತ್ತೊಂದು ಕೈಯಲ್ಲಿ ಕೊಲ್ಲುವ ಅಸ್ತ್ರವಾದ ಗಧೆಯನ್ನು ಇವರು ಧರಿಸಿರುತ್ತಾರೆ. ಇದಕ್ಕೆ ವಿರುದ್ಧವಾದದ್ದು ಶಿವನ ಮಾದರಿ ಸುಖ ಸಂಪತ್ತಿನಿಂದ ದೂರವಾದ ಬದುಕು. ಮೇಲ್ವರ್ಗದವರಿಗೆ ನಿಷಿದ್ಧವಾದ ಸ್ಮಶಾನ ಶಿವನ ವಾಸಸ್ಥಾನ. ಶಿವಸಂಸ್ಕೃತಿಯೇ ಲೋಹಿಯಾರಿಗೆ ಪ್ರಿಯವಾದದ್ದು. ಅವರ ಬದುಕೂ ಶಿವನ ಶೈಲಿಗೆ ಹತ್ತಿರವಾದದ್ದು.

ಎರಡು ವಿಭಿನ್ನ, ವಿರುದ್ಧ, ನೆಲೆಗಳ ಜೊತೆ ನಿರಾಯಾಸವಾಗಿ ಅನುಸಂಧಾನ ನಡೆಸಬಲ್ಲ ಲೋಹಿಯಾ ಒಬ್ಬ ಅನುಪಮ ಇತಿಹಾಸ ನಿರ್ಮಾತೃ. ಬಡವ–ಶ್ರೀಮಂತ, ಮುಂದಾಳು– ಕಾರ್ಯಕರ್ತ, ಬ್ರಾಹ್ಮಣ–ಶೂದ್ರ, ಸ್ತ್ರೀ–ಪುರುಷ, ಕರಿಯ–ಬಿಳಿಯ ಹೀಗೆ ಎರಡು ವಿಭಿನ್ನ ಸ್ತರ, ನೆಲೆ, ಸೆಳೆತಗಳ ನಡುವೆ ಅವರು ನಿರಾಯಾಸವಾಗಿ ವ್ಯವಹರಿಸಬಲ್ಲವರಾಗಿದ್ದರು. ದೀನ–ದಲಿತ ದುರ್ಬಲರ ಬಗೆಗೆ ಅವರ ಪ್ರೀತಿ ಅಪಾರವಾದದ್ದು. ಕೆಳಗಿನವರನ್ನು ಅವರು ಎಂದೂ ಅಗೌರವದಿಂದ ಕಂಡವರಲ್ಲ. ಆದರೆ ಮೇಲ್ವರ್ಗದವರಿಗೆ, ಅಧಿಕಾರಸ್ಥರಿಗೆ ಚುರುಕು ಮುಟ್ಟಿಸುವಲ್ಲಿ ಅವರು ಹಿಂಜರಿದವರಲ್ಲ.

ರಿಕ್ಷಾವಾಲಾಗಳು ಮಾವುತರು, ಟ್ಯಾಕ್ಸಿ ಡ್ರೈವರ್‌ಗಳಂತಹ ಕೆಳಸ್ತರದ ಶ್ರಮಿಕರ ಜೊತೆ ಸ್ನೇಹ ಬೆಳೆಸುವ ಅವಕಾಶವನ್ನು ಲೋಹಿಯಾ ಅವರು ಎಂದೂ ಕಳೆದುಕೊಳ್ಳುತ್ತಿರಲಿಲ್ಲ. ಮಹಿಳೆಯರ ಬಗ್ಗೆ ಲೋಹಿಯಾರಷ್ಟು ಅಪಾರವಾದ ಗೌರವ ಹೊಂದಿದ್ದ ಮತ್ತೊಬ್ಬ ರಾಜಕಾರಣಿಯನ್ನು ಭಾರತದಲ್ಲಿ ನಾವು ಕಾಣಲಾರೆವು. ಅವರ ದೃಷ್ಟಿಯಲ್ಲಿ ಎಲ್ಲ ಮಹಿಳೆಯರೂ ಸುಂದರಿಯರೇ! ಮನೆಯವರಿಗೆಲ್ಲ ಬಡಿಸಿ ಮಿಕ್ಕದ್ದನ್ನು ಮಹಿಳೆ ಉಣ್ಣಬೇಕೆಂಬ ಭಾರತದ ಸಂಪ್ರದಾಯವನ್ನು ಅವರು ದ್ವೇಷಿಸುತ್ತಿದ್ದರು. ತಾವು ಅತಿಥಿಯಾಗಿ ಉಳಿದ ಬಡವರ ಮನೆಯಲ್ಲಿ ಸ್ತ್ರೀಯರೂ ತಮ್ಮೊಂದಿಗೇ ಉಣ್ಣಲು ಕುಳಿತುಕೊಳ್ಳುಂತೆ ಮಾಡಿ, ಇನ್ನು ಎಷ್ಟು ಅಡುಗೆ ಮಿಕ್ಕಿದೆ, ಎಲ್ಲರಿಗೂ ಅದು ಸಾಲುತ್ತದೆಯೇ ಎಂಬುದನ್ನು ಪರೀಕ್ಷಿಸುತ್ತಿದ್ದರು.

ಮಹಿಳೆಯರನ್ನು ಬುರ್ಖಾದೊಂದಿಗೆ ಬಂಧಿಸುವುದನ್ನು ಲೋಹಿಯಾ ಇಷ್ಟಪಡುತ್ತಿರಲಿಲ್ಲ. ಮಹಿಳೆಯರು ಶಿಷ್ಟಾಚಾರದ ಹೆಸರಿನಲ್ಲಿ ಪುರುಷರಿಂದ ದೂರವೇ ಇರುವುದೂ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಮಕ್ಕಳೊಡನೆ ಆಡುವುದನ್ನು ಬಹಳವಾಗಿ ಇಷ್ಟಪಡುತ್ತಿದ್ದ ಲೋಹಿಯಾ, ಮಕ್ಕಳಿಂದಲೂ ಕಲಿಯುವುದು ಇರುತ್ತದೆ ಎಂದು ನಂಬುತ್ತಿದ್ದರು. ಒಮ್ಮೆ ಚಂಪಾ ಲಿಮಯೆ ಅವರ ಮಗ ಅನಿರುದ್ಧನ ಜೊತೆ ಸೇರಿ ಅವರು ಗಾಳಿಪಟ ಹಾರಿಸುತ್ತಿದ್ದಾಗ ಅವನು ಹೇಳಿದನಂತೆ, ಮಂತ್ರಿಗಳ ಹಾಗೆ

ಪಾರ್ಲಿಮೆಂಟ್ ಮತ್ತು ವಿಧಾನ ಸಭೆಗಳ ಸ್ಪೀಕರ್‌ಗಳೂ ಸಹ ರಾಗ-ದ್ವೇಷಗಳಿಲ್ಲದೆ ನಿಷ್ಪಕ್ಷಪಾತಿಯಾಗಿ ವರ್ತಿಸುವುದಾಗಿ ಪ್ರಮಾಣ ವಚನ ಸ್ವೀಕರಿಸಬೇಕಲ್ಲವೇ? ಎಂದು. ಈ ಬಾಲಕನಿಂದ ಪ್ರೇರಣೆ ಪಡೆದು ಲೋಹಿಯಾ ಅವರು ಈ ವಿಚಾರವನ್ನು ಪಾರ್ಲಿಮೆಂಟ್‌ನಲ್ಲಿ ಪ್ರಸ್ತಾಪಿಸಿದ್ದರು.

ರಾಜಕೀಯ ಭಿನ್ನಾಭಿಪ್ರಾಯವನ್ನು ಲೋಹಿಯಾ ಅವರು ವೈಯಕ್ತಿಕ ಸ್ನೇಹದೊಂದಿಗೆ ಬೆರೆಸುತ್ತಿರಲಿಲ್ಲ. ಒಮ್ಮೆ ಅವರ ಕಮ್ಯೂನಿಸ್ಟ್ ಗೆಳೆಯ ಎ.ಕೆ. ಗೋಪಾಲನ್ ಜೈಲಿನಲ್ಲಿದ್ದಾಗ ಅವರನ್ನು ಭೇಟಿಯಾಗಲು ಹೋದ ಲೋಹಿಯಾರನ್ನು ಪಿ.ಎನ್. ಲೇಖಿ ಮತ್ತು ರೋಮಾ ಮಿತ್ರಾ ಅವರುಗಳು ಕೇಳಿದರಂತೆ, 'ನೀವು ಎಂದಾದರೂ ಜೈಲಿನಲ್ಲಿರುವಂತಾಗಿ, ಆ ಸಂದರ್ಭದಲ್ಲಿ ಕಮ್ಯೂನಿಸ್ಟರು ಅಧಿಕಾರದಲ್ಲಿದ್ದರೆ ಇದೇ ಗೋಪಾಲನ್ ನಿಮ್ಮನ್ನು ಭೇಟಿಯಾಗಲು ಅವರ ಪಕ್ಷದವರು ಅನುಮತಿಸಲಾರರಲ್ಲವೇ?' ಎಂದು. ಅದಕ್ಕೆ, 'ನಾನಿಂದು ಹೋಗುತ್ತಿರುವುದು ನನ್ನ ಮಿತ್ರ ಗೋಪಾಲರನ್ನು ಭೇಟಿಯಾಗಲು. ನೀವು ಹೇಳಿದಂತಹ ಸಂದರ್ಭದಲ್ಲಿ ಅವರು ಬರದಿದ್ದರೆ ನನಗೆ ಬೇಸರವಿಲ್ಲ.' ಎಂಬುದು ಲೋಹಿಯಾ ನೀಡಿದ ಉತ್ತರವಾಗಿತ್ತು.

ಬಡವರು ಅನ್ಯಾಯಕ್ಕೆ ಒಳಗಾದಾಗ ಲೋಹಿಯಾ ಅವರಿಗೆ ಅಪಾರವಾದ ಸಿಟ್ಟು ಬರುತ್ತಿತ್ತು. ಅನ್ಯಾಯವನ್ನು ಸರಿಪಡಿಸಲು ಅವರು ಹೋರಾಡುತ್ತಿದ್ದರು. ಒಮ್ಮೆ ನೆಹರೂ ಅವರು ನಾಗಪುರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಬಾಬುರಾವ್ ಕೋಚತಿ ಎಂಬ ಬಡವನೊಬ್ಬ ನೆಹರೂ ಅವರ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದನೆಂಬ ಆರೋಪ ಹೊರಿಸಿ ಅವನನ್ನು ಮೂರು ವರ್ಷ ಜೈಲು ಶಿಕ್ಷೆಗೆ ಒಳಪಡಿಸಲಾಗುತ್ತದೆ. ವೈ.ಬಿ. ಚೌಹಾಣ್ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಕಾಲವದು. ಲೋಹಿಯಾ ಕೋಚತಿಯನ್ನು ಜೈಲಿನಲ್ಲಿ ಭೇಟಿಯಾಗುತ್ತಾರೆ. ಅವನು ಅಪರಾಧಿಯಲ್ಲ ಎಂಬುದನ್ನು ಮನಗಂಡು ನೆಹರೂ, ವಿನೋಬಾರಂಥ ನಾಯಕರಿಗೆ ಪತ್ರ ಬರೆದು, ಪ್ರಕರಣವನ್ನು ಎಡೆಬಿಡದೆ ಗಮನಿಸುತ್ತಾ ಒಂದು ವರ್ಷದಲ್ಲೇ ಕೋಚತಿಯ ಬಿಡುಗಡೆ ಆಗುವಂತೆ ನೋಡಿಕೊಳ್ಳುತ್ತಾರೆ. ಬಡವರ ಬಗ್ಗೆ ಈ ಮಟ್ಟದ ಕಾಳಜಿಯಿದ್ದ ಮತ್ತೊಬ್ಬ ಭಾರತೀಯ ರಾಜಕಾರಣಿ ಇಲ್ಲವೇನೋ.

ಲೋಹಿಯಾ ಬಡವರ ಪರವಾಗಿ ನಿಂತು, ಸರ್ಕಾರವನ್ನು ಅಧಿಕಾರಿಗಳನ್ನು, ಸಮಾಜದ ಪ್ರತಿಷ್ಠಿತರನ್ನು, ಶ್ರೀಮಂತರನ್ನು ಎದುರಿಸಿದ ಹಲವಾರು ಪ್ರಸಂಗಗಳನ್ನು ಉದಾಹರಿಸಬಹುದು. ತಾರಕೇಶ್ವರಿಯರು ಲೊಹಿಯಾ ಅವರ ಬಗೆಗಿನ ನೆನಪುಗಳನ್ನು ದಾಖಲಿಸುತ್ತ ಒಂದು ಪ್ರಸಂಗವನ್ನು ಪ್ರಸ್ತಾಪಿಸುತ್ತಾರೆ. 'ನಾವೊಮ್ಮೆ ಕಾಫಿಹೌಸಿಗೆ ಹೋಗಿದ್ದೆವು. ಕಾಫಿಯ ಜೊತೆ ತಿನ್ನುವುದಕ್ಕೆ ಏನಾದರೂ ತರುವಂತೆ ಲೋಹಿಯಾ ಹೇಳಿದರು. ಲೋಹಿಯಾ ಅವರ ಟೇಬಲ್ ಸುತ್ತ ನೆರೆದವರನ್ನು ಕಂಡು ಯಾರೋ 'ಲೋಹಿಯಾ ಅವರು ಇಲ್ಲದಿದ್ದಾಗ ಕಾಫಿಹೌಸಿಗೆ ಕಳೆಯೇ ಇರುವುದಿಲ್ಲ ಎನ್ನುತ್ತಿದ್ದರು'. ವೈಟರ್ ೪೩ ರೂಪಾಯಿ ಬಿಲ್ ತಂದಿಟ್ಟಾಗ ಲೋಹಿಯಾ ತಮ್ಮ ಜೇಬಿನಲ್ಲಿ

ಇದ್ದದ್ದನ್ನೆಲ್ಲ ಟೇಬಲ್ ಮೇಲೆ ಸುರಿದರು. ಅಲ್ಲಿದ್ದದ್ದು ಬರಿ ೭ ರೂಪಾಯಿ ಮಾತ್ರ. ಟೇಬಲ್ ಸುತ್ತ ನೆರೆದಿದ್ದವರಿಂದ ಮಿಕ್ಕ ಹಣವನ್ನು ಸಂಗ್ರಹಿಸಿದಾಗ ವೈಟರ್ ಸಹ ತನ್ನ ಪಾಲಿನ ವಂತಿಗೆ ಕೊಡಲು ಮುಂದಾದ. ಲೋಹಿಯಾ ಅವರು 'ಬೇಡಪ್ಪ, ನೀನು ಕೊಡಬಾರದು' ಎಂದು ಅವನನ್ನು ತಡೆದರು'. ಹೋಟೆಲ್‌ನ ಸರ್ವರ್ ಕೂಡ ಲೋಹಿಯಾ ಅವರ ಪಾಲಿನ ಮಿತ್ರನೇ ಆಗಿರುತ್ತಿದ್ದ.

ಇಂಥದೇ ಮತ್ತೊಂದು ಸಂದರ್ಭ, ಲೋಹಿಯಾ ಅವರು ತಮ್ಮ ಅನುಯಾಯಿಗಳೊಂದಿಗೆ ರಸ್ತೆ ಬದಿಯ ಹೋಟೆಲೊಂದಕ್ಕೆ ಊಟಕ್ಕಾಗಿ ಹೋಗುತ್ತಾರೆ. ಅದುವರೆಗೂ ತಮ್ಮ ಜೊತೆಯಿದ್ದ ಮಾವುತನೊಬ್ಬ ಊಟದ ಸಮಯದಲ್ಲಿ ಅಲ್ಲಿ ಇರದಿದ್ದನ್ನು ಗಮನಿಸಿ ಆ ಮಾವುತನನ್ನು ಕರೆತಂದು ತಮ್ಮ ಜೊತೆ ಕೂರಿಸುವವರೆಗೆ ತಾವು ಊಟ ಮಾಡುವುದಿಲ್ಲವೆಂದು ಪ್ರತಿಭಟಿಸಿ ಆತನನ್ನು ತಮ್ಮೊಡನೆ ಕೂರಿಸಿಕೊಳ್ಳುತ್ತಾರೆ.

ಟ್ಯಾಕ್ಸಿ ಡ್ರೈವರನೊಬ್ಬನ ಪರವಾಗಿ ಪಾರ್ಲಿಮೆಂಟಿನಲ್ಲಿ ಲೋಹಿಯಾ ಅವರು ದನಿಯೆತ್ತಿದ ಮತ್ತೊಂದು ಸಂದರ್ಭ ಹೀಗಿದೆ. ಸಿಖ್ ಡ್ರೈವರನೊಬ್ಬ ನಡೆಸುತ್ತಿದ್ದ ಟ್ಯಾಕ್ಸಿಯೊಂದರಲ್ಲಿ ಲೋಹಿಯಾ ಅವರು ಒಮ್ಮೆ ಪ್ರಯಾಣಿಸುತಿದ್ದರು. ಪ್ರಾಸಂಗಿಕವಾಗಿ ಇಂದಿರಾ ಗಾಂಧಿಯವರು ಅದೇ ರಸ್ತೆಯಲ್ಲಿ ಹಾದುಹೋಗುವವರಿದ್ದು, ಲೋಹಿಯಾ ಅವರ ಟ್ಯಾಕ್ಸಿ ತಡೆದು, ಇಂದಿರಾ ಅವರ ಕ್ಯಾರವಾನ್ ಚಲಿಸಲು ಅನುವು ಮಾಡಿಕೊಡುವಂತೆ ಭದ್ರತಾ ಸಿಬ್ಬಂದಿ ಒತ್ತಾಯಿಸಿದಾಗ ಸಿಟ್ಟಿಗೆದ್ದ ಲೋಹಿಯಾ ಅವರು ಟ್ಯಾಕ್ಸಿಯನ್ನು ನಿಲ್ಲಿಸಬಾರದೆಂದು ಡ್ರೈವರ್‌ನಿಗೆ ಹೇಳಿ ಧೈರ್ಯ ತುಂಬುತ್ತಾರೆ. ಅವರ ಮಾತಿನಂತೆ ಟ್ಯಾಕ್ಸಿಯನ್ನು ನಿಲ್ಲಿಸದೆ ಮುಂದೆ ಹೋದ ಡ್ರೈವರ್‌ನನ್ನು ಬಂಧಿಸಿ ಸೆರೆಮನೆಗೆ ಕಳಿಸಿದಾಗ ಲೋಹಿಯಾ ಪಾರ್ಲಿಮೆಂಟಿನಲ್ಲಿ ಇದನ್ನು ಪ್ರಸ್ತಾಪಿಸಿ, ಅತಿಮುಖ್ಯ ವ್ಯಕ್ತಿಗಳ ಈ ಸಂಚಾರ ನೀತಿ ಸಂಹಿತೆಯನ್ನು ಖಂಡಿಸುತ್ತಾ ಆತನ ಬಿಡುಗಡೆ ಮಾಡಿಸುತ್ತಾರೆ. ಆಗ ತಮಗೆ ಧನ್ಯವಾದಗಳನ್ನು ಹೇಳಲು ಬಂದ ಟ್ಯಾಕ್ಸಿಯವನಿಗೆ, 'ಅಸಂಬದ್ಧವಾಗಿ ಮಾತನಾಡಬೇಡ, ನಾನು ನನ್ನ ಕರ್ತವ್ಯವನ್ನಷ್ಟೇ ನಿರ್ವಹಿಸಿದ್ದೇನೆ' ಎಂದು ಹೇಳಿ ಕಳುಹಿಸುತ್ತಾರೆ.

ಯಾರಿಗೂ ನೋವುಂಟುಮಾಡದ ಲೋಹಿಯಾ ಅವರ ಪ್ರಾಂಜಲ ಮನಸ್ಸಿನ ಹಲವಾರು ಹಾಸ್ಯ ಪ್ರಸಂಗಗಳನ್ನು ಉದಾಹರಿಸಬಹುದು. ವಿಜಯಲಕ್ಷ್ಮಿ ಪಂಡಿತ್‌ರ ಬಗೆಗಿನ ಅಂಥದೊಂದು ಪ್ರಸಂಗ ಹೀಗಿದೆ. ಒಮ್ಮೆ ವಿಜಯಲಕ್ಷ್ಮಿ ಪಂಡಿತ್‌ರವರು ಕಾಂಗ್ರೆಸ್ ಸರ್ಕಾರವನ್ನು ಟೀಕಿಸಿ ಪಾರ್ಲಿಮೆಂಟಿನಲ್ಲಿ ಬಹಳ ಚೆನ್ನಾಗಿ ಮಾತನಾಡುತ್ತಾರೆ. ಭಾಷಣವನ್ನು ಮೆಚ್ಚಿ ಲೋಹಿಯಾ ಅವರು ವಿಜಯಲಕ್ಷ್ಮಿಯವರನ್ನು ಕುರಿತು, 'ನೀವು ಟ್ರೆಷರಿ ಬೆಂಚಿನಲ್ಲೇಕೆ ಕೂರುತ್ತೀರಿ, ಇಲ್ಲಿ ವಿರೋಧ ಪಕ್ಷದವರ ಜೊತೆ ಕೂರುವುದೇ ಉತ್ತಮ' ಎನ್ನುತ್ತಾರೆ. ಆಗ ವಿಜಯಲಕ್ಷ್ಮಿ ಅವರು 'ಬೇಡಪ್ಪ, ಅಲ್ಲಿ ಜಂಗ್ಲಿಗಳ ಜೊತೆ ಕೂರುತ್ತಾರೆ' ಎಂದು ತಮಾಷೆಯಾಗಿ ಕಟಕಿಯಾಡುತ್ತಾರೆ. ಆಗ ಲೋಹಿಯಾ ಅವರು ನೀಡುವ ಉತ್ತರವು ಸ್ವಾರಸ್ಯಕರ. 'ಮೇಡಮ್, ಜಂಗ್ಲಿಗಳ ಬಗ್ಗೆ

ಹೆದರಿಕೆ ಬೇಡ. ಸೀತಾದೇವಿ ಸಹ ಜಂಗ್ಲಿಗಳ ಜೊತೆ ವನವಾಸದಲ್ಲಿ ಕಾಲ ಕಳೆದಿದ್ದರು' ಎಂದು ಉತ್ತರಿಸುತ್ತಾರೆ.

ಲೋಹಿಯಾರ ಗೆಳೆಯನಾಗಿದ್ದ ಓರ್ವ ಪೈಲ್ವಾನ್ ಅವರಿಗೊಮ್ಮೆ ಹೀಗೆ ಹೇಳಿದ: 'ಡಾಕ್ಟರ್ ಸಾಬ್, ಒಂದು ವಿಷಯದ ಹೊರತಾಗಿ ನಿಮ್ಮ ಎಲ್ಲ ಗುಣಗಳನ್ನೂ ನಾನು ಮೆಚ್ಚುತ್ತೇನೆ. ನಿಮಗೆ ದೇವರಲ್ಲಿ ನಂಬಿಕೆಯಿಲ್ಲವೇಕೆ? ಈಗ ಪರವಾ ಇಲ್ಲ. ವಯಸ್ಸಾದಾಗ ನಂಬಿಕೆ ಬರುತ್ತದೆ ಬಿಡಿ.' ಅದಕ್ಕೆ ಲೋಹಿಯಾ 'ಮುದಿತನದಲ್ಲಷ್ಟೇ ಕಾಡುವ ನಿನ್ನ ದೇವರು ನನಗೆ ಬೇಡ ಬಿಡು.' ಎಂದು ಉತ್ತರಿಸಿದರು!

ನ್ಯಾಯಾಲಯದಲ್ಲಿ ಒಂದು ಮೊಕದ್ದಮೆಯ ಸ್ವಾರಸ್ಯಕರ ಪ್ರಸಂಗ ಹೀಗಿದೆ. ಲಾರ್ಡ್ ಕರ್ಜನ್‌ನ ಪ್ರತಿಮೆಯನ್ನು ಬೀಳಿಸಿದ್ದಕ್ಕಾಗಿ ಸ್ನಾಹ್ ಗೋರಖ್‌ಪುರಿಯವರನ್ನು ಜೈಲಿನಲ್ಲಿರಿಸಲಾಗುತ್ತದೆ. ನ್ಯಾಯಾಲಯದಲ್ಲಿ ಯಾವ ಕಾರಣಕ್ಕೂ ಸುಳ್ಳು ಹೇಳಿಕೆ ನೀಡಬಾರದೆಂಬ ಲೋಹಿಯಾ ಅವರ ಸೂಚನೆಯ ಮೇರೆಗೆ ಲೇಖಿಯವರು ಪ್ರತಿಮೆಯನ್ನು ಮುರಿದದ್ದು ನಿಜ ಎಂಬ ಹೇಳಿಕೆಯನ್ನೇ ನ್ಯಾಯಾಲಯಕ್ಕೆ ಸಲ್ಲಿಸುತ್ತಾರೆ. ಆದರೆ ಪ್ರತಿಮೆಯು ಯಾರಿಗೂ ಸೇರಿದ್ದಲ್ಲ ಎಂದು ವಾದಿಸುತ್ತಾರೆ. ಪ್ರತಿಮೆಯ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರದ ಗೆಜೆಟಿಯರ್‌ನಲ್ಲಾಗಲೀ ಅಥವಾ ನಗರ ಪಾಲಿಕೆಯ ಕಡತಗಳಲ್ಲಾಗಲೀ ಯಾವುದೇ ಉಲ್ಲೇಖವಿಲ್ಲದ್ದರಿಂದ ಅದು ಯಾರಿಗೂ ಸೇರಿದ್ದಲ್ಲ. ರಸ್ತೆ ಪಕ್ಕದಲ್ಲಿ ಬಿದ್ದಿರುವ ಒಂದು ಕಲ್ಲಿಗೆ ಸಮಾನವಾದ ಅದನ್ನು ಒದ್ದರೆ ಅಥವಾ ಅದನ್ನು ಮುರಿದರೆ ಅಪರಾಧವಾಗುವುದಿಲ್ಲ ಎಂದು ವಾದಿಸುತ್ತಾರೆ. ಈ ಸಂದರ್ಭದಲ್ಲಿ ಸರ್ಕಾರ ಒಂದು ಪ್ರಕಟಣೆ ಹೊರಡಿಸುತ್ತದೆ. ಆದರೆ ನ್ಯಾಯಾಲಯ ಇದನ್ನು ಒಪ್ಪುವುದಿಲ್ಲ. ಸ್ನಾಹ್ ಗೋರಖ್‌ಪುರಿಯವರನ್ನು ಬಿಡುಗಡೆಗೊಳಿಸಲಾಗುತ್ತದೆ.

ಲೋಹಿಯಾರ ಬದುಕಿನ ಈ ಬಗೆಯ ಎಷ್ಟೋ ಪ್ರಸಂಗಗಳನ್ನು ನಾವು ಪ್ರಸ್ತಾಪಿಸಬಹುದು. ಬಡವರ ಜೊತೆ ಅವರಿಗೆ ನೇರವಾದ ಸಂಪರ್ಕವಿರುತ್ತಿತ್ತು. ಅವರು ಗುಡಿಸಲುಗಳಿಗೆ ಭೇಟಿ ನೀಡುತ್ತಿದ್ದರು. ಮುರುಕು ಮಂಚದ ಮೇಲೆ ಕೂರುತ್ತಿದ್ದರು, ಬಡವರ ಕಷ್ಟಗಳನ್ನು ಕೇಳುತ್ತಿದ್ದರು, ಅವರ ಹರಕು ಬಟ್ಟೆ ಮುರುಕು ವಸ್ತುಗಳನ್ನು ನೇರವಾಗಿ ನೋಡಿ ತಿಳಿದದ್ದರಿಂದ ಪಾರ್ಲಿಮೆಂಟಿನಲ್ಲಿ ಅವರು ಬಡವರ ಪರವಾಗಿ ಯುದ್ಧಸಾರಲು ಸಾಧ್ಯವಾಗುತ್ತಿತ್ತು.

ಲೋಹಿಯಾರ ಅಯಸ್ಕಾಂತೀಯ ವ್ಯಕ್ತಿತ್ವದಿಂದ ಆಕರ್ಷಿತರಾಗಿ ಅವರ ಸಂಪರ್ಕಕ್ಕೆ ಬಂದವರಲ್ಲಿ ಪಂಡಿತರು, ಲೇಖಕರು, ಕಲಾವಿದರು, ರಾಜಕಾರಣಿಗಳು, ನ್ಯಾಯವಾದಿಗಳು, ನ್ಯಾಯಾಧೀಶರು ಹೀಗೆ ಎಷ್ಟೋ ಮಂದಿ ವಿವಿಧ ಹಿನ್ನಲೆಯಿಂದ ಬಂದವರಿದ್ದರು. ಇವರೆಲ್ಲರೂ ಲೋಹಿಯಾರ ವ್ಯಕ್ತಿತ್ವವನ್ನು ಬೇರೆ-ಬೇರೆ ದೃಷ್ಟಿಯಿಂದ ನೋಡಿ ಅರ್ಥೈಸುತ್ತಿದ್ದರು. ಕೆಲವರ ದೃಷ್ಟಿಯಲ್ಲಿ ಅವರೊಬ್ಬ ಮಹಾನ್ ಚಿಂತಕರಾಗಿದ್ದರೆ, ಮತ್ತೆ ಕೆಲವರಿಗೆ ಅವರು ಅನುಕಂಪದ ಮೂರ್ತಿಯಾಗಿ ಕಾಣುತ್ತಿದ್ದರು. ಮಹಾನ್

ಕಲಾವಿದ ಎಂ.ಎಫ್. ಹುಸೇನ್ ತಾವು ಲೋಹಿಯಾ ಅವರ ಭಾಷೆಯನ್ನು ಕೇಳಿ ಮೂಕವಿಸ್ಮಿತನಾದೆ ಎಂದಿದ್ದಾರೆ. ಶಿವಪ್ರಸಾದ್ ಚಾಂದ್‌ಪೂರಿಯಾ ಅವರ ದೃಷ್ಟಿಯಲ್ಲಿ ಒಂದು ವಿಚಾರವನ್ನು ಲೋಹಿಯಾ ಅವರಷ್ಟು ಕಲಾತ್ಮಕವಾಗಿ ಪ್ರಸ್ತುತಪಡಿಸುವ ರಾಜಕಾರಣಿ ಮತ್ತೊಬ್ಬರಿಲ್ಲ. ರಾಜಕಾರಣವೆಂಬುದು ನಿತ್ಯ ಕಸ ಗುಡಿಸುವ ಕೆಲಸ. ಅಲ್ಲಿ ಸತ್ಯಾಗ್ರಹ ಎಂಬುದು ಇಲ್ಲದೇ ಹೋದರೆ ನೆಲದ ಮೇಲೆ ಕಸ ರಾಶಿಯಾಗಿ ಬಿಡುತ್ತದೆ ಎಂಬುದಾಗಿ ಲೋಹಿಯಾ ಹೇಳುತ್ತಿದ್ದದನ್ನು ಅವರು ಸ್ಮರಿಸುತ್ತಾರೆ.

ಯುವ ಜನಾಂಗದಲ್ಲಿ ಲೋಹಿಯಾ ಅವರಿಗೆ ಅಪಾರವಾದ ವಿಶ್ವಾಸವಿತ್ತು. ಪಿ.ಎಸ್.ಪಿಯನ್ನು ತೊರೆದು ಅವರು ಸೋಷಲಿಸ್ಟ್ ಪಕ್ಷವನ್ನು ಕಟ್ಟಿದಾಗ ಅವರೊಂದಿಗೆ ಯಾವ ಹಿರಿಯ ನಾಯಕರೂ ಇರಲಿಲ್ಲ. ಹೊಸ ಸೋಷಲಿಸ್ಟ್ ಪಾರ್ಟಿಯ ಬಹಳಷ್ಟು ನಾಯಕರು ಯುವಜನ ಸಭಾದ ಕಾರ್ಯಕ್ರಮಗಳಲ್ಲಿ ಲೋಹಿಯಾ ಹಾಜರಿದ್ದು ಯುವಕರ ಚಟುವಟಿಕೆಯನ್ನು ಗಮನಿಸಿ ಅವರನ್ನು ವಿಮರ್ಶಿಸಿ, ಪ್ರೋತ್ಸಾಹಿಸಿ, ನಾಯಕತ್ವದ ಗುಣಗಳನ್ನು ಬೆಳೆಸುತ್ತಿದ್ದರು.

ದೊಡ್ಡ ಪಕ್ಷವೊಂದನ್ನು ಸಂಘಟಿಸಿ ನಡೆಸುವಷ್ಟು ಭಾರೀ ಹಣ ಲೋಹಿಯಾ ಅವರ ಬಳಿ ಎಂದೂ ಇರಲಿಲ್ಲ. ಅವರ ವೈಯಕ್ತಿಕ ಅಗತ್ಯಗಳು ತೀರಾ ಕಡಿಮೆ. ರೈಲಿನ ಯಾವ ವರ್ಗದಲ್ಲಾದರೂ ಅವರು ಪ್ರಯಾಣಿಸಬಲ್ಲವರಾಗಿದ್ದರು. ಕಾರ್ಯಕರ್ತರ ಸೈಕಲ್‌ನ ಹಿಂದಿನ ಕ್ಯಾರಿಯರ್‌ನಲ್ಲಿ ಕುಳಿತು ಪ್ರಯಾಣಿಸಿದ್ದು ಉಂಟು. ೧೯೬೩ರಲ್ಲಿ ಪ್ರಥಮ ಬಾರಿಗೆ ಲೋಕಸಭೆಗೆ ಆಯ್ಕೆಯಾದಾಗ ಲೋಹಿಯಾ ಅವರ ಬಳಿಯಿದ್ದದ್ದು ಬರೀ ಎರಡು ಜೊತೆ ಬಟ್ಟೆ ಮಾತ್ರ. ತಮ್ಮ ಜೀವಮಾನದಲ್ಲಿ ಎಂದೂ ಅವರು ಸೈಕಲ್ ರಿಕ್ಷಾ ಹತ್ತಲಿಲ್ಲ. ಅವರ ದೃಷ್ಟಿಯಲ್ಲಿ ರಿಕ್ಷಾ ಎಳೆಯುವವನದ್ದು ಪ್ರಾಣಿಯ ಸ್ಥಿತಿ. ಅದು ಭಾರತದ ಗುಲಾಮಗಿರಿಯ ರೂಪಕವಿದ್ದಂತೆ. ಹಾಗಾಗಿ ಎಂದೂ ತಾವು ಸೈಕಲ್ ರಿಕ್ಷಾದಲ್ಲಿ ಪ್ರಯಾಣಿಸುವುದಿಲ್ಲ ಎಂದು ಅವರು ಚಿಕ್ಕ ವಯಸ್ಸಿನಲ್ಲಿಯೇ ಪ್ರತಿಜ್ಞೆ ಮಾಡಿದ್ದರಂತೆ.

ಲೋಹಿಯಾರಂಥ ಜನಪರ ನಾಯಕರೊಬ್ಬರಿಗೆ ಕನಿಷ್ಠ ಅಗತ್ಯಗಳನ್ನೂ ಪೂರೈಸಲಾಗದಂತಹ ಹೀನಸ್ಥಿತಿ ನಮ್ಮ ದೇಶದ ಸಾರ್ವಜನಿಕ ಜೀವನದ ದುರಂತಮಯ ಪ್ರತಿಬಿಂಬ. ಕೊನೆಯವರೆಗೂ ಲೋಹಿಯಾ ಅವರ ಸಹಾಯಕ್ಕೆ ಒಬ್ಬ ಸುಶಿಕ್ಷಿತ ಕಾರ್ಯದರ್ಶಿ ಇರಲಿಲ್ಲ ಎಂದು ಡಾ॥ ಕೆ.ಎಸ್. ಕಾರಂತರು ಬರೆಯುತ್ತಾರೆ. ಬಡತನದ ವೈಭವೀಕರಣವನ್ನು ಸಹ ಲೋಹಿಯಾ ಸಹಿಸುತ್ತಿರಲಿಲ್ಲ. ಹಿತಮಿತವಾದ ಸಭ್ಯ ಜೀವನಶೈಲಿಯನ್ನು ಪ್ರತಿಪಾದಿಸುತ್ತಿದ್ದ ಅವರು ವೈಭವದ ಜೀವನ ಶೈಲಿಯನ್ನು ಖಂಡಿಸುತ್ತಿದ್ದರು. ಭಾರತದಂತಹ ಬಡದೇಶದಲ್ಲಿ ಶ್ರೀಮಂತಿಕೆಯ ಪ್ರದರ್ಶನ ಅಮಾನವೀಯ ಎಂಬುದು ಅವರ ನಂಬಿಕೆಯಾಗಿತ್ತು.

ಚುನಾವಣೆಯಲ್ಲಿ ಸ್ಪರ್ಧಿಸುವುದು, ಇತರರು ಸ್ಪರ್ಧಿಸುವಂತೆ ಪ್ರೇರೇಪಿಸುವುದು ಒಂದು ಪವಿತ್ರ ಕೆಲಸವೆಂದು ಲೋಹಿಯಾ ಭಾವಿಸಿದ್ದರು. ಗೆಲುವು ಸೋಲು ಮುಖ್ಯವಲ್ಲ, ಅದು ನಿಮ್ಮನ್ನು ಗಟ್ಟಿಗೊಳಿಸುತ್ತದೆ. ಆತ್ಮವಿಶ್ವಾಸ ಹೆಚ್ಚಿಸುತ್ತದೆ. ಜನರೊಡನೆ ಸಂಪರ್ಕ ಕಲ್ಪಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ ಎನ್ನುತ್ತಿದ್ದರು. ಸ್ವತಃ ಲೋಹಿಯಾ ನೆಹರೂ ವಿರುದ್ಧ ಫೂಲ್‌ಪುರ್ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಪತ್ರಿಕೆಗಳ ಅಪಹಾಸ್ಯಕ್ಕೆ ಅವರು ಸೊಪ್ಪು ಹಾಕಲಿಲ್ಲ. ಗ್ವಾಲಿಯರ್ ರಾಣಿಯ ವಿರುದ್ಧ ಸುಖೋರಾಣಿ ಎಂಬ ಕಸಗುಡಿಸುವ ಮಹಿಳೆಯನ್ನು ಚುನಾವಣೆಗೆ ನಿಲ್ಲಿಸಿದ್ದರು. ಸುಖೋರಾಣಿ ಸೋತಾಗ ನೀವು ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಪಕ್ಷದ ಕಾರ್ಯಕರ್ತರನ್ನು ವಿಶೇಷವಾಗಿ ಮಧ್ಯಪ್ರದೇಶದ ಸೋಷಲಿಸ್ಟ್ ಪಾರ್ಟಿಯ ಅಧ್ಯಕ್ಷ ಪ್ರಸಾದ್ ಮಿಲಿಂದ್‌ರನ್ನು ತರಾಟೆಗೆ ತೆಗೆದುಕೊಂಡರು. ಕನ್ಹಯ್ಯಲಾಲ್ ದೂಂಗರ್‌ವಾಲ್ ಎಂಬ ೨೫ ವರ್ಷದ ಯುವಕನನ್ನು ಗೃಹಮಂತ್ರಿ ಕೈಲಾಸನಾಥ ಕಟ್ಟು ವಿರುದ್ಧ ಚುನಾವಣೆಗೆ ನಿಲ್ಲಿಸಿದರು. ನಂತರದಲ್ಲಿ ದೂಂಗರ್‌ವಾಲ್ ಮಧ್ಯಪ್ರದೇಶದ ಒಬ್ಬ ಸಮರ್ಥ ಸೋಷಲಿಸ್ಟ್ ನಾಯಕರಾದರು.

ಲೋಹಿಯಾ ರಾಜಕೀಯ ನಿಷ್ಕ್ರಿಯತೆ, ಅಪ್ರಾಮಾಣಿಕತೆ ಮತ್ತು ತತ್ವದ್ರೋಹಗಳನ್ನು ಎಂದೂ ಸಹಿಸುತ್ತಿರಲಿಲ್ಲ. ಅದು ತಮ್ಮ ಆಪ್ತರಿಂದಲೇ ನಡೆದಾಗಲೂ. ಕರ್ಪೂರಿ ಠಾಕೂರ್ ಬಿಹಾರದ ಮುಖ್ಯಮಂತ್ರಿಯಾಗಿ ಸಮಾಜವಾದಿ ಕೆಲಸಗಳನ್ನು ಮಾಡದೆ ಕಾಲ ಕಳೆಯುತ್ತಿದ್ದಾಗ ಅವರು ತಮ್ಮನ್ನು ಭೇಟಿ ಮಾಡಲು ಬಂದಾಗಲೂ ಅವರನ್ನು ಒಳಗೆ ಬರಲು ಹೇಳುತ್ತಿರಲಿಲ್ಲ. 'ಅವರು ತಮ್ಮ ಕೆಲಸ ತಾವು ಮಾಡಿಕೊಂಡಿರಲಿ ಬಿಡಿ' ಎನ್ನುತ್ತಾ ಹೊರಗೇ ಚಹಾ ಕೊಡಿಸಿ ಕಳಿಸುತ್ತಿದ್ದರು. ಠಾಕೂರ್ ಕಂದಾಯ ರದ್ದತಿಯಂತಹ ಕೆಲಸ ಶುರುಮಾಡಿ ಬಂದಾಗ, 'ಬನ್ನಿ ನೇತಾಜಿ, ಕುಳಿತುಕೊಳ್ಳಿ' ಎಂದು ಸ್ವಾಗತಿಸಿ ಆರು ತಿಂಗಳ ಬಹಿಷ್ಕಾರವನ್ನು ಕೊನೆಗಾಣಿಸಿದರು. ರಾಜ್ ನಾರಾಯಣ್ ಲೋಕಸಭಾ ಚುನಾವಣೆಯಲ್ಲಿ ಸೋತು ಹೇಗೋ ಯಾರೊಂದಿಗೋ ಹೊಂದಾಣಿಕೆ ಮಾಡಿಕೊಂಡು ಹಿಂಬಾಗಿಲಿನಿಂದ ರಾಜ್ಯಸಭೆಯನ್ನು ಪ್ರವೇಶಿಸಿ ಲೋಹಿಯಾರನ್ನು ಕಾಣಲು ಬಂದಾಗ ಅವರು ಕ್ರುದ್ಧರಾಗಿದ್ದರು. ಆತ ಒಳಗೆ ಬರಲು ಯತ್ನಿಸಿದಾಗ, 'ಸುಮ್ಮನೆ ಹಿಂತಿರುಗಿ. ಇಲ್ಲವಾದರೆ ಕತ್ತು ಹಿಡಿದು ನೂಕಿಸುವೆ' ಎಂದರು. ಹಾಗೇ ರಾಜಕೀಯ ಲಾಭ-ನಷ್ಟಗಳ ಲೆಕ್ಕಾಚಾರದ ಆಧಾರದ ಮೇಲೆ ಲೋಕಸಭಾ ಸದಸ್ಯರಾಗಿ ಗೆದ್ದವರನ್ನು ರಾಜ್ಯದ ಮಂತ್ರಿಗಳನ್ನಾಗಿ ಮಾಡಿದಾಗ ಈ ಸಂಬಂಧ ತಮ್ಮ ಅನುಮತಿ ಮತ್ತು ಆಶೀರ್ವಾದ ಪಡೆಯಲು ಬಂದ ಅನುಯಾಯಿ ಗಳನ್ನೂ ಲೋಹಿಯಾ ಕಟುವಾಗಿ ಬೈದು ಹಿಂದಕ್ಕೆ ಕಳಿಸುತ್ತಿದ್ದರು.

ಸತ್ಯಾಗ್ರಹವೆಂದರೇನು? ಅಸಹಕಾರ ಚಳುವಳಿ ಎಂದರೇನು? ಜೈಲಿನಲ್ಲಿ ಹೇಗೆ ನಡೆದುಕೊಳ್ಳಬೇಕು? ಅಧಿಕಾರಶಾಹಿಯು ಹದ್ದು ಮೀರಿದರೆ ಹೇಗೆ ಅದನ್ನು ಎದುರಿಸ

ಬೇಕು? ಎಂಬುದನ್ನೆಲ್ಲ ಲೋಹಿಯಾ ತಮ್ಮ ನಡವಳಿಕೆಯಿಂದ ತೋರಿಸಿಕೊಡುತ್ತಿದ್ದರು. ಅವರು ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ಕೆಲಸ ಮಾಡುವ ರಾಜಕಾರಣಿಯಲ್ಲ. ಅವರು ಸ್ವತಃ ಚಳುವಳಿಗೆ ಧುಮುಕುತ್ತಿದ್ದರು. ೧೯೫೭ರ ನಾಗರೀಕ ಅಸಹಕಾರದ ಸಂಬಂಧ ಪಕ್ಷದ ಸಹಸ್ರಾರು ಕಾರ್ಯಕರ್ತರು ಬಂಧನಕ್ಕೊಳಗಾಗಿ ಜೈಲು ಸೇರಿದರು. ಚಳುವಳಿಯನ್ನು ನಿಲ್ಲಿಸಿದ ನಂತರವೂ ಸರ್ಕಾರ ಬಂಧಿತರನ್ನು ಬಿಡುಗಡೆ ಮಾಡದಿದ್ದಾಗ ಲೋಹಿಯಾ ಏಕಾಂಗಿಯಾಗಿ ಸತ್ಯಾಗ್ರಹ ಮಾಡಿ ಜೈಲಿನಲ್ಲಿದ್ದ ಕಾರ್ಯಕರ್ತರ ಜೊತೆಗೂಡಿದರು. ಒಂದು ತಿಂಗಳು ಜೈಲಿನಲ್ಲಿದ್ದರು. ಜೈಲಿನಲ್ಲಿ ಹಿರಿಯ ಕಾರ್ಯಕರ್ತರಾದ ರಾಮ್‌ಸಾಗರ್ ಮಿಶ್ರ, ಅಶ್ವಿನಿಕುಮಾರ್, ಕೃಷ್ಣನಾಥಶರ್ಮ, ಕರುಣಾಶಂಕರ ದೀಕ್ಷಿತ್‌ರವರಂತಹವರ ಜೊತೆ ೧೧ನೆಯ ತರಗತಿಯ ವಿದ್ಯಾರ್ಥಿ ರಾಮ್‌ಕಿಶೋರ್ ಶಾಸ್ತ್ರೀ ತರಹದವರೂ ಇದ್ದರು. ಜೈಲಿನಲ್ಲಿ ಲೋಹಿಯಾ ಜೊತೆಯಿದ್ದಾಗ ತಮಗಾದ ಅನುಭವವನ್ನು ರಾಮಕಿಶೋರ್ ಶಾಸ್ತ್ರೀ ಈ ರೀತಿ ವಿವರಿಸುತ್ತಾರೆ: "ಲೋಹಿಯಾ ಅವರ ಜೊತೆ ನಾವು ಸುಮಾರು ೧೫ ಜನರಿದ್ದೆವು. ಜೈಲರ್ ನಮಗೆ ನಮ್ಮ ವಿರುದ್ಧದ ಮೊಕದ್ದಮೆಯ ವಿವರ ನೀಡಿದರು. ತುಸು ಹೊತ್ತಲ್ಲೇ ಸುಮಾರು ೩೦೦ ಜನ ಪೊಲೀಸರು ನಮ್ಮ ಮೇಲೆ ದಾಳಿ ನಡೆಸಿದರು. ನಮ್ಮನ್ನು ಹೊಡೆದು ಬ್ಯಾರಕ್‌ಗೆ ತಳ್ಳಿದರು. ಲೋಹಿಯಾರನ್ನು ಒಂದು ಕುರ್ಚಿಯ ಮೇಲೆ ಕೂರಿಸಿ ಹೊತ್ತು ತಂದು ಮ್ಯಾಜಿಸ್ಟ್ರೇಟರ ಎದುರು ಹಾಜರುಪಡಿಸಿದರು. ಲೋಹಿಯಾ ಒಂದು ಮಾತು ಆಡಲಿಲ್ಲ. ಒತ್ತಾಯದಿಂದ ಅವರ ಹೆಬ್ಬೆಟ್ಟು ಗುರುತು ಪಡೆದರು. ಲೋಹಿಯಾ ಅವರನ್ನು ಆಸ್ಪತ್ರೆಗೆ ದಾಖಲು ಮಾಡಬೇಕಾಯಿತು. ಸ್ವಾತಂತ್ರ್ಯ ಹೋರಾಟದ ಒಬ್ಬ ಮಹಾನ್ ನಾಯಕನನ್ನು ಸ್ವತಂತ್ರ ಭಾರತ ನಡೆಸಿಕೊಂಡ ರೀತಿ ಇದು!

ಲೋಹಿಯಾ ಅವರ ಮರಣಾನಂತರ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಲೋಹಿಯಾ ಅವರ ಅಂತ್ಯದವರೆಗೆ ಅವರನ್ನು ದ್ವೇಷಿಸುತ್ತಿದ್ದವರೂ ಸಹ ಅವರಿಗೆ ಗೌರವ ಸಮರ್ಪಿಸಿದರು. ತಮ್ಮ ಪಾಪಗಳನ್ನು ತೊಳೆದುಕೊಳ್ಳಲು ಅವರು ನಡೆಸಿದ ಪ್ರಯತ್ನ ಇದಾಗಿತ್ತು. ಲೋಹಿಯಾರ ಜೀವಿತ ಕಾಲದಲ್ಲಿ ಅವರನ್ನು ಲೇವಡಿ ಮಾಡಿದ ಪತ್ರಿಕೆಗಳೂ, ಮೆಚ್ಚದ ಮೊರಾರ್ಜಿಯವರೂ ಸಹ. ಗಾಂಧಿಯ ನಂತರ ಅತಿ ಹೆಚ್ಚು ನಿಷ್ಠಾವಂತ ಹಿಂಬಾಲಕರನ್ನೂ ಸಂಗಾತಿಗಳನ್ನೂ ಹೊಂದಿದ ನಾಯಕನೆಂದರೆ ಲೋಹಿಯಾ' ಎಂಬುದಾಗಿ ಹೇಳಿದರು.

ಲೋಹಿಯಾರ ಸಂಪರ್ಕಕ್ಕೆ ಬಂದವರು ಅವರ ಅನುಯಾಯಿಗಳಾಗಿ ಬಿಡುತ್ತಾರೆ ಎಂಬುದಾಗಿ ಮೊರಾರ್ಜಿಯವರು ಹೇಳಿದ್ದು ಸರಿ. ಲೋಹಿಯಾ ಧಾರ್ಮಿಕ ನಾಯಕರಾಗಿರಲಿಲ್ಲ. ಹಿಂಬಾಲಕರಿಗೆ ಲಾಭ ಮಾಡಿಕೊಡಬಲ್ಲ ಅಧಿಕಾರ ಲೋಹಿಯಾರ ಬಳಿ ಇರಲಿಲ್ಲ. ಅವರು ಕೊಡಬಹುದಾದದ್ದು ಹೊಸ ಆಲೋಚನೆ, ಮಿದುಳನ್ನು

ಮಿಸುಕುವಂತೆ ಮಾಡುತ್ತಿದ್ದ ಸ್ಫೂರ್ತಿ. ಪರಿಣಾಮ, ಮನುಷ್ಯರ ಮನಸ್ಸಿನ ಮುಚ್ಚಿದ ಬಾಗಿಲುಗಳನ್ನು ಒಡೆದು ತೆರೆಯುವಂತಿರುತ್ತಿತ್ತು. ಅವರಲ್ಲಿ ಹೊಸದೊಂದು ಚಿಂತನೆ ಹೊಸ ದೃಷ್ಟಿಕೋನ ಎಂದೂ ಇರುತ್ತಿತ್ತು. ಇದು ಚಿಂತಕರನ್ನು, ಕಲಾವಿದರನ್ನು ಲೇಖಕ ಬುದ್ಧಿಜೀವಿಗಳನ್ನು ಅವರ ಕಡೆ ಸೆಳೆಯುತ್ತಿತ್ತು. ಹಳೆಯ ಚಿಂತನೆಗಳನ್ನು ಒಡೆದು ಅದರ ಎಡೆಯಲ್ಲಿ ಸಮಾನತೆ, ಭ್ರಾತೃತ್ವ, ಸ್ವಾತಂತ್ರ್ಯ ಮುಂತಾದ ಮೌಲ್ಯಗಳನ್ನು ಪ್ರತಿಫಲಿಸುವ ಸಾಂಸ್ಕೃತಿಕ ಸಾಹಿತ್ಯಿಕ ಚಳುವಳಿಗೆ ಚಾಲನೆ ನೀಡುತ್ತಿತ್ತು.

ಲೋಹಿಯಾರನ್ನು ಅನುಸರಿಸಿ ಅವರಿಂದ ಪ್ರಭಾವಿಸಲ್ಪಟ್ಟು ರಾಜಕಾರಣವನ್ನು ಪ್ರವೇಶಿಸಿದವರು ಬಡವರ ಬಗ್ಗೆ ಕರುಣೆ ಅನುಕಂಪ ಹೊಂದಿರುತ್ತಿದ್ದರು. ಲೋಹಿಯಾ ಅವರ ಸರಳ ಪ್ರಾಮಾಣಿಕ ಬದುಕಿನ ರೀತಿಯಿಂದ ಸಾಮಾನ್ಯ ಜನ ಪ್ರಭಾವಿತರಾಗುತ್ತಿದ್ದರು. ಡಾ॥ ಹರಿದೇವ ಶರ್ಮ, ಅಂಬಿಕಾ ಪ್ರಸಾದ್ ಸಿಂಗ್, ಲಾಡ್ಲಿ ಮೋಹ ನಿಗಮ್ ಮುಂತಾದ ಹಲವು ಗಣ್ಯರು ಲೋಹಿಯಾರಿಂದ ಯಾವ ಪ್ರಮಾಣದಲ್ಲಿ ಪ್ರಭಾವಿತರಾಗಿದ್ದರೆಂದರೆ ಲೋಹಿಯಾರನ್ನು ಜ್ಞಾಪಿಸಿಕೊಂಡಾಗ ಅವರ ಕಣ್ಣುಗಳು ನೀರಾಡುವುದನ್ನು ಅವರಿಂದ ತಡೆಯಲಾಗುತ್ತಿರಲಿಲ್ಲ. ಹ್ಯಾರಿಸ್ ವೋಫರ್ಡ್ ಲೋಹಿಯಾ ಅವರ ಅಮೆರಿಕನ್ ಅಭಿಮಾನಿ. ೧೯೫೧ರಲ್ಲಿ ಲೋಹಿಯಾರ ಅಮೆರಿಕದ ಪ್ರವಾಸದುದ್ದಕ್ಕೂ ಅವರೊಡನಿದ್ದು "Lohia and America meet' ಎಂಬ ಪುಸ್ತಕ ಬರೆದವರು. ಈ ಕೃತಿಯ ಎರಡನೆಯ ಆವೃತ್ತಿಗೆ ಮುನ್ನುಡಿ ಬರೆಯುತ್ತಾ ಲೋಹಿಯಾ ಹೇಳುತ್ತಾರೆ, ಹ್ಯಾರಿಸ್ ವೋಫರ್ಡ್ ತಮ್ಮ ಭಾರತೀಯ ಅಭಿಮಾನಿಗಳ ತದ್ರೂಪಿಯಲ್ಲ. ಆದರೆ ಸಾಮ್ಯವೂ ಇಲ್ಲವೆ ಇಲ್ಲವೆಂದಲ್ಲ. ಒಮ್ಮೆ ಲೋಹಿಯಾ ಹ್ಯಾರಿಸ್‌ಗೆ ಕಾಫಿ ಬೇಕೆಂದು ಹೇಳಿದಾಗ, ಆ ಜಾಗದಿಂದ ಬಹುದೂರದಲ್ಲಿ ಮಾತ್ರ ಲಭ್ಯವಿದ್ದ ಕಾಫಿ ತರಲು ಹೊರಟ ಅವರು ಲೋಹಿಯಾರನ್ನು ಪ್ರೀತಿಯಿಂದ ಶಪಿಸಿದ್ದು ಹೀಗಂತೆ: ನಿನ್ನಂತ ಸೂಳೆಮಗ(son of a bitch)ನಿಗೆ ನಾನು ಅಮೆರಿಕಾದ ಅಧ್ಯಕ್ಷರು ಹೇಳಿದರೂ ಮಾಡಲು ನಿರಾಕರಿಸುವ ಈ ಕೆಲಸವನ್ನು ಮಾಡುತ್ತಿರುವೆ!

(ಸಮಾಜವಾದಿ ಪಕ್ಷ ಮತ್ತು ಆಂದೋಲನದೊಂದಿಗೆ ದೀರ್ಘ ಸಂಪರ್ಕದಲ್ಲಿದ್ದ ಮಸ್ತ್‌ರಾಂ ಕಪೂರ್ ಹಿಂದಿ ಲೇಖಕ ಹಾಗೂ ಪ್ರಾಧ್ಯಾಪಕರಾಗಿದ್ದವರು. ಹಲವು ಕಾದಂಬರಿಗಳು–ಕಥಾ ಸಂಕಲನಗಳ ಜೊತೆ ಸಾಮಾಜಿಕ–ರಾಜಕೀಯ ಮಹತ್ವವುಳ್ಳ ನೂರಾರು ಲೇಖನಗಳನ್ನೂ, ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಇತ್ತೀಚೆಗೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿರುವ ಲೋಹಿಯಾರ ಸಮಗ್ರ ಸಾಹಿತ್ಯವನ್ನು ಒಂಬತ್ತು ಸಂಪುಟಗಳಲ್ಲಿ ಸಂಪಾದಿಸಿ ನೀಡಿದ್ದಾರೆ.)

(ಕನ್ನಡಕ್ಕೆ ಎಂ ರಾಜು)

◆◆

೫

ಸ್ತ್ರೀವಾದಿ ಚಿಂತಕ ಲೋಹಿಯಾ

ಜಯಾ ಶ್ರೀವಾಸ್ತವ

ಭಾರತದ ರಾಜಕೀಯ ಇತಿಹಾಸದಲ್ಲಿ, ರಾಮ ಮನೋಹರ ಲೋಹಿಯಾ ಬಹಳ ದೊಡ್ಡ ಹೆಸರು. ಅವರ ಅಪೂರ್ವ ಚಿಂತನೆಗಳು ಮತ್ತು ಪರಿಕಲ್ಪನೆಗಳು ಇಂದಿಗೂ ಭಾರತದ ಸಮಾಜೋರಾಜಕೀಯ ಜೀವನದ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತಲೇ ಇವೆ. ಸಮಾಜವಾದದ ನೆಲೆಗಟ್ಟಿನ ಮೇಲೆ ಭಾರತವನ್ನು ಪುನರ್ ನಿರ್ಮಾಣ ಮಾಡುವ ಲೋಹಿಯಾರ ಕನಸನ್ನು ಧ್ಯೇಯವಾಗಿಟ್ಟು ಕೊಂಡಿರುವ ಸಮಾಜೋರಾಜಕೀಯ ಸಂಸ್ಥೆಗಳು, ಕೆಲವು ಪ್ರದೇಶಗಳಲ್ಲಾದರೂ ಇಂದಿಗೂ ಅಸ್ತಿತ್ವದಲ್ಲಿರುವುದು ಲೋಹಿಯಾರ ಚಿಂತನೆಗಳ ಪ್ರಾಮುಖ್ಯತೆಯನ್ನು ಎತ್ತಿ ತೋರುತ್ತವೆ. ಭಾರತೀಯ ಮಹಿಳೆಯರ ಸ್ಥಾನಮಾನ ಕುರಿತು ಲೋಹಿಯಾರ ತೀಕ್ಷ್ಣವಾದ ಹಾಗೂ ಆಳವಾದ ಒಳನೋಟಗಳುಳ್ಳ ಚಿಂತನೆಗಳು ಮತ್ತು ಅವರು ರೂಪಿಸಿದ್ದ ವಿಮೋಚನೆಯ ಮಾರ್ಗಗಳು, ನಮ್ಮ ದೇಶದ ಸಮಾಜೋರಾಜಕೀಯ ಕ್ಷೇತ್ರದಲ್ಲಿ ಅಷ್ಟಾಗಿ ಗುರುತಿಸಲ್ಪಟ್ಟಿಲ್ಲ. ಭಾರತದ ಶೈಕ್ಷಣಿಕ ಕ್ಷೇತ್ರ ಕೂಡ ಲೋಹಿಯಾರ ಚಿಂತನೆಗಳ ಕಡೆಗೆ ತಕ್ಕಮಟ್ಟಿಗಿನ

ಗಮನಹರಿಸಿಲ್ಲ. ಅದರಲ್ಲೂ ನಿರ್ದಿಷ್ಟವಾಗಿ ಭಾರತೀಯ ಮಹಿಳೆಯರ ಕುರಿತ ಲೋಹಿಯಾರ ಚಿಂತನೆಗಳನ್ನು ಗಮನಿಸಿಲ್ಲ. ವರ್ಗವಿಭಾಗೀಕರಣವೂ ಸೇರಿ ಸಮಸ್ಯಾತ್ಮಕವಾಗಿ ಪರಿಣಮಿಸಿರುವ, ವಿನಾಶಕಾರಿ ಜಾತಿ ವ್ಯವಸ್ಥೆಯೊಂದಿಗೆ ತಳುಕುಹಾಕಿ ಕೊಂಡಿರುವ, ಪಿತೃಸಂಸ್ಕೃತಿಯ ಪ್ರಭುತ್ವದ ಹಿನ್ನೆಲೆಯಲ್ಲಿ ಅವರ ಸ್ತ್ರೀಪರ ಚಿಂತನೆಗಳು ಹೆಚ್ಚು ಮಹತ್ವಪೂರ್ಣವಾದವುಗಳು. ಲೋಹಿಯಾ ತತ್ವಗಳಿಗೆ ನಿಷ್ಠವಾದ ರಾಜಕೀಯ ಬಣಗಳೂ ಕೂಡ ಅವರ ತೀಕ್ಷ್ಣವಾದ ಹಾಗೂ ಮುಕ್ತ ಆಲೋಚನೆಗಳನ್ನು ತಮ್ಮ ಆಚರಣೆಗಳಲ್ಲಿ ಪ್ರತಿಬಿಂಬಿಸಿದಂತೆ ಕಾಣುತ್ತಿಲ್ಲ. ಒಟ್ಟಿನಲ್ಲಿ ಜಾತಿಪದ್ಧತಿಯ ಬಲೆಯಲ್ಲಿ ಸಿಲುಕಿಕೊಂಡಿರುವ, ಭಾರತೀಯ ಮಹಿಳೆಯರ ಮೇಲಿನ ಪಿತೃಸಂಸ್ಕೃತಿಯ ಯಜಮಾನಿಕೆಯ ಕುರಿತ ಲೋಹಿಯಾರ ಅಮೂಲ್ಯವಾದ ಚಿಂತನೆಗಳು ಸ್ತ್ರೀವಾದಿ ಧಾರೆಗಳಿಂದ ದೂರವೇ ಉಳಿದುಬಿಟ್ಟಿವೆ.

ಈ ಹಿನ್ನೆಲೆಯಲ್ಲಿ, ಭಾರತೀಯ ಮಹಿಳೆಯರ ಪರಿಸ್ಥಿತಿ ಮತ್ತು ವಿಮೋಚನೆಯ ದಾರಿಗಳ ಕುರಿತ ಲೋಹಿಯಾರ ಚಿಂತನೆಗಳನ್ನು ಸಂಗ್ರಹರೂಪದಲ್ಲಿ ಕೊಡುವುದರ ಜೊತೆಗೆ, ಸ್ತ್ರೀವಾದದ ವಿಶಾಲ ಭಿತ್ತಿಯಲ್ಲಿ ಲೋಹಿಯಾರನ್ನು ಗುರುತಿಸುವ ಪ್ರಯತ್ನ ವನ್ನೂ ಈ ಲೇಖನದಲ್ಲಿ ಮಾಡಲಾಗಿದೆ. ಹಾಗಾಗಿ ಮೊದಲಿಗೆ ಸ್ತ್ರೀವಾದದ ಪ್ರಮುಖ ಎಳೆಗಳನ್ನು ಅವಲೋಕಿಸಿ, ನಂತರ, ಭಾರತೀಯ ಮಹಿಳೆಯರಿಗೆ ಎಲ್ಲ ರೀತಿಯ ಪುರುಷಾಳ್ವಿಕೆಯಿಂದ ಸಂಪೂರ್ಣ ಬಿಡುಗಡೆಯ ದಾರಿಗಳನ್ನು ಕಾಣಿಸುವ ಲೋಹಿಯಾರ ಚಿಂತನೆಗಳನ್ನು ಚರ್ಚಿಸಲಾಗಿದೆ. ಈ ಸಂಬಂಧವಾಗಿ, ಉದಾರ ಆಧುನಿಕ ನೆಹರೂವಾದಿ ವಿಧಾನ ಮತ್ತು ಮಾರ್ಕ್ಸ್‌ವಾದಿ ವಿಧಾನಗಳೆರಡನ್ನೂ ಲೋಹಿಯಾ ಏಕೆ ತಿರಸ್ಕರಿಸಿದರು ಮತ್ತು ಭಾರತೀಯ ಮಹಿಳೆಯರ ವಿಮೋಚನೆಗಾಗಿ ಹೇಗೆ, ತಮ್ಮದೇ ಆದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಬೇರುಗಳುಳ್ಳ ಸಮಾಜವಾದಿ ಮಾರ್ಗವನ್ನು ಪ್ರತಿಪಾದಿಸಿದರು ಎಂಬುದನ್ನು ಪ್ರಸ್ತುತ ಲೇಖನದಲ್ಲಿ ನಿರೂಪಿಸಲಾಗಿದ್ದು, ಕೆಲವು ನಿರ್ಣಾಯಕ ಅಭಿಪ್ರಾಯಗಳೊಂದಿಗೆ ಕೊನೆಗೊಳ್ಳುತ್ತದೆ.

ಸ್ತ್ರೀವಾದಿ ಸಿದ್ಧಾಂತದ ಎಳೆಗಳು

ಸ್ತ್ರೀ-ಪುರುಷರ ಬಗೆಗಿನ ಕಲ್ಪನೆಗಳು, ಪುರುಷ ದಬ್ಬಾಳಿಕೆಯ ಪರಿಣಾಮಗಳು ಮತ್ತು ಮಹಿಳಾ ವಿಮೋಚನಾ ಯೋಜನೆಗಳು ಮತ್ತು ಕ್ರಮಗಳ ಬಗೆಗೆ ಬೇರೆ ಬೇರೆ ದೃಷ್ಟಿಕೋನಗಳುಳ್ಳ ವಿವಿಧ ಸ್ತ್ರೀವಾದಿ ಸಿದ್ಧಾಂತಗಳಿವೆ. ಸ್ತ್ರೀ ಪುರುಷರ ನಡುವೆ ಇರುವ ಅಸಮಾನ ಅವಕಾಶಗಳೇ ಲಿಂಗ ಅಸಮಾನತೆಗೆ ಕಾರಣ ಎಂಬ ದೃಷ್ಟಿಕೋನ ಉದಾರ ಸ್ತ್ರೀವಾದಿಗಳದ್ದು. ವಿವಿಧ ರಂಗಗಳಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸಲು, ಶಿಕ್ಷಣ, ಉದ್ಯೋಗ, ಮತದಾನದ ಹಕ್ಕು ಇತ್ಯಾದಿ ಸಮಾಜಕಲ್ಯಾಣದ ಆದ್ಯತಾ ನೀತಿಗಳನ್ನೂ ಒಳಗೊಂಡಂತೆ ಇನ್ನೂ ಅನೇಕ ಪರಿಹಾರ ಕ್ರಮಗಳನ್ನು ನಿಧಾನಗತಿಯಲ್ಲಿ ತೆಗೆದುಕೊಳ್ಳಬೇಕೆಂಬುದನ್ನು ಅವರು ಪ್ರತಿಪಾದಿಸುತ್ತಾರೆ.

ಅದಕ್ಕೆ ವಿರುದ್ಧವಾಗಿ, ತೀವ್ರವಾದಿ ಸ್ತ್ರೀವಾದಿಗಳು, ಪುರುಷರು ಮತ್ತು ಮಹಿಳೆಯರ ನಡುವಿನ ಜೈವಿಕ ಮತ್ತು ಭಾವನಾತ್ಮಕ ವ್ಯತ್ಯಾಸಗಳನ್ನೇ ಪ್ರಮುಖವಾಗಿ ಪರಿಗಣಿಸಿ ವೈಭವೀಕರಿಸುತ್ತಾರೆ. ಮಹಿಳೆಯರು ಮತ್ತು ಪುರುಷರಿಗೆ ಬೇರೆ ಬೇರೆ ರೀತಿಯ ಮೌಲ್ಯಗಳನ್ನು ಹೊಂದಿರುವ ಪಿತೃಸಂಸ್ಕೃತಿ ಮತ್ತು ಸಾಮಾಜಿಕ ಶ್ರೇಣೀಕರಣವೇ ಪುರುಷ ಯಜಮಾನ್ಯಕ್ಕೆ ಕಾರಣವೆಂದು ಅವರು ಅಭಿಪ್ರಾಯ ಪಡುತ್ತಾರೆ. ಲಿಂಗ ಸಮಾನತೆಗಿಂತ ಹೆಚ್ಚಾಗಿ ಮಹಿಳಾ ಹಕ್ಕುಗಳ ಬಗ್ಗೆ ಹೆಚ್ಚು ಆಸ್ಥೆ ವಹಿಸುತ್ತಾರೆ. ಸ್ತ್ರೀ ಪುರುಷ ಸಮಾನತೆಯೆಡೆಗಿನ ಉದಾರವಾದಿಗಳ ಬದ್ಧತೆಯನ್ನೂ, ಉದಾರವಾದಿ ಚಿಂತನೆಯ ಚೌಕಟ್ಟನ್ನೂ ಅವರು ಒಪ್ಪುವುದಿಲ್ಲ. ಪುರುಷಾಳ್ವಿಕೆಯನ್ನು ಕೊನೆಗಾಣಿಸ ಬೇಕೆಂದರೆ, ಪಿತೃಸಂಸ್ಕೃತಿಯನ್ನು ಪ್ರತಿನಿಧಿಸುವ ಸಂಸ್ಥೆಗಳನ್ನು ನಿರ್ಮೂಲನೆ ಮಾಡು ವುದೂ, ಮಹಿಳೆಯರು ಸಂಪೂರ್ಣ ಸ್ವಾಯತ್ತತೆ ಗಳಿಸುವುದೂ ಅತ್ಯಂತ ಅಗತ್ಯ ಎನ್ನುವುದು ಅವರ ಅಭಿಮತ.

ಸಮಾಜವಾದಿ ಸ್ತ್ರೀವಾದಿ ಸಿದ್ಧಾಂತವು (ಉಭಯ ವ್ಯವಸ್ಥೆಯ ಸಿದ್ಧಾಂತ ಎಂದೂ ಕರೆಯಲಾಗುತ್ತದೆ) ಮಹಿಳೆಯರ ಅಧೀನ ಪರಿಸ್ಥಿತಿಗೆ, ಬಂಡವಾಳಶಾಹಿ ವ್ಯವಸ್ಥೆ ಮತ್ತು ಪಿತೃಸಂಸ್ಕೃತಿ ವ್ಯವಸ್ಥೆಗಳೆರಡೂ ಕಾರಣ ಎಂದು ಗುರುತಿಸುತ್ತದೆ. ಹಾಗೆಯೇ ಮಹಿಳಾ ವಿಮೋಚನೆಯನ್ನು ಸಾಧಿಸಲು ಆ ಎರಡೂ ವ್ಯವಸ್ಥೆಗಳನ್ನು ಶಾಂತಿಯುತವಾದ ಮಾರ್ಗಗಳಿಂದ ಕಿತ್ತೊಗೆಯಬೇಕೆಂಬುದನ್ನೂ ಪ್ರತಿಪಾದಿಸುತ್ತದೆ. ಆದರೆ, ಮಾರ್ಕ್ಸ್‌ವಾದಿ ಸ್ತ್ರೀವಾದಿಗಳದ್ದು ಸ್ವಲ್ಪ ಭಿನ್ನವಾದ ವಾದ; ಮಹಿಳೆಯರ ಮೇಲಿನ ಅಲಕ್ಷ್ಯ, ಅವರ ಅಧೀನತೆ ಮತ್ತು ಪುರುಷಾಳ್ವಿಕೆಗಳಿಗೆ ಖಾಸಗೀ ಆಸ್ತಿ ಆಧಾರಿತ ಬಂಡವಾಳಶಾಹಿ ವ್ಯವಸ್ಥೆ ಮತ್ತು ಅದರ ಲಾಭ ಗರಿಷ್ಠೀಕರಣ(profit maximization) ತಂತ್ರಗಳೇ ಪ್ರಮುಖ ಕಾರಣ ಎಂಬುದು. ಬಂಡವಾಳಶಾಹಿಯು ಪಿತೃಸಂಸ್ಕೃತಿಯ ರಚನೆಯನ್ನು ಶೋಷಿಸುವ ಮತ್ತು ಅಗ್ಗದ ದುಡಿಮೆಯ ಮೂಲವಾಗಿ ಮಹಿಳೆಯರನ್ನು ಬಳಸಿಕೊಳ್ಳುವ ಮೂಲಕ ತನ್ನ ಬುಡವನ್ನು ಭದ್ರಪಡಿಸಿಕೊಳ್ಳುತ್ತದೆ. ಮಹಿಳೆಯರ ಮೇಲಿನ ದಬ್ಬಾಳಿಕೆಯು ಬಂಡವಾಳಶಾಹಿ ವ್ಯವಸ್ಥೆಯೊಂದಿಗೆ ತಳುಕುಹಾಕಿಕೊಂಡಿರುವುದಕ್ಕೆ, ಮಹಿಳೆಯರನ್ನು ಸಾರ್ವಜನಿಕ ರಂಗದಿಂದ ದೂರವಿಟ್ಟಿರುವುದು ಮತ್ತು ಕೌಟುಂಬಿಕ ವ್ಯವಸ್ಥೆಯಲ್ಲಿ ಪುಕ್ಕಟೆಯಾಗಿ ದುಡಿಸಿಕೊಳ್ಳುವುದೂ ಕಾರಣ ಎಂದು ವಾದಿಸುತ್ತಾರೆ. ವರ್ಗ-ವಿಭಜಿತ ಬಂಡವಾಳಶಾಹಿ ಸಮಾಜವು, ಲಿಂಗ ತಾರತಮ್ಯ ಮತ್ತು ಅಸಮಾನತೆಯನ್ನು ಶಾಶ್ವತಗೊಳಿಸಿಬಿಡುತ್ತದೆ. ಹಾಗಾಗಿ, ಹಿಂಸಾತ್ಮಕವಾದರೂ ಸರಿಯೆ, ವರ್ಗ ಹೋರಾಟದಿಂದ ಮಾತ್ರ ಮಹಿಳಾ ವಿಮೋಚನೆ ಸಾಧ್ಯ ಎಂಬುದನ್ನು ಒತ್ತಿ ಹೇಳುತ್ತಾರೆ. ಈ ಹೋರಾಟದ ಪರಿಣಾಮವಾಗಿ, ಪಿತೃಸಂಸ್ಕೃತಿಯ ರಚನೆ ಗಳೊಂದಿಗೆ ಖಾಸಗಿ ವ್ಯವಸ್ಥೆಯ ಮೇಲೆ ನಿಂತಿರುವ ವರ್ಗಾಧಾರಿತ ಸಮಾಜವೂ ನಾಶಗೊಳ್ಳುತ್ತದೆ; ಆದ್ದರಿಂದ, ಮಹಿಳೆಯರು ಪುರುಷರಂತೆಯೇ ಮುಕ್ತವಾಗಿ ಬದುಕಲು ಸಾಧ್ಯವಾಗುವಂತಹ

ಸಮಾಜವಾದಿ/ಸಮತಾ ಸಮಾಜವನ್ನು ಸ್ಥಾಪಿಸಲು, ಈಗ ಅಸ್ತಿತ್ವದಲ್ಲಿರುವ, ಅಸಮಾನತೆಯನ್ನು ಪ್ರತಿಪಾದಿಸುವ, ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯುವುದು ಅತ್ಯಂತ ಅಗತ್ಯವೆಂದು ಪರಿಗಣಿಸುತ್ತಾರೆ.

ವಿವಿಧ ಸ್ತ್ರೀವಾದಿ ಚಿಂತನೆಯ ಚೌಕಟ್ಟುಗಳ ವಿಶಾಲವಾದ ತಾತ್ವಿಕ ಹಿನ್ನೆಲೆಯಲ್ಲಿ, ಭಾರತೀಯ ಮಹಿಳೆಯರ ಸ್ಥಿತಿಗತಿ, ಸಮಾಜದಲ್ಲಿ ಪುರುಷ ಪ್ರಭುತ್ವಕ್ಕೆ ಕಾರಣವಾಗುವ ಅಂಶಗಳು ಮತ್ತು ಅದರಿಂದ ಮಹಿಳೆಯರು ಬಿಡುಗಡೆ ಹೊಂದುವ ಮಾರ್ಗಗಳ ಕುರಿತ ಲೋಹಿಯಾರ ಚಿಂತನೆಗಳೇನೆಂಬುದನ್ನು ಈಗ ಪರಿಶೀಲಿಸೋಣ.

ಭಾರತೀಯ ಮಹಿಳೆಯರ ಸ್ಥಾನಮಾನ

ಲೋಹಿಯಾ ತಮ್ಮ ಬರಹಗಳಲ್ಲಿ, ಭಾರತದ ಸಮಾಜೋಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಪಿತೃಸಂಸ್ಕೃತಿಯ ರಚನಾತ್ಮಕ, ಸಾಂಸ್ಥಿಕ ಮತ್ತು ಸಾಂಸ್ಕೃತಿಕ ಸ್ವರೂಪಗಳ ಆಳಕ್ಕೆ ಇಳಿದು ಶೋಧಿಸುತ್ತಾರೆ. ಶತಮಾನಗಳ ಹಿಂದಿನ ಪಿತೃಸಂಸ್ಕೃತಿಯು ಇನ್ನೂ ಚಾಲ್ತಿಯಲ್ಲಿರುವುದನ್ನು ಗುರುತಿಸುತ್ತಾರೆ. ಆದಾಗ್ಯೂ ಅವರದ್ದು ಮೂಲಭೂತವಾದಿಯ ದೃಷ್ಟಿಕೋನವೇನಲ್ಲ. ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಭಾರತೀಯ ಮಹಿಳೆಯರನ್ನು ಹಲವು ಭಿನ್ನತೆಗಳ ವೈವಿಧ್ಯಮಯ ವರ್ಗ ಎಂದು ಅವರು ಪರಿಗಣಿಸುತ್ತಾರೆ. ಭಾರತದ ಸಂದರ್ಭದಲ್ಲಿ, ಜಾತಿ, ವರ್ಗ ಮತ್ತು ಇನ್ನಿತರ ಸಾಮಾಜಿಕ ಅಂಶಗಳ ವಿವಿಧ ಆಯಾಮಗಳನ್ನು ಗಣನೆಗೆ ತೆಗೆದುಕೊಳ್ಳದೇ, ಲಿಂಗತಾರತಮ್ಯ ಮತ್ತು ಪುರುಷಪ್ರಭುತ್ವ ವನ್ನು ಪ್ರತ್ಯೇಕವಾಗಿ ಅರ್ಥೈಸಲು ಸಾಧ್ಯವಿಲ್ಲ. ಏಕೆಂದರೆ, ಈ ಎಲ್ಲವೂ ಒಂದಕ್ಕೊಂದು ಸಂಬಂಧಿಸಿದ್ದಾಗಿವೆ ಎಂಬುದು ಲೋಹಿಯಾರ ಅಭಿಪ್ರಾಯ. ಆದ್ದರಿಂದ ಅವರು ಈ ಅಂತರ್‌ಸಂಬಂಧವನ್ನು ಗಮನದಲ್ಲಿಟ್ಟುಕೊಂಡೇ ಆಲೋಚಿಸುತ್ತಾರೆ.

ಮೊದಲಿಗೆ, ಭಾರತೀಯ ಮಹಿಳೆಯರು ಯಾವಾಗಲೂ ಹಿಂದುಳಿದಿರಲಿಲ್ಲ ಎನ್ನುವುದಕ್ಕೆ ಜ್ಞಾನ, ಆಧ್ಯಾತ್ಮಿಕ ಸಾಧನೆ, ನಾಯಕತ್ವ, ಶೌರ್ಯ ಮತ್ತು ಸೃಜನಶೀಲತೆಯ ರಂಗಗಳಲ್ಲಿ ಉತ್ಕೃಷ್ಟತೆಯನ್ನು ಬಹಳ ಹಿಂದೆಯೇ ಸಾಧಿಸಿದ ಗಾರ್ಗಿ, ಮೈತ್ರೇಯಿ, ರಜಿಯಾ ಸುಲ್ತಾನ, ಅಕ್ಕಮಹಾದೇವಿ, ಮೀರಾ, ರಾಣಿ ಲಕ್ಷ್ಮೀಬಾಯಿ ಇವರುಗಳ ನಿದರ್ಶನಗಳನ್ನು ಕೊಡುತ್ತಾರೆ ಲೋಹಿಯಾ. ಆದರೂ ಮಹಿಳೆಯ ಸ್ಥಾನಮಾನ ಕಾಲಕ್ರಮೇಣ ಅವನತಿ ಹೊಂದುತ್ತಾ ಹೋಯಿತು ಎಂಬುದನ್ನು ಗಮನಿಸುತ್ತಾರೆ.

ಎಲ್ಲ ಭಾರತೀಯ ಮಹಿಳೆಯರೂ ಸಾಮಾನ್ಯವಾಗಿ ಒಂದು ರೀತಿ ಅವಕಾಶ ನಿರಾಕರಣೆಯಿಂದ ಮತ್ತು ಬಹಿಷ್ಕಾರದಿಂದ ಅವಮಾನಿತರು ಎನ್ನುವುದನ್ನು ಕಂಡುಕೊಳ್ಳುತ್ತಾರೆ ಲೋಹಿಯಾ. ರಚನಾತ್ಮಕವಾಗಿ ನೋಡಿದಾಗ ಮಹಿಳೆಯರು, ಆಸ್ತಿ ಹಕ್ಕು, ಕೌಟುಂಬಿಕ-ಸಾಮಾಜಿಕ ನಿರ್ಣಯಗಳಲ್ಲಿ ಪಾಲ್ಗೊಳ್ಳದಿರುವುದು ಇತ್ಯಾದಿ

ಹಲವಾರು ವಿಷಯಗಳಲ್ಲಿ ಅವಕಾಶ ನಿರಾಕೃತರು. "ಮದುವೆ ಮತ್ತು ಆಸ್ತಿಯ ವಿಷಯದಲ್ಲಿ ಮಹಿಳೆಯರ ಪುರುಷ ಸಮಾನ ಹಕ್ಕು ಪ್ರತಿಪಾದನೆಯ ಮೇಲೆ ಹರಿಹಾಯುತ್ತಿರುವುದು ಇನ್ನೂ ಮುಂದುವರೆದಿದೆ" ಎನ್ನುತ್ತಾರೆ ಲೋಹಿಯಾ. ಸ್ತ್ರೀ-ಪುರುಷರ ಸಾಮಾಜಿಕ ಮತ್ತು ಮಾನಸಿಕ ವ್ಯತ್ಯಾಸಗಳನ್ನು ಗುರುತಿಸುವುದು ಮತ್ತು ಆ ಬಗ್ಗೆ ಸಾಮಾನ್ಯೀಕೃತ ಅಭಿಪ್ರಾಯಗಳನ್ನು ಮೂಡಿಸುವುದು ಕೂಡ ಈ ಸಮಾಜವೇ. ಮಹಿಳೆಯರನ್ನು ಸಾಮಾನ್ಯವಾಗಿ ಪುರುಷರಿಗಿಂತ ಕೀಳಾಗಿ ಕಾಣಲಾಗುತ್ತದೆ. ಮಹಿಳೆಯರ ಮೇಲಿನ ಎಲ್ಲ ತಾರತಮ್ಯಗಳಿಗೂ ಲಿಂಗ ಅಸಮಾನತೆಯೇ ಕಾರಣವಾಗಿದೆ. ಹಲವಾರು ಸಾಮಾಜಿಕ ಪದ್ಧತಿಗಳು, ನಿಷೇಧ ಸಂಪ್ರದಾಯಗಳಲ್ಲಿಯೂ ಕೂಡ ಮಹಿಳೆಯರು ಪಕ್ಷಪಾತಕ್ಕೊಳಗಾಗುವುದಲ್ಲದೇ ಸಾಂಸ್ಥಿಕ ರಚನೆಗಳ ಮೂಲಕ ಮಹಿಳೆಯ ಮೇಲೆ ಸಾಂಸ್ಕೃತಿಕ ನಿರ್ಬಂಧ ಹೇರಲಾಗುತ್ತದೆ. ಶತಮಾನಗಳ ಹಿಂದಿನ ಇಂತಹ ಹಳೆಯ ಪದ್ಧತಿಗಳು ಭಾರತೀಯ ಮಹಿಳೆಯರನ್ನು ಪುರುಷಾಳ್ವಿಕೆಯ ಕೂಪಕ್ಕೆ ತಳ್ಳಿವೆ.

ಲಿಂಗತಾರತಮ್ಯ ಮತ್ತು ಜಾತಿ ವ್ಯವಸ್ಥೆಗಳನ್ನು ಬೇರ್ಪಡಿಸಲಸಾಧ್ಯವೆಂಬ ಲೋಹಿಯಾರ ವಿಚಾರವು, ಮಹಿಳೆಯರ ಕುರಿತ ಚರ್ಚೆಯ ಸಂದರ್ಭದಲ್ಲಿ ಅತ್ಯಂತ ಮಹತ್ವದ್ದು. ಭಾರತದ ಚೈತನ್ಯವೇ ಉಡುಗಿಹೋಗಿರುವುದಕ್ಕೆ ಅವೆರಡರ ನಡುವಿನ ಭೇದಭಾವವೇ ಮೂಲಕಾರಣ ಎಂಬುದು ಅವರ ವಾದ. ಭಾರತೀಯ ಮಹಿಳೆಯರು ಹೆಚ್ಚಿನಂಶ, ಪಿತೃಸಂಸ್ಕೃತಿ/ಪುರುಷಾಳ್ವಿಕೆ ಮತ್ತು ಜಾತಿ ವ್ಯವಸ್ಥೆಗಳೆಂಬ ಎರಡು ರಚನಾತ್ಮಕ ವ್ಯವಸ್ಥೆಗಳಲ್ಲಿ ನಲುಗುವುದಲ್ಲದೇ ಅವೆರಡರ ನಿಕಟ ಸಂಬಂಧದಿಂದಾಗಿ ದುಪ್ಪಟ್ಟು ಅವಕಾಶ ವಂಚಿತರಾಗಿದ್ದಾರೆ ಮತ್ತು ಅಂಚಿಗೆ ತಳ್ಳಲ್ಪಟ್ಟಿದ್ದಾರೆ ಎಂದು ಅವರು ಒತ್ತಿ ಹೇಳುತ್ತಾರೆ. ಶುದ್ಧತೆ ಮತ್ತು ಮಲಿನತೆಗಳ ಮಾನದಂಡಗಳು, ಹುಟ್ಟಿನ ಮೇಲೆ ನಿರ್ಧಾರವಾಗುವ ಜಾತಿ ಗುಂಪುಗಳ ಭೇದಾತ್ಮಕ ಮೌಲ್ಯನಿರ್ಣಯಕ್ಕೆ ಮತ್ತು ಶ್ರೇಣೀಕರಣಕ್ಕೆ ಸಾಂಸ್ಕೃತಿಕ ತಳಹದಿಯನ್ನು ರೂಪಿಸುತ್ತವೆ. ಅದು ಕೆಲವು ಜಾತಿಗಳನ್ನು ಅಸ್ಪೃಶ್ಯ ವರ್ಗಕ್ಕೆ ತಳ್ಳಿದೆ. ಅದೇ ರೀತಿ ಹುಟ್ಟಿನಿಂದಲೇ ಲಿಂಗ ತಾರತಮ್ಯಕ್ಕೊಳಗಾಗುವ ಮಹಿಳೆಯರನ್ನು ಅವರ ಜೀವಿತದ ಕೆಲವು ಅವಧಿಗಳಲ್ಲಿ ಅಂದರೆ, ಮುಟ್ಟಿನ ಮತ್ತು ಪ್ರಸವದ ನಂತರದ ಅವಧಿಗಳಲ್ಲಿ ಅಸ್ಪೃಶ್ಯರೆಂದು ಕಾಣಲಾಗುತ್ತದೆ. ಅವರನ್ನು ಅಡುಗೆ ಮನೆಗೆ ಸೀಮಿತಗೊಳಿಸಲಾಗಿದ್ದು, ತಮ್ಮ ದೇಹದ ಮೇಲಿನ ಹಕ್ಕಾಗಲೀ ಸಂತಾನಕ್ಕೆ ಸಂಬಂಧಿಸಿದ ಹಕ್ಕಾಗಲೀ ಅವರಿಗಿಲ್ಲ.

ಹೆಣ್ಣನ್ನು ಗಂಡಿಗಿಂತ ಕೀಳು ಎಂದು ಭಾವಿಸಿರುವುದರಿಂದಲೇ ಭಾರತೀಯ ಸ್ತ್ರೀಯರು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ರಂಗಗಳಲ್ಲಿ ಹಿಂದುಳಿದಿದ್ದಾರೆ ಎಂಬುದು ಲೋಹಿಯಾರ ಗ್ರಹಿಕೆ. ಆದರೆ ಅವರು ಭಾರತೀಯ ಮಹಿಳೆಯರನ್ನು ಏಕರೂಪಾತ್ಮಕವಾದ ಒಂದು ವರ್ಗ ಎಂದು ಪರಿಗಣಿಸುವುದಿಲ್ಲ. ಅವರು 'ವರ್ಗ'

ಅಂಶಕ್ಕೆ ಹೆಚ್ಚು ಒತ್ತು ಕೊಡುವುದೇಕೆಂದರೆ, ದೇಶದ ಬಹುಭಾಗವನ್ನು ರೂಪಿಸುವ ಬಡ/ಕೆಳಜಾತಿ/ವರ್ಗದ ಮಹಿಳೆಯರ ಸ್ಥಿತಿಯು, ಮೂಲಭೂತ ಸೌಲಭ್ಯಗಳ ಅಲಭ್ಯತೆ ಮತ್ತು ಕನಿಷ್ಠ ಅನುಕೂಲಗಳ ಕೊರತೆಯಿಂದಾಗಿ ಅತ್ಯಂತ ಕೆಳಮಟ್ಟದಲ್ಲಿ ಇರುವುದರಿಂದ. ಅದರಲ್ಲೂ ನಿರ್ದಿಷ್ಟವಾಗಿ ಗ್ರಾಮೀಣ ಮಹಿಳೆಯರ ಪಾಡಿನ ಬಗೆಗೆ ಹೆಚ್ಚು ಆತಂಕ ವ್ಯಕ್ತಪಡಿಸುತ್ತಾರೆ. ಅವರ 'ಜಾತಿ ಮತ್ತು ಲಿಂಗ ಕುರಿತ ಭೇದಭಾವ' ಎಂಬ ಬಹುಮುಖ್ಯ ವಾದ ಲೇಖನದಲ್ಲಿ ಹೇಳುತ್ತಾರೆ; "ಹೆಚ್ಚಿನಂಶ ಭಾರತೀಯ ಮಹಿಳೆಯರ ಸಮಸ್ಯೆ ಗಳೆಂದರೆ, ನೀರಿನ ನಲ್ಲಿಗಳು ಮತ್ತು ಶೌಚಾಲಯಗಳಿಲ್ಲದಿರುವುದು. ದೂರ ದೂರದ ಬಾವಿಗಳಿಂದ ಅಥವಾ ಕೆರೆಗಳಿಂದ ದಿನನಿತ್ಯ ಬೆಳಗ್ಗೆ ಮತ್ತು ಸಂಜೆ ನೀರನ್ನು, ಸಾಮಾನ್ಯವಾಗಿ ರಾಡಿ ನೀರನ್ನು, ಹೊತ್ತು ತರುವ ಕತ್ತೆಚಾಕರಿಗೆ ಅವರು ದೂಡಲ್ಪಟ್ಟಿದ್ದಾರೆ. ಮಾನವನ್ನು ಕಾಪಾಡಿಕೊಳ್ಳಲು, ಸೂರ್ಯೋದಯಕ್ಕೆ ಮುನ್ನ ಅಥವಾ ಸೂರ್ಯಾಸ್ತದ ನಂತರವೇ ಅವರು ತಮ್ಮ ಮಲಬಾಧೆಯನ್ನು ತೀರಿಸಿಕೊಳ್ಳಬೇಕಾಗಿದೆ".

ಮುಂದುವರೆದು, ನಿಶ್ಚಿತ ಮದುವೆಗಳ ಸಂಪ್ರದಾಯವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ. ನಿಶ್ಚಿತ ಮದುವೆಗಳನ್ನು ಜಾನುವಾರು ವ್ಯಾಪಾರಕ್ಕೆ ಸಮೀಕರಿಸುತ್ತಾ ಸಮಾಜದಲ್ಲಿ ವೃದ್ಧಿಸುತ್ತಿರುವ 'ಮದುವೆ ಮಾರುಕಟ್ಟೆ'ಯ ಮೇಲೆ ಬೆಳಕು ಚೆಲ್ಲುತ್ತಾರೆ. "ಒಂದು ಭಾವಚಿತ್ರವನ್ನು ನೋಡುವ ಮೂಲಕ ಅಥವಾ ಮುಸುಕು ಎಳೆದುಕೊಂಡು ತಲೆಬಗ್ಗಿಸಿಕೊಂಡು ಹುಡುಗಿಯು ಚಹಾ ತರುವಂತಹ ಭಯದ ವಾತಾವರಣದಲ್ಲಿ ನಿರ್ಧಾರವಾಗುವ ಮದುವೆಗಳು, ಹಿಂದೆ ಕ್ಷೌರಿಕ ಅಥವಾ ಬ್ರಾಹ್ಮಣನ ಮೂಲಕ ನಡೆಯುತ್ತಿದ್ದ ಮದುವೆಗಳಿಗಿಂತ ಹೆಚ್ಚು ಹಾಸ್ಯಾಸ್ಪದವಾದುದು. ಹೇಗೆಂದರೆ, ಕುದುರೆ ಖರೀದಿದಾರನೊಬ್ಬ, ಕೊಳ್ಳುವ ಕುದುರೆ ಎದುರಿಗಿದ್ದರೂ ಅದರ ಗೊರಸುಗಳನ್ನು ಸ್ಪರ್ಶಿಸಿ ನೋಡದೇ, ಅದರ ಹಲ್ಲುಗಳನ್ನು ಹತ್ತಿರದಿಂದ ಪರೀಕ್ಷಿಸದೇ ಕೊಂಡು ಕೊಂಡಂತೆ!"

'ಪಾತಕ' ಅಂತ ಯಾವುದನ್ನಾದರೂ ಒಂದು ವೇಳೆ ಕರೆಯುವುದಾದರೆ, ಅದು ಮತ್ಯಾವುದೂ ಅಲ್ಲ, ರೂಢಿಯಲ್ಲಿರುವ, ಹಿರಿಯರು ನಿಶ್ಚಯಿಸುವ ಮದುವೆಗಳಿಗೆ ಸಂಬಂಧಿಸಿದ ಕರಾರುಗಳು ಎನ್ನುವುದು ಲೋಹಿಯಾರ ಖಚಿತ ಅಭಿಪ್ರಾಯ. ನಿಶ್ಚಿತ ಮದುವೆಗಳಲ್ಲಿ ಇರುವ ವರದಕ್ಷಿಣೆಯ ಆಚರಣೆಯನ್ನು ತೀವ್ರವಾಗಿ ಖಂಡಿಸುತ್ತಾರೆ. ಮಧ್ಯಮ ವರ್ಗದ ಪೋಷಕರಿಗೂ ಇದು ಒಂದು ಯಾತನೆಯೇ. ಒಟ್ಟಾರೆಯಾಗಿ ಇದು ಮಹಿಳೆಯ ಘನತೆಯನ್ನು ಕುಗ್ಗಿಸುತ್ತದೆ. ವರದಕ್ಷಿಣೆ ಕೊಡುವ ಆಚರಣೆಯ ಬಗ್ಗೆ ಲೋಹಿಯಾರ ಬಹಳ ಪರಿಣಾಮಕಾರಿಯಾದ ಮಾತೊಂದಿದೆ: "ವರದಕ್ಷಿಣೆ ಇಲ್ಲದ ಹುಡುಗಿ ಕಸಕ್ಕಿಂತ ಕಡೆ, ಕರುವಿಲ್ಲದ ಆಕಳಿನಂತೆ". "ಕರಾರಿನಂತೆ ವರದಕ್ಷಿಣೆಯನ್ನು ಪೂರ್ಣವಾಗಿ ಕೊಡಲಾಗದಿದ್ದ ಸಂದರ್ಭದಲ್ಲಿ, ತಮ್ಮ

ಹೆಣ್ಣುಮಕ್ಕಳನ್ನು ಎಷ್ಟು ಹೀನಾಯವಾಗಿ ನಡೆಸಿಕೊಳ್ಳುತ್ತಾರೆ ಮತ್ತು ಕೆಲವೊಮ್ಮೆ ಹೇಗೆ ಸಾವಿಗೂ ತಳ್ಳುತ್ತಾರೆ ಎಂದು ಎಷ್ಟೋ ಹೆಣ್ಣುಮಕ್ಕಳ ಪೋಷಕರು ಕಣ್ಣಲ್ಲಿ ನೀರು ತಂದುಕೊಂಡು ಹೇಳಿದ್ದುಂಟು" ಎಂದು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾರೆ ಲೋಹಿಯಾ.

ತಮ್ಮ ಹೆಣ್ಣುಮಕ್ಕಳನ್ನು ಹೆಚ್ಚು ಓದಿಸಿದರೆ ಸಮಸ್ಯೆಯು ಇನ್ನೂ ಹೆಚ್ಚು ಸಂಕೀರ್ಣವಾಗುತ್ತದೆ. ಹೆಚ್ಚಿನ ಶಿಕ್ಷಣ ದೊರೆತ ಹೆಣ್ಣು ಮಗಳಿಗೆ ಸಾಮಾನ್ಯವಾಗಿ ಇನ್ನೂ ಹೆಚ್ಚಿನ ಶಿಕ್ಷಣವನ್ನು ಪಡೆದ ಗಂಡನ್ನು ಹುಡುಕುವುದರಿಂದ, ವರದಕ್ಷಿಣೆ ಮಾರುಕಟ್ಟೆಯಲ್ಲಿ ಹೆಚ್ಚು ಓದಿದ ಗಂಡಿನ ವರದಕ್ಷಿಣೆ ತಾನೇತಾನಾಗಿ ಹೆಚ್ಚುತ್ತದೆ. ಆದ್ದರಿಂದ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ಕೊಡಿಸದಿರುವುದು ಅಥವಾ ಕಡಿಮೆ ಶಿಕ್ಷಣ ಕೊಡಿಸುವುದು ಅಥವಾ ಎಲ್ಲ ರೀತಿಯಲ್ಲೂ ಹಿಂದುಳಿಯುವಂತೆ ಮಾಡುವುದು ಪೋಷಕರಿಗೆ ಹೆಚ್ಚು ಲಾಭದಾಯಕವಾಗಿ ಪರಿಣಮಿಸಿದೆ. ಲೋಹಿಯಾರ ಮಾತನ್ನೇ ಗಮನಿಸಿ: "ಕೃಷಿ ಕ್ಷೇತ್ರದಲ್ಲಿ, ತಾನು ಸ್ವತಃ ಕಷ್ಟಪಡುವುದಕ್ಕಿಂತ ಭೋಗ್ಯಕ್ಕೆ ಕೊಡುವುದರಿಂದ ಹೇಗೆ ಹೆಚ್ಚು ಗಳಿಸುವಂತಾಗಿದೆಯೋ ಹಾಗೆ ಕಡಿಮೆ ಶಿಕ್ಷಣವನ್ನು ಪಡೆದ ಹುಡುಗಿಯು ವಿದ್ಯಾವಂತ ಹುಡುಗಿಗಿಂತ ಉತ್ತಮಳು, ಏಕೆಂದರೆ ಅವಳ ವರದಕ್ಷಿಣೆ ಕಡಿಮೆ." ಹಾಗೆಯೇ ಮದುವೆ ಸಮಾರಂಭಗಳಲ್ಲಿನ ದುಂದುಗಾರಿಕೆಯನ್ನೂ ಅವರು ವಿರೋಧಿಸುತ್ತಾರೆ.

ಹಿರಿಯರು ನಿಶ್ಚಯಿಸುವ ಮದುವೆಗಳಿಗೆ ಸಂಬಂಧಿಸಿದ ಇನ್ನೊಂದು ಕರಾರು ಏನೆಂದರೆ, ಮದುವೆಯ ಸಂದರ್ಭದಲ್ಲಿ ಹುಡುಗಿಯು 'ಕನ್ಯೆ'ಯಾಗಿರಬೇಕೆಂಬುದು. ಎಷ್ಟೇ ವಯಸ್ಸಾದರೂ ಮದುವೆಯನ್ನು ನಿಶ್ಚಯಿಸುವ ತನಕ 'ಕನ್ಯತ್ವ'ವನ್ನು ಕಾಪಾಡಿಕೊಂಡಿರಬೇಕು. ಇಲ್ಲವೆಂದರೆ ಅವಳ ಮದುವೆ ಮಾಡುವುದು ಅಸಂಭವ. ಗಂಡಿಗಿಲ್ಲದ, ಆದರೆ ಹೆಣ್ಣಿಗೆ ಮಾತ್ರ ಅನ್ವಯಿಸುವ ಈ ಮಾನದಂಡ ಅತ್ಯಂತ ಕ್ರೂರ ಮಾತ್ರವಲ್ಲದೇ ಪಕ್ಷಪಾತದ ಪಿತೃಸಂಸ್ಕೃತಿಯ ದ್ವಿಮುಖನೀತಿಯನ್ನು ಸ್ಪಷ್ಟವಾಗಿಯೇ ಪ್ರತಿಬಿಂಬಿಸುತ್ತದೆ. ಒಂದು ರೀತಿಯಲ್ಲಿ ಇದು ನೈಸರ್ಗಿಕ ನ್ಯಾಯದ ನಿಯಮಗಳನ್ನು ಉಲ್ಲಂಘಿಸುತ್ತದೆ. ಲೋಹಿಯಾ ಅವರು ಗಮನಿಸುವಂತೆ: "ಬ್ರಹ್ಮಚರ್ಯವೆಂಬುದೊಂದು ಸೆರೆಮನೆಯಿದ್ದಂತೆ. ಪಾವಿತ್ರ್ಯದ ಸಂಕೋಲೆಗಳಿಂದ ಬಿಡುಗಡೆಗೊಳಿಸುವವರಿಗಾಗಿ ಕಾತರದಿಂದ ಕಾಯುವ ಬಂಧಿತ ಆತ್ಮಗಳನ್ನು ಯಾರು ತಾನೆ ನೋಡಿಲ್ಲ?"

ಪುರುಷಾಳ್ವಿಕೆಯ ಸಮಸ್ಯೆ ಹೆಚ್ಚು ಸಂಕೀರ್ಣವಾಗಿರುವುದನ್ನು ಲೋಹಿಯಾ ಗುರುತಿಸುತ್ತಾರೆ. 'ಪುರುಷರ ಮೇಲೇ ಎಲ್ಲವನ್ನೂ ಅರೋಪಿಸುವ ಯಥಾಪ್ರಕಾರದ ಸ್ತ್ರೀವಾದೀ ಆವೇಶ'ಗಳ ಗೊಡವೆಗೆ ಅವರು ಹೋಗುವುದಿಲ್ಲ. ಶಕುಂತಲಾ ಶ್ರೀವಾಸ್ತವ ಅವರ ಭಾರತೀಯ ಮಹಿಳೆಯರ ಸ್ಥಿತಿಗತಿ ಕುರಿತ ಲೇಖನ ಸರಣಿಯಲ್ಲಿ 'ಪುರುಷ ಮತ್ತು ಮಹಿಳೆಯರಿಬ್ಬರೂ ಬೇರೆ ಬೇರೆ ರೀತಿಯಲ್ಲಿ ತಪ್ಪಿತಸ್ಥರು' ಎನ್ನುವ ಅವರ

ಸಂಯಮವನ್ನು ಮೆಚ್ಚಿಕೊಳ್ಳುತ್ತಾರೆ. ಭಾರತದಲ್ಲಿ ಲಿಂಗ ಪಕ್ಷಪಾತಿ ಆಚರಣೆಗಳು ಸುಸ್ಥಿರವಾಗಲು ಮಹಿಳೆಯರೂ ಹೇಗೆ ಕಾರಣಕರ್ತರು ಎಂಬುದನ್ನು ಲೋಹಿಯಾ ಗಮನಿಸುತ್ತಾರೆ. ಪಿತೃಸಂಸ್ಕೃತಿಯ ನಿಶ್ಚಿತ ಮದುವೆ ಮತ್ತು ವರದಕ್ಷಿಣೆಗಳಂತಹ ಮೌಲ್ಯಗಳನ್ನು, ಮಾನದಂಡಗಳನ್ನು ಮತ್ತು ಆಚರಣೆಗಳನ್ನು ಭಾರತೀಯ ಮಹಿಳೆಯರು ಪಾಲಿಸುತ್ತಾರೆ ಅಥವಾ ಪಾಲಿಸಿಕೊಂಡು ಬರುವಂತೆ ಮಾಡಲಾಗುತ್ತದೆ ಎನ್ನುವುದು ಸುಸ್ಪಷ್ಟ. ಇದು ಹೀಗೇಕೆಂದರೆ, ಅವರನ್ನು ಬಾಲ್ಯದಿಂದಲೇ ಆ ರೀತಿ ಬೆಳೆಸುವ ಮೂಲಕ ಸಾಮಾಜಿಕ ರಚನೆಯಲ್ಲಿ ಅಂತಹ ಮೌಲ್ಯಗಳನ್ನು ಸ್ಥಾಪಿಸಲಾಗಿರುತ್ತದೆ. ಲೋಹಿಯಾ ಪ್ರಕಾರ ಮೂಲತಃ ಭಾರತದ ಸಮಾಜವು ಮಹಿಳೆಯರ ವಿಷಯದಲ್ಲಿ ಕ್ರೂರವಾಗಿದೆ. ಇದು ಕೆಲವು ಮಹಿಳೆಯರನ್ನು ಮಿತಿಮೀರಿ ಕ್ರೂರವಾಗಿ ವರ್ತಿಸುವಂತೆ ಮಾಡುತ್ತದೆ: "ವಿವಾಹಿತ ಮಹಿಳೆಯರು ವರ್ತಿಸುವ ರೀತಿ ಮತ್ತು ಅವರು ಇತರ ಸ್ತ್ರೀಯರ ಬಗೆಗೆ ಅದರಲ್ಲೂ ಬೇರೆ ಬೇರೆ ಪುರುಷರೊಂದಿಗೆ ಓಡಾಡುವ ಅವಿವಾಹಿತ ಸ್ತ್ರೀಯರ ಬಗೆಗೆ ಆಡಿಕೊಳ್ಳುವುದನ್ನು ನೋಡಿ ಜಿಗುಪ್ಸೆಯಾಗುತ್ತದೆ. ಇಂಥ ಕ್ರೂರ ಮನಸ್ಸುಗಳು ಇರುವವರೆಗೂ ಪುರುಷ ಮತ್ತು ಮಹಿಳೆ ಎಂಬ ಭೇದಭಾವ ಕೊನೆಗೊಳ್ಳು ವುದಿಲ್ಲ" ಎನ್ನುತ್ತಾರೆ.

ಇನ್ನು 'ಸಪ್ತಕ್ರಾಂತಿ' ಎಂಬ ಸಮಾಜವಾದಿ ಸಿದ್ಧಾಂತದ ಪ್ರಮುಖ ಅಂಶಗಳನ್ನೊಳ ಗೊಂಡ ಲೇಖನದಲ್ಲಿ ಹೇಳುತ್ತಾರೆ: "ಲಿಂಗ ಅಸಮಾನತೆಯು ಎಷ್ಟರಮಟ್ಟಿಗೆ ಭಾರತೀಯ ಮಹಿಳೆಯರ ಪ್ರಜ್ಞೆಯನ್ನು ವಸಾಹತೀಕರಣಗೊಳಿಸಿದೆಯೆಂದರೆ, ಹೆಚ್ಚಿನ ಮಹಿಳೆಯರು ಸಮಾನತೆಯನ್ನೇ ಬಯಸುವುದಿಲ್ಲ. ಅವರು ತಮ್ಮ ಆಭರಣಗಳಿಂದ, ಮತ್ತಿತರ ಸೌಂದರ್ಯ ಸಾಧನಗಳಿಂದ ಸಂತುಷ್ಟರು. ಹೇಗೆಂದರೆ, ಬಹುಪಾಲು ಬಡವರು ಆರ್ಥಿಕ ಸಮಾನತೆಯನ್ನು ಬಯಸದೇ ಬರಿಯ ಇನಾಮು(ಬಕ್ಷೀಸು)ಗಳಿಂದ ಸಂತುಷ್ಟರಾದಂತೆ". ಲಿಂಗಸಂಬಂಧೀ ಪ್ರಶ್ನೆಗಳ ಸಂಕೀರ್ಣತೆ ಮತ್ತು ಮಹತ್ವವನ್ನು ಅರಿತ ಲೋಹಿಯಾ, ಸ್ತ್ರೀ-ಪುರುಷ ಸಮಾನತೆಯನ್ನೂ ತಮ್ಮ 'ಸಪ್ತಕ್ರಾಂತಿ'ಯ ಒಂದು ಮುಖ್ಯ ಅಂಶವನ್ನಾಗಿ ಪರಿಗಣಿಸಿದ್ದಾರೆ.

ಮತ್ತೊಂದು ಮುಖ್ಯವಾದ ಸಂಕೀರ್ಣ ಸಮಸ್ಯೆಯತ್ತ ತಮ್ಮ ದೃಷ್ಟಿ ಹಾಯಿಸುತ್ತಾರೆ ಲೋಹಿಯಾ. ಅದೇನೆಂದರೆ, ಮಹಿಳೆಯರ ಅಧೀನತೆಯನ್ನು ಶಾಶ್ವತಗೊಳಿಸುವಲ್ಲಿ ಮುಂದುವರೆದ, ಸಂಸ್ಕೃತೀಕರಣಗೊಂಡ ಶೂದ್ರರ ವರ್ತನೆ ಮತ್ತು ಮನೋಧರ್ಮಗಳ ಪಾತ್ರ. 'ಶೂದ್ರನಿಗೊಂದು ಪತ್ರ' ದಲ್ಲಿ ಹೀಗೆ ಬರೆಯುತ್ತಾರೆ: "ಆರ್ಥಿಕವಾಗಿ ಸ್ವಲ್ಪ ಚೇತರಿಸಿಕೊಂಡರೂ ಸಾಕು, ಶೂದ್ರರು ಬಹಳ ಬೇಗ ದ್ವಿಜರ ಕೆಟ್ಟ ಅಭ್ಯಾಸಗಳನ್ನು ಕಲಿತುಬಿಡುತ್ತಾರೆ. ತಮ್ಮ ತಮ್ಮ ಸ್ತ್ರೀಯರನ್ನು ಬಲವಂತವಾಗಿ ಪರದೆಯ ಹಿಂದಕ್ಕೆ ಸರಿಸಿಬಿಡುತ್ತಾರೆ. ಮನೆಯ ಆವರಣಕ್ಕೇ ಸೀಮಿತಗೊಳ್ಳುವ ಮೇಲ್ಜಾತಿ ಮಹಿಳೆಯರಿಗಿಂತ ಬೀದಿಗಳಲ್ಲಿ ಮತ್ತು ಹೊಲಗಳಲ್ಲಿ ಮುಖವನ್ನು ಮುಚ್ಚಿಕೊಳ್ಳದೇ ಮುಕ್ತವಾಗಿ ಕೆಲಸ

ಮಾಡುವ ಶೂದ್ರ ಮಹಿಳೆಯರು ಎಷ್ಟೋ ಪಾಲು ಉತ್ತಮ ಎಂದು ನಾನು ಯಾವಾಗಲೂ ವಾದಿಸುತ್ತಾ ಬಂದಿದ್ದೇನೆ. ಶೂದ್ರರು ಈ ವಿಷಯದ ಬಗ್ಗೆ ಗಂಭೀರವಾಗಿ ಚಿಂತಿಸಬೇಕು. ಹರಿಜನರ ವಿಷಯ ಅಷ್ಟೇನೂ ಕೆಟ್ಟದಿಲ್ಲ. ಆದರೆ ಅಸ್ಪೃಶ್ಯರಲ್ಲದ ಇತರ ಹಿಂದುಳಿದ ಜಾತಿಗಳವರು ಇಂಥ ಭ್ರಮೆಗಳ ಹಿಡಿತದಲ್ಲಿದ್ದಾರೆ. ಸುಶಿಕ್ಷಿತ ಮತ್ತು ಅನುಕೂಲಸ್ಥ ಶೂದ್ರರು ಸಾಮಾನ್ಯವಾಗಿ ಅಸೂಯೆಯಿಂದ ಮತ್ತು ಸುತ್ತಲಿನ ಸಾಮಾಜಿಕ ಪರಿಸರದಿಂದ ಹೆಚ್ಚು ಪ್ರಚೋದನೆಗೊಳಗಾಗುತ್ತಾರೆ."

ಉದಾರ ಆಧುನಿಕತಾವಾದೀ ಮತ್ತು ಮಾರ್ಕ್ಸ್‌ವಾದೀ ಮಾರ್ಗಗಳ ನಿರಾಕರಣೆ

ಭಾರತೀಯ ಮಹಿಳೆಯರ ವಿಮೋಚನೆಗಾಗಿ ಲೋಹಿಯಾ ತುಳಿಯುವ ಹಾದಿ, ಉದಾರ ಆಧುನಿಕತಾವಾದಿ ಮತ್ತು ಮಾರ್ಕ್ಸ್‌ವಾದೀ ಮಾರ್ಗಗಳಿಗಿಂತ ಭಿನ್ನವಾದದ್ದು. 'ಬಂಡವಾಳವಾದ ಮತ್ತು ಮಾರ್ಕ್ಸ್‌ವಾದದ 'ಸಮಾನ ಅಪ್ರಸ್ತುತತೆ'–ಹೊಸ ಮನುಕುಲದ ನಾಗರೀಕತೆಯ ಸೃಷ್ಟಿಗೆ ಸಂಬಂಧಿಸಿದಂತೆ' ಎಂಬ ಮಹಾಪ್ರಬಂಧವನ್ನು ರಚಿಸಿದ್ದಾರೆ. ಅದರಲ್ಲಿ, ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂರವರು ತೆಗೆದುಕೊಂಡ ಕ್ರಮಗಳು ಮತ್ತು ಅನುಸರಿಸಿದ ಮಾರ್ಗಗಳ ಕುರಿತ ತಮ್ಮ ಟೀಕೆ ಟಿಪ್ಪಣಿಗಳಲ್ಲಿ ಉದಾರವಾದಿ ಆಧುನಿಕತಾವಾದಿ ದೃಷ್ಟಿಕೋನವನ್ನು ತಿರಸ್ಕರಿಸಿರುವುದು ಸ್ಪಷ್ಟವಾಗಿದೆ. ಕೆಳಜಾತಿ ಮಹಿಳೆಯರ ಸ್ವಾಸ್ಥ್ಯದ ಬಗ್ಗೆ ತಲೆಕೆಡಿಸಿಕೊಳ್ಳದ ಮತ್ತು ಎಂದೂ ಅರ್ಥಮಾಡಿಕೊಳ್ಳದ, ಮೇಲ್ಜಾತಿ ಮಹಿಳೆಯರ ಬಗ್ಗೆ ಮಾತ್ರ ಹೆಚ್ಚು ಕಾಳಜಿ ತೋರುವ ನೆಹರೂರವರನ್ನು 'ಆಧುನಿಕ ವಸಿಷ್ಠ' ಎಂಬುದಾಗಿ ಕರೆಯುತ್ತಾರೆ ಲೋಹಿಯಾ. ತಮ್ಮ 'ವಸಿಷ್ಠರು ಮತ್ತು ವಾಲ್ಮೀಕಿಯರು' ಎಂಬ ಬರಹದಲ್ಲಿ ವಿವರಿಸುತ್ತಾರೆ: "ನೆಹರೂರವರ ಕಾಳಜಿಗಳು ಸೀತೆ ಮತ್ತು ಊರ್ಮಿಳೆಯರಿಗೆ(ಮೇಲ್ಜಾತಿ ಮಹಿಳೆಯರು) ಸೀಮಿತಗೊಳ್ಳುತ್ತದೆ. ಐದು ಸಾವಿರ ವರ್ಷಗಳ ಕಾಲಾವಧಿಯು ಕೇವಲ ಒಂದು ವ್ಯತ್ಯಾಸವನ್ನಷ್ಟೇ ಮಾಡಿದೆ. ಐದುಸಾವಿರ ವರ್ಷಗಳ ಹಿಂದೆ ವಸಿಷ್ಠರು ಸೀತೆಯ ಮೇಲೆ ಎಲ್ಲ ರೀತಿಯ ನಿರ್ಬಂಧಗಳನ್ನು ವಿಧಿಸಿದ್ದರೂ ಪ್ರತೀಬಾರಿ ಅವಳು ತನ್ನ ಮುಗ್ಧತೆಯನ್ನು ಸಾಬೀತುಪಡಿಸಲು ಅಗ್ನಿಪರೀಕ್ಷೆಗೊಳಪಡುವುದನ್ನು ಬಯಸಿದ್ದರು. ಆಧುನಿಕ ವಸಿಷ್ಠರಾದರೋ, ಸೀತೆಯ ಎಲ್ಲ ಸಂಕೋಲೆಗಳನ್ನೂ ಕಿತ್ತುಹಾಕಬಯಸುವವರು. ಆದರೆ, ವಾಸಂತಿಯರು ಮತ್ತು ಕುಶಿಕೆಯರ(ಕೆಳಜಾತಿ ಮಹಿಳೆಯರು) ಸ್ಥಾನ ಮಾತ್ರ ಮೊದಲಿದ್ದಲ್ಲಿಯೇ. ಯಾವ ವ್ಯತ್ಯಾಸವೂ ಇಲ್ಲ. ಅಂದರೆ, ವಸಿಷ್ಠರ ಅಡಿಯಾಳಾಗಿ ಅವರನ್ನು ಸಂಪ್ರೀತಗೊಳಿಸುವುದು. ಸಮಾನತೆಯ ತತ್ವಗಳು ಅವರ ತನಕ ಬರುವುದೇ ಇಲ್ಲ."

ಸ್ತ್ರೀ ವಿಮೋಚನೆಯ ಮಾರ್ಗಗಳು

ಈಗ ಅಸ್ತಿತ್ವದಲ್ಲಿರುವ ಲಿಂಗಾಧಾರಿತ ಅಸಮಾನತೆಯನ್ನು ಕೊನೆಗಾಣಿಸಲು ಲೋಹಿಯಾ, ವಿಶಿಷ್ಟವಾದ, ಅಲ್ಪಾವಧಿಯ ಮತ್ತು ದೀರ್ಘಾವಧಿಯ ಪರಿಣಾಮಗಳನ್ನು

ಹೊಂದಿರುವ ಒಂದು ಮಾರ್ಗವನ್ನು ಸೂಚಿಸುತ್ತಾರೆ. ದೀರ್ಘಾವಧಿಯಲ್ಲಿ ಭಾರತದ ಸಮಾಜವನ್ನು ಜಾತಿರಹಿತ, ವರ್ಗರಹಿತ ಮತ್ತು ಲಿಂಗ ತಾರತಮ್ಯರಹಿತ ಸಮಾಜವನ್ನಾಗಿ ಪರಿವರ್ತಿಸುವ ಹಂಬಲ ಅವರದ್ದು. ತಮ್ಮ ಸಪ್ತ ಕ್ರಾಂತಿಗಳಲ್ಲಿ ಸ್ತ್ರೀ ಪುರುಷ ಸಮಾನತೆಗೆ ಮೊಟ್ಟಮೊದಲ ಸ್ಥಾನವನ್ನು ಕೊಡುತ್ತಾರೆ. ಲೋಹಿಯಾ ಅವರ ಹಿಂದೂ ಧರ್ಮದ ಬಗೆಗಿನ ಒಂದು ಲೇಖನದಲ್ಲಿ "ಹಿಂದೂ ಮನಸ್ಸಿನಲ್ಲಿರುವ ಜಾತಿಭಾವವು ಸಂಪೂರ್ಣ ಅಳಿಸಿಹೋಗಬೇಕು ಮತ್ತು ಸ್ತ್ರೀಯರನ್ನು ಪುರುಷರಿಗೆ ಸಮಾನವಾಗಿ ನಡೆಸಿಕೊಳ್ಳಬೇಕು." ಎನ್ನುತ್ತಾರೆ.

ಲಿಂಗ ಸಮಾನತೆಯನ್ನು ಉತ್ತೇಜಿಸಲು, ಸದ್ಯಕ್ಕೆ ಸರಿಕಾಣುವ, ಸಮಾನ ಅವಕಾಶಗಳನ್ನು ಕೊಟ್ಟರೆ ಸಾಲದು ಎನ್ನುವ ಲೋಹಿಯಾ, ಉದಾರತೆಯ ಚೌಕಟ್ಟನ್ನು ಮೀರಿ, ಸ್ತ್ರೀಯರ ಸ್ಥಾನಮಾನವನ್ನು ಉತ್ತಮಪಡಿಸಲು ಮತ್ತು ಪುರುಷಸ್ಥಾನದೊಂದಿಗೆ ಸಮೀಕರಿಸಲು ಭಾರತದ ಸಮಾಜವನ್ನು ಸಾಂಸ್ಕೃತಿಕವಾಗಿ ಮತ್ತು ರಚನಾತ್ಮಕವಾಗಿ ಬೇರುಮಟ್ಟದಲ್ಲಿ ಪರಿವರ್ತಿಸಬೇಕೆಂದು ಆಶಿಸುತ್ತಾರೆ. ಅದಕ್ಕಾಗಿ ವಿಶೇಷವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಸೂಚಿಸುತ್ತಾರೆ. 'ಮಾರ್ಕ್ಸ್, ಗಾಂಧಿ ಮತ್ತು ಸಮಾಜವಾದ' ಎಂಬ ತಮ್ಮ ಲೇಖನದಲ್ಲಿ "ನೂರಾರು ವರ್ಷಗಳಿಂದ ಆಳವಾಗಿ ಬೇರೂರಿರುವ ಲಿಂಗ ಅಸಮಾನತೆಯ ಸಮಸ್ಯೆಯು ಸಮಾನ ಅವಕಾಶಗಳನ್ನು ಕೊಟ್ಟಾಕ್ಷಣ ಪರಿಹಾರವಾಗಿಬಿಡುವುದಿಲ್ಲ. ಒಂದೇ ದಾರಿಯೆಂದರೆ, ವಿಶೇಷ ಆದ್ಯತೆಯ ಅವಕಾಶಗಳನ್ನು ಕೊಡುವುದು. ಇನ್ನೂ ಸರಿಯಾಗಿ ಹೇಳಬೇಕೆಂದರೆ, ಪುರುಷರಿಗಿಂತ ಹೆಚ್ಚಿನ ಹಕ್ಕುಗಳನ್ನು ಅವರಿಗೆ ಕೊಡುವುದು. ಆಗ ಸಮಾನತೆಯು ಸಾಧಿತವಾಗುತ್ತದೆ."

ಭಾರತದ ಸಂದರ್ಭದಲ್ಲಿ, ಲೋಹಿಯಾ ಗುರುತಿಸುವಂತೆ, ಜಾತಿ ಪದ್ಧತಿಯಲ್ಲಿ ಸಾಮರ್ಥ್ಯಗಳನ್ನು ಅಳೆಯುತ್ತಿರುವುದಕ್ಕೆ ೫೦೦೦ ವರ್ಷಗಳ ಇತಿಹಾಸವಿದೆ. ಅದರ ಫಲವಾಗಿ, ಕೆಲವು ನಿರ್ದಿಷ್ಟ ಜಾತಿಗಳು ವಿಶೇಷವಾಗಿ ಗುರುತಿಸಲ್ಪಟ್ಟಿವೆ. ಉದಾಹರಣೆಗೆ ಬೌದ್ಧಿಕ ಕ್ಷೇತ್ರದಲ್ಲಿ ಸಾರಸ್ವತ ಬ್ರಾಹ್ಮಣರು, ಉದ್ದಿಮೆಗಳಲ್ಲಿ ಮತ್ತು ಹಣಕಾಸು ವ್ಯವಹಾರಗಳಲ್ಲಿ ಮಾರವಾಡಿ ಬನಿಯಾಗಳು ಇತ್ಯಾದಿ. ಆದ್ದರಿಂದ ಆದ್ಯತೆಯ ಅವಕಾಶಗಳನ್ನು ಮತ್ತು ವಿಶೇಷ ಸವಲತ್ತುಗಳನ್ನು ಕೊಡದೇ ಇಂಥ ಜಾತಿಗಳೊಡನೆ ಸ್ಪರ್ಧಿಸುವ ಮಾತುಗಳನ್ನಾಡುವುದು ಅರ್ಥಹೀನ ಎಂದು ಭಾವಿಸುತ್ತಾರೆ. "ಸಾಮರ್ಥ್ಯಗಳ ಸಂಕುಚಿತ ಆಯ್ಕೆಗಳನ್ನು ಈಗ ವಿಸ್ತಾರಗೊಳಿಸಬೇಕಿದೆ. ಹಾಗೆಯೇ ಸಮಾನತೆಯನ್ನು ಸಾಧಿಸಬೇಕೆಂದರೆ, ಇಪ್ಪತ್ತು ಮುವ್ವತ್ತು ವರ್ಷಗಳ ಕಾಲ ಹಿಂದುಳಿದ ಜಾತಿಗಳು ಮತ್ತು ಗುಂಪುಗಳಿಗೆ ವಿಶೇಷ ಆದ್ಯತೆಯ ಅವಕಾಶಗಳನ್ನು ಕೊಡಬೇಕು. ಮಹಿಳೆಯರನ್ನೂ ಒಳಗೊಂಡಂತೆ ಅಂಚಿಗೆ ತಳ್ಳಲ್ಪಟ್ಟ ಎಲ್ಲರಿಗೂ ಇದು ಅನ್ವಯಿಸುತ್ತದೆ" ಎನ್ನುತ್ತಾರೆ. "ಶೂದ್ರರು, ಹರಿಜನರು, ಮುಸ್ಲಿಮರು ಮತ್ತು ಮಹಿಳೆಯರನ್ನು ಉನ್ನತ

ಸ್ಥಾನದಲ್ಲಿ ಕುಳ್ಳಿರಿಸಬೇಕು. ಪೂರ್ತಿ ಅರ್ಹತೆಯಿಲ್ಲದಿದ್ದರೂ ಸಹ." ಎಂಬ ಸಲಹೆ ಕೊಡುತ್ತಾರೆ.

ಪ್ರೊ.ಆನಂದ ಕುಮಾರ್ ಅವರ ಪ್ರಕಾರ(೨೦೧೦) ಜಾತಿ ಮತ್ತು ಲಿಂಗ ಭೇದ ಭಾವವನ್ನು ಬಗ್ಗುಬಡಿಯಲು, ಭಾರತೀಯ ಮಹಿಳೆಯರ ಬದುಕಿಗೆ ಸಂಬಂಧಪಟ್ಟಂತೆ, ತಕ್ಷಣ ಗಮನಹರಿಸಬೇಕಾದ ನಾಲ್ಕು ಕ್ಷೇತ್ರಗಳಿವೆ ಎಂಬುದನ್ನು ಲೋಹಿಯಾ ಗುರುತಿಸಿದ್ದಾರೆ. ಅವುಗಳೆಂದರೆ, (ಅ) ಅಡುಗೆಮನೆಯ ಗುಲಾಮಗಿರಿ, ಶುದ್ಧ ನೀರು ಮತ್ತು ಶೌಚಾಲಯಗಳ ಅಭಾವ(ಆ) ವರದಕ್ಷಿಣೆ, ಜನನ ನಿಯಂತ್ರಣ ಮತ್ತು ತಾಯ್ತನ ಸೇರಿದಂತೆ ಮದುವೆ ಮತ್ತು ಲೈಂಗಿಕತೆಗಳ ಬಗೆಗಿನ ಆಷಾಢಭೂತಿತನ (ಇ) ಶಿಕ್ಷಣ ಮತ್ತು ಆಸ್ತಿ ಹಕ್ಕು ವಿಷಯಗಳಲ್ಲಿ ಗಂಡು ಹೆಣ್ಣಿನ ನಡುವೆ ಇನ್ನೂ ಹೆಚ್ಚಿನ ಸಮಾನತೆಯ ಅಗತ್ಯ (ಈ) ನಾಯಕತ್ವ, ರಾಜಕೀಯ, ಸೈನ್ಯ ಮತ್ತು ಸರ್ಕಾರೀ ನೌಕರಿಗಳಲ್ಲಿ ಆದ್ಯತೆಯ ಅವಕಾಶಗಳು.

ಬೇರು ಮಟ್ಟದ ಸಾಂಸ್ಕೃತಿಕ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಲೋಹಿಯಾ ಅವರು, ನಿಶ್ಚಿತ ಮದುವೆಗಳು ಮತ್ತು ವರದಕ್ಷಿಣೆ ಪದ್ಧತಿಯನ್ನು ನಿರಾಕರಿಸಬೇಕು ಎಂದು ಪ್ರತಿಪಾದಿಸುತ್ತಾರೆ. "ವರದಕ್ಷಿಣೆಯನ್ನು ಕೊಡುವುದು ಮತ್ತು ತೆಗೆದುಕೊಳ್ಳುವುದು ಎರಡೂ ಶಿಕ್ಷಾರ್ಹವಾಗಬೇಕು. ಬದಲಾವಣೆಗಳು ಮನಸ್ಸಿನಲ್ಲಿ ಮತ್ತದರ ಮೌಲ್ಯಗಳಲ್ಲಿ ಆಗಬೇಕು. ಮಕ್ಕಳಿಗೆ ಒಳ್ಳೆಯ ಆರೋಗ್ಯ ಮತ್ತು ವಿದ್ಯಾಭ್ಯಾಸ ಕೊಡುವುದಷ್ಟೇ ಪೋಷಕರ ಜವಾಬ್ದಾರಿ, ಮದುವೆ ಮಾಡುವುದಲ್ಲ" ಎನ್ನುತ್ತಾರೆ. ಮದುವೆ ಸಮಾರಂಭಗಳಲ್ಲಿನ ಅತಿರೇಕದ ಪ್ರದರ್ಶನ ನಿಲ್ಲಬೇಕು ಮತ್ತು ಮಕ್ಕಳಿಗೆ ತಮ್ಮ ತಮ್ಮ ಸಂಗಾತಿಗಳನ್ನು ಹುಡುಕಿಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕು ಎನ್ನುವ, ಸ್ಥಾಪಿತ ಮಾನದಂಡಗಳನ್ನು ಪಲ್ಲಟಗೊಳಿಸುವ ಸಲಹೆ ನೀಡುತ್ತಾರೆ. "ಒಂದು ವೇಳೆ ಹುಡುಗಿ ಓಡಿಹೋದರೆ, ಅನೈತಿಕ ಸಂಬಂಧಗಳಲ್ಲಿ ಜಾರಿದರೆ, ಅದು ಗಂಡುಹೆಣ್ಣಿನ ನಡುವಣ ಸಹಜ ಸಂಬಂಧಗಳನ್ನು ಅರಸುವಾಗ ಆಗುವಂಥದ್ದೇ ಹೊರತು ಕಳಂಕವಲ್ಲ." ಅಲ್ಲದೇ, ಹೆಣ್ಣು ಮದುವೆಯಾಗುವವರೆಗೂ ತನ್ನ ಕನ್ಯತ್ವವನ್ನು ಕಾಪಾಡಿಕೊಳ್ಳಬೇಕೆನ್ನುವ ಸಾಂಸ್ಕೃತಿಕ ಮಾನದಂಡವನ್ನು ತಿರಸ್ಕರಿಸಬೇಕು. "ಇಂತಹ ಬಾಲಿಶ ಆಚರಣೆಗಳ ವಿರುದ್ಧ ಯುವಕ ಯುವತಿಯರು ದಂಗೆ ಏಳಬೇಕು. ಲೈಂಗಿಕ ನಡವಳಿಕೆಗಳಲ್ಲಿ ಕೇವಲ ಎರಡು ಅಕ್ಷಮ್ಯ ಅಪರಾಧಗಳಿವೆ. ಅವುಗಳೆಂದರೆ, ಅತ್ಯಾಚಾರ ಮತ್ತು ಮಾತಿಗೆ ತಪ್ಪುವುದು ಅಥವಾ ಸುಳ್ಳು ಹೇಳುವುದು ಎಂಬುದನ್ನು ಅವರು ಯಾವಾಗಲೂ ನೆನಪಿಡಬೇಕು. ಇನ್ನೊಬ್ಬರಿಗೆ ನೋವುಂಟುಮಾಡುವ, ಘಾಸಿಯನ್ನುಂಟುಮಾಡುವ ಮೂರನೇ ಅಪರಾಧವೂ ಒಂದಿದೆ. ಅದನ್ನವರು ಆದಷ್ಟೂ ತಪ್ಪಿಸಬೇಕು." ಎಂದು ಅಭಿಪ್ರಾಯ ಪಡುತ್ತಾರೆ. ಅತ್ಯಾಚಾರವೆಸಗಿದ ಸಂದರ್ಭದಲ್ಲಿ

ಬಲಿಪಶುವಾದವರನ್ನೇ ಬೈಯ್ಯುವುದನ್ನು ನೇರವಾಗಿ ವಿರೋಧಿಸುವ ಲೋಹಿಯಾ, ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಹೆಣ್ಣಿನ ಅಂತರಂಗ ಪರಿಶುದ್ಧತೆಯನ್ನು ಎತ್ತಿಹಿಡಿದಿರುವ ಕಡೆಗೆ ನಮ್ಮ ಗಮನ ಸೆಳೆಯುತ್ತಾರೆ. "ಬಲಾತ್ಕಾರದ ಅತ್ಯಾಚಾರದ ಸಂದರ್ಭದಲ್ಲಿ ಮಹಿಳೆಯು ಮಾಡುವ ಹೋರಾಟ ಯಶಸ್ವಿಯಾಗದಿದ್ದರೂ, ಅದು ಅವಳಿಗೆ ಹಾನಿಯಾಗಲೀ, ಕೊಳಕಾಗಲೀ ಅಲ್ಲ. ಏಕೆಂದರೆ, ಅವಳು ಪ್ರತಿತಿಂಗಳೂ ತನ್ನನ್ನು ಪುನಶ್ಚೇತನಗೊಳಿಸಿಕೊಳ್ಳುತ್ತಾಳೆ."

ಜಾತಿ ಮತ್ತು ಲಿಂಗಾಧಾರಿತ ತಾರತಮ್ಯವನ್ನು ಮೀರಲು ಅಂತರ್ಜಾತಿ ವಿವಾಹಗಳಾಗಬೇಕು ಮತ್ತು ಅದನ್ನು ಪ್ರೋತ್ಸಾಹಿಸಲು ಅಂತಹ ಜೋಡಿಗಳಿಗೆ ಸರ್ಕಾರೀ ಕೆಲಸವನ್ನು ಕೊಡಬೇಕೆಂಬ ಸಲಹೆ ನೀಡುತ್ತಾರೆ. ವಿವಾಹ ವಿಚ್ಛೇದನ ಮತ್ತು ಮರುಮದುವೆಯಾಗುವ ಮತ್ತು ತಮ್ಮ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಮಹಿಳೆಯರ ಹಕ್ಕುಗಳನ್ನು ಬೆಂಬಲಿಸುತ್ತಾರೆ. ಮದುವೆಯ ಸಾಂಸ್ಥಿಕ ಚೌಕಟ್ಟನ್ನೂ ಮೀರಿ ಅವರು ವಿವಾಹರಹಿತ ತಾಯ್ತನವನ್ನೂ, ಜನನ ನಿಯಂತ್ರಣದ ಸೌಲಭ್ಯಗಳನ್ನು ವಿವಾಹಿತರು ಅವಿವಾಹಿತರೆನ್ನದೆ ಎಲ್ಲರಿಗೂ ದೊರಕುವಂತೆ ಮಾಡಬೇಕು ಎನ್ನುವುದನ್ನೂ ಬೆಂಬಲಿಸುತ್ತಾರೆ. ಸ್ತ್ರೀ ಲೈಂಗಿಕತೆಯ ಮುಕ್ತ ಅಭಿವ್ಯಕ್ತಿಯನ್ನು ಪ್ರತಿಪಾದಿಸುವುದರೊಂದಿಗೆ ಏಕಪಕ್ಷೀಯವಾದ ಲೈಂಗಿಕ ನೈರ್ಮಲ್ಯದ ಕಲ್ಪನೆಯನ್ನು ತಿರಸ್ಕರಿಸುತ್ತಾರೆ. ಅದೊಂದು ಭಾರತೀಯ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿರುವ ದ್ವಂದ್ವ ನೀತಿ.

ಜಾತಿ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರುವ ಸಗೋತ್ರ ವಿವಾಹವನ್ನು ಕೊನೆಗಾಣಿಸುವುದಕ್ಕೆ ಹೆಚ್ಚು ಒತ್ತನ್ನು ನೀಡುತ್ತಾರೆ. ಏಕೆಂದರೆ ಅದು, ಗಂಡು ಮತ್ತು ಹೆಣ್ಣು, ಜಾತಿಗಡಿಗಳನ್ನು ಮೀರಿ ಮುಕ್ತವಾಗಿ ಪರಸ್ಪರ ಅನ್ಯೋನ್ಯವಾಗಿ ಬೆರೆಯಲು ತಡೆಯೊಡ್ಡುತ್ತದೆ. ವಿವಿಧ ಜಾತಿಗಳಿಗೆ ಸೇರಿದ ಪುರುಷರು ಮತ್ತು ಮಹಿಳೆಯರು ವೈಯಕ್ತಿಕ ಸಂಬಂಧಗಳ ಮೂಲಕ ಜಾತಿ ಗಡಿಗಳನ್ನು ಕಿತ್ತುಹಾಕುವುದು ಅಗತ್ಯವಾಗಿದೆ ಎನ್ನುವುದು ಲೋಹಿಯಾ ಅವರ ನಿಲುವು. 'ಶೂದ್ರನಿಗೊಂದು ಪತ್ರ'ದಲ್ಲಿ : "ದ್ವಿಜ ಮಹಿಳೆಯರಿಗಿಂತ ಶೂದ್ರ ಮಹಿಳೆಯರಿಗೆ ಹೆಚ್ಚಿನ ಕೌಶಲ್ಯವಿದೆ. ಶೂದ್ರ ಮಹಿಳೆಯರು ಮುಕ್ತ ವಾತಾವರಣ ಮತ್ತು ಮುಗ್ಧ ಆನಂದಕ್ಕಾಗಿ ಹಂಬಲಿಸುತ್ತಾರೆ ಎಂದು ನನಗೆ ಯಾವಾಗಲೂ ಅನ್ನಿಸಿದೆ. ಜಾತಿ ಗಡಿಗಳನ್ನೇನಾದರೂ ಕಿತ್ತುಹಾಕಿದರೆ ಅಥವಾ ಸಡಿಲಗೊಳಿಸಿದರೆ, ಬಹಳಷ್ಟು ದ್ವಿಜ ಗಂಡಸರು ಶೂದ್ರ ಮಹಿಳೆಯರತ್ತ ಆಕರ್ಷಿತರಾಗುತ್ತಾರೆ. ಹಾಗೆಯೇ ತಮಗೂ ಮತ್ತು ದೇಶಕ್ಕೂ ಸುಖ ಸಂತೋಷವನ್ನು ತರುತ್ತಾರೆ. ಅದೇ ರೀತಿ ಶೂದ್ರ ಹುಡುಗರು ಕೂಡ ದ್ವಿಜ ಮಹಿಳೆಯರ ಲೋಕವನ್ನು ಪ್ರವೇಶಿಸಲು ಶಕ್ತರಾಗುತ್ತಾರೆ. ದ್ವಿಜರು ಮತ್ತು ಶೂದ್ರರು ಪರಸ್ಪರರಲ್ಲಿ ಮಕ್ಕಳನ್ನು ಪಡೆಯಲು

ಸಾಧ್ಯವಾಗುವ ಹಾಗೆ ಜಾತಿಯನ್ನು ಮರುವ್ಯಾಖ್ಯಾನಿಸುವುದಷ್ಟೇ ಅಲ್ಲದೇ ಅದು ಸಹಜವೆನ್ನುವಂತೆ ಗ್ರಹಿಸಿಕೊಳ್ಳಬೇಕಾದ ಅಗತ್ಯವಿದೆ" ಎನ್ನುತ್ತಾರೆ.

ಆದರೆ, ದ್ವಿಜರು(ಮೇಲ್ಜಾತಿಗಳು) ಜಾತಿ ವಿನಾಶ ಕಾರ್ಯಕ್ರಮವನ್ನು ಬೆಂಬಸುತ್ತಾರೆಂದೇನೂ ನಿರೀಕ್ಷಿಸಿರಲಿಲ್ಲ ಲೋಹಿಯಾ. ಮೇಲ್ಜಾತಿ ಗಂಡಸರು ಕೆಳಜಾತಿ ಮಹಿಳೆಯರ ವಿಮೋಚನೆಗಾಗಿ ಪ್ರಾಮಾಣಿಕವಾಗಿ ಕೆಲಸಮಾಡುತ್ತಾರೆಂಬ ನಂಬಿಕೆ ಇರಲಿಲ್ಲ ಲೋಹಿಯಾ ಅವರಿಗೆ. ಬಹುಸಂಖ್ಯಾತ ಮಹಿಳೆಯರಿಗೆ ಮೂಲಸೌಕರ್ಯಗಳೂ ಕೂಡ ಇಲ್ಲ. ಲೋಹಿಯಾ ಗಮನಿಸುವಂತೆ : "ಆಧುನಿಕ ವಸಿಷ್ಠರಿಗೆ ಬಹುಶಃ ನೀರು ಮತ್ತು ಶೌಚಾಯಲಗಳ ನರಕದ ಬಗ್ಗೆ ಗೊತ್ತಿಲ್ಲವೆಂದು ಕಾಣುತ್ತದೆ. ಗೊತ್ತಾದರೂ ಅದರ ಬಗ್ಗೆ ಚಿಂತಿಸುವುದಿಲ್ಲ. ಚಿಂತಿಸಿದರೂ ಅದು ತಂಬಾಕಿನ ಹೊಗೆಯ ಉಂಗುರಗಳೊಂದಿಗೆ ಮಾತ್ರ". ಮೇಲ್ಜಾತಿ ಗಂಡಸರು ಮೇಲ್ಜಾತಿ ಹೆಂಗಸರ ಸ್ಥಾನಮಾನವನ್ನು ಉತ್ತಮಗೊಳಿಸುವುದರ ಬಗೆಗೆ ಮಾತ್ರ ಕಾಳಜಿ ತೋರುತ್ತಾರೆ. ಆದ್ದರಿಂದ ಸಮಾನ ಅವಕಾಶವೆಂಬ ಉದಾರ ಸಿದ್ಧಾಂತವು ಕೆಳಜಾತಿ ಮಹಿಳೆಯರಿಗೇನೂ ಉಪಯೋಗಕ್ಕೆ ಬರುವುದಿಲ್ಲ. ಕೆಳಜಾತಿ ಜನರೇ ಕೆಳಜಾತಿ ಮಹಿಳೆಯರನ್ನು ಮೇಲೆತ್ತಲು ಸಾಧ್ಯ ಎನ್ನುವುದು ಲೋಹಿಯಾರ ಅಭಿಪ್ರಾಯ. "ಒಬ್ಬ ವಾಲ್ಮೀಕಿ, ಇತರ ೮೦% ಮಹಿಳೆಯರ ಬಗ್ಗೆ ಯೋಚಿಸಬಹುದಿತ್ತು. ಕತ್ತೆಚಾಕರಿ ಮತ್ತು ದಾರಿದ್ರ್ಯಗಳ ಕೂಪದಿಂದ ಅವರನ್ನು ಮೇಲೆತ್ತುವ ದಾರಿಯನ್ನವನು ಕಂಡುಹಿಡಿಯಬಹುದಿತ್ತು." ಹೀಗೆ ಲೋಹಿಯಾ ಮಹಿಳೆಯರು ಸ್ವಯಂ ಸಬಲೀಕರಣಗೊಳ್ಳುವ ವಿಚಾರದಲ್ಲಿ ನಂಬಿಕೆ ಇರಿಸಿದ್ದಾರೆಯೇ ಹೊರತು ಕೆಳಜಾತಿ ಮಹಿಳೆಯರನ್ನು ಮೇಲೆತ್ತಲು ಮೇಲ್ಜಾತಿಗಳ ಮೇಲೆ ಅವಲಂಬಿಸುವ ಪ್ರಾಯೋಜಿತ ಸಬಲೀಕರಣದ ವಿಚಾರದಲ್ಲಿ ಅಲ್ಲ.

ಅಂತಿಮ ನಿರ್ಣಯಗಳು

ಭಾರತೀಯ ಮಹಿಳೆಯರ ಸ್ಥಾನಮಾನವನ್ನು ವಿಶ್ಲೇಷಿಸುವ ಎಲ್ಲ ಸ್ತ್ರೀವಾದಿ ಚಿಂತನ ಧಾರೆಗಳಿಂದ ಲೋಹಿಯಾ ಬೇರೆಯಾಗಿ ನಿಲ್ಲುತ್ತಾರೆ. ಸ್ತ್ರೀ ಪುರುಷರಿಗೆ ಸಮಾನ ಅವಕಾಶಗಳನ್ನು ಕೊಡುವ ಗುರಿಯನ್ನು ಹೊಂದಿರುವ ಮತ್ತು ಮಹಿಳೆಯರ ಮೇಲಿನ ನಿರ್ಬಂಧಗಳು ಮತ್ತು ತಾರತಮ್ಯಗಳನ್ನು ಕ್ರಮೇಣ ಕಡಿಮೆ ಮಾಡುವ ಕಾನೂನಾತ್ಮಕ, ಶೈಕ್ಷಣಿಕ ಮತ್ತು ಇನ್ನಿತರ ಸುಧಾರಣೆಗಳನ್ನು ಪ್ರತಿಪಾದಿಸುವ ಉದಾರ ಆಧುನಿಕತಾವಾದಿ ಸಿದ್ಧಾಂತವನ್ನು ಲೋಹಿಯಾ ತಿರಸ್ಕರಿಸುತ್ತಾರೆ. ಭಾರತದಲ್ಲಿ ಉದಾರವಾದಿ ಕ್ರಮಗಳಿಂದ ನಿಧಾನವಾಗಿ ಮಹಿಳೆಯರ ಸ್ಥಾನಮಾನ ಉತ್ತಮವಾಗಬಹುದಾದರೂ ಮಹಿಳಾ ವಿಮೋಚನೆ ಮತ್ತು ಲಿಂಗ ಸಮಾನತೆ ಸಾಧಿಸಲು ಅಷ್ಟೇ ಸಾಲದು ಎಂಬುದು ಅವರ ದೃಢವಾದ ನಿಲುವು.

ಲೋಹಿಯಾರ ಸ್ತ್ರೀವಾದಿ ಚಿಂತನೆಗಳನ್ನು ಇನ್ನಾವುದೇ ನಿರ್ದಿಷ್ಟ ಸ್ತ್ರೀವಾದಿ ಧಾರೆ ಮತ್ತು ತತ್ವದೊಂದಿಗೆ ಸಮೀಕರಿಸುವುದು ಅಷ್ಟು ಸುಲಭವಲ್ಲ. ಜಾನ್ ವಿ.

ಬಾಂಡ್ಯುರಾಂಟ್ ಅವರು ಲೋಹಿಯಾರನ್ನು 'ಅದಮ್ಯ ಭಾರತೀಯ ಸಮಾಜವಾದಿ' ಎಂದು ವರ್ಣಿಸುತ್ತಾರೆ. ಲೋಹಿಯಾರ ವಿಶಾಲ ದೃಷ್ಟಿಕೋನವು, ಸಂಪೂರ್ಣ ಲಿಂಗ ನ್ಯಾಯ(gender justice) ಮತ್ತು ಲಿಂಗಾಂಧತೆಯ(gender blindness) ನಿರ್ಮೂಲನೆಯನ್ನು ಖಾತ್ರಿಪಡಿಸುವ ಸರ್ವಸಮಾನತೆಯ ಸಮಾಜವಾದಿ ಸಮಾಜ ಸ್ಥಾಪನೆಯ ಗುರಿಯನ್ನು ಹೊಂದಿರುವಂತಹದ್ದು. ಲೋಹಿಯಾರ ಚಿಂತನೆಗಳಲ್ಲಿ ಮಹಿಳೆಯರ ಅಸ್ತಿತ್ವ, ಘನತೆ ಮತ್ತು ಸ್ವಾಯತ್ತತೆಗಳು ಸ್ಪಷ್ಟವಾಗಿ ಗುರುತಿಸಲ್ಪಟ್ಟಿವೆ. ಹಾಗೆಯೇ ಸಾಮಾಜಿಕ, ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಅಗತ್ಯಗಳು ಮತ್ತು ಅಭಿಲಾಷೆಗಳನ್ನು ಈಡೇರಿಸಿಕೊಳ್ಳಲು ಬೇಕಾದ ಅಭಿವ್ಯಕ್ತಿ ಸ್ವಾತಂತ್ರ್ಯದ ದೃಷ್ಟಿಯಿಂದ ಮಹಿಳಾ ವಿಮೋಚನೆಯ ಅಗತ್ಯವನ್ನು ತಮ್ಮ ಚಿಂತನೆಗಳಲ್ಲಿ ಲೋಹಿಯಾ ದೃಢಪಡಿಸಿದ್ದಾರೆ. ಈ ಅರ್ಥದಲ್ಲಿ, ಲೋಹಿಯಾರ ಅಲೋಚನೆಗಳು ಊಳಿಗಮಾನ್ಯ ವಿರೋಧಿ, ಬಂಡವಾಳಶಾಹಿ ವಿರೋಧಿ ಮತ್ತು ಪಿತೃಸಂಸ್ಕೃತಿ ವಿರೋಧಿ. ಭಾರತೀಯ ಮಹಿಳೆಯರ ಕುರಿತ ಅವರ ಆಲೋಚನೆಗಳು ಸರ್ವಾಂಗೀಣವೂ ತೀಕ್ಷ್ಣವೂ ಆಗಿದ್ದು, ವಿಶೇಷವಾಗಿ ಜಾತಿವ್ಯವಸ್ಥೆ ಮತ್ತು ಪಿತೃಸಂಸ್ಕೃತಿಯೊಂದಿಗಿನ ಅದರ ನಂಟು ಮತ್ತು ವರ್ಗಗಳ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದರು ಲೋಹಿಯಾ. ಅವರ ಚಿಂತನೆಗಳು ಎಲ್ಲ ಸ್ಥಾಪಿತ ಸ್ತ್ರೀವಾದಿ ಸಿದ್ಧಾಂತಗಳನ್ನು ಮೀರಿದ ಅತ್ಯುತ್ಕೃಷ್ಟ ಪರಿಕಲ್ಪನೆಗಳಾಗಿದ್ದು, ನಿಸ್ಸಂದೇಹವಾಗಿ ಭಾರತದ ಸ್ತ್ರೀವಾದಿ ದೃಷ್ಟಿಕೋನವನ್ನು ಸಮೃದ್ಧ ಗೊಳಿಸುತ್ತದೆ.

ಲೋಹಿಯಾ ಅವರನ್ನು 'ಭಾರತೀಯ ಸಮಾಜವಾದಿ ಸ್ತ್ರೀವಾದಿ' ಎಂದು ನಾವು ಕರೆಯಬಹುದು. ಸಮಾಜವಾದವೆಂದರೆ ಸರ್ವಸಮಾನತೆಯ ನೆಲೆಗಟ್ಟಿನ ಮೇಲೆ ಸಮಾಜವನ್ನು ಮರುನಿರ್ಮಾಣ ಮಾಡುವುದೇ ಆಗಿದೆ. ಅದರಂತೆಯೇ, ಲೋಹಿಯಾ ಅವರ ಪರಿಕಲ್ಪನೆಯೂ ಕೂಡ. ಅವರು ಭಾರತೀಯ ಸಮಾಜದ ಬೇರುಮಟ್ಟದ ರಚನಾತ್ಮಕ ಮತ್ತು ಸಾಂಸ್ಕೃತಿಕ ಕಾಯಕಲ್ಪಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಾರೆ.

(ಲಕ್ನೋದ ಬಾಬಾ ಸಾಹೇಬ ಅಂಬೇಡ್ಕರ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರದ ಅಧ್ಯಾಪಕರಾಗಿರುವ ಲೇಖಕಿ ಜಯಾ ಶ್ರೀವಾಸ್ತವ ಸಾಮಾಜಿಕ ನ್ಯಾಯ ಮತ್ತು ಮಾನವ ಹಕ್ಕುಗಳ ಬಗ್ಗೆ ಸಂಶೋಧನೆ ಕೈಗೊಂಡಿದ್ದಾರೆ.)

(ಕನ್ನಡಕ್ಕೆ: ರೇಖಾಂಬ ಟಿ.ಎಲ್)

◆◆

೬

ಇಂದೇಕೆ ನಾವು ಲೋಹಿಯಾರನ್ನು ನೆನಪಿಸಿಕೊಳ್ಳಬೇಕು?

(ಲೋಹಿಯಾ ಸ್ಮರಣಾರ್ಥ ಉಪನ್ಯಾಸ–೨೦೧೭)

ನ್ಯಾ. ಸುದರ್ಶನ ರೆಡ್ಡಿ

(ಈ ಉಪನ್ಯಾಸವು ಲೋಹಿಯಾ ಶೋಷಣಾಮುಕ್ತ ಸಮಾನ ಅವಕಾಶಗಳ ಸಮಾಜವಾದಿ ಸಮಾಜದ ನಿರ್ಮಾಣಕ್ಕೆ ಎಷ್ಟು ಕಟಿ ಬದ್ಧರಾಗಿದ್ದರೋ ಅದೇ ಸಮಯದಲ್ಲಿ ಅಷ್ಟೇ ತೀವ್ರವಾಗಿ ಅವರು ಈ ಸಾಮುದಾಯಿಕತೆಯ ಪ್ರವೃತ್ತಿ ಅತಿಗೆ ಹೋಗಿ, ಅತಿ ತಂತ್ರಜ್ಞಾನದ ಮಾದರಿಗಳ ಪರಿಣಾಮವಾಗಿ ಅದು ಏಕರೂಪಿ ಮನಸ್ಸಿನ ನಿರ್ಮಾಣಕ್ಕೂ ಕಾರಣವಾಗಿ ಹಲವು ರೀತಿಗಳಲ್ಲಿ ವ್ಯಕ್ತಿಯ ಖಾಸಗಿತನ ಮತ್ತು ಘನತೆಗಳ ಮೇಲೂ ಆಕ್ರಮಣ ಮಾಡುವ ಸಾಧ್ಯತೆಗಳನ್ನು ಮುನ್ನೋಡಿ ಅದರ ವಿರುದ್ಧವೂ ಅಷ್ಟೇ ತೀವ್ರವಾದ ಹೋರಾಟಕ್ಕೆ ಬದ್ಧರಾಗಿ ಈ ಹೋರಾಟ ಏಕೆ ಗಾಂಧಿ ಪ್ರಣೀತ ನಾಗರಿಕ ಅಸಹಕಾರ ಸತ್ಯಾಗ್ರಹದ ಮೂಲಕವೇ ಯಶಸ್ವಿಯಾಗಬಲ್ಲುದು ಎಂಬುದನ್ನು ವಿವರಿಸಿರುವ ಬಗೆಯನ್ನು ನಮ್ಮ ಮುಂದಿಟ್ಟಿದೆ. ಆ ಮೂಲಕ ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಹೇಗೆ ಸಾಂಪ್ರದಾಯಿಕ ಸಮಾಜವಾದದ ಮಾದರಿಯಿಂದ ಭಿನ್ನ ಮತ್ತು ವಿಶಿಷ್ಟವಾಗಿದೆ ಎಂಬುದನ್ನೂ ಪರೋಕ್ಷವಾಗಿ ಸೂಚಿಸುತ್ತದೆ.)

ಮೊಟ್ಟ ಮೊದಲಿಗೆ ನನಗೆ ಹೇಳಬೇಕೆನಿಸಿರುವುದು ಏನೆಂದರೆ ಡಾ. ರಾಮ ಮನೋಹರ ಲೋಹಿಯಾರ ನೆನಪಿನಾರ್ಥ ಒಂದು ಸಂಕ್ಷಿಪ್ತ ಭಾಷಣವನ್ನು ಮಾಡುವ ಜವಾಬ್ದಾರಿಯನ್ನು ಅತ್ಯಂತ ವಿನಮ್ರತೆಯಿಂದಲೇ ಸ್ವೀಕರಿಸಿದ್ದೇನೆ. ಈ ನಮ್ರತೆಯಿಂದ ಮಾತ್ರ ನಮ್ಮ ಆಧುನಿಕ ಭಾರತದ ನಿರ್ಮಾಣಕ್ಕೆ ಬೇಕಾದಂಥ ಮೌಲ್ಯಯುತ ಅಸ್ತಿವಾರವನ್ನು ಹಾಕಿಕೊಟ್ಟವರಲ್ಲಿ ಒಬ್ಬರಾದ ಲೋಹಿಯಾರನ್ನು ಸಮೀಪಿಸಲು, ಅರ್ಥೈಸಿಕೊಳ್ಳಲು ಸಾಧ್ಯ ಎಂದು ತಿಳಿದಿದ್ದೇನೆ. ಅಷ್ಟಕ್ಕೂ ಲೋಹಿಯಾರಂಥ ಒಬ್ಬ ಮಹಾನ್ ವ್ಯಕ್ತಿಯ ಜೀವನ ಮತ್ತು ಸಾಧನೆಗಳನ್ನು ಒಂದು ಕೋಶದಲ್ಲಿ ಹಿಡಿದಿಡುವ ಸಾಹಸ ಮಾಡುವುದು ಮಹಾ ದುಸ್ತರದ ಕೆಲಸವೇ ಸರಿ. ಅವರು ತಮ್ಮ ಜೀವಿತಾವಧಿಯಲ್ಲಿ ಅಗಾಧವಾಗಿ ಬರೆದರು. ಯೂರೋಪ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಕೇವಲ ತನ್ನ ಇಪ್ಪತ್ತರ ಆಜುಬಾಜಿನ ಹರಯದಲ್ಲಿ ಜಿನಿವದಲ್ಲಿನ ರಾಷ್ಟ್ರ ಸಂಘದ (ಲೀಗ್ ಆಫ್ ನೇಷನ್ಸ್) ಸಮಾವೇಶದಲ್ಲಿ ಭಾರತವನ್ನು ಪ್ರತಿನಿಧಿಸಿದ ಬಿಕಾನೇರಿನ ಮಹಾರಾಜನು ಬ್ರಿಟಿಷ್ ಆಡಳಿತವನ್ನು ಹೊಗಳತೊಡಗಿದಾಗ ಅದರ ವಿರುದ್ಧ ಪ್ರತಿಭಟನೆಯ ಸಾರಥ್ಯವನ್ನು ವಹಿಸಿಕೊಂಡರು. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ವಿದೇಶಾಂಗ ವ್ಯವಹಾರಗಳ ಇಲಾಖೆಯನ್ನು ಸ್ಥಾಪಿಸಿದರು. ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆಗೆ ಅಡಿಪಾಯವನ್ನು ಹಾಕಿದರು. ಬ್ರಿಟಿಷರಿಂದ ಅನೇಕ ಬಾರಿ ಬಂಧನಕ್ಕೊಳಗಾಗಿ ಸಾಕಷ್ಟು ಚಿತ್ರ ವಿಚಿತ್ರ ಹಿಂಸೆಯನ್ನು ಅನುಭವಿಸಿದರು. ಸ್ವತಂತ್ರ ಭಾರತದಲ್ಲಿ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿ ಒಂದು ಮಾನವೀಯ ಸಮಾಜವಾದಿ ಚಳುವಳಿಯನ್ನು ಹುಟ್ಟು ಹಾಕಿದರು. ಯಾರು ತನ್ನ ಜೀವನಪರ್ಯಂತ ಅತ್ಯಂತ ಪ್ರಾಮಾಣಿಕತೆಯಿಂದ ತನ್ನ ಆತ್ಮಸಾಕ್ಷಿಗೆ ಒಂದಿಷ್ಟೂ ಚ್ಯುತಿ ಬಾರದಂತೆ ಬಿಡುವಿಲ್ಲದೆ, ದಣಿವರಿಯದೆ ಬಡವ–ಶ್ರೀಮಂತರ ನಡುವಿನ ಕಂದಕವನ್ನು ಮುಚ್ಚಲು, ಜಾತಿ ಮತ್ತು ಲಿಂಗ ಅಸಮಾನತೆ ಎಂಬ ಜೋಡಿ ಪಿಡುಗುಗಳನ್ನು ತೊಡೆದು ಹಾಕಲು, ಬೃಹತ್ ಗಾತ್ರದ ಯಂತ್ರಗಳ ಅಪಾಯದ ಬಗ್ಗೆ–ಅದು ಸಾಮಾಜಿಕವಾಗಿ ಮತ್ತು ಪರಿಸರದ ದೃಷ್ಟಿಯಿಂದಲೂ ಬೀರುವ ದುಷ್ಪರಿಣಾಮಗಳಿಂದಾಗಿ–ಎಚ್ಚರಿಸಿದರೋ; ಎಲ್ಲಕ್ಕಿಂತ ಮಿಗಿಲಾಗಿ ಎಲ್ಲೆಡೆಯೂ ಏಕರೀತಿಯಾಗಿ ಕಂಡುಬರುವ, ಅನೇಕ ಸ್ತರದ, ಅಸಮಾನತೆಯಿಂದಾಗಿ ತಲೆತಲಾಂತರದಿಂದ ಮುಂದುವರೆದುಕೊಂಡು ಬರುತ್ತಿರುವಂಥ ಕೆಲವರಿಂದ ಹಲವರ ಶೋಷಣೆ, ದೌರ್ಜನ್ಯಗಳು ಮತ್ತು ಇದರಿಂದಾಗಿ ನಿರಂತರವಾಗಿ ಉರುಳುತ್ತಿರುವ ಹಿಂಸೆ ಮತ್ತು ದಮನದ ಚಕ್ರ–ಇವೆಲ್ಲವುಗಳ ವಿರುದ್ದ ಹೋರಾಟವನ್ನು ರೂಪಿಸಿದರೋ, ಜನರ ಅಂತಃಸಾಕ್ಷಿಯನ್ನು ಜಾಗೃತಗೊಳಿಸಿದರೋ ಅಂತಹ ವ್ಯಕ್ತಿಯ ಜೀವನ ದರ್ಶನವನ್ನು, ಅವರ ಮನಸ್ಸನ್ನ ಮತ್ತು ವ್ಯಕ್ತಿತ್ವದ ಸಮಗ್ರತೆಯನ್ನು ಅರ್ಥಮಾಡಿಕೊಳ್ಳುವ ಪರಿಯಾದರು ಎಂತು?

ಡಾ.ಲೋಹಿಯಾರ ಬಗ್ಗೆ ನಾನು ಯೋಚಿಸಿದಾಗಲೆಲ್ಲಾ ಅವರ ಬಗೆಗೆ ಪ್ರಚಲಿತ ವಿರುವ ಮತ್ತು ಇಂದಿನ ಕಾಲಕ್ಕೆ ಅತ್ಯಂತ ಸಮಂಜಸವಿರುವ ಒಂದು ದೃಷ್ಟಾಂತ

ನೆನಪಿಗೆ ಬರುತ್ತದೆ. ಸ್ವಾತಂತ್ರೋತ್ತರ ಭಾರತದಲ್ಲಿ ಅವರು ಸ್ಪರ್ಧಿಸಿದ ಒಂದು ಚುನಾವಣೆಯ ಪ್ರಚಾರದ ಸಮಯದಲ್ಲಿ ಒಂದು ಸಮುದಾಯದ ಜನರು ಅವರನ್ನು ತಮಗೆ ಸೇರಿದ ಒಂದು ಪೂಜಾಸ್ಥಳದಲ್ಲಿ ಭಾಷಣವನ್ನು ಮಾಡಬೇಕೆಂದೂ, ಹಾಗೆ ಮಾಡಿದರೆ ಆ ಸಮುದಾಯದ ಜನರ ಹೆಚ್ಚು ಮತಗಳು ಅವರಿಗೇ ಸಂದಾಯವಾಗುತ್ತದೆ ಎಂದೂ ಅರಿಕೆ ಮಾಡಿದರು. ಆದರೆ ಲೋಹಿಯಾರವರು ಈ ಪ್ರಸ್ತಾವನೆಯನ್ನು ಒಡನೆಯೆ ತಳ್ಳಿಹಾಕಿದರು. ಆ ಚುನಾವಣೆಯಲ್ಲಿ ಅವರು ಬಹಳ ಕಡಿಮೆ ಅಂತರದಲ್ಲಿ ಸೋತರು. ಆದರೆ ಲೋಹಿಯಾರವರ ಈ ನಿಲುವು, ಮನುಷ್ಯನ ಅಸ್ತಿತ್ವದ ಆಳದ ಆಧ್ಯಾತ್ಮಿಕ ತಿಳಿವಿಗೆ ಸಂಬಂಧಪಟ್ಟ ಒಂದು ಪೂಜಾ ಸ್ಥಳವನ್ನು ತನ್ನ ಚುನಾವಣಾ ಪ್ರಚಾರ ಮತ್ತು ಲಾಭಕ್ಕಾಗಿ ಬಳಸಬಾರದೆಂಬ ಗಟ್ಟಿಯಾದ ಮೌಲ್ಯದ ಆಧಾರದಲ್ಲಿ ಸ್ಫುರಿಸಿತ್ತು. ತೀವ್ರ ಸ್ವತಂತ್ರ ಮನೋಭಾವನೆಯ, ತಮ್ಮ ಕ್ರಿಯೆಗಳಲ್ಲಿ ನೈತಿಕತೆಯ ಕಾಳಜಿಗಳೊಂದಿಗೆ ಎಂದೂ ರಾಜಿಮಾಡಿಕೊಳ್ಳದ, ಸಾಮಾಜಿಕ ನ್ಯಾಯದ ಚೌಕಟ್ಟಿನಲ್ಲೆ ವಿಶಾಲ ಸಮಾಜದ ಸಮಗ್ರ ಒಳಿತಿನ ಅನ್ವೇಷಣೆಯನ್ನೇ ಸದಾ ಆದ್ಯತೆಯ ವಿಷಯವನ್ನಾಗಿಸಿಕೊಂಡಿದ್ದ ಡಾ.ಲೋಹಿಯಾರವರು ಎಂದೆಂದಿಗೂ ಶ್ರೇಷ್ಠ ವಿದ್ವಾಂಸರೂ, ಸುಸಂಸ್ಕೃತರೂ, ಉದಾರವಾದಿಯೂ ಮತ್ತು ಉನ್ನತ ನೈತಿಕ ಪ್ರಜ್ಞೆಯುಳ್ಳ ವ್ಯಕ್ತಿಯೂ ಆಗಿದ್ದರು. ಭಾರತ ಇಂದು ಫ್ಯಾಸಿಸ್ಟ್ ರಾಜಕಾರಣದತ್ತ ಹೊರಳುತ್ತಿದೆ ಅಥವಾ ಅಂತಹ ರಾಜಕಾರಣವಾಗಿ ರೂಪುಗೊಳ್ಳುವ ಎಲ್ಲಾ ಚಹರೆಗಳನ್ನು ಪ್ರಕಟಪಡಿಸುತ್ತಿದೆ ಎಂಬ ಗುಮಾನಿಗಳು ಕೇಳಿ ಬರುತ್ತಿದೆ. ಇದನ್ನು ಸಮರ್ಥಿಸುವಂತಹ ರಾಜಕೀಯ ನಡೆಗಳನ್ನೂ ಕಾಣುತ್ತಿದ್ದೇವೆ. ಧರ್ಮ ನಿರಪೇಕ್ಷತೆಯನ್ನು ಬದಿಗೆ ಸರಿಸುತ್ತಾ, ಆಡಳಿತ ಮತ್ತು ನ್ಯಾಯದಾನದಲ್ಲಿ ತೊಡಗಿರುವಂಥ ಸಂಸ್ಥೆಗಳನ್ನು ರಾಜಿಗೊಳಪಡಿಸಲಾಗುತ್ತಿದೆ. ಪತ್ರಕರ್ತರ ಕೊಲೆಗಳಾಗುತ್ತಿವೆ. ಮತ್ತು ಸಂವಿಧಾನದ ಪರವಾಗಿ ಧ್ವನಿ ಎತ್ತಿದವರಿಗೆ ಬಹಿರಂಗ ಬೆದರಿಕೆಗಳನ್ನು ಹಾಕಲಾಗುತ್ತಿದೆ. ಇಂಥ ಸಂದಿಗ್ಧ ಮತ್ತು ವಿಷಮ ಗಳಿಗೆಯಲ್ಲಿ ಲೋಹಿಯಾರಂತಹ ಮಹಾನ್ ವ್ಯಕ್ತಿಯನ್ನು ಸ್ಮರಿಸಿಕೊಳ್ಳುತ್ತಾ ಹೀಗೆ ಕೇಳಿಕೊಳ್ಳಲಾಗದೆ ಇರಲಾಗುವುದಿಲ್ಲ.

ಆದರೆ ಡಾ.ಲೋಹಿಯಾರವರನ್ನು ಕೇವಲ ಅವರ ಕೆಚ್ಚೆದೆಯ ಮತ್ತು ಅವಧೂತನ ದೆನೆನಿಸುವಂತಹ ಭಾಷಣಗಳಿಗೆ ಮಾತ್ರ ಸೀಮಿತಗೊಳಿಸಿ ಸ್ಮರಿಸಿಕೊಳ್ಳಬಾರದೆಂದು ನಾನಿಲ್ಲಿ ಕಳಕಳಿಯಿಂದ ಸೂಚಿಸಬಯಸುತ್ತೇನೆ. ಏಕೆಂದರೆ ಈಗ ಎಲ್ಲೆಡೆಯೂ ಕಳೆದಾರು ದಶಕಗಳಿಂದ 'ಇಲ್ಲಿ ಏನೂ ಸಂಭವಿಸಿಯೇ ಇಲ್ಲ' ಎಂಬ ವಾದವು ಕೇಳಿಬರುತ್ತಿದ್ದು, ಅಂತಿಮವಾಗಿ ಎಲ್ಲವನ್ನೂ ಈಡೇರಿಸುವ ಒಬ್ಬ ನಾಯಕನು ಉದಯಿಸಿದ್ದಾನೆಂಬ ಆಲೋಚನಾರಹಿತ ಮಾತುಗಳು ವ್ಯಾಪಿಸುತ್ತಿದ್ದು ಈ ಕಾಲವು ಎಲ್ಲಾ ರೀತಿಯಿಂದಲೂ ಅತ್ಯಂತ ಪ್ರಕ್ಷುಬ್ಧಮಯವೂ, ಕಳವಳಕಾರಿಯೂ ಆಗಿದೆ. ಇಂಥ ಸಮಯದಲ್ಲೇ ನಾವು ಇತಿಹಾಸದ ಮಹಾ ವ್ಯಕ್ತಿಗಳ ಜೀವನ ಮತ್ತು ಸಾಧನೆಗಳಿಂದ, ಅವರು

ಪ್ರತಿಪಾದಿಸಿದ ತತ್ವಗಳ ದರ್ಶನಗಳಿಂದ ಸ್ಫೂರ್ತಿಯನ್ನು, ಆಧಾರಗಳನ್ನು ಪಡೆದುಕೊಂಡು ನಮ್ಮ ಮುಂದಿನ ಕಾರ್ಯಗಳನ್ನ ರೂಪಿಸಿಕೊಳ್ಳಬೇಕಾಗಿದೆ. ಆದರೆ ಅಂತಹವರ ದರ್ಶನ ಮತ್ತು ಕಾಣ್ಕೆಗಳಿಂದ ಪಡೆದಂಥ ಸ್ಫೂರ್ತಿ ಮತ್ತು ಚೈತನ್ಯಗಳ ಬಾಳಿಕೆಯನ್ನು ಹೆಚ್ಚಿಸಿಕೊಳ್ಳಬೇಕಾದರೆ, ನಾವು ಅವರ ಮೂಲ ತತ್ವಗಳನ್ನು ವಿಶ್ಲೇಷಾತ್ಮಕವಾಗಿ ಗ್ರಹಿಸಿ ಅದನ್ನು ನಮ್ಮ ಕಾಲಕ್ಕೆ ಅನ್ವಯಿಸಿಕೊಳ್ಳುವುದರ ಮೂಲಕವೂ, ಅಗತ್ಯವಿದ್ದಲ್ಲಿ ಒಂದಿಷ್ಟು ಮಾರ್ಪಾಡು ಮಾಡಿಕೊಂಡೊ, ಹೊಸ ಹೊಸ ಜ್ಞಾನಗಳ ಬೆಳಕಲ್ಲಿ ಆ ತತ್ವಗಳನ್ನು ವಿಸ್ತರಿಸಿಕೊಂಡೊ, ಇಲ್ಲವೇ ನಮ್ಮ ಪ್ರಜಾತಂತ್ರ ಮತ್ತು ಸಾಂವಿಧಾನಿಕ ರಚನೆಗಳು ಎದುರಿಸಿದಂಥ ಸಾಂಸ್ಥಿಕ ಆಘಾತಗಳು ಮತ್ತು ಅನುಭವಗಳನ್ನು ಪರಿಶೀಲಿಸಿಕೊಳ್ಳುತ್ತ ಸಾಗಬೇಕು.

ಡಾ.ಲೋಹಿಯಾರವರ ಆಲೋಚನೆ ಮತ್ತು ಹೋರಾಟಗಳಿಗೆ ಮುಖ್ಯ ಕಾಳಜಿ ಯಾಗಿದ್ದದ್ದು ಅವರ "ಏಕರೂಪಿ ಮನಸ್ಸಿನ"(ಮೊನೊಟೋನಿಕ್ ಮೈಂಡ್) ನಿರ್ಮಾಣದ ಬಗೆಗಿದ್ದ ಪ್ರಬಲವಾದ ವಿರೋಧ ಎಂದು ಹೇಳಲು ಇಚ್ಛಿಸುತ್ತೇನೆ. ಲೋಹಿಯಾರ ಈ ಅಭಿವ್ಯಕ್ತಿಯು ಅವರ ಬೃಹತ್ ಯಂತ್ರಗಳ ತಂತ್ರಜ್ಞಾನದ ವಿರೋಧದ ಸಂದರ್ಭದಲ್ಲಿ ಹುಟ್ಟಿಕೊಂಡಿದ್ದೆಂದು ಸಾಮಾನ್ಯವಾಗಿ ಎಲ್ಲರೂ ಅಭಿಪ್ರಾಯಪಡುತ್ತಾರೆ ಹಾಗೂ ಈ ದೃಷ್ಟಿಯಲ್ಲಿ ಅವರು ಸೂಚಿಸಿದ ಆರ್ಥಿಕ ರಾಜಕಾರಣದ ಪರಿಕಲ್ಪನೆಯು ಇ.ಎಫ್.ಶುಮಾಕರ್‌ರ 'ಸಣ್ಣದು ಸುಂದರ' ಎಂಬ ತತ್ವಕ್ಕೆ ಸಮವೆಂದೂ ಮತ್ತು ಉತ್ಪಾದನೆಯ ಪ್ರಕ್ರಿಯೆಯಲ್ಲಿ ಉದ್ಯೋಗಗಳನ್ನು ನಾಶಮಾಡದೆ ಅದನ್ನು ಹೆಚ್ಚಿಸುವ ಪರ್ಯಾಯ ತಂತ್ರಜ್ಞಾನದ ಶೋಧನೆಯ ಪರಿಕಲ್ಪನೆಗೆ ಸರಿಹೊಂದುತ್ತದೆ ಎಂಬ ಸರಳ ತೀರ್ಮಾನಕ್ಕೆ ಬಂದು ಬಿಡಬಹುದು. ಆದರೆ ಈ ಅಭಿಪ್ರಾಯವು ಭಾಗಶಃ ಸರಿಯಾದದ್ದೇ ಆದರೂ ಪೂರ್ಣವಾದದ್ದಲ್ಲ. ಅವರು ತಳವರ್ಗದ ಮತ್ತು ದುರ್ಬಲರ ಸಬಲೀಕರಣಕ್ಕೆ ಮತ್ತು ಸಶಕ್ತೀಕರಣದ ಪರವಾಗಿ ಸಾಕಷ್ಟು ವಾದಿಸಿದರು ಮತ್ತು ಜೀವಮಾನವಿಡೀ ಹೋರಾಟವನ್ನು ನೆಡೆಸಿದರು. ನಮ್ಮ ಹಳ್ಳಿಯ ಮಹಿಳೆಯರು ಅಂತರ್ಜಾಲವನ್ನು ಬಳಸಿ ತಮ್ಮ ಬೆಳೆಗಳಿಗೆ ಯಾವ ಮಾರುಕಟ್ಟೆಯಲ್ಲಿ ಹೆಚ್ಚು ದರ ನಿಗದಿಯಾಗಿದೆಯೋ ಕಂಡುಕೊಂಡು ಅಲ್ಲಿಗೆ ತಮ್ಮ ರೈತಾಪಿ ಪುರುಷರನ್ನು ಕಳಿಸುವ ಒಂದು ಸಾಧ್ಯತೆಯನ್ನು ಲೋಹಿಯಾರವರು ಅನುಮೋದಿಸುತ್ತಿರಲಿಲ್ಲವೆಂದು ಭಾವಿಸಿಕೊಳ್ಳಲು ಸಾಧ್ಯವೇ? ಅಥವಾ ಅಗಾಧ ಜ್ಞಾನದ ಆಗರವಾದ ಅಂತರ್ಜಾಲವೆಂಬ ತಂತ್ರಜ್ಞಾನವನ್ನು ನಮ್ಮ ಯುವ ಜನಾಂಗ ಎಟುಕಿಸಿಕೊಳ್ಳುವ ಪ್ರಯತ್ನವನ್ನು ನಿರಾಕರಿಸು ತ್ತಿದ್ದರೆ? ಅನೇಕ ಸಂದರ್ಭಗಳಲ್ಲಿ ತಂತ್ರಜ್ಞಾನದ ಬಗೆಗಿನ ಅವರ ವಿಶ್ಲೇಷಣೆಯನ್ನು ಅವರೊಬ್ಬ ವಿಜ್ಞಾನ ಮತ್ತು ತಂತ್ರಜ್ಞಾನದ ಕುರುಡು ವಿರೋಧಿ ಎಂಬ ರೀತಿಯಲ್ಲಿ ಅರ್ಥೈಸಲಾಗುತ್ತದೆ ಮತ್ತು ಇಂದಿನ ಕುಖ್ಯಾತ ರಾಜಕಾರಣದ ಅವಿವೇಕಿ ಜನರಿಂದ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಹಾಗಾಗಿ ಲೋಹಿಯಾರ ವಿಚಾರಧಾರೆಯನ್ನು

ಇಂದಿನ ಕ್ಷುಲ್ಲಕ ಮತ್ತು ಸಾಂದರ್ಭಿಕ ವಿಸ್ತರಣೆಗಾಗಿ ಬಳಸಿಕೊಳ್ಳುವ ಸಣ್ಣತನವನ್ನು ತೊರೆದು, ಹೆಚ್ಚು ಆಳವಾಗಿ ಮತ್ತು ವಿವರವಾಗಿ ಅವಲೋಕಿಸಲು ಸಾಧ್ಯವಾಗಬೇಕು ಎಂದೆನಿಸುತ್ತದೆ.

ಲೋಹಿಯಾ ಅವರು ಪ್ರತಿಪಾದಿಸಿದ ವಿಚಾರಗಳ ಮೂಲ ತತ್ವಗಳನ್ನು ತಿಳಿದುಕೊಳ್ಳುವ ಮೊದಲು ನಾವು ಅವರು, ತಂತ್ರಜ್ಞಾನದ ಅನಿರ್ಬಂಧಿತ ಅಳವಡಿಕೆಯ ಅಪಾಯಗಳ ಬಗ್ಗೆ, ಸಮಾನತೆ ಮತ್ತು ಸಮಗ್ರ ಮಾನವ ಕಲ್ಯಾಣದ ಬಗೆಗಿನ ನೈತಿಕ ಕಾಳಜಿಗಳ ಪರಿವೆಯೇ ಇಲ್ಲದ ಸಾಮಾಜಿಕ ಆಯ್ಕೆಗಳ ಬಗ್ಗೆ, ಪ್ರಜಾತಾಂತ್ರಿಕ ಮೌಲ್ಯವ್ಯವಸ್ಥೆಯನ್ನು ವಿನಾಶಗೊಳಿಸುವ ಹುನ್ನಾರಗಳ ಬಗ್ಗೆ ಮತ್ತು ಸಾಮಾನ್ಯ ಜನರನ್ನು ದಾಸ್ಯಕ್ಕೀಡು ಮಾಡುವಂತಹ ಸಂರಚನೆಗಳ ಬಗೆಗೆ ಅವರಲ್ಲಿದ್ದ ಸೂಕ್ಷ್ಮ ಗ್ರಹಿಕೆ ಮತ್ತು ತೋರಿದ ಅಪಾರವಾದ ಕಾಳಜಿಗಳನ್ನು ನಾವು ಗುರುತಿಸಲೇಬೇಕು.

ನಾನು ಇತ್ತೀಚೆಗಷ್ಟೇ ಒಂದು ಪುಸ್ತಕವನ್ನು ಓದುತ್ತಿದ್ದೆ. 'ದಿ ಡ್ರೈವರ್ ಇನ್ ದಿ ಡ್ರೈವರ್‌ಲೆಸ್ ಕಾರ್: ಹೌ ಅವರ್ ಟೆಕ್ನಾಲಜಿಕಲ್ ಚಾಯ್ಸ್ ವಿಲ್ ಕ್ರಿಯೇಟ್ ದಿ ಫ್ಯೂಚರ್' ಎಂಬ ವಿವೇಕ್ ವಾಧ್ವಾ ಮತ್ತು ಅಲೆಕ್ಸ್ ಸಲ್ಕೆವೆರ್ ಅವರು ಬರೆದ ಪುಸ್ತಕವದು. ಅದರಲ್ಲಿ, ಈಗಾಗಲೇ ಅಸ್ತಿತ್ವದಲ್ಲಿರುವಂತಹ ಮತ್ತು ಅವಿಷ್ಕಾರಗೊಳ್ಳುತ್ತಿರುವಂಥ ತಂತ್ರಜ್ಞಾನವು ಮನುಷ್ಯ ಜನಾಂಗವನ್ನು ಬಾಧಿಸುತ್ತಿರುವಂತಹ ಅನೇಕ ಅನಿಷ್ಟಗಳನ್ನು ಮೂಲೋತ್ಪಾಟನೆ ಮಾಡುವಂತಹ ಸಾಮರ್ಥ್ಯವುಳ್ಳದ್ದಾಗಿದೆ ಎಂದು ಈಗಾಗಲೇ ಅಮರ್ತ್ಯಸೇನ್ ಅವರು ಹೇಳುತ್ತಾ ಬಂದಿರುವ ಅಂಶವನ್ನೇ ಇನ್ನಷ್ಟು ವಾಸ್ತವಾಂಶಗಳಿಂದ ಕೂಡಿದ ಚಿತ್ರಣಗಳೊಂದಿಗೆ ಲೇಖಕರು ಪ್ರತಿಪಾದಿಸುತ್ತಾರೆ. ಮುಂದುವರಿದು, ಆದರೆ ನಾವು ಮಾಡಿಕೊಳ್ಳುವ ಆಯ್ಕೆಗಳು ಮತ್ತು ಅದನ್ನು ಭದ್ರಪಡಿಸಲು ಆರಿಸಿಕೊಳ್ಳುವ ಮೌಲ್ಯಗಳ ಮೇಲೆ ಈ ಪರಿಹಾರಗಳು ಅವಲಂಬಿಸಿವೆ ಎನ್ನುತ್ತಾರೆ. ಇದೆಲ್ಲವೂ ಸರಿಯೆ. ಆದರೆ ಅವರು ಇನ್ನೊಂದು ಭಯಾನಕ ಸಂಗತಿಯೂ ಸಾಧ್ಯವೆಂದು ಹೇಳುತ್ತಾರೆ. ಮನುಷ್ಯನೇ ದೇವರೆಂಬ ಅಹಂಭಾವದಿಂದ ಮೆರೆಯುತ್ತಿರುವ ಮತ್ತು ನೋಹ ಹರಾರಿ, ವಿವೇಕ್ ವಾಧ್ವಾ ಹಾಗೂ ಅಲೆಕ್ಸ್ ಸಲ್ಕೆವೆರ್ ಅವರು ಪ್ರತಿಪಾದಿಸುತ್ತಿರುವಂತೆ ಕೃತಕ ಬುದ್ಧಿಮತ್ತೆಯಿಂದ ಮುನ್ನಡೆಸಲ್ಪಡುತ್ತಿರುವ ಈ ಜಗತ್ತಿನಲ್ಲಿ ಇನ್ನೊಂದು ಬೇರೆಯೇ ವಾಸ್ತವವೂ ಸಾಧ್ಯವಾಗುತ್ತಿರುವಂತೆ ತೋರುತ್ತಿದೆ. ಅವರು ಹೀಗೆ ವಿವರಿಸುತ್ತಾರೆ:

"ನಾವು ಒಂದು ಉದ್ಯೋಗ ರಹಿತ ಆರ್ಥಿಕತೆಯನ್ನು ಸೃಷ್ಟಿಸಲು, ಮನುಷ್ಯನ ಖಾಸಗಿತನವನ್ನು ಕೊನೆಗಾಣಿಸಲು, ಆಕ್ರಮಣಕಾರಿ ವೈದ್ಯಕೀಯ ದಾಖಲೆಗಳ ಸಂರಕ್ಷಣೆ ಮತ್ತು ಹದಗೆಡುತ್ತಲೇ ಹೋಗುತ್ತಿರುವ ಆರ್ಥಿಕ ಅಸಮಾನತೆಯ ವಿಷಚಕ್ರವನ್ನು ಚಾಲನೆಗೊಳಿಸುವಂಥ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಿದ್ದೇವೆ. ಅತ್ಯಂತ ಕಾತರದಿಂದ ಎದುರು ನೋಡುತ್ತಿರುವಂಥ ತಂತ್ರಜ್ಞಾನ ಚಾಲಿತ ಭವಿಷ್ಯವನ್ನು ಒಳಗೊಳಗಿಂದಲೇ

ಹಾಳುಗೆಡುವಂಥ ಒಂದು ಮಹಾ ಅಸ್ಥಿರ, ಹಿಂಸಾತ್ಮಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಸಮರ್ಥರಾಗುತ್ತಿದ್ದೇವೆ. ಮತ್ತು ನಮ್ಮ ಅಜಾಗರೂಕತೆ ಮತ್ತು ಅವಿವೇಕದಿಂದಲೇ ನಾಗರಿಕತೆಯ ವಿನಾಶದ ಸುರುಳಿಯನ್ನು ಬಿಚ್ಚಿಡುತ್ತಿದ್ದೇವೆ"

ಇಂಥ ಒಂದು ರುದ್ರ ಭಯಾನಕ(ಡಿಸ್ಟೋಪಿಯನ್) ಚಿತ್ರಣವು ನಮ್ಮನ್ನೆಲ್ಲ ಬಡಿದೆಬ್ಬಿಸಿ ಚಳಿಯಲ್ಲೂ ಬೆವರುವಂತೆ ಮಾಡಬೇಕು. ನಮ್ಮ ಹೆಚ್ಚಿನ ಯುವಜನರಿಗೆ ಒಂದು ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಕೊಡುವಂಥ ಶೈಕ್ಷಣಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ಇದುವರೆಗೂ ಸಾಧ್ಯವಾಗಿಲ್ಲ. ಜಸ್ಟಿಸ್ ಜೀವನ್ ರೆಡ್ಡಿಯವರು ಗುರುತಿಸಿದ ಹಾಗೆ ಜೀವಿಸುವ ಹಕ್ಕಿನ ಅತಿ ಮುಖ್ಯವಾದ ಅಂಶವೆಂದು ಪರಿಗಣಿತವಾದ ಪ್ರತಿಯೊಬ್ಬರಿಗೂ ಕನಿಷ್ಠ ಹದಿನಾಲ್ಕು ವರ್ಷದವರೆಗೆ ಕಡ್ಡಾಯವಾಗಿ ಉಚಿತ ಮತ್ತು ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಕೊಡುವ ನಿಟ್ಟಿನಲ್ಲಿ ಕಾನೂನಿನ ಅನುಮೋದನೆ ಪಡೆದುಕೊಳ್ಳುವ ಬಗ್ಗೆ ನಮ್ಮ ಸಂಸತ್ತು ಒಂದು ಮಸೂದೆಯನ್ನು ರೂಪಿಸಲು ನಮ್ಮ ರಾಜಕಾರಣದ ಆಳುವ ವರ್ಗಗಳಿಗೆ ೧೪ ವರ್ಷಗಳು ಬೇಕಾಯಿತು. ಒಂದು ದಶಕದ ನಂತರದ ಅವಧಿಯಲ್ಲೂ ಕಾಯ್ದೆಯ ಅನುಷ್ಠಾನವು ಅತ್ಯಂತ ಕಳಪೆಯಾಗಿದ್ದು ವಿವಿಧ ಪ್ರಾಂತ್ಯಗಳ ನಡುವೆ, ಮೇಲ್ಜಾತಿ ಕೆಳಜಾತಿ ಜನರ ನಡುವೆ, ನಗರ ಮತ್ತು ಹಳ್ಳಿಯ ನಡುವೆ ಅಸಮಾನತೆಗಳು ಸೃಷ್ಟಿಯಾಗಿ ದೊಡ್ಡ ಬಿರುಕುಗಳು ಮೂಡತೊಡಗಿದವು. ಹತ್ತಿರದ ಭವಿಷ್ಯದಲ್ಲೇ ಪ್ರವೇಶ ಹಂತದ ಅನೇಕ ಉದ್ಯೋಗಗಳು ಕಣ್ಮರೆಯಾಗುತ್ತವೆಂಬ/ಕಡಿತವಾಗುತ್ತವೆಂಬ ದೊಡ್ಡ ದನಿಯ ಮಾತುಗಳು ಕೇಳಿಬರುತಿವೆ. ನೀತಿ ನಿರೂಪಕರು ನಮ್ಮ ಯುವಜನಾಂಗವು ಬಡತನದಿಂದ ಪಾರಾಗಲು ಯಾವ ತಂತ್ರಜ್ಞಾನ ಕ್ಷೇತ್ರದ ಮೇಲೆ ಭರವಸೆ ತಳೆದಿದ್ದರೋ ಅಲ್ಲೂ ಉದ್ಯೋಗಗಳು ಸೃಷ್ಟಿಯಾಗುವುದಿರಲಿ, ಇರುವಂತಹ ಉದ್ಯೋಗಗಳೂ ಮರೆಯಾಗುತ್ತಿವೆ.

ನಮ್ಮ ಅಪಾರವಾದ ಜನಶಕ್ತಿಯನ್ನು ರಚನಾತ್ಮಕವಾಗಿ ಬಳಸಿಕೊಳ್ಳದೆ ಪೋಲಾಗಲು ಬಿಟ್ಟರೆ ಆ ಜನಶಕ್ತಿಯೇ ಮಹಾ ಶಾಪವಾಗಿ ದೊಡ್ಡ ಅಲ್ಲೋಲಕಲ್ಲೋಲಗಳಿಗೆ ಕಾರಣವಾಗಬಹುದು. ಜನಜೀವನದ ಅವಸಾನದ ಗತಿಯು ಹೆಚ್ಚು ವೇಗವನ್ನು ಪಡೆದುಕೊಳ್ಳತೊಡಗಿದೆ ಎಂದು ಅನ್ನಿಸುತ್ತಿದೆ. ಕಳೆದ ಸುಮಾರು ೪೦ ವರ್ಷಗಳ ಅವಧಿಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದ ಪ್ರತಿಷ್ಠಿತ ವರ್ಗದ ಜನರು ಅಭಿವೃದ್ಧಿಯ ಹೆಸರಲ್ಲಿ ಪಟ್ಟು ಬಿಡದೆ ಜಾರಿ ಮಾಡುತ್ತಿರುವ ನವ ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ಉದಾರೀಕರಣದ ವ್ಯವಸ್ಥೆಯ ಪರಿಣಾಮವಾಗಿ ಜಗತ್ತಿನಾದ್ಯಂತ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯು ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಥಾಮಸ್ ಪಿಕೆಟ್ಟಿ ಯವರು ಕಳೆದ ಐದು-ಹತ್ತು ವರ್ಷಗಳಿಂದ ಆರ್ಥಿಕತೆಯ ಬಗೆಗಿನ ಎಲ್ಲ ಸಭೆಗಳಲ್ಲಿ ಈ ವಿಷಯವನ್ನು ಚರ್ಚೆಯ ಮುನ್ನೆಲೆಗೆ ತರುವ ಅತ್ಯಂತ ನಿಷ್ಠುರ ಪ್ರಯತ್ನ ಮಾಡುತ್ತಿದ್ದಾರೆ. ಉಳ್ಳವರು-ವಂಚಿತರ ನಡುವಿನ ಕಂದಕವು ಹೆಚ್ಚು ಆಳವೂ,

ಅಗಲವೂ ಆಗುತ್ತಿದ್ದು ಅದನ್ನು ಕಡಿಮೆ ಮಾಡುವ ಯಾವ ಸಾಧ್ಯತೆಯು ಹತ್ತಿರದ ಭವಿಷ್ಯದಲ್ಲೆಲ್ಲೂ ಗೋಚರಿಸುತ್ತಿಲ್ಲ.

ಎರಡನೇ ಕೈಗಾರಿಕಾ ಕ್ರಾಂತಿ ಮತ್ತು ವಸಾಹತೀಕರಣದ ಪರಿಣಾಮವಾಗಿ ಹುಟ್ಟಿಕೊಂಡ ಹೊಸ ರಾಷ್ಟ್ರಗಳ ನಡುವಿನ ಅಸಮಾನತೆಯ ಮಟ್ಟವನ್ನೇ ತೆಗೆದು ಕೊಳ್ಳೋಣ. ಇಪ್ಪತ್ತನೇ ಶತಮಾನದ ಮಧ್ಯಕಾಲದಲ್ಲಿ ನಮ್ಮ ಆರ್ಥಿಕ ಮತ್ತು ಸಾಮಾಜಿಕ ವಿದ್ವಾಂಸರು ಮತ್ತು ನೀತಿ ನಿರೂಪಕರು ಈ ಅಸಮಾನತೆಯ ಅಂತರವನ್ನು ಇನ್ನು ಕೆಲವೇ ತಲೆಮಾರುಗಳ ಅವಧಿಯಲ್ಲಿ–ಹೆಚ್ಚೆಂದರೆ ಒಂದು ನೂರು ವರ್ಷಗಳಲ್ಲಿ–ಸಾಕಷ್ಟು ಕಡಿಮೆ ಮಾಡಬಹುದು ಎಂದುದನ್ನು ಕನಿಷ್ಠ ಬೌದ್ಧಿಕವಾಗಿಯಾದರೂ ಕಲ್ಪಿಸಿಕೊಳ್ಳಬಹುದಿತ್ತು. ಆದರೆ ಈಗ ವಿಷಯ ಹಾಗಿಲ್ಲ. ಅಸಮಾನತೆಗಳನ್ನು ನಿವಾರಿಸಲು ಸಾಧ್ಯವೇ ಇಲ್ಲ ಎಂಬಂತಾಗಿದೆ. ತಂತ್ರಜ್ಞಾನದ ಫಲವಾಗಿ ಸೃಷ್ಟಿಯಾದ ಹೆಚ್ಚು ಹೆಚ್ಚು ಮಾಹಿತಿ–ಚಾಲಿತ ಜಗತ್ತಿನಲ್ಲಿ 'ಮನುಷ್ಯನು ಸಾಮರ್ಥ್ಯ/ಅಧಿಕಾರಕ್ಕೋಸ್ಕರ ಜೀವನದ ಅರ್ಥಗಳನ್ನೇ ಬಿಟ್ಟು ಕೊಡಲು ಒಪ್ಪುತ್ತಿರುತ್ತಾನೆ' ಎಂದು ಯುವಲ್ ನೋಹ ಹರಾರಿ ಪ್ರತಿಪಾದಿಸುತ್ತಾನೆ. ಹೊಸ ಸಾಮರ್ಥ್ಯಗಳಿಂದ ಅವನು ಅನೇಕ ಅದ್ಭುತಗಳನ್ನು–ತನ್ನ ಸಾವನ್ನೂ ಗೆಲ್ಲಬಲ್ಲಂತಹ–ಸಾಕಾರ ಮಾಡಿಕೊಂಡುಬಿಡಬಹುದು. ಆದರೆ ಇಂಥ ಸಾಧ್ಯತೆಗಳಿಗೆ ತೆರುತ್ತಿರುವಂತ ದೊಡ್ಡ ಬೆಲೆ ಆ ಸಾಮರ್ಥ್ಯದ ಅಸಮಾನ ಮತ್ತು ಅಸಮರ್ಪಕ ಹಂಚಿಕೆಗೆ ಸಂಬಂಧಿಸಿದ್ದೇ ಆಗುತ್ತಿದೆ. ಇದು ಜಾಗತಿಕವಾಗಿ ಒಂದು ಪ್ರತಿಷ್ಠಿತ ಜನವರ್ಗದವರನ್ನು ಸೃಷ್ಟಿ ಮಾಡುತ್ತಿದೆ. ಟಿಮ್ ಆಡಮ್ಸ್ ಅವರು ಗಾರ್ಡಿಯನ್ ಪತ್ರಿಕೆಯಲ್ಲಿ ಈ ವಿಷಯವನ್ನು ಅತ್ಯಂತ ಸುಂದರವಾಗಿ ಮತ್ತು ಸಂಗ್ರಹವಾಗಿ ಹೀಗೆ ವಿವರಿಸಿದ್ದಾರೆ. "ತನ್ನ ತಾಂತ್ರಿಕ ಸಾಮರ್ಥ್ಯದಿಂದ ಗಳಿಸಿಕೊಂಡ ಈ ದೀರ್ಘಾಯುಷ್ಯದ ಮತ್ತು ಅತಿಮಾನುಷ ಶಕ್ತಿಗಳು ಕೇವಲ ಅತೀ ಶ್ರೀಮಂತರ ಮತ್ತು ಮಾಹಿತಿ ವಿಶ್ವದ ಒಡೆತನ ಹೊಂದಿದ ಜನರ ಪಾಲು ಮಾತ್ರವಾಗುವ ಎಲ್ಲ ಸೂಚನೆಗಳು ಕಾಣುತ್ತಿದೆ. ಆದರೆ ಈ ನಡುವೆ ದಕ್ಷ ಯಂತ್ರಗಳಿಂದ ಉಂಟಾದ ಅಪಾರವಾದ ಮಾನವ ಶ್ರಮದ ಉಳಿಕೆಯು ಯಾವುದೇ ಆರ್ಥಿಕ ಅಥವಾ ಮಿಲಿಟರಿ ಉಪಯುಕ್ತತೆ ಅಥವಾ ಉದ್ದೇಶವಿಲ್ಲದೆ ಒಂದು ಅಗಾಧ 'ಅನುಪಯುಕ್ತ ವರ್ಗವೊಂದು ಸೃಷ್ಟಿಯಾಗುತ್ತಿದೆ. ಇದರ ಅರಿವಿದ್ದೂ ಆಧುನಿಕ ಮಾನವನ ದೃಷ್ಟಿಕೋನದಲ್ಲಿ ಯಾವ ಬದಲಾವಣೆಯೂ ಆಗದಿದ್ದರೆ 'ಮಾಹಿತಿವಾದ' ಎಂಬ ಸಿದ್ಧಾಂತವು ಜಗತ್ತಿನಾದ್ಯಂತ ಒಂದು ಬಲವಾದ ಶ್ರದ್ಧೆಯಾಗಿ ಪಾವಿತ್ರ್ಯತೆಯನ್ನು ಪಡೆಯುತ್ತದೆ ಎಂದು ಹರಾರಿಯವರೂ ಹೇಳುತ್ತಿದ್ದಾರೆ.. ಇದೊಂದು ಯುಟೋಪಿಯನ್ನರಿಗೆ ಇದ್ದ ಸರ್ವಜ್ಞಾನಿ, ಸರ್ವವ್ಯಾಪಿ ದೇವರ ಪರಿಕಲ್ಪನೆಯಿಂದ ಹೆಚ್ಚೇನು ವ್ಯತ್ಯಾಸವಿಲ್ಲದ–ಮಾಹಿತಿ ಪರಿಷ್ಕರಣವೆಂಬ ವ್ಯವಸ್ಥೆಗೆ ಮಾನವ ಜನಾಂಗ ಸದಾ ಸಂಪರ್ಕದಲ್ಲಿರಬೇಕಾದ ಒಂದು 'ಪರಿಪೂರ್ಣ ಏಕಮೇವ ಸ್ಥಿತಿ'ಯಾಗಿ ತೋರಿಬರುತ್ತದೆ. ಡಿಸ್ಟೋಪಿಯನ್ನರಿಗೂ(ಅಪಾಯಗಳನ್ನೇ ಕಾಣುವ)ಇದು ಒಂದು ರೀತಿಯಲ್ಲಿ ಹಾಗೆಯೇ ಕಾಣುತ್ತದೆ".

ಆದರೆ ಈ 'ಅತಿ ಪ್ರತಿಷ್ಠಿತ' ವರ್ಗವು ಜಗತ್ತಿನಲ್ಲಿ ರೂಪುಗೊಳ್ಳುತ್ತಿರುವ ಸುಳಿವು ನಮಗೆ ಈಗ್ಗೆ ಸಾಕಷ್ಟು ಸಮಯದಿಂದಲೇ ಸಿಕ್ಕಿತ್ತಲ್ಲವೇ? ದುರಾಸೆಯೆ ಒಂದು ದೊಡ್ಡ ಮೌಲ್ಯವೆಂದು ಒಪ್ಪಿಕೊಂಡು ಯಾವ ಸಂಪತ್ತಿನ ಸಂಗ್ರಹದಲ್ಲಿ ಬಿದ್ದಿದ್ದೆವೋ ಆ ಪ್ರಯತ್ನದಲ್ಲೇ ನಾವು ಜಗತ್ತಿನ ಮತ್ತು ಕೋಟ್ಯಂತರ ಜನರ ಜೀವನದ ಮೇಲೆ ತೀವ್ರವಾದ ಮತ್ತು ದೂರಗಾಮಿ ಪ್ರತಿಕೂಲ ಪರಿಣಾಮಗಳನ್ನು ಬೀರಬಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳುವ ಈ ಪ್ರತಿಷ್ಠಿತ/ವಿಶೇಷ ಜನವರ್ಗವನ್ನು ಸೃಷ್ಟಿ ಮಾಡಿಕೊಂಡುಬಿಟ್ಟಿದ್ದೇವೆ. ಅಂತಹವರ ನಿರ್ಧಾರಗಳು ಸ್ವಹಿತಾಸಕ್ತವೂ, ಪೈಶಾಚಿಕ ಸ್ವರೂಪದವೂ ಆಗಿದ್ದು ಅದರ ದುಷ್ಪರಿಣಾಮಗಳನ್ನು ಜಗತ್ತಿನ ಬಹುಸಂಖ್ಯಾತ ಜನರು ಅಸಹಾಯಕವಾಗಿ ಅನುಭವಿಸಬೇಕಾಗಿ ಬಂದಿದೆ.

ಮಾನ್ಯುಯಲ್ ಕ್ಯಾಸ್ಟಲ್ಸ್ ಎಂಬ ಒಬ್ಬ ವಿದ್ವಾಂಸ ಕ್ರಿ.ಶ. ೨೦೦೦ದ ಇಸವಿಯಷ್ಟು ಹಿಂದೆಯೇ ಇದನ್ನು "ಜಾಲಬಂಧ ಆರ್ಥಿಕತೆ"(ನೆಟ್‌ವರ್ಕ್ ಎಕಾನಮಿ) ಎಂದು ಕರೆದಿದ್ದಾನೆ. ಆರ್ಥಿಕ ಅನಿಶ್ಚಿತತೆ ಬೆಳೆದಂತೆಲ್ಲ ಮತ್ತು ಅಸಮಾನತೆಯು ತೀವ್ರವಾದಂತೆಲ್ಲ ನಾಗರಿಕರು ಮಾನಸಿಕವಾಗಿ ಒಟ್ಟೂ ಸಮಾಜದ ಬಗೆಗಿನ ಸಂಬಂಧ ಮತ್ತು ಸಂಪರ್ಕವನ್ನು ಕಡಿದುಕೊಳ್ಳುತ್ತ ಬರುತ್ತಾರೆ. ಸಣ್ಣ ಸಣ್ಣ ಗುಂಪುಗಳಾಗಿ ಚದುರಿಕೊಂಡು ತಮ್ಮ ತಮ್ಮ ಅಸ್ಮಿತೆಯ ಉಳಿವಿಗಾಗಿ ಆದಿ ಯುಗದ ಪ್ರವೃತ್ತಿಗಳನ್ನು ಜಾಗೃತಗೊಳಿಸಿಕೊಂಡು ಯಾವುದೇ ಮಾರ್ಗವನ್ನು ಅನುಸರಿಸಲೂ ತಯಾರಾಗುತ್ತಾರೆ. ಸರ್ಕಾರ ಹಾಗು ನೀತಿ ನಿರೂಪಕರ ಬಗ್ಗೆ ಭರವಸೆಯನ್ನು ಕಳೆದುಕೊಂಡು ಪ್ರಜಾತಾಂತ್ರಿಕ ವ್ಯವಸ್ಥೆಯ ಮೇಲಿನ ನಂಬಿಕೆಯನ್ನೇ ಕಳೆದುಕೊಂಡುಬಿಡುತ್ತಾರೆ. ಹೀಗೆ ಸರ್ಕಾರಗಳನ್ನು ಒತ್ತಾಯಿಸಿ ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳುವ ಶಕಿ ಮತ್ತು ಇಚ್ಛೆಗಳೆರಡನ್ನೂ ಕಳೆದುಕೊಳ್ಳುತ್ತಾರೆ. ಇಂತಹ ಪರಿಸ್ಥಿತಿಯು ಒಂದು ಉದಾರವಾದಿ ಪ್ರಜಾತಾಂತ್ರಿಕ ರಚನೆಗಳನ್ನೇ ಹಾಳುಮಾಡಿ ಮೂಲಭೂತವಾದಿ ಶಕ್ತಿಗಳು ಹುಟ್ಟಿಕೊಳ್ಳುವಂತೆ ಮಾಡುತ್ತದೆ ಎಂದು ಮಾನ್ಯುಯಲ್ ಕ್ಯಾಸ್ಟಲ್ಸ್ ಆಗಲೇ ಎಚ್ಚರಿಸಿದ್ದಾರೆ.

ಇತ್ತೀಚಿನ ಹಲವು ವರ್ಷಗಳ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ ನಿಜಕ್ಕೂ ನಾವು ಸಂವಿಧಾನಕ್ಕೆ ಕಟಿಬದ್ಧವಾದ ಒಂದು ಉದಾರವಾದಿ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಉಳಿಸಿ ಕಾಪಾಡಿಕೊಳ್ಳಲು ಬೇಕಾದಂತಹ ಮೌಲ್ಯಗಳನ್ನೇ ಕಳೆದುಕೊಂಡು ಹಿಂದಕ್ಕೆ ಸರಿಯುತ್ತಿದ್ದೇವೆಯೋ ಎಂದೆನಿಸುತ್ತದೆ. ಎಲ್ಲೆಲ್ಲಿಯೂ ಛಿದ್ರ ಛಿದ್ರವಾದ ಜಗತ್ತು, ರಾಷ್ಟ್ರ ಮತ್ತು ಸಮಾಜಗಳಿಂದ ಅಸಮಾಧಾನದ ಮತ್ತು ಅವಿವೇಕದ ಕರ್ಕಶ ಚೀರಾಟಗಳು ಕೇಳಿಬರುತ್ತಿರುವುದನ್ನು ನೋಡಿದರೆ ಇದು ಸ್ಪಷ್ಟವಾಗುತ್ತಿದೆ.

ಇಂತಹ ಬಿಕ್ಕಟ್ಟಿನ ಮತ್ತು ವಿಷಮ ಸ್ಥಿತಿಗೆ ಇಷ್ಟು ಬೇಗನೆ ಅದ್ಹೇಗೆ ಬಂದು ತಲುಪಿದೆವು? ಡಾ. ರಾಮಮನೋಹರ ಲೋಹಿಯಾರಂತಹವರ ಜ್ಞಾನದ, ವಿವೇಕದ ಯಾವ ಮಾತುಗಳನ್ನು ನಾವು ನಿರ್ಲಕ್ಷಿಸಿಬಿಟ್ಟೆವು? ನನ್ನ ಪ್ರಕಾರ ಅವರು ಎಚ್ಚರಿಸಿದ

“ಏಕತಾನದ/ಏಕ ಸ್ವರೂಪ’ದ (ಮೊನೊಟೊನಿಕ್ ಲಾಜಿಕ್ ಅಂಡ್ ಮೈಂಡ್) ವಿಚಾರ ಮತ್ತು ಮನಸ್ಸನ್ನು ಸೃಷ್ಟಿಸುವ ಹುನ್ನಾರಗಳು ಮತ್ತು ಅಪಾಯಗಳು ಮತ್ತು ಸಮಾಜದಲ್ಲಿ, ಅದರಲ್ಲೂ ವಿಶೇಷವಾಗಿ ಶೋಷಿತರು ಮತ್ತು ನಿರ್ಬಲರಾದ ಜನರ ಮೇಲೆ ಆಗುವ ಪರಿಣಾಮಗಳ ಬಗ್ಗೆ ಅವರ ಮಾರ್ಮಿಕವಾದ ಒಳನೋಟಗಳನ್ನು ನಾವು ಅರ್ಥ ಮಾಡಿಕೊಳ್ಳದೆ ನಿರ್ಲಕ್ಷಿಸಿದ್ದೇವೆ. ಲೋಹಿಯಾರವರ ಏಕಸ್ವರೂಪಿ ವ್ಯವಸ್ಥೆಯ ಅಪಾಯದ ಗ್ರಹಿಕೆಯ ಜೊತೆ ಜೊತೆಗೆ ‘ನೈತಿಕತೆಯ ವಿವೇಚನೆಯನ್ನು ಕಳೆದುಕೊಂಡ ಕಾರ್ಯಗಳು ಕ್ರಿಯಾಪದವಿಲ್ಲದ ವಾಕ್ಯದಂತೆ’ ಎಂಬ ಅವರ ಜೀವನದ ಸೂತ್ರವು ಅವರನ್ನು ಒಬ್ಬ ಉತ್ಕಟ ನಾಗರಿಕ ಸ್ವಾತಂತ್ರ್ಯದ ಮತ್ತು ಸಮಾನತಾವಾದಿ ಹಾಗು ಉದಾರವಾದಿ, ಸಾಂವಿಧಾನಿಕ ಪ್ರಜಾತಂತ್ರ ವ್ಯವಸ್ಥೆಯ ಪ್ರತಿಪಾದಕರನ್ನಾಗಿ ರೂಪಿಸಿ ಆ ಉದ್ದೇಶ ಸಾಧನೆಗಾಗಿ ತಮ್ಮ ಜೀವಮಾನದಾದ್ಯಂತ ಹೋರಾಡುವಂತೆ ಪ್ರೇರೇಪಿಸಿತು. ಅವರ ಆಲೋಚನೆಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಅವರು ಯಾವಾಗಲೂ ಏಕರೂಪವಲ್ಲದ /ಏಕತಾನವಲ್ಲದ ಹಾಗೂ ಬಹುತ್ವವನ್ನು ಮಾನ್ಯ ಮಾಡುವ ವ್ಯವಸ್ಥೆಯ ಪರಿಕಲ್ಪನೆಯ ನೆಲೆಯಿಂದ ಹುಟ್ಟಿಕೊಳ್ಳುವ ಹೊಸ ಹೊಸ ಹೊಳಹು, ಒಳನೋಟ ಮತ್ತು ಜ್ಞಾನದಿಂದ ಮತ್ತು ದಿನ ನಿತ್ಯ ಜೀವನದಲ್ಲಿ ಎದುರಿಸುವ ಸನ್ನಿವೇಶಗಳಲ್ಲಿ ನಮ್ಮ ವಿವೇಕ ಮತ್ತು ವಿವೇಚನೆಯ ಬಳಕೆಯಿಂದ ಒದಗುವಂತಹ ತಿಳುವಳಿಕೆ ಮತ್ತು ಗ್ರಹಿಕೆಗಳು ಇರುತ್ತಿದ್ದವು. ಮತ್ತು ಹೊಸ ಮಾಹಿತಿ ಮತ್ತು ವಿಚಾರಗಳ ಆಧಾರದಲ್ಲಿ ಅವನ್ನು ಮರುನಿರೂಪಿಸಿ ಕೊಳ್ಳುವ ಅಥವಾ ರದ್ದುಮಾಡಿಕೊಳ್ಳುವ ಸಾಧ್ಯತೆಯನ್ನಿಟ್ಟುಕೊಂಡ ತತ್ವಜ್ಞಾನೀಯ ನೋಟಗಳಿಂದ ಅವರು ಮಾರ್ಗದರ್ಶನ ಪಡೆಯುತ್ತಿದ್ದರು.

ಡಾ. ಲೋಹಿಯಾ ಅವರು ಜೀವಿಸಿದ ಮತ್ತು ನಾಗರಿಕ ಅಸಹಾಕಾರದ ಹೋರಾಟ ಗಳನ್ನು ನಡೆಸಿದ ಕಾಲಾವಧಿಯು ಸಾಮ್ರಾಜ್ಯಶಾಹಿ, ವಸಾಹತುಶಾಹಿ, ಫ್ಯಾಸಿವಾದ, ಬಂಡವಾಳಶಾಹಿ ಮತ್ತು ಹೌದು, ಮಾರ್ಕ್ಸ್ ಮತ್ತು ಲೆನಿನ್‌ವಾದಗಳು ಮಾನವಕುಲದ ಮೇಲೆ ಎಸಗಿದ ಅತಿರೇಕದ ಮತ್ತು ಭಯಾನಕ ಹಿಂಸೆಗಳಿಂದ ಕೂಡಿದುದಾಗಿತ್ತು. ಒಂದು ಅರ್ಥದಲ್ಲಿ ಈ ಅತಿರೇಕಗಳು, ಲೋಹಿಯಾರವರು ಪಟ್ಟು ಬಿಡದೇ ವಿರೋಧಿಸಿದ, ಏಕರೂಪಿ ಮನಸ್ಸಿನ ಪರವಾಗಿರುವ ತರ್ಕಗಳಿಂದಲೇ ಹುಟ್ಟಿದವು ಗಳಾಗಿವೆ. ಅಂದರೆ ಅದು ಈಗಾಗಲೇ ಆಲೋಚಿಸಿ ಸಾರ್ವತ್ರಿಕವಾಗಿ ಸರಿಯೆಂದು ಮತ್ತು ಯಾವುದೇ ಅಪವಾದವಿಲ್ಲವೆಂದು ಸ್ಥಾಪಿಸಲಾದ ಒಂದು ಆದರ್ಶ ಪರಿಕಲ್ಪನೆಗೆ ದಿನನಿತ್ಯದ ಆಗುಹೋಗುಗಳನ್ನು ಹೊಂದಿಸುವ ಚಿಂತನಾಕ್ರಮವೇ ಆಗಿದೆ. ಇಂತಹ ಸ್ಥಾಪಿತ ಪರಿಕಲ್ಪನೆಗಳ ಅಪಾಯವೇನೆಂದರೆ, ಅದರ ಎಂತಹ ಭಯಾನಕ ಪರಿಣಾಮ ಗಳೇ ಆಗಿರಲಿ ಅದನ್ನು ಆದರ್ಶದ ಸ್ಥಾಪನೆಗೆ ಅನಿವಾರ್ಯವೆಂದು ಸಮರ್ಥಿಸಿ ಕೊಳ್ಳುವುದು. ಇಂತಹ ಮನಸ್ಸು ಮತ್ತು ತರ್ಕವು, ವ್ಯಷ್ಟಿ ಮತ್ತು ಸಮಷ್ಟಿಯ ನೆಲೆಯಲ್ಲಿ

ವ್ಯತಿರಿಕ್ತ ಮತ್ತು ಪ್ರತಿಕೂಲ ಪರಿಣಾಮಗಳಿಗೆ, ದೊಡ್ಡ ಮಟ್ಟದ ಮಾನವ ದುರಂತಗಳನ್ನೂ ಒಳಗೊಂಡು, ನಮ್ಮನ್ನು ಕುರುಡರನ್ನಾಗಿ ಮಾಡಿಬಿಡುತ್ತದೆ. ಏಕೆಂದರೆ ಅಂತಹ ಆದರ್ಶದ ಪ್ರತಿಪಾದಕರು ತಮ್ಮ ಪರಿಕಲ್ಪನೆಯು ತಪ್ಪಾಗಬಹುದು, ಅದರಲ್ಲಿ ಅಂತರ್ಗತ ಕೊರತೆಗಳು ಸಾಕಷ್ಟಿರಬಹುದು ಎನ್ನುವುದನ್ನು ಪೂರ್ಣ ಅಲ್ಲಗೆಳೆಯುತ್ತಾರೆ ಹಾಗು ಪರ್ಯಾಯ ದಾರಿಗಳು ಇರಬಹುದು ಎಂಬುದನ್ನು ಒಪ್ಪಿಕೊಳ್ಳಲೂ ನಿರಾಕರಿಸುತ್ತಾರೆ.

ಜಾನ್ ಗ್ರೇ ಎಂಬ ತತ್ವ ಜ್ಞಾನಿಯು ಉದಾರವಾದಿ ನೋಟದಲ್ಲಿ ಇರುವ ಒಂದು ಮೂಲಭೂತ ಬಿರುಕನ್ನು ಗುರುತಿಸುತ್ತಾರೆ. "ಒಂದು ಕಡೆ, ಅವರು ಇರುವುದು ಚೈತನ್ಯ ಸ್ವರೂಪಿಯಾದ ಸತ್ಯ ಒಂದೇ ಮತ್ತು ಮನುಷ್ಯನ ವಿವೇಕ–ಪ್ರಜ್ಞೆಯನ್ನು ಬಳಸಿಕೊಂಡು ಅದರ ಅರಿವು ಪಡೆದುಕೊಳ್ಳಬಹುದೆಂದು ಮತ್ತು ಆ ಜ್ಞಾನದ ಬೆಳಕಿನಲ್ಲಿ ಒಮ್ಮತದ ತಿಳುವಳಿಕೆಗೆ ಬರಬೇಕೆಂದು ಹೇಳುತ್ತಾರೆ. ಮತ್ತೊಂದು ಕಡೆ, ಉದಾರವಾದವು ಜನರ ವೈವಿಧ್ಯಮಯ ನಂಬಿಕೆಗಳು, ಅನುಭವಗಳು, ದೃಷ್ಟಿಕೋನಗಳು ಮತ್ತು ಅಗತ್ಯತೆಗಳ ಬಗ್ಗೆ ಸಹಿಷ್ಣುತೆ ಮತ್ತು ವಂಚಿತ ಮತ್ತು ನಿರ್ಲಕ್ಷ್ಯಕ್ಕೊಳಗಾದ ಜೀವಗಳ ಬಗ್ಗೆ ಸಹಾನುಭೂತಿ; ಇವು ನ್ಯಾಯಸ್ಥಾಪನೆಗೆ ಮತ್ತು ಪ್ರಗತಿಗೆ ಪೂರಕವಾದಂತಹ ಸಾಮಾಜಿಕ ಸ್ಥಿರತೆಗೆ ಅತ್ಯಾವಶ್ಯಕವೆಂದೂ ಪ್ರತಿಪಾದಿಸುತ್ತಾರೆ. ಆದರೆ ಮೊದಲನೇ ದೃಷ್ಟಿಯ ಅಪಾಯವೆಂದರೆ ನಾವು ತಿಳಿದುಕೊಂಡ ಸತ್ಯವನ್ನೇ ಅಂತಿಮ ಮತ್ತು ಪರಿಪೂರ್ಣ ವೆಂದು ತಪ್ಪುತಪ್ಪಾಗಿ ಭಾವಿಸಿ ಅದನ್ನು ಒಪ್ಪದೇ ಇರುವವರನ್ನು 'ಬೇರೆ' ಎಂದು ಪ್ರತ್ಯೇಕಿಸಿ ಅಂತಹ 'ಅವರು' ದುಷ್ಟರೂ, ಶಿಸ್ತುಗೆಟ್ಟವರೂ, ಪ್ರಗತಿ–ಅಭಿವೃದ್ಧಿ ಮತ್ತು ರಾಷ್ಟ್ರದ ವಿರೋಧಿಗಳೆಂದು ಸುಲಭವಾಗಿ ತೀರ್ಮಾನಕ್ಕೆ ಬಂದುಬಿಡಬಹುದು. ಹಾಗೆ ಆ 'ಬೇರೆಯವರು' ಅವಿವೇಕಿಗಳು, ವಿಚಾರಹೀನರು ಎಂದು ಪರಿಭಾವಿಸಿಕೊಂಡಾಗ 'ಈ ಗುಂಪು' ಅವರ ಮೇಲೆ ದಬ್ಬಾಳಿಕೆ ನಡೆಸುವುದು, ಭಿನ್ನ ಅಭಿಪ್ರಾಯದ ಧ್ವನಿಗಳನ್ನು ಹತ್ತಿಕ್ಕಿ ನಿರ್ನಾಮ ಮಾಡುವುದು ಇವೆಲ್ಲಾ 'ಸತ್ಯವನ್ನು ತಿಳಿದವರ' ತಾರ್ಕಿಕ ಹೆಜ್ಜೆ ಗಳಾಗುತ್ತವೆ.

ಇನ್ನೊಂದು ಕಡೆ ಉದಾರವಾದದ ಮತ್ತೊಂದು ದೃಷ್ಟಿಯಲ್ಲಿಯೂ ಸಾಕಷ್ಟು ಸಮಸ್ಯೆಗಳು ಕಂಡು ಬರುತ್ತಿವೆ. ವಾದಕ್ಕೆ ಪ್ರತಿವಾದ, ಪ್ರತಿಯೊಬ್ಬ ವ್ಯಕ್ತಿಯೂ ಅಥವಾ ಗುಂಪೂ ತಮ್ಮ ವಾದವೇ ಸರಿಯೆಂದೂ, ಸತ್ಯವೆಂದು ಸಂಸ್ಥಾಪಿಸುವ ಪ್ರಯತ್ನ ಮತ್ತು ಇದರಿಂದಾಗಿ ಎಲ್ಲಿಯೂ ಯಾವುದೇ ಒಮ್ಮತದ ಮತ್ತು ಒಗ್ಗಟ್ಟಿನ ಕ್ರಿಯೆಗಳು/ ಕಾರ್ಯಕ್ರಮಗಳು ಹುಟ್ಟಿಕೊಳ್ಳದೆ ವಿವಿಧ ಗುಂಪುಗಳಾಗಿ ಚದುರಿಕೊಂಡು ತಮ್ಮ ತಮ್ಮ ಅಸ್ಮಿತೆಗಾಗಿ ಮತ್ತು ಸಂಕುಚಿತ ಅಗತ್ಯತೆಗಳ ಸಲುವಾಗಿ ಕಾದಾಡುವುದು ಕಂಡುಬರುತ್ತದೆ. ಇಂತಹ ನೂರಾರು ದಂಗೆಗಳ ಗದ್ದಲದ ವಾತಾವರಣದಲ್ಲಿ ವಾಸ್ತವವಾದಿತ್ವ ಎಂಬ ಹೆಸರಿನಲ್ಲಿನ ಸಿನಿಕ ಗುಂಪುಗಳು/ಶಕ್ತಿಗಳು ದುರ್ಬಲ ವರ್ಗದ, ಜೀವಚ್ಛವಗಳೆನಿಸಿಕೊಂಡ, ಮುಖ್ಯವಾಹಿನಿಯ ಸಮಾಜದಿಂದ ಪ್ರತ್ಯೇಕಿಸಲ್ಪಟ್ಟ ಜನರ

ಮೇಲೆ ಆಕ್ರಮಣವನ್ನು ಎಸಗಿ ಅವರನ್ನು ಇನ್ನಷ್ಟು ಸುಲಿಗೆ ಮಾಡುವ ಹುಂಬ ಧೈರ್ಯವನ್ನು ಪ್ರದರ್ಶಿಸುತ್ತವೆ. ಇಂತಹ ವಿಚ್ಛಿದ್ರಕಾರಕ ಶಕ್ತಿಗಳಿಗೆ ಸಮಾಜವೆಂಬುದು ಒಂದು ದೊಡ್ಡ ಮಾರುಕಟ್ಟೆಯಾಗಿ ಮಾತ್ರ ಕಾಣಿಸುತ್ತಿರುತ್ತದೆ. ಸಿದ್ಧಾಂತಗಳ, ಮೌಲ್ಯಗಳ, ಧರ್ಮದ, ನಂಬಿಕೆಗಳ, ಹಕ್ಕುಗಳ ಮಾರುಕಟ್ಟೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೆ ದೊಡ್ಡ ಯಂತ್ರಗಳು–ಪ್ರತಿಷ್ಠಿತ, ಗಣ್ಯ ಜನವರ್ಗವೆಂಬ ಸಾಮಾಜಿಕ ಯಂತ್ರ–ಪ್ರಾಮುಖ್ಯತೆಯನ್ನು, ಚಾಲನೆಯನ್ನು, ಅಧಿಕಾರವನ್ನು ಪಡೆಯುತ್ತವೆ. ಲೋಹಿಯಾರ ಮಾತುಗಳಲ್ಲೇ ಹೇಳುವುದಾದರೆ ಜಾತಿ, ಸಂಪತ್ತು ಮತ್ತು ಅಧಿಕಾರಶಾಹಿ ಭಾಷೆಯ ಪರಿಣತಿ–ಈ ಮೂರರಲ್ಲಿ ಕನಿಷ್ಠ ಎರಡರ ಪ್ರಭುತ್ವ ಹೊಂದಿದವರು ಈ ಪ್ರತಿಷ್ಠಿತ ಜನವರ್ಗದಲ್ಲಿ ಸೇರಿರುತ್ತಾರೆ.

ಇಂತಹ ಪರಿಸ್ಥಿತಿಯು ಮತ್ತೆ, ನೈತಿಕತೆಯ ಮೌಲ್ಯಗಳಿಗೆ ಜಡಗೊಂಡಿರುವಂತಹ, ಸಹಜ ಮಾನವೀಯ ಅಂತಃಕರಣ, ಸಹಾನುಭೂತಿಯಂತಹ ಗುಣಗಳಿಗೆ ಎರವಾಗಿ ರುವ, ನೆರೆಹೊರೆಯ ಸಂಗಾತಿಗಳ ಸಂಕಷ್ಟ, ನೋವುಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ಮತ್ತು ಉಪೇಕ್ಷಾ ಭಾವ ತಳೆದಂತಹ, ತಮ್ಮ ವಿಪರೀತ ಮತ್ತು ಬಾಲಿಶ ಬೇಡಿಕೆಗಳಿಂದ ಸಮಾಜದ ಮೇಲೆ ಒಡ್ಡುತ್ತಿರುವ ತೀವ್ರ ಒತ್ತಡ ಮತ್ತು ಅಪಾಯಗಳು ಹಾಗೂ ಅನಿವಾರ್ಯವಾಗುತ್ತಿರುವಂತ ಸಾಮಾಜಿಕ ದಳ್ಳುರಿಯಂತಹ ದುರಂತಗಳಿಗೆ ಪೂರ್ಣ ಕುರುಡಾಗಿ ವರ್ತಿಸುವಂತಹ, ಒಂದು ಸಾಮೂಹಿಕ ಏಕರೂಪಿ ಮನಸ್ಸು ರೂಪುಗೊಳ್ಳು ತ್ತಿರುವುದಕ್ಕೆ ಕಾರಣವಾಗುತ್ತಿದೆ.

ಮಾನವ ಇತಿಹಾಸವು ಅನೇಕ ಸಾಮಾಜಿಕ ದೃಷ್ಟಿಕೋನಗಳು, ಸಿದ್ಧಾಂತಗಳು ಮತ್ತು ಕ್ರಮಾನುಕರಣೆಗಳ ಹುಟ್ಟಿಗೆ ಕಾರಣವಾಗಿ ಅದನ್ನು ನಂಬಿಕೊಂಡು ಉಳಿಸಿ ಬೆಳೆಸುವಂತಹ ಅನೇಕ ರೀತಿಯ ಪ್ರಯತ್ನಗಳೂ ನಡದಿವೆ. ಒಂದು ನಿರ್ದಿಷ್ಟ ಉದಾಹರಣೆ ಎಂದರೆ ಅತ್ಯಂತ ಹಿಂಸಾತ್ಮಕ ಮತ್ತು ರಕ್ತಸಿಕ್ತವಾದಂತಹ ಫ್ಯಾಸಿಸಂ ಎಂಬ ಸಿದ್ಧಾಂತದ ಉದಯ ಮತ್ತು ನಾಜ಼ಿ ಜರ್ಮನಿಯ ಹುಟ್ಟು. ಜರ್ಮನಿಯ ನಾಜ಼ಿ ಆಳ್ವಿಕೆಯ ಕಾಲದ ಒಂದು ವಿಚಿತ್ರ ಮತ್ತು ವಿಲಕ್ಷಣ ಸಂಗತಿ ಎಂದರೆ ದೇಶದ ನಮ್ಮ ನಿಮ್ಮಂತಹ ಸಾಮಾನ್ಯ ಜನರು ಪ್ರಭುತ್ವದ ಅಸಹಿಷ್ಣು ಮತ್ತು ಅಮಾನವೀಯ ವರ್ತನೆಗಳಿಗೆ ಮೂಕ ಮತ್ತು ಕುರುಡು ಸಾಕ್ಷಿಯಾದದ್ದು. ಯಾವ ಜನರು ಸಹಜ ಔದಾರ್ಯ, ಪರಸ್ಪರ ದಯೆ, ಅನುಕಂಪದ ಮಾನವೀಯ ಗುಣಗಳನ್ನು ಹೊಂದಿದ್ದರೋ ಅವರೇ ಜಗತ್ತಿನಲ್ಲಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪ್ರತಿಷ್ಠಾಪಿಸುವ ಮಹತ್ವಾಕಾಂಕ್ಷೆ ತಳೆದು ರಾಷ್ಟ್ರದ ಪ್ರತಿಷ್ಠೆ ಮತ್ತು ದೇಶದ ಆರ್ಥಿಕತೆಯ ಅಭಿವೃದ್ಧಿಯೇ ಮುಖ್ಯ ಗುರಿಯಾಗಿ ಅದನ್ನು ಯಾವ ಬೆಲೆ ತೆತ್ತಾದರೂ ವಿಶ್ವದ ಕಣ್ಮುಂದೆ ಪುನರ್‌ಸ್ಥಾಪಿಸಬೇಕೆಂಬ ಹುಚ್ಚುತನದಿಂದ ಅನ್ಯದ್ವೇಷಿಗಳಾಗಿ ಘೋರ ಹಿಂಸೆಗಳಿಗೆ ಕಾರಣರಾದರು. ಮತ್ತು ಈ ಗುರಿಯ ಸಾಧನೆಗೆ ಇರುವ ದಾರಿ ಒಂದೇ ಎಂದು ವಾದಿಸಿ, ಇದಕ್ಕೆ ಇರಬಹುದಾದ

ಪರ್ಯಾಯ ಮಾರ್ಗಗಳನ್ನು ಅಥವಾ ದೃಷ್ಟಿಕೋನಗಳನ್ನು ಗಣನೆಗೆ ತೆಗೆದುಕೊಳ್ಳದೆ ಅದರ ಚರ್ಚೆ ಮತ್ತು ಪರ್ಯಾಯ ಸಾಮಾಜಿಕ ಸಂಘಟನೆಗಳ ಪರಿಕಲ್ಪನೆಗಳ ಪ್ರತಿಪಾಪಾದಕರನ್ನು ಅನುಮಾನಾಸ್ಪದರು ಮತ್ತು ಅವರನ್ನು ತೊಡೆದುಹಾಕಬೇಕು ಎಂಬ ಭಾವನೆ ತಳೆದರು. ದೊಡ್ಡ ಹತ್ಯಾಕಾಂಡವಾಗುವುದನ್ನೂ ಗ್ರಹಿಸದ ರೀತಿಯಲ್ಲಿ ಸಾಂಸ್ಕೃತಿಕ ಅಂಧತ್ವವನ್ನು ಬೆಳೆಸಿದರು. ಇದು ಸಾಧ್ಯವಾಗಿದ್ದು ಹೇಗೆಂದರೆ, ಯಾವ ಜನರನ್ನು ನಾಶಮಾಡಲಾಗು ತ್ತಿದೆಯೋ ಅವರು 'ಬೇರೆಯವರು' ಮತ್ತು ತಮ್ಮ ಏಕಾಯಾಮದ ರಾಷ್ಟ್ರದ ಗುರಿ ಸಾಧನೆಗೆ ತೊಡಕಾಗಿರುವಂತಹವರು ಎಂದು ನಾಝಿ ಪಕ್ಷವು ತಮ್ಮ ಪ್ರಚಾರದಿಂದ ಜನರನ್ನು ನಂಬಿಸಿತು. ನಾಝಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದು ಮತ್ತು ಅಧಿಕಾರದಲ್ಲಿ ಉಳಿಸಿದ್ದು ಮುಕ್ತ ವಿಚಾರ-ನಂಬಿಕೆಗಳ ಪ್ರತಿಷ್ಠಾಪನಾ ವೇದಿಕೆಯಾದ ಪ್ರಜಾಸತ್ತಾತ್ಮಕ ಚುನಾವಣೆಯೇ. ಮತ್ತು ಜನರ ಬೆಂಬಲವೇ ಅವರನ್ನು ಎಂಬುದನ್ನು ನಿಜಕ್ಕೂ ನಾವು ನೆನಪಿಟ್ಟುಕೊಳ್ಳಬೇಕು. ಪ್ರಜಾತಂತ್ರ ತನ್ನಷ್ಟಕ್ಕೆ ತಾನೇ ಸತ್ಯಕ್ಕೆ ಸಾಧನವಾಗಲಾರದು ಮತ್ತು ಸದಾ ಮಾನವ ಕಲ್ಯಾಣಕ್ಕೆ ಪೂರಕವಾಗಿರುತ್ತದೆ ಎಂದು ತಿಳಿಯಲಾಗದು. ಹಾಗಾಗಿ 'ಗುರಿ' ಮತ್ತು 'ಮಾರ್ಗ' ಇವೆರಡನ್ನೂ ಸತತವಾಗಿ ಮತ್ತು ತೀವ್ರವಾಗಿ ಪ್ರಶ್ನಿಸುವ ಭಿನ್ನ ಧ್ವನಿಗಳನ್ನು ಕಾಪಾಡಿಕೊಳ್ಳುವುದು, ಯಾವುದು ಮಾನವೀಯ ಮತ್ತು ಯಾವುದು ಅಮಾನವೀಯ ನಡೆಗಳು ಎನ್ನುವುದನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯನ್ನು ಕುರಿತ ಚರ್ಚೆ ಬಹಳ ಮುಖ್ಯ.

ಡಾ.ಲೋಹಿಯಾರವರು ಮಾನವ ಇತಿಹಾಸ ವಿಷಯದ ವಿದ್ಯಾರ್ಥಿಯಾಗಿದ್ದರು. ನಿರ್ದಿಷ್ಟವಾಗಿ ಹೇಳುವುದಾದರೆ, ನಿರ್ಬಲೀಕರಣಗೊಂಡ, ದುರ್ಬಲ ವರ್ಗದ ಜನರ ಸಂಕಷ್ಟದ ಮತ್ತು ದುರವಸ್ಥೆಯ ಬಗ್ಗೆ ಪ್ರಭುತ್ವವು ತಾಳುವ ಔದಾಸೀನ್ಯವನ್ನು ಮತ್ತು ನಾಗರಿಕ ಸ್ವಾತಂತ್ರ್ಯವನ್ನು ಕೀಳಾಗಿ ಕಾಣುವ ಅದರ ಧೋರಣೆಗಳನ್ನು ಮಾನ್ಯ ಮಾಡುವ ಮತ್ತು ಸಾಮಾನ್ಯೀಕರಿಸುವ ಇದೇ ಪ್ರತಿಷ್ಠಿತ ವರ್ಗದ 'ಏಕರೂಪಿ ಮನಸ್ಸಿನ' ವಿರುದ್ಧ ಮಾನವನು ನಡೆಸಿದ ಹೋರಾಟವನ್ನು ಅಭ್ಯಸಿಸಿದ ವಿದ್ಯಾರ್ಥಿ. ಈ ಸಂಬಂಧ ಡಾ. ಲೋಹಿಯಾರ ಮಾತುಗಳನ್ನೇ ನೆನಪಿಸಿಕೊಳ್ಳುವುದು ಒಳ್ಳೆಯದು : "ನಾಗರಿಕ ಸ್ವಾತಂತ್ರ್ಯವೆಂಬ ಪರಿಕಲ್ಪನೆಯು ಪ್ರಜೆಗಳು ಪ್ರಭುತ್ವದ ವಿರುದ್ಧ ಸತತವಾಗಿ ನಡೆಸಿದ ಹೋರಾಟದ ಫಲ. ಇತಿಹಾಸದುದ್ದಕ್ಕೂ ಪ್ರಭುತ್ವವು ಮತ್ತು ಅದರ ಕಾನೂನುಗಳು ಅನೇಕ ರೀತಿಯ ದೌರ್ಜನ್ಯಗಳನ್ನು ತನ್ನ ಪ್ರಜೆಗಳಮೇಲೆ ಎಸಗುತ್ತಾ ಬಂದಿದೆ. ಜನರು ಧೀರ್ಘ ಮತ್ತು ಏಕಾಂತ ಸೆರೆಮನೆವಾಸವನ್ನೂ, ಅನೇಕ ಸಲ ಮರಣವನ್ನೂ ಅನುಭವಿಸುತ್ತಲೇ ಬಂದಿದ್ದಾರೆ. ಹೀಗೆ ಮನುಷ್ಯನ ಬಹು ಬೆಲೆ ಬಾಳುವ ಸ್ವತ್ತುಗಳನ್ನು ಪ್ರಭುತ್ವವು ಕಸಿದುಕೊಳ್ಳುತ್ತಾ ಬಂದಿದೆ. ಆದುದರಿಂದ ಅವನಿಗೆ ಪ್ರಭುತ್ವದ ಅತಿರೇಕದ ವರ್ತನೆಗಳಿಂದ ತನ್ನನ್ನು ಕಾಪಾಡಿಕೊಳ್ಳಲು ಮತ್ತು ಅಧಿಕಾರದ ದುರುಪಯೋಗಗಳನ್ನು

ಮತ್ತು ಅದರ ದುಷ್ಟತನವನ್ನು ಎದುರಿಸಿ ಪ್ರತಿರೋಧವನ್ನು ದಾಖಲಿಸಲು ಮತ್ತು ಅವುಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಒಂದು ರಕ್ಷಣಾತ್ಮಕ ವೇದಿಕೆಯ ಅಗತ್ಯವಿತ್ತು. ಅದೇ ನಾಗರಿಕ ಸ್ವಾತಂತ್ರ್ಯದ ಹುಟ್ಟಿಗೆ ಕಾರಣವಾಯಿತು. ಈ ನಾಗರಿಕ ಸ್ವಾತಂತ್ರ್ಯ ರಕ್ಷಣೆಗಾಗಿ ಪ್ರಭುತ್ವ ಪ್ರತಿರೋಧ ಶಕ್ತಿ(ನಾಗರಿಕ ಅಸಹಕಾರ) ಜೀವಂತವಿದ್ದಾಗ ಪ್ರಭುತ್ವದ ದಮನಕಾರಿ ಕ್ರಮಗಳ ವಿರುದ್ಧದ ಪ್ರತಿರೋಧ ಅಷ್ಟು ಭೀಕರವಾದ ಪರಿಣಾಮಗಳಿಗೆ ಎಡೆ ಕೊಡುವುದಿಲ್ಲ.

ಇಂತಹ ಒಂದು ಐತಿಹಾಸಿಕ ಪರಿಕಲ್ಪನೆಯೇ(ನಾಗರಿಕ ಸ್ವಾತಂತ್ರ್ಯ)ಮತ್ತು ಅದರ ಮೇಲಿನ ಅವರ ಬದ್ದತೆಯೇ ಡಾ.ಲೋಹಿಯಾರವರ ಆಲೋಚನೆ ಮತ್ತು ಕ್ರಿಯೆಗಳನ್ನು ಸದಾ ಪ್ರೇರೇಪಿಸುತ್ತ ಬಂದವು. ಅವರ ರಾಷ್ಟ್ರೀಯತೆಯ ಪರಿಕಲ್ಪನೆಯು ಭಾರತದ್ದೇ ಆದ (ಸ್ಥಳೀಯವಾದ) ವಿಶಿಷ್ಟ ಮತ್ತು ನಿರ್ದಿಷ್ಟ ಸ್ಥಿತಿಗತಿಗಳು, ವಿಶೇಷತೆಗಳು, ಸಮಸ್ಯೆಗಳು ಮತ್ತು ಅಗತ್ಯತೆಗಳನ್ನು ಗಮನದಲ್ಲಿರಿಸಿಕೊಂಡು ರೂಪಿಸಿಕೊಂಡಿದ್ದಾಗಿತ್ತು. ಅದೇನೇ ಇದ್ದರೂ ಅವರು ಸದಾ ತೆರೆದ ಮನಸ್ಸಿನವರಾಗಿದ್ದು ದಿನನಿತ್ಯದ ಆಗು ಹೋಗುಗಳ ಬಗ್ಗೆ ಮತ್ತು ಅದು ಉಂಟುಮಾಡಬಹುದಾದಂತಹ ಏಕರೂಪಿ ಮನಸ್ಥಿತಿಯ ಉತ್ಪಾದನೆಯ ಸಾಧ್ಯತೆ ಮತ್ತು ಆ ಸ್ಥಿತಿಯು ತಂದೊಡ್ಡಬಹುದಾದ ಮಾನವ ಕೋಟಿಯ ಮೇಲಿನ ದೌರ್ಜನ್ಯ ಮತ್ತು ಅಪಾಯಗಳ ಬಗ್ಗೆ ಅವರು ಸದಾ ಎಚ್ಚರವಾಗಿದ್ದು ಆ ಎಚ್ಚರವೇ ನೀಡುವಂತಹ ಒಳನೋಟಗಳನ್ನೇ ಅವರು ತಮ್ಮ ತಕ್ಷಣದ ಕ್ರಿಯೆಗಳಿಗೆ ಮಾರ್ಗದರ್ಶಕಗಳಾಗಿ ಬಳಸಿಕೊಳ್ಳುತ್ತಾ ಹೊಸ ತೀರ್ಮಾನ ಗಳನ್ನು ತೆಗೆದುಕೊಳ್ಳುತ್ತಿದ್ದರು. ಹಾಗಾಗಿ ಅವರಿಗೆ 'ನಾಗರಿಕ ಸ್ವಾತಂತ್ರ್ಯ'ವೆಂಬುದು ಕೇವಲ ಒಂದು ಪರಿಕಲ್ಪನೆ ಅಥವಾ ಪಠ್ಯದಲ್ಲಿ ಅಡಕವಾದ ಭರವಸೆಗಳು ಮಾತ್ರವಾಗಿರದೆ ವ್ಯಷ್ಟಿ ಮತ್ತು ಸಮಷ್ಟಿಯ ಆರೋಗ್ಯಕರ ಅಸ್ತಿತ್ವಕ್ಕೆ ಬೇಕಾದಂತಹ ವಾಸ್ತವ ಮತ್ತು ಕ್ರಿಯಾಸ್ವರೂಪಿ ನೋಟವಾಗಿತ್ತು. ಅವರು ಈ 'ನಾಗರಿಕ ಸ್ವಾತಂತ್ರ್ಯ'ವೆಂಬುದು ಸಾಮಾಜಿಕ ಸ್ಥಿರತೆಯುಳ್ಳ ರಚನಾತ್ಮಕ, ಪ್ರಗತಿಶೀಲ ಪ್ರಜಾತಂತ್ರದ ಕಟ್ಟಡಕ್ಕೆ ಅಗತ್ಯವಿರುವ ಭದ್ರ ಬುನಾದಿ ಎಂದು ತಿಳಿದಿದ್ದರು. ಡಾ. ಲೋಹಿಯಾರ ಜೀವನ ಮತ್ತು ಚಿಂತನೆಗಳು ನಿಜಕ್ಕೂ, ಕಳೆದ ಮೂರು ದಶಕಗಳಿಂದ ಡಾ.ಅಮರ್ತ್ಯಸೇನ್‌ರವರು ಅಂಗೀಕರಿಸಿ ಪ್ರತಿಪಾದಿಸಿಕೊಂಡು ಬರುತ್ತಿರುವ "ಪರ್ಯಾಲೋಚಕ ಮತ್ತು ಸಾಮರ್ಥ್ಯವನ್ನು ವೃದ್ಧಿಸುವ ಪ್ರಜಾತಂತ್ರ ವ್ಯವಸ್ಥೆ'(deliberative and capability enhancing) ಪರಿಕಲ್ಪನೆಗೆ ಪೂರ್ವ ಪೀಠಿಕೆಯಾಗಿದೆ ಎಂದು ಧೈರ್ಯವಾಗಿ ಹೇಳುತ್ತೇನೆ. ಲೋಹಿಯಾರವರ ಹೇಳಿಕೆಯನ್ನೇ ಇಲ್ಲಿ ಪುನರುಚ್ಚರಿಸಿದರೆ ತಪ್ಪಾಗಲಾರದೆಂದು ಭಾವಿಸುತ್ತೇನೆ:

"ನಾಗರಿಕ ಸ್ವಾತಂತ್ರ್ಯವು ಪ್ರಗತಿಶೀಲತೆಯ ಕಡೆಗಿನ ಸಮಾಜದ ನಡಿಗೆಯನ್ನು ಸುಗಮಗೊಳಿಸುತ್ತದೆ. ಸಮಾಜವು ನಿರಂತರವಾಗಿ ಪ್ರಗತಿ ಮತ್ತು ಪ್ರತಿಗಾಮಿತನದ

ನಡುವೆ ತುಯ್ದಾಡುತ್ತಿರುತ್ತದೆ. ಈ ತುಯ್ದಾಟದ ಮಧ್ಯೆ ಯಥಾಸ್ಥಿತಿವಾದಿ ಶಕ್ತಿಗಳಿಂದ ಪ್ರಭುತ್ವವು ನಿಯಂತ್ರಣಕ್ಕೊಳಪಡುತ್ತಿರುತ್ತದೆ. ಇದನ್ನು ನಾವು ಮನಗಂಡು ಎದುರಿಸದೆ ಇದ್ದರೆ ಪ್ರಭುತ್ವವು ಪ್ರಗತಿಗೆ ಒಂದು ಭಾರಿ ತಡೆಗೋಡೆಯಾಗಿ ಮಾರ್ಪಟ್ಟು ಅದನ್ನು ದಮನ ಮಾಡಲು ತನ್ನೆಲ್ಲ ಪರಮ ಅಧಿಕಾರವನ್ನು ನಾಗರಿಕರ ಮೇಲೆ ಬಳಸುತ್ತದೆ. ನಾಗರಿಕರು ಈ ಎಚ್ಚರಿಕೆಯನ್ನು ಇಟ್ಟುಕೊಂಡಿದ್ದಾಗ ಮಾತ್ರ ಒಂದು ಕ್ರಮಬದ್ಧವಾದ ಸಾಮಾಜಿಕ ಪ್ರಗತಿಯು ಸಾಧ್ಯವಾಗಿ ಸಮಾಜವು ನಿರಂತರವಾಗಿ 'ದಬ್ಬಾಳಿಕೆ ಇಲ್ಲಾ ಕ್ರಾಂತಿ' ಎಂಬೆರಡು ಕಂದಕಗಳ ನಡುವೆ ಸಿಕ್ಕಿಕೊಂಡು ಪಾಡು ಪಡಬೇಕಾಗಿ ಬರುವುದಿಲ್ಲ. ಹೀಗಾಗಿ ನಾಗರಿಕ ಸ್ವಾತಂತ್ರ್ಯದ ಪರಿಕಲ್ಪನೆಯು ಅಗತ್ಯವಾಗಿ ಒಂದು ಉದಾರವಾದಿ ವಿಚಾರವಾಗಿದ್ದು ಒಂದು ರೀತಿಯಲ್ಲಿ 'ಪ್ರಭುತ್ವದ ದಬ್ಬಾಳಿಕೆ ಅಥವಾ ಸಾಮೂಹಿಕ ಬಂಡಾಯ' ಎಂಬ ಈ ಎರಡರ ಕ್ರೂರ ಪರಿಣಾಮಗಳನ್ನು ಹೀರಿಕೊಳ್ಳುವ ಆಘಾತ ಪ್ರತಿರೋಧಕ ಸಾಧನದಂತೆ ಕೆಲಸ ಮಾಡುತ್ತದೆ".

ಏಕರೂಪಿ ಮನಸ್ಸು ಮತ್ತು ಅದು ಹುಟ್ಟುಹಾಕಬಹುದಾದ ಸಾಮಾಜಿಕ ವ್ಯವಸ್ಥೆಗಳ–ಅದು ಮಾರ್ಕ್ಸ್‌ವಾದಿಗಳ ಮಾದರಿಯದ್ದೇ ಆಗಿರಲಿ ಅಥವಾ ಬಂಡವಾಳಶಾಹಿಗಳದ್ದೇ ಆಗಿರಲಿ–ಈ ಬಗೆಗೆ ಡಾ.ಲೋಹಿಯಾರವರಿಗಿದ್ದ ಸಮರ್ಥನೀಯ ಭಯವೇ ಅವರು ಹಿಂಸೆಯನ್ನು ಆಶ್ರಯಿಸದೇ ಕಾರ್ಯಸಾಧ್ಯವಾಗಬಲ್ಲ ಸಾಮಾಜಿಕ ಬದಲಾವಣೆಯ ಮಾದರಿಗಳನ್ನು ಶೋಧಿಸಿ ಬೆಳೆಸುವ ಬಗ್ಗೆ ಸದಾ ಚಿಂತಿಸುವಂತೆ ಮಾಡಿತ್ತು. ಈ ನಿಟ್ಟಿನಲ್ಲಿ ಲೋಹಿಯಾರ ಜೀವನ ಮತ್ತು ಚಿಂತನೆಗಳು ಮತ್ತು ಅವರ ಶೀಲವಂತ ಜೀವನದ ಪರಿಕಲ್ಪನೆಯು ಬ್ರೆಝಿಲ್‌ನ ಹೆಸರಾಂತ ಶಿಕ್ಷಣ ತಜ್ಞ ಪೌಲೊ ಫ್ರೇಯ್ರ್ ಅವರು ಕರೆದಂತೆ ಒಂದು 'ಮಾನವೀಕೃತ ಜಗತ್ತಿನ ಹುಡುಕಾಟ'ವೇ ಆಗಿತ್ತು. ದೌರ್ಜನ್ಯ ದಮನಗಳ ವಿರುದ್ಧದ ಸ್ವಾತಂತ್ರ್ಯಪರವಾದ ಪ್ರತಿ ಹೋರಾಟದಲ್ಲೂ ಸಮಾನತೆಗಾಗಿನ ಹುಡುಕಾಟವು ಕೊನೆಗೆ ಸಮಾನ ಅವಕಾಶದ ಆಗ್ರಹ ಮತ್ತು ಕೂಗುಗಳಾಗಿ ಅವನತಿ ಹೊಂದಿ ದಮನಿತರು ತಮ್ಮ ಸರದಿಯಲ್ಲಿ ದಮನಕಾರರನ್ನು ದಮನಿಸುವ ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳುತ್ತಿರುವ ಪರಿಪಾಠಗಳು ಕಂಡುಬರುತ್ತಿವೆ. ಹಾಗಾಗಿ ದೌರ್ಜನ್ಯ ಮತ್ತು ಶೋಷಣೆಯ ಅಮಾನುಷ ಸ್ಥಿತಿಯು ಮುಂದುವರಿಯುತ್ತಲೇ ಹೋಗುತ್ತದೆ. ಹಿಂಸಾತ್ಮಕ ಚಳುವಳಿಗಳು ಸಾಮಾಜಿಕ ಚರ್ಚೆ ಮತ್ತು ಮಾತುಕತೆಗಳು ದಾರಿ ತಪ್ಪಿದ ಮತ್ತು ಸೋತು ಸೊರಗಿರುವ ಸಂಕೇತವಾದರೂ, ಎರಡು ವಿಷಯಗಳನ್ನು ಮಾತ್ರ ಇಲ್ಲಿ ಅರ್ಥಮಾಡಿಕೊಳ್ಳಬೇಕು. ಮೊದಲನೆಯದೆಂದರೆ, ಸಮಾಜ ಮತ್ತು ಪ್ರಭುತ್ವವು ಜನರ ಭಿನ್ನಾಭಿಪ್ರಾಯಗಳು ಮತ್ತು ಅಸಮ್ಮತಿಗಳನ್ನು, ಹಿಂಸೆಯ ವಿರುದ್ಧ ರಕ್ಷಾ ಕವಾಟಗಳಾಗಿ ವರ್ತಿಸುವ ನಾಗರೀಕ ಸ್ವಾತಂತ್ರ್ಯದ ಚೌಕಟ್ಟಿನಲ್ಲೇ, ಅಭಿವ್ಯಕ್ತಿಸಲು ಅವಕಾಶ ಕೊಟ್ಟರೆ ಜನರು ಸಾಮಾನ್ಯವಾಗಿ ಹಿಂಸೆಯನ್ನು ಆಶ್ರಯಿಸುವುದಿಲ್ಲ.

ಎರಡನೆಯದಾಗಿ, ಹಿಂಸೆಯ ಅಭಿವ್ಯಕ್ತಿಯನ್ನು ಪ್ರಭುತ್ವವು ಕಾನೂನು ಬಾಹಿರ ಮತ್ತು ಅನಿಯಂತ್ರಿತ ಹಿಂಸಾ ಮಾರ್ಗಗಳನ್ನೇ ಬಳಸಿ ಹತ್ತಿಕ್ಕುವುದು ಸರಿಯಲ್ಲ. ಏಕೆಂದರೆ ಅದು ಇನ್ನೂ ಹೆಚ್ಚಿನ ಪ್ರತಿರೋಧ ಮತ್ತು ಹಿಂಸೆಯನ್ನು ಹುಟ್ಟು ಹಾಕುತ್ತದೆ. ಲೋಹಿಯಾ ಇದರ ಬಗ್ಗೆ ಸದಾ ಹೇಳುತ್ತಿದ್ದರು

ನ್ಯಾಯಸಮ್ಮತತೆ ಮತ್ತು ಸಮಂಜಸತೆ/ಕಾನೂನು ಸಮ್ಮತತೆ ಮತ್ತು ನಾಗರೀಕ ಸ್ವಾತಂತ್ರ್ಯ ಎಂಬ ಮೂಲ ಸತ್ವಗಳನ್ನು ಇತ್ತೀಚಿನ ಕೆಲ ದಶಕಗಳಿಂದ ಅನೇಕ ದೇಶ ಗಳಲ್ಲಿ ವ್ಯವಸ್ಥಿತವಾಗಿ ನಾಶಗೊಳಿಸುತ್ತಲಿರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ದೇಶವೂ ಇದಕ್ಕೆ ಹೊರತಾಗೇನೂ ಇಲ್ಲ. 'ವಾಷಿಂಗ್ಟನ್ ಒಡಂಬಡಿಕೆ' ಎಂಬ ಹೆಸರಿನಲ್ಲಿ ಅಗತ್ಯ ಆರ್ಥಿಕ ರಚನೆಗಳ ಸುಧಾರಣೆಗೆಂದು ಭಾರತದಲ್ಲಿ ನವ ಉದಾರವಾದಿ ಆರ್ಥಿಕ ಚಿಂತನೆಗಳು ಕಾರ್ಯರೂಪವನ್ನು ಪಡೆದು ತನ್ನ ಬೇರುಗಳನ್ನು ಪಸರಿಸಿ ಕೊಂಡು ಭದ್ರಪಡಿಸಿಕೊಳ್ಳುತ್ತ ಬಂದಹಾಗೆ ಅದು ಗಟ್ಟಿಯಾದ ಏಕರೂಪಿ ಮನಸ್ಸು, ಸಿದ್ಧಾಂತ ಮತ್ತು ಸಂಸ್ಕೃತಿಯನ್ನು ಸೃಷ್ಟಿಸಿ ದೇಶದ ಆಂತರ್ಯವನ್ನೆಲ್ಲ ವ್ಯಾಪಿಸುತ್ತಾ ಬಂದಿದೆ. ಇದು ಅಸಮ್ಮತಿಯ ಮತ್ತು ವಿರೋಧದ ಅಭಿವ್ಯಕ್ತಿಗಳನ್ನು ರಾಷ್ಟ್ರ ವಿರೋಧಿ ಮತ್ತು ಅಭಿವೃದ್ಧಿ ವಿರೋಧಿ ಎಂದು ಖಂಡಿಸುವ ಮತ್ತು ಹತ್ತಿಕ್ಕುವ ತೀರಾ ತೆಳು/ ಹುಸಿ ರಾಷ್ಟ್ರೀಯತೆಯ ಭಾವವನ್ನು ನಮ್ಮ ಜನಮಾನಸದಲ್ಲಿ ವ್ಯವಸ್ಥಿತವಾಗಿ ಬೆಳೆಸುತ್ತಿದೆ. ಭಿನ್ನ ಅಭಿಪ್ರಾಯದ/ಅಸಮ್ಮತಿಯ ಪ್ರತಿ ಅಭಿವ್ಯಕ್ತಿಯೂ ನಾವು ಕಟ್ಟಿಕೊಳ್ಳುತ್ತಿರುವ ಅಭಿವೃದ್ಧಿ ಮತ್ತು ರಾಷ್ಟ್ರೀಯತೆಯ ಮಾದರಿಗಳಿಗೆ ಅಡ್ಡಿಯಾಗುತ್ತಿರುವ ಸಂಭಾವ್ಯ ಅಪಾಯಗಳು ಎಂಬ ಮಾತುಗಳು ಈ ಜನಪ್ರಿಯ ಸಂಸ್ಕೃತಿಯ ನಡುವೆ ಮತ್ತು ಗಣ್ಯರ/ಪ್ರಮುಖರ ಮಾತುಕತೆಗಳಲ್ಲಿ/ಉಪನ್ಯಾಸಗಳಲ್ಲಿ ಕೇಳಿಬರುತ್ತಿದೆ. ಈ ಅಭಿವೃದ್ಧಿ ಮಾದರಿಯಾದರೂ ಎಂತಹದ್ದು? ಬೆರಳೆಣಿಕೆಯ ಪ್ರತಿಷ್ಠಿತರನ್ನು ಬಿಲಿಯನ್ ಡಾಲರ್‌ಗಳ ಒಡೆಯರನ್ನಾಗಿ ಮಾಡುತ್ತಾ ನೂರಾರು ಲಕ್ಷ ಜನರನ್ನು ಸಹ್ಯ ಬದುಕಿನ ಅಂಚಿಗೆ ತಳ್ಳುತ್ತಿರುವ, ಅವರ ಮೂಲಭೂತ ಅವಶ್ಯಕತೆಗಳಾದ ಆಹಾರ, ವಸತಿ, ಸೂರು, ಶುದ್ಧ ನೀರು, ಗಾಳಿ, ಸಾಮಾಜಿಕ ಆಧಾರಗಳು ಇತ್ಯಾದಿಗಳಿಂದ ವಂಚಿತರನ್ನಾಗಿಸಿ ಅಮಾನುಷ ಸ್ಥಿತಿಗೆ ನೂಕುತ್ತಿರುವ ಮಾದರಿ. ಹೀಗೆ ರಾಜಕಾರಣದ ಪ್ರಕ್ರಿಯೆಯು ಬಹುಜನರ ಮೂಲಭೂತ ಬೇಡಿಕೆಗಳನ್ನು ನಿರ್ಲಕ್ಷಿಸಿ ಹೊರಗಿಟ್ಟಂತಹ ಪರಿಸ್ಥಿತಿಯಲ್ಲಿ ಅವರು ತಮ್ಮ ಸಿಟ್ಟನ್ನು, ಅಸಮ್ಮತಿಯನ್ನು ವ್ಯಕ್ತಪಡಿಸಿದಾಗ ಈ ಪ್ರತಿಷ್ಠಿತ ಸಂಸ್ಕೃತಿಯು ಇದಕ್ಕೆ ಪ್ರತಿಕ್ರಿಯೆಯಾಗಿ ಸುವ್ಯವಸ್ಥೆಯನ್ನು ಕಾಪಾಡುವ ನೆಪದಲ್ಲಿ ಪ್ರಭುತ್ವದ ಸಹಾಯದಿಂದ ಅಂತಹ ಪ್ರತಿಭಟನೆಗಳನ್ನು ಬಗ್ಗುಬಡಿಯುತ್ತದೆ, ಧ್ವನಿಗಳನ್ನು ಹತ್ತಿಕ್ಕಲಾಗುತ್ತದೆ. ಹೀಗೆ ಈ ಪ್ರತಿಷ್ಠಿತ ಜನರು ಮತ್ತೆ ನಿಶ್ಚಿಂತರಾಗಿ ತಮ್ಮತಮ್ಮ ಇನ್ನೂ ಟೊಳ್ಳಾದ ಟಿ.ವಿ.ಗಳ, ತಳುಕು ಬಳುಕಿನ ಸಂಸ್ಕೃತಿಯ ಮತ್ತು ಐಷಾರಾಮಿ ಜೀವನ

ಶೈಲಿಯ ಮೊರೆಹೋಗುತ್ತಾರೆ. ಈ ಎಲ್ಲ ಆತ್ಮಘಾತಕ ಕೃತ್ಯಗಳಿಗೆ, ಒಂದಷ್ಟು ಸಮರ್ಥನೆಗಳನ್ನು /ಉಪದೇಶಗಳನ್ನು, ನಮ್ಮನ್ನು ಇನ್ನಷ್ಟು ರಾಕ್ಷಸಗೊಳಿಸುವ ದೇವರು, ಧರ್ಮ ಮತ್ತು ಏಕರೂಪಿ ಧಾರ್ಮಿಕ ವ್ಯವಸ್ಥೆಯ ನಿರ್ಮಾಣದ ಹೆಸರಿನಲ್ಲಿ ಒಂದಷ್ಟು ಸಮರ್ಥನೆಗಳನ್ನು /ಉಪದೇಶಗಳನ್ನು ಕೊಟ್ಟುಕೊಳ್ಳುತಿದ್ದಾರೆ. ಈ ಎಲ್ಲ ಕೃತ್ಯಗಳನ್ನು ನಮ್ಮ ಸಾಂವಿಧಾನಿಕ ರಚನೆಗಳನ್ನು ತಿರುಚುವುದರ ಮೂಲಕ ಮತ್ತು ದ್ವೇಷವನ್ನೇ ತುಂಬಿಕೊಂಡ ಸಣ್ಣ ಸಣ್ಣ ಯುವಪಡೆಗಳ ಮೂಲಕ ಸಾಧಿಸಿಕೊಳ್ಳಲಾಗುತ್ತಿದೆ.

ದಮನಕಾರಿ ಮನೋಭಾವನೆಯ ವಿರುದ್ಧ ವೈಯಕ್ತಿಕ ಪ್ರತಿರೋಧದ ಬಗ್ಗೆ ಡಾ. ಲೋಹಿಯಾ ಅವರು ಏಕೆ ಅಷ್ಟು ಉತ್ಕಟವಾಗಿ ಮಾತನಾಡುತ್ತಿದ್ದರು? ಏಕೆಂದರೆ, ಆಧುನಿಕ ಜಗತ್ತಿನಲ್ಲಿ ಸಂಘಟನೆಗಳು/ಸಂಸ್ಥೆಗಳು ನಾಗರೀಕ ಬದುಕನ್ನು ಎಷ್ಟು ಆವರಿಸಿಕೊಂಡುಬಿಟ್ಟಿವೆ ಮತ್ತು ಶಕ್ತಿಯುತವಾಗಿವೆ ಎಂದರೆ ವ್ಯಕ್ತಿಯು ಸಂಪೂರ್ಣವಾಗಿ ಅವುಗಳ ಅಡಿಯಾಳಾಗಿ ತನ್ನ ವೈಯಕ್ತಿಕತೆಯನ್ನೇ ಕಳೆದುಕೊಂಡುಬಿಟ್ಟಿದ್ದಾನೆ ಅಥವಾ ಅಂತಹ ಅಪಾಯದಲ್ಲಿದ್ದಾನೆ ಎಂದು ಅವರು ಅರ್ಥಮಾಡಿಕೊಂಡಿದ್ದರು. “ಪ್ರಸ್ತುತ ಇರುವುದು ಒಂದು ಸಮೂಹ ಕೇಂದ್ರಿತ ನಾಗರಿಕತೆ ಮತ್ತು ವ್ಯಕ್ತಿಯು ಆ ಸಮೂಹದ ಒಂದು ಸಂಖ್ಯೆ ಮಾತ್ರವೆಂದು ಅದು ಪರಿಗಣಿಸುತ್ತಿದೆ. ತಾನು ಆ ಸಮೂಹದ ಭಾಗವಾಗಿದ್ದಾಗ ಮಾತ್ರ ವ್ಯಕ್ತಿಗೆ ಪ್ರಾಮುಖ್ಯತೆ ಮತ್ತು ಅಸ್ತಿತ್ವ. ಹಾಗಿಲ್ಲದಿದ್ದಾಗ “ವ್ಯಕ್ತಿ”ಯನ್ನು ಜಗತ್ತು ಕ್ಷುದ್ರ ಇಲಿಯ ಮಟ್ಟಕ್ಕೆ ಇಳಿಸುತ್ತದೆ. ಸಂಘಟನೆ ಮತ್ತು ಶಸ್ತ್ರಾಸ್ತ್ರಗಳ ಬೆಂಬಲವಿಲ್ಲದ ವ್ಯಕ್ತಿಯನ್ನು ಆಧುನಿಕ ನಾಗರೀಕತೆ ನಿಕೃಷ್ಟವಾಗಿ ಕಾಣುತ್ತದೆ” ಎಂದು ಅವರು ಗಮನಿಸಿದ್ದರು. ಹಿಟ್ಲರ್ ಜರ್ಮನಿಯಲ್ಲಿ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ನಡೆದಿದ್ದನ್ನು ಹೀಗೆ ಹೇಳುತ್ತಾರೆ. “ಆಗ ಸಮಾಜವಾದಿ ಮತ್ತು ಕಮ್ಯುನಿಸ್ಟ್ ಪಕ್ಷಗಳಿಗೆ ಸೇರಿದ ಕೆಚ್ಚೆದೆಯ ಧೀರರು ಮತ್ತು ಚಿಂತಕರೂ ಆದ ಯೂರೋಪಿಯನ್ನರು ಹೇಗೆ ತಮ್ಮೆಲ್ಲ ಪೌರುಷವನ್ನು ಕಳೆದುಕೊಂಡು ಇಲಿಗಳ ರೀತಿ–ಹೀಗೆ ಹೇಳಲು ವಿಷಾದಪಟ್ಟುಕೊಂಡೇ–ಹಿಟ್ಲರ್‌ನ ದುಸ್ಸಾಹಸಗಳಿಂದ ತಪ್ಪಿಸಿ ಕೊಳ್ಳಲು ಚೆಲ್ಲಾಪಿಲ್ಲಿಯಾದರು ಎಂಬುದನ್ನು ಗಮನಿಸದಿರಲಾಗದು.’ ಲೋಹಿಯಾ ರವರು ಗಾಂಧಿಯವರು ಸೂಚಿಸಿದ ನಾಗರೀಕ ಅಸಹಕಾರದಲ್ಲಿ ನಂಬಿಕೆಯಿಟ್ಟಿದ್ದರು. “ಅನ್ಯಾಯ ಮತ್ತು ದಬ್ಬಾಳಿಕೆ ಜನರ ಸಹನೆಯ ಮಟ್ಟವನ್ನು ಮೀರಿದಾಗಲೆಲ್ಲಾ ವ್ಯಕ್ತಿಗೆ ನಾಗರಿಕ ಅಸಹಕಾರ/ಸತ್ಯಾಗ್ರಹ ಎಂಬ ಅಸ್ತ್ರವು ತನ್ನ ಹತ್ತಿರ ಇರುತ್ತದೆ. ಅನ್ಯಾಯ, ಶೋಷಣೆ ಮತ್ತು ದಬ್ಬಾಳಿಕೆಗಳು ಚಾಲೂ ಇರುವವರೆಗೂ ಸತ್ಯಾಗ್ರಹ ಎಂಬ ಅಸ್ತ್ರವು ಬಳಕೆಯಲ್ಲಿರುತ್ತದೆ ಮತ್ತು ಇರಲೇಬೇಕು. ಇಲ್ಲದಿದ್ದರೆ ‘ಬಂದೂಕು ಮತ್ತು ಗುಂಡುಗಳು’ ಅದರ ಸ್ಥಾನವನ್ನು ಪಡೆಯುತ್ತವೆ” ಎಂದು ನಂಬಿದ್ದರು. ಸತ್ಯಾಗ್ರಹ ಎಂಬ ಅಸ್ತ್ರವನ್ನು ಸ್ವತಂತ್ರಗೊಂಡ ರಾಷ್ಟ್ರದಲ್ಲಿ ಬಳಸುವುದು ಸರಿಯಲ್ಲ, ಅದೇನಿದ್ದರೂ ಬ್ರಿಟಿಷರ ಆಡಳಿತದ ವಿರುದ್ಧ ಮಾತ್ರ ಸರಿಯೆನಿಸಿತ್ತು ಎಂಬ ದೇಶದ

ಕೆಲವು ಚಿಂತಕರ ಅಭಿಪ್ರಾಯವನ್ನು ಲೋಹಿಯಾ ತಿರಸ್ಕರಿಸಿದ್ದರು. ಈ ಅಭಿಪ್ರಾಯವನ್ನು ಅವರದೇ ಆದ ವಿಶೇಷ ಶೈಲಿಯಲ್ಲಿ 'ಮಕ್ಕಳ ಗೋಣಗಾಟ'ವೆಂದು ವರ್ಣಿಸಿದ್ದರು. ಈ ಸಂಬಂಧ ಅವರು ಹೇಳಿದ್ದ ಕೆಲ ನುಡಿಗಳನ್ನು ಸ್ಮರಿಸಿಕೊಳ್ಳುವುದು ಯೋಗ್ಯವೆನಿಸುತ್ತದೆ: "ಈ ಶತಮಾನ ಕಳೆಯುವುದರೊಳಗಾಗಿ ವ್ಯಕ್ತಿ ಮತ್ತು ಸಮೂಹವು, ಕ್ರೂರ ಮತ್ತು ನಿರಂಕುಶ ಪ್ರಭುತ್ವವನ್ನು ಮಣಿಸಲು, ನಾಗರೀಕ ಅಸಹಕಾರವೆಂಬ ದೊಡ್ಡ ಮತ್ತು ವಿಶಿಷ್ಟ ಅಸ್ತ್ರವನ್ನು ತನ್ನ ಕೈಯಲ್ಲಿ ಇರಿಸಿಕೊಂಡಿದೆ ಎಂಬ ಅರಿವಿನಲ್ಲಿ ಈ ಜಗತ್ತು ಸದಾ ಇರುವುದಾದಲ್ಲಿ ನಿಜಕ್ಕೂ ಅದು ಒಂದು ಹೊಸ ನಾಗರೀಕತೆಯನ್ನೇ ಬರಮಾಡಿಕೊಂಡಂತೆ".

ಕೊನೆಗೂ, ನಾವು ಸಾಮೂಹಿಕ ಆಯ್ಕೆಗಳನ್ನು ಹೇಗೆ ಮಾಡುತ್ತೇವೆ ಮತ್ತು ಆ ಆಯ್ಕೆಗಳು ಎಂತಹ ಆಶೋತ್ತರಗಳು ಮತ್ತು ಮೌಲ್ಯಗಳಿಂದ ನಿರ್ದೇಶಗೊಂಡಿದೆ ಎನ್ನುವುದರ ಮೇಲೆ ವ್ಯವಸ್ಥೆಯ ಅಂತಿಮ ರೂಪ ಅವಲಂಬಿಸಿರುತ್ತದೆ. ಅದರಲ್ಲಿ ಮೊಟ್ಟ ಮೊದಲ ಮತ್ತು ಅತಿ ಮುಖ್ಯವಾದ ಮೌಲ್ಯವಾಗಿರಬೇಕಾದದ್ದು ಮನುಷ್ಯನ ಸ್ವಾಭಾವಿಕ 'ಮಾನವ ಘನತೆ'ಯ ಮೇಲಿನ ಬಲವಾದ ನಂಬಿಕೆ ಮತ್ತು ಬದ್ಧತೆ. ಸಮಾಜೋ–ರಾಜಕೀಯ ಸುವ್ಯವಸ್ಥೆಗಳಿರಲಿ, ಸಂವಿಧಾನಗಳೂ ಕೂಡ ಒಂದು ನಿರಾಸಕ್ತ, ಜಡವಾದ ಮತ್ತು ಸ್ಪಂದನಾಶೀಲತೆಯಿಲ್ಲದ ಪರಿಸರದಲ್ಲಿ ಉಳಿಯುವುದಿಲ್ಲ. ಲೋಹಿಯಾರ ಜೀವನದಿಂದ ನಾವು ಕಲಿಯಬೇಕಾದ ದೊಡ್ಡ ಪಾಠವೆಂದರೆ– ವಸಾಹತು ಶಕ್ತಿಗಳ ವಿರುದ್ಧದ ಅವರ ಅನೇಕ ದಶಕಗಳ ಹೋರಾಟದ ಹೊರತಾಗಿಯೂ ಸ್ವತಂತ್ರ ಭಾರತದ ಸಂದರ್ಭದಲ್ಲಿ ಅವರು ಹೆಚ್ಚಿನ ವರ್ಷಗಳನ್ನು ಸೆರೆಮನೆಗಳಲ್ಲಿ ಕಳೆದರು. ಇದು ನಮಗೆ ತಿಳಿಸುವುದಾದರೂ ಏನನ್ನು? ಸ್ವಾತಂತ್ರ್ಯ, ಮಾನವ ಘನತೆಯ ಸಮರ್ಥನೆ ಮತ್ತು ಆ ಘನತೆಯನ್ನು ನಿರಂತರವಾಗಿ ಸಂರಕ್ಷಿಸಿಕೊಳ್ಳಲು ಬೇಕಾದಂತಹ ಕನಿಷ್ಠ ಕಾರ್ಯಕ್ರಮಗಳ ತಯಾರಿಗಳು ಒಂದೇ ಏಟಿನಲ್ಲಿ ಸಾಧಿಸಿಕೊಳ್ಳ ಬಹುದಾದಂತಹ ಆಟವಲ್ಲ. ಅದು ನಿರಂತರ ಎಚ್ಚರ ಮತ್ತು ಹೋರಾಟಗಳ ಮೂಲಕ ದಕ್ಕಿಸಿಕೊಳ್ಳಬೇಕಾದಂತದ್ದು. ಅವು ರಾಜಕೀಯ, ಸಾಮಾಜಿಕ ಮತ್ತು ಮೌಲ್ಯಗಳ ಮಟ್ಟದಲ್ಲಿ ನಡೆಸಬೇಕಾದ ಹೋರಾಟಗಳು.

ಶಹೀದ್ ಭಗತ್ ಸಿಂಗ್ ಹೇಳಿದ್ದನ್ನು ಉಲ್ಲೇಖಿಸುತ್ತ ಈ ಉಪನ್ಯಾಸವನ್ನು ಮುಗಿಸುತ್ತೇನೆ: "ಒಂದು ಸ್ಥಾಪಿತ ನಂಬಿಕೆಯನ್ನು ಪ್ರಶ್ನಿಸಿದಾಗ, ವಿಮಾರ್ಶಾತೀತ ಮತ್ತು ದೋಷಾತೀತ ಎಂದು ತಿಳಿಯಲಾದ ಒಬ್ಬ ದೊಡ್ಡ ನಾಯಕನನ್ನು ಟೀಕೆ ಮಾಡಿದಾಗ ಬಹುಸಂಖ್ಯೆಯ ಜನರು ನಿಮ್ಮನ್ನು ತಲೆಹರಟೆ ಎಂದೋ ಒಣ ಹೆಮ್ಮೆಯವನು ಎಂದೋ ಜರೆಯಬಹುದು. ಇದು ಜನರ ಮಾನಸಿಕ ಸ್ಥಗಿತತೆಯನ್ನು ಸೂಚಿಸುತ್ತದೆ. ಒಬ್ಬ ಕ್ರಾಂತಿಕಾರಿಗೆ ಇರಬೇಕಾದ ಎರಡು ಮುಖ್ಯ ಗುಣಗಳು ಎಂದರೆ ವಿಮರ್ಶೆ ಮತ್ತು ಸ್ವತಂತ್ರ ಆಲೋಚನೆ. ಮಹಾತ್ಮಾಜಿಯವರು ಬಹಳ ದೊಡ್ಡ

ಮನುಷ್ಯರಾಗಿದ್ದಾರೆ. ಬಹಳ ಎತ್ತರಕ್ಕೇರಿದ್ದಾರೆ. ಆದ್ದರಿಂದ ಅವರನ್ನು ಯಾರೂ ಟೀಕಿಸಬಾರದು. ಹಾಗಾಗಿ ಅವರು ಹೇಳಿದ್ದೆಲ್ಲಾ–ಅದು ರಾಜಕೀಯದ, ಇಲ್ಲಾ ಧರ್ಮದ, ಆರ್ಥಿಕತೆಯ ಅಥವಾ ನೈತಿಕತೆಯ ವಿಚಾರವಾಗಲಿ–ಸರಿ ಎಂದು ಒಪ್ಪಬೇಕು. ಆ ವಿಚಾರ ಮನದಟ್ಟಾಗಲಿ ಬಿಡಲಿ ಸರಿ ಎಂದು ಹೇಳಬೇಕು ಎಂಬ ಸ್ಥಿತಿಯು ನಿರ್ಮಾಣವಾಗುತ್ತಿದೆ. ಇಂತಹ ಮನಃಸ್ಥಿತಿಯು ಪ್ರಗತಿಯ ಕಡೆಗೆ ಕೊಂಡೊಯ್ಯುವುದಿಲ್ಲ. ಇದು ಸ್ಪಷ್ಟವಾಗಿ ಪ್ರತಿಗಾಮಿತನವಲ್ಲದೆ ಇನ್ನೇನು ಅಲ್ಲ.'

ಡಾ.ರಾಮ ಮನೋಹರ ಲೋಹಿಯಾರಂತಹ ಮಹಾ ವ್ಯಕ್ತಿಗಳ ಜೀವನ ಮತ್ತು ಚಿಂತನೆಗಳಿಂದ ನಾವು ಮತ್ತೆ ಮತ್ತೆ ಸರಿಯಾದ ಪಾಠವನ್ನು ಕಲಿಯುತ್ತೇವೆ ಎಂದು ಆಶಿಸುತ್ತಾ .... ಜೈ ಹಿಂದ್.

(೨೦೧೩ರಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನಿವೃತ್ತರಾದ ನ್ಯಾ. ಬಿ. ಸುದರ್ಶನ ರೆಡ್ಡಿಯವರು ವಿದೇಶಿ ಬ್ಯಾಂಕುಗಳಲ್ಲಿನ ಕಪ್ಪು ಹಣದ ವಿಚಾರವಾಗಿ ವಿಶೇಷ ತನಿಖಾ ದಳದ ಸ್ಥಾಪನೆ ಮತ್ತು ಚತ್ತೀಸಗಢದ ನಕ್ಸಲೀಯರ ಕಾರ್ಯಾಚರಣೆಯ ವಿರುದ್ಧ 'ಸಲ್ವಾ ಜುಡಂ' ಎಂಬ ವಿಶೇಷ ಖಾಸಗಿ ಪೊಲೀಸ್ ಪಡೆಯ ಸ್ಥಾಪನೆಗೆ ತಡೆ ಮುಂತಾದ ಹಲವು ಜನಪರ ತೀರ್ಪುಗಳಿಗಾಗಿ ಹೆಸರಾದವರು)

(ಕೃಪೆ: ಜನತಾ ಸಾಪ್ತಾಹಿಕ, ಜನವರಿ ೨೧, ೨೦೧೮)

ಕನ್ನಡಕ್ಕೆ: ಬಿ.ವಿ.ಸುರೇಂದ್ರ

◆◆

೭

ಲೋಹಿಯಾರ ತಾತ್ತ್ವಿಕ ಪರಂಪರೆ ಈಗಲೂ ಯಾಕೆ ಜೀವಂತವಾಗಿದೆಯೆಂದರೆ...

ರಜನಿ ಭಕ್ಷಿ

ದೆಹಲಿಯಲ್ಲಿರುವ ಲೋಹಿಯಾ ಆಸ್ಪತ್ರೆಗೆ ಭೇಟಿ ನೀಡುವ ಬಹಳಷ್ಟು ಜನರಿಗೆ ಬಹುಶಃ ಆ ವೈದ್ಯಕೀಯ ವ್ಯವಸ್ಥೆಗೆ ಇಟ್ಟಿರುವ ಹೆಸರಿನ ವ್ಯಕ್ತಿಯ ಪರಿಚಯವೆ ಇರಲಿಕ್ಕಿಲ್ಲ. ರಾಮ ಮನೋಹರ ಲೋಹಿಯಾ ಎಂದು ಗೂಗಲಿಸಿ ನೋಡಿ. ಮೊದಲಿಗೆ ಕಂಡು ಬರುವ ಮಾಹಿತಿಗಳೆಂದರೆ, ಅವರ ಹೆಸರಿನಲ್ಲಿರುವ ಎರಡು ಆಸ್ಪತ್ರೆಗಳು ಹಾಗೂ ಒಂದು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ವಿವರಗಳು.

ಇದೇನೂ ಆಶ್ಚರ್ಯ ತರುವ ಸಂಗತಿ ಅಲ್ಲ. ಸಮಾಜವಾದವೆಂದರೆ ಒಂದು ಪುರಾತನ ಕಾಲದ ಮತ್ತು ಪ್ರಗತಿಗೆ ವಿರುದ್ಧವಾದ ತತ್ವ ಎಂಬ ನಂಬಿಕೆ ವ್ಯಾಪಕವಾಗಿರುವ ಇಂದಿನ ಕಾಲಘಟ್ಟದಲ್ಲಿ ಲೋಹಿಯಾರ ಬಗೆಗಿನ ನಿರ್ಲಕ್ಷ್ಯ ಪೂರ್ಣ ಸಹಜವೇ ಆಗಿದೆ.

ಲೋಹಿಯಾರ ಹುಟ್ಟುಹಬ್ಬದಂದು (ಮಾರ್ಚ್, ೨೩) ಸಂಸತ್ ಭವನದಲ್ಲಿ ಅವರ ಭಾವಚಿತ್ರಕ್ಕೆ (ಮಾಜಿ) ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಹೂ ಅರ್ಪಿಸಿ

ಶ್ರದ್ಧಾಂಜಲಿ ಸಲ್ಲಿಸಿದ್ದು ಲೋಹಿಯಾರ ಉತ್ಸಾಹಿ ಅನುಯಾಯಿಗಳಿಗಾದರೂ ಇರಿಸುಮುರಿಸು ಉಂಟುಮಾಡಿತ್ತು. ಯಾಕೆಂದರೆ ಈ ಪ್ರಧಾನಿಯವರೇ ಅಲ್ಲವೆ ಭಾರತದ ಆರ್ಥಿಕತೆಯಲ್ಲಿ ದೊಡ್ಡ ಪಲ್ಲಟವನ್ನು ಉಂಟು ಮಾಡಿ ಅದನ್ನು ನಿಗಮಶಾಹಿ(ಕಾರ್ಪೋರೇಟ್) ಬಂಡವಾಳವಾದಿ ಆರ್ಥಿಕತೆಯನ್ನಾಗಿ ಪರಿವರ್ತಿಸಿದ ಮಹಾನುಭಾವರು? ಇಂತಹವರ ಕಿವಿಗಳಿಗೆ 'ಆವೃತ(ಎಲ್ಲರನ್ನೂ ಒಳಗೊಳ್ಳುವ) ಬೆಳವಣಿಗೆ' ಮತ್ತು 'ಆವೃತ ಮಾರುಕಟ್ಟೆ' ಪರವಾಗಿ ತಾನು ಕೆಲಸ ಮಾಡುವುದಾಗಿ ಹೇಳುವ ಸರ್ಕಾರದ ಮಾತುಗಳು ಪೊಳ್ಳು ಮಾತುಗಳಾಗಿ ಕೇಳಿಸುವುದು ಸಹಜ.

ಆದರೂ ಇಂತಹ ಮಾತುಗಳು ಲೋಹಿಯಾ ಕಾಣಿಸಿಕೊಂಡ ಐತಿಹಾಸಿಕ ವಾರಸುದಾರಿಕೆಗೆ ದೊರೆತ ಪರೋಕ್ಷ ಗೆಲುವು ಕೂಡ ಹೌದು ಎಂಬುದನ್ನೂ ನಾವು ಗಮನಿಸಬೇಕು. ಹಾಗಾಗಿಯೇ ಇಂದು ಸಮತೆಗೆ ಬದ್ಧರಾಗಿರುವುದು ಒಂದು ರಾಜಕೀಯ ಅವಶ್ಯಕತೆಯಾಗಿಬಿಟ್ಟಿರುವುದು. ದುರ್ಬಲರನ್ನು ನಿರ್ಲಕ್ಷಿಸುವ ಯಾವನೇ ಆಗಲಿ, ಚುನಾವಣಾ ಗೆಲವಿನ ಮಾತಿರಲಿ, ಒಂದು ಔಪಚಾರಿಕ ರಾಜಕೀಯ ಬದುಕನ್ನು ಕಟ್ಟಿಕೊಳ್ಳುವ ಕನಸನ್ನೂ ಕಾಣುವಂತಿಲ್ಲ. ಹಾಗಾಗಿ ಲೋಹಿಯಾರನ್ನು ನೆನಪಿಸಿಕೊಳ್ಳುವ ಈ ಕಾಲ ಪ್ರವಾಹದ ಒಂದು ಅರೆಕ್ಷಣದಲ್ಲಾದರೂ ನಿಂತು, ನಮ್ಮ ವರ್ತಮಾನವು ಅವರು ಪ್ರತಿನಿಧಿಸಿದ ಮೌಲ್ಯಗಳಿಗೆ ಎಷ್ಟು ಋಣಿಯಾಗಿದೆ ಎಂಬುದನ್ನು ಮನನ ಮಾಡಿಕೊಳ್ಳಲು ಸೂಕ್ತ ಸಂದರ್ಭವಾಗಿದೆ. ಇದು ಸಾಧ್ಯವಾಗುವುದು, ನಾವು 'ಸಮಾಜವಾದ' ಮತ್ತು 'ಬಂಡವಾಳಶಾಹಿ' ಎಂಬ ಶಬ್ದಗಳನ್ನು ಹಗುರವಾಗಿ ಅಥವಾ ಚುರುಕು ಮಾತುಗಾರಿಕೆಯ ಭಾಗವಾಗಿ ಬಳಸುವುದನ್ನು ನಿಲ್ಲಿಸಿದಾಗ. ಆಗ ನಾವು ವಾಸ್ತವ ಸತ್ಯವನ್ನು ಹೆಚ್ಚು ನಿರ್ಭಾವುಕವಾಗಿ ಅರಿಯಲು ಹಾಗೂ ಗ್ರಹಿಕೆಯ ಸಾಮಾನ್ಯ ನೆಲೆಗಳನ್ನು ಗುರುತಿಸಲು–ಅವು ತೀವ್ರ ವಾದ ವಿವಾದಗಳ ಸಾಗರದಲ್ಲಿನ ನಡುಗಡ್ಡೆಗಳ ರೂಪದಲ್ಲಿ ಕಾಣಿಸಿಕೊಂಡರೂ ಸಹ–ಸಾಧ್ಯವಾಗಬಹುದು.

೧೯೧೦ರಲ್ಲಿ ಉತ್ತರ ಪ್ರದೇಶದ ಗ್ರಾಮವೊಂದರಲ್ಲಿ ಜನಿಸಿದ ಲೋಹಿಯಾ ಮಹಾತ್ಮ ಗಾಂಧಿಯವರಿಂದ ತುಂಬ ಆಳವಾಗಿ ಪ್ರಭಾವಿತರಾಗಿದ್ದರು. ಲೋಹಿಯಾ ತಮ್ಮ ಮೊದಲ ಸತ್ಯಾಗ್ರಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಗ ಅವರಿಗೆ ಕೇವಲ ಹತ್ತು ವರ್ಷ ವಯಸ್ಸು. ಕಲ್ಕತ್ತಾ ಮತ್ತು ಆನಂತರ ಬರ್ಲಿನ್ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡಿದ ಲೋಹಿಯಾ ತಮ್ಮ ಪಿಎಚ್‌ಡಿ ಮಹಾ ಪ್ರಬಂಧವನ್ನು ಬರೆದದ್ದು ಉಪ್ಪಿನ ಸತ್ಯಾಗ್ರಹದ ಬಗ್ಗೆ.

ಮುಂದೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಂಗ ಪಕ್ಷವಾಗಿ ಸಮಾಜವಾದಿ ಕಾಂಗ್ರೆಸ್ ಪಕ್ಷವನ್ನು ಸಂಸ್ಥಾಪಿಸಿದವರಲ್ಲಿ ಲೋಹಿಯಾ ಕೂಡ ಒಬ್ಬರು. ನಂತರ ಬ್ರಿಟಿಷರ ಜೈಲುಗಳಲ್ಲಿ ಬಹಳಷ್ಟು ಸಮಯ ಕಳೆಯಬೇಕಾಗಿ ಬಂದ ಅವರು ಅಲ್ಲಿ ಸಾಕಷ್ಟು ಹಿಂಸಾಚಾರಕ್ಕೂ ಒಳಗಾದರು. ಎಲ್ಲರೂ ಸುಮ್ಮನಿದ್ದಾಗ ಭಾರತದ

ವಿಭಜನೆಯನ್ನು ಕಟುವಾಗಿ ವಿರೋಧಿಸಿದ ಕೆಲವೇ ಕೆಲವರಲ್ಲಿ ಅವರೂ ಒಬ್ಬರು. ನಂತರದ ದಿನಗಳಲ್ಲಿ ಅವರು ಬರೆದ 'The guilty men of India's partition' ('ಭಾರತ ವಿಭಜನೆಯ ತಪ್ಪಿತಸ್ಥರು') ಎನ್ನುವ ಪುಸ್ತಕ ಸಾಕಷ್ಟು ವಿವಾದವನ್ನೆಬ್ಬಿಸಿತು.

ಮಾರ್ಕ್ಸ್‌ವಾದವನ್ನು "ಏಷ್ಯಾ ವಿರುದ್ಧದ ಯುರೋಪಿನ ಕಟ್ಟಕಡೆಯ ಅಸ್ತ್ರ" ಎಂದು ಲೋಹಿಯಾ ಪರಿಗಣಿಸಿದ್ದರು. ತಾವು ರೂಪಿಸಿದ 'ಸಮಾನ ಅಪ್ರಸ್ತುತತೆಯ ತತ್ತ್ವದ' ಪ್ರಕಾರವಾಗಿ ಮಾರ್ಕ್ಸ್‌ವಾದ ಮತ್ತು ಬಂಡವಾಳಶಾಹಿ ಎರಡನ್ನೂ ಅವರು ತಿರಸ್ಕರಿಸಿದ್ದರು. ಯಾಕೆಂದರೆ ಅವೆರಡೂ ಚಿಂತನೆಗಳು ಬೃಹತ್ ಕೈಗಾರಿಕೆ ಹಾಗೂ ಕೇಂದ್ರೀಕೃತ ವ್ಯವಸ್ಥೆಯನ್ನು ಆಧರಿಸಿದವು.

ತಮ್ಮ ಮುಂಗಾಣ್ಕೆಯಿಂದ ಲೋಹಿಯಾ ೧೯೫೦ರ ಸುಮಾರಿನಲ್ಲಿಯೇ ಅಮೆರಿಕನ್ನರನ್ನು ಅವರ ಬದುಕು ಮತ್ತು ಅಮೆರಿಕಾ ಪ್ರಜಾಪ್ರಭುತ್ವವನ್ನು ನಿಗಮಶಾಹಿ ಆವರಿಸಿಕೊಳ್ಳುವುದೆಂದು ಎಚ್ಚರಿಸಿದ್ದರು.

ಲೋಹಿಯಾ, ಸಮಾಜವಾದವೆಂದರೆ ಉತ್ಪಾದನಾ ಸಾಧನಗಳ ಮೇಲೆ ರಾಜ್ಯ ವ್ಯವಸ್ಥೆಯ ನಿಯಂತ್ರಣ ಸಾಧಿಸುವುದು ಎಂದಲ್ಲ; ಬದಲಿಗೆ, ಸಂಪತ್ತಿನ ಉತ್ಪಾದನೆ ಮುಖ್ಯವಾದರೂ, ಅದು ಸಮತೆಯನ್ನು ಸಾಧಿಸುವಂತಹ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಭಾಗವೂ ಆಗಿರಲು ಸಾಧ್ಯವಿರುವಂತಹ ಒಂದು ಮುಕ್ತ ಸಮಾಜದ ನಿರ್ಮಾಣ ಎಂದು ನಂಬಿದ್ದ ಬುದ್ಧಿಜೀವಿಗಳ ಪರಂಪರೆಗೆ ಸೇರಿದ್ದರು.

ಇಂತಹ ಸಮಾಜವಾದ, ಸಹಕಾರಿ ರಚನೆಗಳು ಮತ್ತು ಮಾನವೀಯ ಮೌಲ್ಯಗಳಿಂದ ನಿರ್ದೇಶಿತವಾದ ಮುಕ್ತ ವಿನಿಮಯದ ವ್ಯವಸ್ಥೆಗಳನ್ನು ರೂಪಿಸುವತ್ತ ತುಡಿಯುವಂತಹುದು. ಹಾಗಾಗಿ ಸರ್ಕಾರಗಳಿಗೆ ಹೆಚ್ಚು ಹೆಚ್ಚು ಅಧಿಕಾರ ನೀಡುವ ರಾಜಕೀಯ ನಡೆಗಳನ್ನು ಲೋಹಿಯಾ ವಿರೋಧಿಸಿದರು. ಅವರು ತಮ್ಮ ಬದುಕಿನ ಉಳಿದ ಭಾಗವನ್ನು ನಾಗರಿಕ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಜನತೆಯ ಭಾಗವಹಿಸುವಿಕೆಯನ್ನು–ಶ್ರಮದಾನದ ಮೂಲಕ ಕಾಲುವೆ, ಬಾವಿ, ರಸ್ತೆ ನಿರ್ಮಾಣದಂತಹ ಸಾರ್ವಜನಿಕ ಪ್ರಯತ್ನಗಳನ್ನು–ಪ್ರೇರೇಪಿಸುವುದರಲ್ಲಿ ಕಳೆದರು. ಅಲ್ಲದೆ ದೇಶದ ಮೂಲೆ ಮೂಲೆಗಳಿಂದ ಬಂದ ಜನತೆ ತನ್ನ ದೂರು ದುಮ್ಮಾನಗಳನ್ನು ತಮ್ಮ ಸಂಸತ್ ಸದಸ್ಯರ ಮುಂದೆ ಅರುಹಲು ಅನುಕೂಲವಾಗುವಂತಹ 'ಜನವಾಣಿ ದಿನ'ವನ್ನು ಆಯೋಜಿಸುವಲ್ಲಿ ಅವರ ಪಾತ್ರ ಹಿರಿದು. ಅರವತ್ತು ವರ್ಷಗಳ ತರುವಾಯ ಸಾಮುದಾಯಿಕ ಪಾಲ್ಗೊಳ್ಳುವಿಕೆ ಎಂಬುದು ಎಲ್ಲರೂ ಒಪ್ಪಿಕೊಂಡಿರುವ ವಿಚಾರವಾಗಿದೆ– ಅದು ಈಗ ಎಷ್ಟೇ ಅಸಮರ್ಪಕವಾಗಿದ್ದರೂ.

ಎಲ್ಲಕ್ಕಿಂತ ಮಿಗಿಲಾಗಿ, ಸಮಕಾಲೀನ ಸಮಾಜದ ಜಪಮಂತ್ರವಾಗಿರುವ, ಸರ್ವರಿಗೂ ಸಮಾನ ಅವಕಾಶಗಳಿಗಾಗಿ ಲೋಹಿಯಾ ಹೋರಾಡಿದರು. ಕೆಳ ಜಾತಿಗಳು ಮತ್ತು ಆರ್ಥಿಕವಾಗಿ ದುರ್ಬಲವಾದ ವರ್ಗಗಳು ಐತಿಹಾಸಿಕವಾಗಿ ಪರಿಣಮಿಸಿದ

ಅಡ್ಡಿ–ಆತಂಕಗಳನ್ನು ಮೀರಿ ಕೌಶಲ್ಯಗಳು ಮತ್ತು ಸಂಪನ್ಮೂಲಗಳನ್ನು ಗಳಿಸಿಕೊಳ್ಳಲಾಗುವಂತೆ ಅವರಿಗೆ ಸಾಂಸ್ಥಿಕವಾಗಿ ಆದ್ಯತಾ ಅವಕಾಶ ನೀಡಬೇಕೆಂಬ ಅವರ ಆಗ್ರಹ ೧೯೫೦ ಹಾಗೂ ೬೦ರ ದಶಕಗಳಲ್ಲಿ ಒಂದು ಕ್ರಾಂತಿಕಾರಕ ವಿಚಾರವೇ ಆಗಿತ್ತು.

ಇತಿಹಾಸದಲ್ಲಿ ಭಾರತ ಅನುಭವಿಸಿದ ಅನೇಕ ಆಘಾತಗಳಿಗೆ ಜಾತಿ ಪದ್ಧತಿಯನ್ನು ಲೋಹಿಯಾ ದೂಷಿಸಿದರು. ಅವರ ಪ್ರಕಾರ ಅದು ಸಂಕುಚಿತವಾದ ಗುರುತುಗಳನ್ನು ಪೋಷಿಸಿತಲ್ಲದೆ, ಜನ ತಮ್ಮನ್ನು ತಾವು ವಿಸ್ತೃತ ಜವಾಬ್ದಾರಿಗಳನ್ನುಳ್ಳ ಪ್ರಜೆಗಳನ್ನಾಗಿ ಪರಿಭಾವಿಸಿಕೊಳ್ಳಲು ಬಿಡಲಿಲ್ಲ. ಇದಕ್ಕೆ ಪರಿಹಾರ ಮೇಲ್ಜಾತಿಗಳ ವಿರುದ್ಧ ಯುದ್ಧ ಹೂಡುವುದಲ್ಲ. ಅದರ ಬದಲಿಗೆ ಉಳ್ಳವರು ಸ್ವಪ್ರೇರಣೆಯಿಂದ ಕೆಳಜಾತಿಗಳ ಜನರ ಬದುಕನ್ನು ಹಸನಾಗಿಸಲು ಮುಂದೆ ಬರುವಂತೆ ಮಾಡುವ ನೈತಿಕ ಪ್ರಚಾರಾಂದೋಲನವನ್ನು ಹಮ್ಮಿಕೊಳ್ಳಬೇಕು. ಇದನ್ನು ಮಾನವೀಯ ದೃಷ್ಟಿಯಿಂದಷ್ಟೇ ಅಲ್ಲ, ಈ ಮಾರ್ಗದಿಂದ ಮಾತ್ರ ದೇಶದಲ್ಲಿ ಪ್ರತಿಭೆ ಮತ್ತು ನವನವೀನ ವಿಚಾರಗಳ ಒಂದು ಹೊಸ ಪ್ರವಾಹವೇ ಹರಿದು ಬರುತ್ತದೆಂಬ ಕಾರಣದಿಂದಲೂ ಕೈಗೆತ್ತಿಕೊಳ್ಳಬೇಕೆಂದು ಲೋಹಿಯಾ ಭಾವಿಸಿದರು.

ಲೋಹಿಯಾ ೧೯೬೭ರಲ್ಲಿ ಸಾವನ್ನಪ್ಪಿದರಾದರೂ ಅವರ ರಾಜಕೀಯ ಹೆಜ್ಜೆ ಗುರುತುಗಳು ೧೯೭೦ರ ದಶಕದ ಮಧ್ಯಭಾಗದಲ್ಲಿ ಜಯಪ್ರಕಾಶ್ ನಾರಾಯಣ್ ಅವರಿಂದ ಸ್ಫೂರ್ತಿಗೊಂಡ ಯುವಜನ ಆಂದೋಲನದಲ್ಲಿ ಢಾಳಾಗಿ ಕಾಣಬಹುದು. ನೂರಾರು ಯುವಕರು 'ಗಾಂಧಿ, ಲೋಹಿಯಾ, ಜಯಪ್ರಕಾಶರಿಗೆ ಜೈಕಾರ ಹಾಕುತ್ತ ರಾಜಕೀಯವಾಗಿ ಕ್ರಿಯಾಶೀಲರಾದರು. ವಿಪರ್ಯಾಸವೆಂದರೆ, ಈ ಆಂದೋಲನದ ಮೂಸೆಯಲ್ಲಿ ಮೂಡಿಬಂದು ತಮ್ಮನ್ನು ತಾವು ಲೋಹಿಯಾವಾದಿಗಳೆಂದು ಕರೆದುಕೊಂಡ ಮುಖ್ಯವಾಹಿನಿಯ ರಾಜಕೀಯ ನಾಯಕರು–ಇವರಲ್ಲಿ ಗಮನಾರ್ಹರಾದವರೆಂದರೆ, ಮುಲಾಯಂಸಿಂಗ್ ಯಾದವ್, ಲಾಲೂ ಪ್ರಸಾದ್ ಯಾದವ್, ಶರದ್ ಯಾದವ್–ತಮ್ಮ ತಾತ್ವಿಕ ಗುರುವಿಗೆ ನೋವನ್ನುಂಟು ಮಾಡುವ ಹಾಗೆ ಜಾತಿವಾದದ ಆಧಾರದ ಮೇಲೆ ತಮ್ಮ ರಾಜಕೀಯ ಬದುಕನ್ನು ಕಟ್ಟಿಕೊಂಡರು.

ಲೋಹಿಯಾರ ತಾತ್ವಿಕ ಪರಂಪರೆ ಸಮತೆ, ಪಾಲ್ಗೊಳ್ಳುವಿಕೆ, ಪಾರದರ್ಶಕತೆ, ಹೊಣೆಗಾರಿಕೆ ಮುಂತಾದ ಪ್ರಶ್ನಾತೀತವೆನ್ನಿಸಿರುವ ಮೌಲ್ಯಗಳ ರೂಪದಲ್ಲಿ ಇಂದೂ ಜೀವಂತವಾಗಿದೆ. ನಿಜ, ಈ ಮೌಲ್ಯಗಳನ್ನು ಪಾಲಿಸುವುದಕ್ಕಿಂತ ಹೆಚ್ಚಾಗಿ ಉಲ್ಲಂಘಿಸಲಾಗುತ್ತಿದೆ. ಆದರೆ ಈ ಮೌಲ್ಯಗಳನ್ನು ನಿರ್ಣಾಯಕ ಮೌಲ್ಯಗಳೆಂದು ಪರಿಗಣಿಸಿರುವುದು ಸಮಕಾಲೀನ ಬದುಕಿನಲ್ಲಿನ ಒಂದು ಮಹಾ ಪರಿವರ್ತನೆಯ ಪ್ರತೀಕವೇ ಆಗಿದ್ದು, ಇದರ ಸಾಕ್ಷ್ಯಗಳು ಇಂದಿನ ಸಾರ್ವಜನಿಕ ಜೀವನ ಮತ್ತು ಸಾಹಿತ್ಯಕೃತಿಗಳೆರಡರಲ್ಲೂ– ಉದಾ: ನಂದನ್ ನಿಲೇಕಣಿ ಅವರ *Imagining India* ಮತ್ತು William Bissels ಅವರ *Making India work*– ವ್ಯಾಪಿಸಿಕೊಂಡಿರುವುದನ್ನು ನಾವು ಕಾಣಬಹುದು.

ಜನರ ಮಧ್ಯೆ ಈಗಲೂ ಆಸೆಯಿಂದ ಕೆಲಸ ಮಾಡುತ್ತಿರುವ ಲೋಹಿಯಾರಿಂದ ಸ್ಫೂರ್ತಿಗೊಂಡ ಸಮಾಜವಾದಿ ಕಾರ್ಯಕರ್ತರು ಈ ಮಾದರಿಗಳಲ್ಲಿನ ವಿವರಗಳ ಬಗ್ಗೆ ಕಟುವಾದ ಭಿನ್ನಾಭಿಪ್ರಾಯಗಳನ್ನು ಹೊಂದಿರಬಹುದು. ಆದರೆ ಹೆಚ್ಚು ನ್ಯಾಯಯುತವಾದ ಮತ್ತು ಸಮತೆಯ ಸಮಾಜದ ಕನಸಿಗೆ ಬದ್ಧರಾದವರೂ ಮತ್ತು ಈಗಾಗಲೇ ಸಾಕಷ್ಟು ಉಳ್ಳವರಾಗಿರುವವರಿಗೆ ಮತ್ತಷ್ಟು ಸವಲತ್ತುಗಳ ವರದಾನ ಮಾಡುವ 'ಹುಟ್ಟಿನ ಲಾಟರಿ'ಯ ಬಗ್ಗೆ ತೀವ್ರವಾದ ಸಿಟ್ಟಿರುವ ಜನರೂ ಅಲ್ಲಿದ್ದಾರೆ. ನಿಜ, ಬದಲಾವಣೆ ಬಯಸುವ ಇವರಲ್ಲಿ ಬಹಳ ಜನಕ್ಕೆ 'ಸಮಾಜವಾದ'ವೆಂದು ಅವರು ಯಾವುದನ್ನು ಗುರುತಿಸುತ್ತಾರೋ ಅದರ ಬಗ್ಗೆ ಅಲರ್ಜಿ ಇದೆ. ಉದಾಹರಣೆಗೆ ಬಹಳ ಪ್ರಭಾವಶಾಲಿ ಅರ್ಥಿಕ ತಜ್ಞರೂ ಹಾಗೂ ನೀತಿ ನಿರೂಪಕರೂ ಅದ (ಮತ್ತು ಈಗ ಭಾರತದ ರಿಸರ್ವ್ ಬ್ಯಾಂಕಿನ ಗವರ್ನರ್‌ರೂ ಆಗಿರುವ) ರಘುರಾಮ್ ರಾಜನ್ ತಮ್ಮ *Saving Capitalism from Capitalists* ಎಂಬ ಪುಸ್ತಕದಿಂದ ಪ್ರಸಿದ್ಧರಾಗಿದ್ದಾರೆ. ಅವರು ಬಂಡವಾಳಶಾಹಿಯ 'ವಾರಸುದಾರರ, ವಾರಸುದಾರರಿಂದ ಮತ್ತು ವಾರಸುದಾರರಿಗಾಗಿ' ಇರುವ ವ್ಯವಸ್ಥೆಯಾಗಿಬಿಡುವ ಪ್ರವೃತ್ತಿಯನ್ನು ವಿರೋಧಿಸುತ್ತಾರೆ. ಈ ದೃಷ್ಟಿಕೋನವು ಈ ಹಿಂದೆ ಉಲ್ಲೇಖಿಸಲಾದ ಸಾಮಾನ್ಯ ನೆಲೆಗಳ ನಡುಗಡ್ಡೆಗಳಿಗೆ ಒಂದು ಉದಾಹರಣೆಯಷ್ಟೆ. ಮೇಲ್ನೋಟಕ್ಕೆ ವಿರೋಧಿಗಳಾಗಿ ಕಾಣುವ ಇವರು ಕಟು ವಾದ-ವಿವಾದಗಳ ಥಂಡಿ ನೀರಿನ ಹೆಬ್ಬಲೆಗಳನ್ನು ಹಾಯ್ದು ಅಂತಹ ಸಾಮಾನ್ಯ ನೆಲೆಗಳ ನಡುಗಡ್ಡೆಗಳನ್ನು ತಲುಪಿದಲ್ಲಿ ಎಂತಹ ಹೊಸ ಅನುಸಂಧಾನದ ಬಾಗಿಲುಗಳು ತೆರೆದುಕೊಳ್ಳುವವೋ ಎಂದು ಊಹಿಸುವುದೇ ಒಂದು ರೋಮಾಂಚನಕಾರಿ ಅನುಭವವಾಗಬಲ್ಲುದು!

(ರಜನಿ ಭಕ್ಷಿ ಮುಂಬೈನಲ್ಲಿ ನೆಲೆಸಿರುವ ಪ್ರಗತಿಪರ ರಾಜಕೀಯ-ಆರ್ಥಿಕ ಚಿಂತಕರು, ಲೇಖಕರು ಮತ್ತು ಹಿರಿಯ ಪತ್ರಕರ್ತರು)

(ಕನ್ನಡಕ್ಕೆ: ಡಿಎಸ್ಸೆನ್)

◆◆

೮

ಲೋಹಿಯಾ: ಜನ್ಮಶತಮಾನೋತ್ಸವ ನೋಟ

ಯೋಗೇಂದ್ರ ಯಾದವ್

(ಇದು ಲೋಹಿಯಾ ಅವರ ಜನ್ಮಶತಮಾನೋತ್ಸವದ ಅಂಗವಾಗಿ 'ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ' ಪತ್ರಿಕೆಯು ೨೦೧೦ರಲ್ಲಿ ಹೊರತಂದ ಲೋಹಿಯಾ ವಿಶೇಷ ಪುಟಗಳಲ್ಲಿನ ಲೇಖನಗಳಿಗಾಗಿ ಲೇಖಕರು ಬರೆದ ಸಂಪಾದಕೀಯ ಟಿಪ್ಪಣಿಯಾಗಿದೆ)

ರಾಮಮನೋಹರ ಲೋಹಿಯಾ ಅವರ ಜನ್ಮ ಶತಮಾನದ ಈ ಸಂದರ್ಭದಲ್ಲಿ ಅವರ ಬಗ್ಗೆ ಏನನ್ನು ನೆನಪಿನಲ್ಲಿಟ್ಟುಕೊಂಡಿದ್ದೇವೆ, ಏನನ್ನು ಮರೆತಿದ್ದೇವೆ, ಎಂಬುದು ಸಮಕಾಲೀನ ಭಾರತದಲ್ಲಿನ ಬೌದ್ಧಿಕ ಮತ್ತು ರಾಜಕೀಯ ಜೀವನದ ಬಗೆಗಿನ, ಹಾಗೆಯೇ ಕಡಿಮೆ ಅವಧಿಯಲ್ಲಿಯೇ ತೀವ್ರ ಚಿಂತನೆ ಮತ್ತು ಕ್ರಿಯಾಶೀಲ ಬದುಕು ನಡೆಸಿದ ಆ ವ್ಯಕ್ತಿಯ ಬಗೆಗಿನ ವ್ಯಾಖ್ಯಾನ ಕೂಡ ಆಗಬಲ್ಲದು. ಅವರ ಪ್ರಬಲ ವ್ಯಕ್ತಿತ್ವ ಮತ್ತು ವಿಗ್ರಹಂಜಕ(iconoclastic)ಮನಸ್ಸುಗಳು ಅವರ ನೆನಪನ್ನು, ಪರಸ್ಪರ ವಿಭಿನ್ನವಾಗಿ ಮಾತನಾಡುವ ಎರಡು ಧಾರೆಗಳಾಗಿ ವಿಭಜಿಸಿದೆ. ಒಂದು ಕಡೆ, "ಡಾಕ್ಟರ್ ಸಾಹಿಬ್" ಅವರ ಆಚೆಗೆ ನೋಡಲಾರದಷ್ಟು ವಿಸ್ಮಿತ ರಾಗಿರುವ ಲೋಹಿಯಾ ಅಭಿಮಾನಿಗಳ ಕ್ಷೀಣಿಸುತ್ತಿರುವ

ಸಣ್ಣ ಗುಂಪು. ಮತ್ತೊಂದು ಕಡೆ ಲೋಹಿಯಾ ಅವರನ್ನು ಓದಲೂ ಸಿದ್ಧವಿರದ ವಿಪರೀತ ಪೂರ್ವಗ್ರಹಪೀಡಿತ ಆತ್ಮಪ್ರತ್ಯಯದ ಗುಂಪು. ಕಾಲಕಳೆದಂತೆಲ್ಲ ಅವರ ಅಭಿಮಾನಿಗಳ ಮತ್ತು ಟೀಕಾಕಾರರ ನಡುವಿನ ರೋಷಾವಿಷ್ಟ ಜಗಳಗಳು ಮೌನ ಮತ್ತು ಸಾರ್ವಜನಿಕ ಜೀವನದ ಮರೆವಿನ ವಿಶಾಲ ಸಮುದ್ರದಲ್ಲಿ ಮರೆಯಾಗಿ ಹೋಗುವ ಹೆದರಿಕೆಯನ್ನು ಹುಟ್ಟಿಸುತ್ತಿವೆ. ಇವೆರಡರ ಪೈಕಿ ಯಾವುದು ಹೀನಾಯವಾದುದು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ – ಅಂಶಿಕವಾದ, ತಿರುಚಲ್ಪಟ್ಟ ನೆನಪೋ ಅಥವಾ ಹಾಸ್ಯಾಸ್ಪದವಾದ ಮರೆವೋ. ಈ ವಿಶೇಷ ಸಂಚಿಕೆಯು ವಿಮರ್ಶೆಯೇ ಇಲ್ಲದ ಭಟ್ಟಂಗಿತನ ಅಥವಾ ಲೋಹಿಯಾ ಅವರ ಬಗೆಗಿನ ಇಂದಿನ ಬುದ್ಧಿಪೂರ್ವಕ ಮರೆವು ಇವೆರಡರ ದೋಷಪರಿಹಾರದ ಉದ್ದೇಶ ಹೊಂದಿದೆ.

ಅಭಿಮಾನಿಗಳು/ಟೀಕಾಕಾರರು

ಲೋಹಿಯಾ ಅಭಿಮಾನಿಗಳೆಂದರೆ, ರಾಜಕೀಯ, ಬೌದ್ಧಿಕ, ವ್ಯವಸ್ಥೆಗಳ ಅಂಚುಗಳಲ್ಲಿ ಒಂದು ಪಕ್ಷ ಅಥವಾ ಉದ್ದೇಶದ(cause) ಹುಡುಕಾಟದಲ್ಲಿರುವ, ಸಾಮಾನ್ಯವಾಗಿ ಹರಡಿ ಹೋಗಿರುವ ವಯೋವೃದ್ಧ ರಾಜಕೀಯ ಕಾರ್ಯಕರ್ತರು. ಬಹುತೇಕ ನಿಸ್ವಾರ್ಥಿಗಳು, ರಾಜಕಾರಣದ ಸಾಂಕೇತಿಕ ಆಯಾಮಕ್ಕೆ ಅತಿಯಾದ ಗಮನ ನೀಡುವವರು, ರಾಜಕೀಯ ಭಾಷೆಯ ನಿಪುಣರು, ಸಂಘಟನೆಯ ನಿರ್ಮಾಣದ ಅಗತ್ಯಗಳಿಗೆ ಜನ್ಮಜಾತವಾಗಿ ವಿರುದ್ಧವಾಗಿರುವವರೂ ಆಗಿರುವ ಲೋಹಿಯಾವಾದಿ ಗಳು ಇಂದಿನ ರಾಜಕೀಯ ಮತ್ತು ವಿಚಾರಗಳ ಪ್ರಪಂಚಕ್ಕೆ ಹೊರಗಿನವರಾಗಿದ್ದಾರೆ. ಇತಿಹಾಸದ ವಿರುದ್ಧದ ಅಸಮಾಧಾನವಲ್ಲದಿದ್ದರೂ, ರಾಜಕೀಯ ಅಪ್ರಸ್ತುತಿಯು ಅವರ ಗತದ ಹಂಬಲವನ್ನು ಮತ್ತಷ್ಟು ತೀವ್ರಗೊಳಿಸುತ್ತಿದೆ. ಅವರ ಮೆಚ್ಚುಗೆಯು ಹಲವಾರು ರೂಪಗಳಲ್ಲಿ ವ್ಯಕ್ತವಾಗುತ್ತದೆ, ಕೆಲವೊಮ್ಮೆ ಅದು ಸಾಂಪ್ರದಾಯಿಕ ಸ್ತುತಿಯ ಮಟ್ಟವನ್ನು ತಲುಪುತ್ತದೆ. ಉದಾಹರಣೆಗೆ, " ಡಾ॥ ರಾಮಮನೋಹರ ಲೋಹಿಯಾ ಅವರು, ಬಹುಶಃ ಕಳೆದ ನೂರು ವರ್ಷಗಳಲ್ಲಿ ಮೂಡಿಬಂದ ಏಕೈಕ ಅಸಲೀ ಚಿಂತಕರು" ಎಂಬ ಜಾರ್ಜ್ ಫರ್ನಾಂಡಿಸ್ ಅವರ ಮಾತುಗಳನ್ನು ಉಲ್ಲೇಖಿಸಬಹುದು. ಬಹಳಷ್ಟು ಸಲ ಅದು ಲೋಹಿಯಾ ಅವರೇ ಟಂಕಿಸಿದ ಘೋಷಣೆ, ಪದಸಮುಚ್ಛಯದ ಪಠಣ, ಅಥವಾ ಲೋಹಿಯಾ ಅವರದ್ದೇ ಬರಹಗಳ ಮಸೂರದ ಮೂಲಕ ಅವರನ್ನು ಓದಲು ನಡೆಸುವ ಪ್ರಯತ್ನವಾಗಿರುತ್ತದೆ.

ನ್ಯಾಯವಾಗಿ ಹೇಳಬೇಕೆಂದರೆ ಇದು ಲೋಹಿಯಾ ಅವರ ಎಲ್ಲ ಅಭಿಮಾನಿಗಳಿಗೂ ಅನ್ವಯವಾಗುವುದಿಲ್ಲ. ಲೋಹಿಯಾ ಅವರಿಂದ ಸ್ಫೂರ್ತಿ ಪಡೆದ ಒಂದು ಸಣ್ಣ ಸಮಾಜವಾದಿ ಕಾರ್ಯಕರ್ತರ ಗುಂಪು ಕಾಲಕ್ಕೆ ತಕ್ಕ ಹಾಗೆ ಲೋಹಿಯಾ ಅವರ ವಿಚಾರಗಳನ್ನು ಎತ್ತಿ ಹಿಡಿಯುವ ಮೂಲಕ, ಅಗತ್ಯವಿದ್ದಲ್ಲಿ ಆ ವಿಚಾರಗಳನ್ನು ಪರಿಷ್ಕರಿಸುತ್ತ ಈ ವಿಚಾರಗಳ ಚೇತನದ (spirit) ಮೂಲಕ ಹೊಸ ವಿಷಯಗಳನ್ನು

ಹುಡುಕಾಡುತ್ತಾ ಅವರ ಕೊಡುಗೆಯನ್ನು ಜೀವಂತವಾಗಿ ಇರಿಸಿಯೂ ಇದೆ. ಲೋಹಿಯ ಅವರ ಆಪ್ತರಾಗಿದ್ದ, ಬಹುಶಃ ಈ ವರ್ಗದಲ್ಲಿ ಸೃಜನಶೀಲ ಚಿಂತಕರಾಗಿದ್ದ ಕಿಶನ್ ಪಟ್ನಾಯಕ್ ಅವರು ಲೋಹಿಯಾ ಆರಾಧನೆಯ ಬಗ್ಗೆ ಹೀಗೆ ಹೇಳುತ್ತಾರೆ: "ತಮ್ಮ ಅನುಯಾಯಿಗಳ ವಿಚಾರದಲ್ಲಿ ಲೋಹಿಯಾ ಅವರು ಬಹಳ ಅದೃಷ್ಟಹೀನರಾಗಿದ್ದರು ಎನಿಸುತ್ತದೆ. ಅವರ ಅನುಯಾಯಿಗಳನ್ನು, ಸಂಬಂಧವಿಲ್ಲದೇ ಅವರ ಸೂತ್ರಗಳನ್ನು ನಿರರ್ಥಕವಾಗಿ ಪುನರುಚ್ಚರಿಸುವವರು, ಮತ್ತು ರಾಜಕೀಯ ಲಾಭವಿದ್ದಾಗ ಮಾತ್ರ ಲೋಹಿಯಾ ಅವರಿಗೆ ನಿಷ್ಠೆಯನ್ನು ಪ್ರದರ್ಶಿಸುವವರು ಎಂದು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಮತ್ತೊಂದು ಸಣ್ಣ ನಿಷ್ಠಾವಂತರ ಗುಂಪು, ಮತ್ತು ಕೆಲವು ವ್ಯಕ್ತಿಗಳು ಅವರ ಹುಟ್ಟಿದ ದಿನ, ಪುಣ್ಯತಿಥಿಗಳನ್ನು ಆಚರಿಸುತ್ತಾ ಅವರ ಕೆಲವು ಸ್ವಾರಸ್ಯಕರ ಮಾತುಗಳನ್ನು ಉಚ್ಚರಿಸುತ್ತಾ ಬರೀ ಆರಾಧಕರಾಗಿರುವಷ್ಟರಮಟ್ಟಿಗೆ ನಿಷ್ಪ್ರಯೋಜಕರಾಗಿ ಉಳಿದಿದ್ದಾರೆ."

ಇತ್ತೀಚೆಗೆ ಜನರ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಾ, ಚಳುವಳಿಗಳಲ್ಲಿ, ವಿಶೇಷವಾಗಿ ಒಕ್ಕಲೆಬ್ಬಿಸುವುದರ ವಿರುದ್ಧ, ಪರಿಸರ ವಿನಾಶದ ವಿರುದ್ಧ, ಮತ್ತು ಬೃಹತ್ ಅಭಿವೃದ್ಧಿಯ ವಿರುದ್ಧ, ಹೋರಾಡುತ್ತಿರುವವರಲ್ಲಿ ಲೋಹಿಯಾ ಅವರ ಬಗ್ಗೆ ಒಂದು ಸದ್ದಿಲ್ಲದ; ಆದರೆ ಮಹತ್ವಪೂರ್ಣವಾದ ಆಸಕ್ತಿಯು ಮರುಹುಟ್ಟು ಪಡೆದಿರುವುದು ಕಂಡುಬರುತ್ತದೆ. ಅಭಿವೃದ್ಧಿಯ ವಿಚಾರದಲ್ಲಿ ಹಳೆಯ ಎಡ ಸಂಪ್ರದಾಯನಿಷ್ಠರ ಯೋಜನೆ, ವಿಜ್ಞಾನಗಳ ವಿರುದ್ಧ ಚಳುವಳಿಗಳು ಮೂಡುತ್ತಿರುವುದರೊಂದಿಗೆ ಒಂದು ಪರ್ಯಾಯ ದೃಷ್ಟಿಯನ್ನು ತೋರಿಸುವ ಲೋಹಿಯಾ ಅವರಂತಹ ಚಿಂತಕರ ಬಗ್ಗೆ ಆಸಕ್ತಿಯು ಬೆಳೆಯುತ್ತಿದೆ. ಈಗ ಲೋಹಿಯಾ ಅವರ ವಿಚಾರಗಳು ನೇರವಾಗಿ ಅಥವಾ ಪರೋಕ್ಷವಾಗಿ ಜನತಾ ಚಳುವಳಿಗಳ ಕೆಲವು ನವೀನ ಸಮಕಾಲೀನ ಪುನರ್ನಿರೂಪಣೆಗಳಿಗೆ ಅವಕಾಶ ಅಥವಾ ಸ್ಫೂರ್ತಿ ಒದಗಿಸಬಲ್ಲವಾಗಿವೆ.

ಲೋಹಿಯಾ ಅಭಿಮಾನಿಗಳು ಕೇವಲ ರಾಜಕೀಯ ಕಾರ್ಯಕರ್ತರ ಲೋಕಕ್ಕೆ ಸೀಮಿತವಾಗಿಲ್ಲ. ಬಹುಶಃ ಅವರ ವಿಚಾರಗಳ ಸೃಜನಶೀಲ ವಿಶ್ಲೇಷಣೆ ರಾಜಕೀಯ ಪ್ರಪಂಚದ ಹೊರಗೇ ನಡೆದಿದೆ. ಲೋಹಿಯಾ ಅವರು ತಮಗೆ ಹೇಗೆ ಸ್ಫೂರ್ತಿ ನೀಡಿದರು ಎಂಬ ವಿಚಾರದಲ್ಲಿ ಇತ್ತೀಚೆಗೆ ಎಂ.ಫ್. ಹುಸೇನ್ ಅವರು "ಡಾ॥ರಾಮಮನೋಹರ ಲೋಹಿಯಾ, ನೀವು ರಾಮಾಯಣ ಮತ್ತು ಮಹಾಭಾರತದ ಚಿತ್ರಗಳ ರಚನೆ ಮಾಡಲೇ ಬೇಕು, ಅವು ವಿಶ್ವವ್ಯಾಪಿ ವಿಷಯಗಳು, ಅವು ಯಾವುದೇ ಒಂದು ಧರ್ಮಕ್ಕೆ ಸೇರಿದವಲ್ಲ ಎಂದು ಹೇಳಿದ್ದರು" ಎಂದು ಜ್ಞಾಪಿಸಿಕೊಂಡಿದ್ದಾರೆ. ಯು. ಆರ್. ಅನಂತಮೂರ್ತಿ ಕೂಡ ತಮ್ಮ, ಹಾಗೆಯೇ ತಮ್ಮ ಸಮಕಾಲೀನ ಲೇಖಕರ ಬರವಣಿಗೆಯ ಮೇಲೆ ಲೋಹಿಯಾ ಅವರ ಪ್ರಭಾವ ಇರುವುದಾಗಿ ಹೇಳುತ್ತಾರೆ. ತಮ್ಮೊಳಗೆ ಒಬ್ಬ ಒಳಗಿನ ವಿಮರ್ಶಕ(critical insider) ಇರುವುದನ್ನು

ಸಾಧ್ಯ ಮಾಡಿದ್ದು ಲೋಹಿಯಾ ಎಂದು ಅವರು ಹೇಳುತ್ತಾರೆ. ಹಿಂದಿ ಸಾಹಿತಿಗಳ ಮೇಲೆ ಹಾಗೆಯೇ ಇತರೆ ಭಾರತೀಯ ಭಾಷೆಗಳ ಲೇಖಕರ ಬರವಣಿಗೆಯ ಮೇಲೂ ಲೋಹಿಯಾ ಅವರ ಪ್ರಭಾವ ವ್ಯಾಪಕವಾಗಿತ್ತು. ಈ ಪ್ರಭಾವದ ಬಹುಪಾಲು ನೇರವಾಗಿ ಲೋಹಿಯಾ ಅವರ ನೇರ ಸಂಪರ್ಕಕ್ಕೆ ಬಂದವರ ಮೇಲೆ ಮಾತ್ರ ಆಗಿದ್ದು, ನಂತರ ಅವರ ಮುಂದಿನ ತಲೆಮಾರಿಗೆ ಅದು ಮುಂದುವರಿದಿಲ್ಲ ಎಂದರೆ ತಪ್ಪಾಗಲಾರದು.

ಲೋಹಿಯಾ ಅವರ ಅಭಿಮಾನಿಗಳು ತಡೆಯಿಲ್ಲದ ಮಾತಿನವರು ಮತ್ತು ಕಲ್ಪನಾ ರಹಿತರೂ ಆಗಿದ್ದರೆ, ಅವರ ಟೀಕಾಕಾರರು ಮೌನವನ್ನು ಒಂದು ಮೂದಲಿಕೆಯ ಅಸ್ತ್ರವನ್ನಾಗಿ ಬಳಸಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ವೈಚಾರಿಕ ಸಾಂಸ್ಥಿಕ ಪ್ರಪಂಚದಲ್ಲಿ ಎರಡು ಅತ್ಯಂತ ಶಕ್ತಿಶಾಲಿ ದೃಷ್ಟಿಕೋನಗಳು–ನೆಹರೂವಾದಿ ಮತ್ತು ಮಾರ್ಕ್ಸ್‌ವಾದಿ– ಒಟ್ಟಾಗಿ ಲೋಹಿಯಾ ಸುತ್ತ ಒಂದು ಮೌನದ ಗೋಡೆಯನ್ನು ನಿರ್ಮಿಸಿದವು. ಈ ಮೌನದ ಆಳದಲ್ಲಿರುವ ಮೂದಲಿಕೆ ಆಗೀಗ ಹೊರಬರುತ್ತಿತ್ತು. ಉದಾಹರಣೆಗೆ ಐಜಾಜ್ ಅಹಮದ್ ಅವರು ತಮ್ಮ ಓದುಗರಿಗೆ ಲೋಹಿಯಾ ಅವರನ್ನು ಪರಿಚಯಿಸುವುದು ಈ ರೀತಿ: "ನೆಹರೂ ಅವರ ಬಗ್ಗೆ ಒಳಗಿನಿಂದ ದ್ವೇಷ ಹೊಂದಿದ್ದ ರಾಮಮನೋಹರ ಲೋಹಿಯಾ, ಮುಖ್ಯವಾಗಿ, ಉತ್ತರಪ್ರದೇಶದಲ್ಲಿ ಹಿಂದಿಯ ಪರವಾದ ಒಂದು ತೀವ್ರ ಭಾಷಾ ಸಾಂಸ್ಕೃತಿಕ ದುರಭಿಮಾನಕ್ಕೆ, ಸಾಮಾನ್ಯವಾದ ಜನಪ್ರಿಯ ಕಾರ್ಯಕ್ರಮಗಳನ್ನು ಜೊತೆಗೂಡಿಸಿ, ತಮ್ಮದೇ ಆದ ಸಾಕಷ್ಟು ದೊಡ್ಡ ನೆಲೆಯನ್ನು ನಿರ್ಮಿಸಿಕೊಂಡಿದ್ದರು." ಲೋಹಿಯಾ ಅವರು ಧಾರಾಳವಾಗಿಯೇ ಪ್ರತಿಕ್ರಿಯಿಸುತ್ತಿದ್ದ ಈ ಬಗೆಯ ಮೂದಲಿಕೆಯು ಮುಂದಿನ ಜನಾಂಗದ ಎಡಪಂಥೀಯ ಪ್ರಗತಿಪರ ಚಿಂತಕರಿಗೆ ಒಂದು ಅಜ್ಞಾನದ ರೂಪದಲ್ಲಿ ವರ್ಗಾವಣೆಗೊಂಡಿತು. ಇದು ಲೋಹಿಯಾ ಅವರನ್ನು ಓದದೆಯೇ ಅವರನ್ನು ಪಕ್ಕಕ್ಕೆ ಸರಿಸುವ ಎಡಪಂಥೀಯ ಶೈಕ್ಷಣಿಕ ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾಯಿತು. ಮೌನವೇ ಆದರೂ ಲೋಹಿಯಾ ಅವರ ಬಗೆಗಿನ ಬಹಳ ಬಲವಾದ ಈ ನೇತ್ಯಾತ್ಮಕ ಮೌಲ್ಯಮಾಪನವು, ಅವರ ಬಗೆಗಿನ ನಮ್ಮ ಸಾಮೂಹಿಕ ನೆನಪನ್ನು ಪ್ರಭಾವಿಸಿದೆ. ಇದು ಸೋವಿಯತ್ ಒಕ್ಕೂಟ ಪತನವಾಗುವುದಕ್ಕೆ ಮೊದಲು, ಜನ್ಮ ಶತಮಾನೋತ್ಸವಕ್ಕೆ ಪೂರ್ವದಲ್ಲಿ ಅಂಬೇಡ್ಕರ್ ಅವರ ಬಗೆಗಿನ ಸ್ಮರಣೆಗಿಂತ ಬಹಳ ಭಿನ್ನವಾಗೇನೂ ಇಲ್ಲ. ಎಲ್ಲವನ್ನೂ ಪರಿಗಣಿಸಿ ನೋಡುವುದಾದರೆ ಲೋಹಿಯಾ ಅವರು ಒಂದು ಶ್ಲಾಘ್ಯವಲ್ಲದ ಬಿಂಬಕ್ಕೆ ಸಿಲುಕಿಕೊಂಡಿದ್ದಾರೆ ಎನ್ನಬಹುದು. ತೀಕ್ಷ್ಣಮತಿಯಾದರೂ ವಿಲಕ್ಷಣ ವ್ಯಕ್ತಿ, ನ್ಯಾಯಪರತೆಯಲ್ಲಿ ಪ್ರಾಮಾಣಿಕ, ಒಂದು ನಿಯಂತ್ರಣವಿಲ್ಲದ ಫಿರಂಗಿ ಎಂಬಂತೆ ಅವರನ್ನು ಕಾಣಲಾಗುತ್ತದೆ. ಮಾತಿನಲ್ಲಿ ಒಗರು ಮತ್ತು ನಿರ್ಭಿಡೆ, ವಿಚಾರಗಳಲ್ಲಿ ಉರಿಬಣ್ಣದ ಅಸಂಬದ್ಧತೆ. ಏನೇ ಆದರೂ ತಮ್ಮ ಬೌದ್ಧಿಕ ಜಾಲವನ್ನು ವಿಸ್ತರಿಸಲು

ಬಯಸುವ ಒಂದು ಅತಿಸಣ್ಣ ಮಾರ್ಕ್ಸ್‌ವಾದಿ, ಮಾಜಿ ಮಾರ್ಕ್ಸ್‌ವಾದಿ ಪಂಡಿತರ ಮತ್ತು ಕಾರ್ಯಕರ್ತರ ಗುಂಪು ಇದ್ದು, ಇದು ಲೋಹಿಯಾ ಅವರ ಬಗ್ಗೆ ಹೆಚ್ಚುತ್ತಿರುವ ಕುತೂಹಲಕ್ಕೆ ಕಾರಣವಾಗಿದೆ.

ಲೋಹಿಯಾ ಅವರ ಅಭಿಮಾನಿಗಳು ಮತ್ತು ಟೀಕಾಕಾರರು ಸಂಚು ನಡೆಸುವ ಒಂದು ವಿಚಾರವಿದೆ. ಅವರ ವಿರೋಧಿಗಳು ಅವರ ಬಗ್ಗೆ ಒಂದು ವಿಮರ್ಶಾತ್ಮಕ ಗಮನ ನೀಡಬೇಕಾದ ಅಗತ್ಯವಿದೆ ಎಂದು ಭಾವಿಸುವುದಿಲ್ಲ. ಅವರ ಆರಾಧಕರು ಅವರು ಗಂಭೀರ ವಿಮರ್ಶೆಗೆ ಅತೀತರು ಎಂದೇ ಭಾವಿಸುತ್ತಾರೆ. ಲೋಹಿಯಾ ಅವರ ಶತಮಾನೋತ್ಸವವು ತಂದುಕೊಟ್ಟಿರುವ ತಾತ್ಕಾಲಿಕ ಗಮನವು ಅವರ ವಿಚಾರಗಳ ಮತ್ತು ರಾಜಕಾರಣದ ಬಗೆಗೆ ಒಂದು ವ್ಯವಸ್ಥಿತ ಪರಿಶೀಲನೆಯನ್ನು ಉತ್ತೇಜಿಸುವ ಸಾಧ್ಯತೆ ಇಲ್ಲ ಎನ್ನುವಂತೆ ಕಾಣುತ್ತದೆ.

ರಾಜಕಾರಣ/ವಿಚಾರಗಳು

ರಾಜಕೀಯ ಪ್ರಪಂಚದಲ್ಲಿ ಇಂದು ಲೋಹಿಯಾ ಅವರನ್ನು ಇತರೆ ಹಿಂದುಳಿದ ವರ್ಗಗಳ (OBC) ಮೀಸಲಾತಿಯ ಜನಕ, ಉತ್ತರಭಾರತದ ರಾಜಕಾರಣದಲ್ಲಿ ಹಿಂದುಳಿದ ವರ್ಗಗಳ ಸಮರ್ಥಕ, ಕಾಂಗ್ರೆಸ್ಸೇತರತೆಯ ಪಿತಾಮಹ, ನೆಹರೂ ಗಾಂಧಿ ವಂಶಾವಳಿಯ ರಾಜಿಯಿಲ್ಲದ ಟೀಕಾಕಾರ, ಇಂಗ್ಲಿಷ್ ವಿರೋಧಿ ರಾಜಕಾರಣದ ಕಾರಣಕರ್ತ ಎಂದು ಭಾವಿಸಲಾಗುತ್ತದೆ; ಇದು ಮುಲಾಯಂ ಸಿಂಗ್ ಯಾದವ್, ಲಾಲು ಪ್ರಸಾದ್ ಯಾದವ್ ಮತ್ತು ಜಾರ್ಜ್ ಫರ್ನಾಂಡಿಸ್ ಅವರಂತಹ ಲೋಹಿಯಾ ಅವರ ರಾಜಕೀಯ ವಾರಸುದಾರರು ಮೂಡಿಸಿರುವ ಬಿಂಬದ ಪರಿಣಾಮ ಎನ್ನಬಹುದು. ಸಮಕಾಲೀನ ಭಾರತದ ರಾಜಕಾರಣದ ನಕಾಶೆಯಿಂದ ಸಮಾಜವಾದಿ ಚಳುವಳಿಯು ಕಾಣೆಯಾದದ್ದು ಎಂದರೆ, ಲೋಹಿಯಾ ಅವರ ಸಮಾನತಾ ಸಿದ್ಧಾಂತದ ಹಲವು ಆಯಾಮಗಳು ರಾಜಕಾರಣದ ಲೊಕದಲ್ಲಿ ಅಳಿಸಲ್ಪಟ್ಟದ್ದು ಎಂದೇ ಅರ್ಥ. ಲೋಹಿಯಾ ಅವರ ಆರ್ಥಿಕ ಕಾರ್ಯಸೂಚಿ–ಬಡತನ, ನಿರುದ್ಯೋಗ, ಬೆಲೆಯೇರಿಕೆಗಳ ವಿರುದ್ಧದ ಅವರ ಪ್ರಚಾರ–ಸಂಪೂರ್ಣವಾಗಿ ಮರೆತೇ ಹೋಗಿದೆ. ಲಿಂಗ ಸಮಾನತೆಯ ಬಗೆಗಿನ ಅವರ ನಿರಂತರ ಮತ್ತು ರಾಜಿಯಿಲ್ಲದ ವಕಾಲತ್ತು ಸಹ ಇದೇ ಗತಿ ಕಂಡಿದೆ. ಇಂದಿನ ಆಧುನಿಕ ರಾಜಕೀಯದಲ್ಲಿ ರಾಷ್ಟ್ರೀಯತೆ ಎಂಬುದು ಒಂದು ಕೊಳಕು ಪದವಾಗಿ ಬದಲಾಗಿರುವಾಗ, ಲೋಹಿಯಾ ಮಾದರಿ ರಾಷ್ಟ್ರೀಯತೆಯನ್ನು ಗುರುತಿಸುವುದೂ ನಮಗೆ ಸಾಧ್ಯವಾಗದು, ಲೋಹಿಯಾ ಮಾದರಿ ರಾಷ್ಟ್ರೀಯತೆಯು, ಚೀನಾದ ಆಕ್ರಮಣಕ್ಕೆ ತೀವ್ರ ಪ್ರತಿಕ್ರಿಯೆಯನ್ನೂ ನೀಡಿದರೂ, ಕಾಶ್ಮೀರಕ್ಕೆ ಸಂಬಂಧಿಸಿದಂತೆ ಭಾರತದ ವಾದವನ್ನು ಬೆಂಬಲಿಸಿದರೂ, ಅಲ್ಲಿನ ಕಣಿವೆಯಲ್ಲಿ ಅಪ್ರಜಾತಾಂತ್ರಿಕ ಅನೀತಿಯುತ ಆಟವನ್ನು ಬೆಂಬಲಿಸದ, ಪಾಕಿಸ್ತಾನೀ ಆಡಳಿತಗಾರರನ್ನು ಸಾಮಾನ್ಯ ಪಾಕಿಸ್ತಾನಿ ಪ್ರಜಾ ಸಮೂಹದಿಂದ ಭಿನ್ನ ಎಂದು ಗುರುತಿಸಲು ಶ್ರಮಪಟ್ಟ, ಪಾಕಿಸ್ತಾನ್

ಸಮಸ್ಯೆಯನ್ನು ಭಾರತೀಯ ಮುಸ್ಲಿಮರಿಂದ ಬೇರ್ಪಡಿಸಲು ಶ್ರಮಪಡುತ್ತಿದ್ದ ರಾಷ್ಟ್ರೀಯತೆ. ಆಳವಿಲ್ಲದ ರಾಜಕೀಯ ತಿಳುವಳಿಕೆ ಎಂದರೆ, ರಾಮಾಯಣ ಮೇಳವನ್ನು ಆಯೋಜಿಸುವ, ಭಾರತೀಯ ಭಾಷೆಗಳನ್ನು ಪರಸ್ಪರ ಹತ್ತಿರ ತರುವ ಪ್ರಯತ್ನ ನಡೆಸುವ, ನದಿಗಳನ್ನು ಸ್ವಚ್ಛಗೊಳಿಸಲು, ಯಾತ್ರಾ ಕೇಂದ್ರಗಳನ್ನು ರಕ್ಷಿಸಲು ಮನವಿ ಮಾಡುವ, ಈಶಾನ್ಯ ಭಾರತವನ್ನು ಸಾಂಸ್ಕೃತಿಕವಾಗಿ ಉಳಿದ ಭಾರತದ ಜೊತೆ ಸಮಗ್ರಗೊಳಿಸುವ ಬಗ್ಗೆ ಒಂದು ಆತಂಕ ಮುಂತಾದುವನ್ನು ಒಳಗೊಂಡ ಲೋಹಿಯಾ ಅವರ ಸಾಂಸ್ಕೃತಿಕ ರಾಜಕಾರಣವನ್ನು ಗ್ರಹಿಸಲು ಸಾಧ್ಯವಾಗದ ಅಸಾಮರ್ಥ್ಯ. ಸಂಕುಚಿತ, ಕೇವಲ ಸ್ವನಿರೀಕ್ಷಣೆಯ(inward gaze) ಸಮಕಾಲೀನ ರಾಜಕಾರಣವು ದೃಢನಿಶ್ಚಯದ ಶಾಂತಿವಾದ, ಅಣುಶಸ್ತ್ರಗಳಿಗೆ ವಿರೋಧ, ಜನಾಂಗೀಯ ಅಸಮಾನತೆಯ ವಿರುದ್ಧದ ಪ್ರತಿಭಟನೆ, ಇಂಡೋ-ಪಾಕ್ ಸಂಯುಕ್ತ ವ್ಯವಸ್ಥೆ, ವೀಸಾ ಪಾಸ್‌ಪೋರ್ಟ್ ಇಲ್ಲದ ಪ್ರಪಂಚದ ಕಲ್ಪನೆಗಳನ್ನೊಳಗೊಂಡ ಲೋಹಿಯ ಅವರ ರಾಜಕಾರಣದ ಅಂತಾರಾಷ್ಟ್ರೀಯ ಆಯಾಮದ ಬಗೆಗಿನ ಅಜ್ಞಾನವನ್ನು ಸೂಚಿಸುತ್ತದೆ.

ಲೋಹಿಯಾ ಅವರ ರಾಜಕಾರಣದ ಲೋಕದಲ್ಲಿ ಅವರನ್ನು ಹೇಗೆ ಸ್ಮರಿಸಲಾಗುತ್ತದೆ ಎಂಬುದಕ್ಕೆ ಹೋಲಿಸಿದಲ್ಲಿ ವಿಚಾರ ಜಗತ್ತಿನಲ್ಲಿ ಅವರ ನೆನಪು ಬಹಳ ಕುತೂಹಲಕಾರಿಯಾದುದು ಮತ್ತು ಅದು ಭಾರತದ ಸಂಸ್ಥೀಕರಿಸಲ್ಪಟ್ಟ ಶೈಕ್ಷಣಿಕತೆಯ ಬಗೆಗಿನ ಒಂದು ವಿಷಾದನೀಯ ವ್ಯಾಖ್ಯಾನ. ಇಲ್ಲೊಂದು ಆಳವಾದ ವ್ಯಂಗ್ಯವಿದೆ. ಲೋಹಿಯಾ ಅವರು ಪ್ರತಿಪಾದಿಸಿದ ಕೆಲವು ವಿಚಾರಗಳು ಪಶ್ಚಿಮದಲ್ಲಿ, ಆ ಕಾರಣದಿಂದಾಗಿ ಭಾರತದಲ್ಲೂ ಸಹ ಗೌರವಕ್ಕೆ, ಪ್ರಾಮುಖ್ಯತೆಗೆ ಪಾತ್ರವಾಗುತ್ತಿದ್ದ ಕಾಲಕ್ಕೆ ಅವರನ್ನು ಇಲ್ಲಿ ಮರೆಯಲಾಗುತ್ತಿತ್ತು. ಪ್ರಾಬಲ್ಯ ಮತ್ತು ಅಧಿಕಾರದ ಸಾಧನವಾಗಿ ಸಂಸ್ಕೃತಿಯ ಪ್ರಾಮುಖ್ಯತೆಯ ಬಗ್ಗೆ ಭಾಷಾ ಶಾಸ್ತ್ರದ ನಂತರ ಸಮಾಜವಿಜ್ಞಾನಗಳು ಹೆಚ್ಚು ಸೂಕ್ಷ್ಮಗ್ರಾಹಿ ವಿಷಯಗಳು. ಆದರೆ ಈ ವಿಷಯದಲ್ಲಿ, ವಸಾಹತೋತ್ತರ ಸಾಂಸ್ಕೃತಿಕ ವಿಮರ್ಶೆಗಳು ಬರುವುದಕ್ಕೆ ಎರಡು ದಶಕಗಳ ಹಿಂದೆಯೇ ಬಂದ ಲೋಹಿಯಾ ಅವರ ಬರಹಗಳ ಬಗೆಗೆ ವಿವೇಚನಾಶೀಲ-ವಿದ್ವತ್ಪೂರ್ಣ ಬರಹಗಳು ಬರಲಿಲ್ಲ. ಭಾಷೆಯ ಶಕ್ತಿ ಮತ್ತು ಅಧಿಕಾರದ ಭಾಷೆಯಾಗಿ ಇಂಗ್ಲಿಷ್‌ನ ಪಾತ್ರ ಇವು ಸಮಾಜ ವಿಜ್ಞಾನದಲ್ಲಿ ಸಾಮಾನ್ಯ ವಿಚಾರವಾಗಿದೆ. ಅದರೂ ಲೋಹಿಯಾ ಅವರ "ಇಂಗ್ಲಿಷ್ ತೊಲಗಿಸಿ" ಪ್ರಚಾರವು ಇಂದಿಗೂ ಒಬ್ಬ ಹಿಂದಿ ಶ್ರೇಷ್ಠತಾವಾದಿಯ (supremacist), ಸಂಕುಚಿತ ಧ್ವನಿ ಎಂದೇ ಪರಿಗಣಿತವಾಗುತ್ತಿದೆ. ಯೂರೋ ಕೇಂದ್ರಿತೆಯ ಬಗೆಗಿನ ಅವರ ವಿಮರ್ಶೆಗೆ ಹಲವು ಭಾರತೀಯರನ್ನೂ ಒಳಗೊಂಡಿದ್ದ (ಎಡ್ವರ್ಡ್) ಸೈದಿಯನೋತ್ತರ (postsaidian)ವಿದ್ವಾಂಸರಿಂದ ಒಂದು ಅಂಗೀಕಾರದ ಸೂಚನೆ ಕೂಡ ಬಂದಿಲ್ಲ. ಬಹು(multiple) ಮತ್ತು ಪರ್ಯಾಯ ಆಧುನಿಕತೆಗಳ ಬಗ್ಗೆ ಬೇಕಾದಷ್ಟು ಕೆಲಸ ಆಗಿದ್ದರೂ ಲೋಹಿಯಾರಂತಹ ಕೆಲವರಲ್ಲಿ ಇದರೆ ಬಗೆಗಿನ

ಬೇರುಗಳನ್ನು ಹುಡುಕುವ ಪ್ರಯತ್ನ ನಡೆದೇ ಇಲ್ಲ. ಆಧುನಿಕೋತ್ತರ ನಿಲುವು ಇಂದಿನ ಒಂದು ಚಪಲ(trendy) ಆಗಿದ್ದರೂ, ಒಬ್ಬ ರಾಜಕೀಯ ಕ್ರಿಯಾಶೀಲನಿಗೆ(political actor) ಅದರಲ್ಲೂ ಎಡದ ಒಬ್ಬರಿಗೆ, ಅಪರೂಪವಾದ, ಲೋಹಿಯಾ ಅವರ ದೃಢ ತಾತ್ವಿಕ ವಸ್ತುನಿಷ್ಠತಾ ವಿರೋಧಿ (anti objectivism) ನಿಲುವು ಯಾವುದೇ ಗಮನ ಸೆಳೆದಿಲ್ಲ.

ಸೋವಿಯತ್ ಒಕ್ಕೂಟದ ಪತನದ ನಂತರ ಬಂಡವಾಳವಾದದೊಂದಿಗೆ ಸಮನ್ವಯ ವೊಂದನ್ನು ರೂಢಿಸಿಕೊಂಡ ಸೋವಿಯತ್ ಮಾದರಿ ಸಮಾಜವಾದದ ಬಗ್ಗೆ ಒಂದು ಮರುಚಿಂತನೆ ಅಗತ್ಯವನ್ನು ಮನಗಾಣಲಾಗಿದೆಯಾದರೂ, ಅದು ಲೋಹಿಯಾ ಅವರ ಸಣ್ಣ ಯಂತ್ರಗಳ ಮತ್ತು ಆರ್ಥಿಕ ವಿಕೇಂದ್ರೀಕರಣದ ಪ್ರತಿಪಾದನೆ ಬಗೆಗೆ ಯಾವುದೇ ಆಸಕ್ತಿಯ ದಾರಿ ತೆರೆದಿಲ್ಲ. ಹಿಂದುಳಿದಿರುವಿಕೆಯ ಬಗೆಗಿನ ಅವಲಂಬನೆಯ ಸಿದ್ಧಾಂತದ(dependency theory) ಬಗ್ಗೆ ಬೇಕಾದಷ್ಟು ಆಸಕ್ತಿಯಿದ್ದಾಗಲೂ ಲೋಹಿಯಾ ಅವರ ಬಂಡವಾಳವಾದ ಮತ್ತು ವಸಾಹತುವಾದಗಳ ಅವಳಿ ಹುಟ್ಟಿನ ಬಗ್ಗೆ ಯಾವುದೇ ವಿಸ್ತರಣೆಯ ಅಧ್ಯಯನ ನಡೆದಿಲ್ಲ. ಅಸಮಾನತೆಯ ವಿರುದ್ಧದ ಕಾಳಗವನ್ನು ಹಲವಾರು ನೆಲೆಗಳಲ್ಲಿ ಬೇರೆಯಾಗಿಯೇ ನಡೆಸಬೇಕು ಎಂಬ ತಿಳುವಳಿಕೆಗೆ ೨೦ನೆಯ ಶತಮಾನದ ಕ್ರಾಂತಿಯ ಅನುಭವವು, ಕಾರಣವಾಗಿದೆ. ಆದರೆ ಲೋಹಿಯ ಅವರ "ಸಪ್ತ ಕ್ರಾಂತಿಗಳು" ಭಾರತೀಯ ಬೌದ್ಧಿಕ ವಲಯದ ರಾಡಾರ್‌ನಲ್ಲಿ ಇನ್ನಷ್ಟೇ ದಾಖಲಾಗಬೇಕಿದೆ.

ಸಕಾರಾತ್ಮಕ ಕ್ರಿಯೆ (affirmative action) ಈಗ ಸುದ್ಧಿಯಲ್ಲಿದೆ. ಅದು ಈಗ ಹಿಂದಿಗಿಂತಲೂ ಹೆಚ್ಚು ಗೌರವವನ್ನು ಗಳಿಸಿದೆ. ಮಂಡಲ್‌ನ ಮೂಲವನ್ನು ಲೋಹಿಯಾ ಅವರಲ್ಲಿ ಗುರುತಿಸುವಾಗ, ಸಾಮಾಜಿಕ ನ್ಯಾಯ ಮತ್ತು ಅವರ ಸಕಾರಾತ್ಮಕ ಕ್ರಿಯೆಯ ನೀತಿಗಳ ಬಗೆಗಿನ ಅವರ ಎಚ್ಚರಿಕೆ ಮತ್ತು ಜಾಗರೂಕತೆಯ ಸೂಚನೆಗಳನ್ನು ಶೃತಪಡಿಸುವ ವಿಚಾರದಲ್ಲಿ ತಿಳಿವಳಿಕೆ (realization) ಕಾಣುವುದಿಲ್ಲ. ಇದು ಲೋಹಿಯಾ ಅವರ ಜಾತಿ ವಿನಾಶ ತತ್ವದ ಜಾತಿ ಕೇಂದ್ರಿತವಾದ ತಪ್ಪು ಓದಿನಿಂದಾಗಿರುವ ಅನಾಹುತ. ಉದಾಹರಣೆಗೆ ಲೋಹಿಯಾ ಅವರ ಶೂದ್ರ ಪರಿಕಲ್ಪನೆಯು ಎಲ್ಲ ಜಾತಿಯಲ್ಲಿರುವ ಮಹಿಳೆಯರನ್ನೂ ಒಳಗೊಳ್ಳುತ್ತದೆ ಎಂಬುದನ್ನು ನಾವು ಸ್ಮರಿಸುವುದಿಲ್ಲ. ಭಾರತದ ಶೈಕ್ಷಣಿಕ ವಲಯದಲ್ಲಿ ಸ್ತ್ರೀವಾದಿ ಮಾರ್ಗದ ಚಿಂತನೆಗಳು ಬಲಗೊಳ್ಳುತ್ತಿರುವಾಗ, ಸ್ತ್ರೀವಾದಿಗಳು ಮತ್ತು ಲೋಹಿಯಾವಾದಿಗಳಿಬ್ಬರಿಂದಲೂ ಲೋಹಿಯಾ ಅವರ ಚಿಂತನಾ ಲಹರಿಗಳು ಅವಗಣನೆಗೆ ಒಳಗಾಗಿವೆ. ಬಿ.ಆರ್.ಅಂಬೇಡ್ಕರ್ ಮತ್ತು ಪೆರಿಯಾರ್ ಇ.ವಿ. ರಾಮಸ್ವಾಮಿ ನಾಯ್ಕರ್ ಅವರುಗಳೊಂದಿಗಿನ ಸಂವಾದಗಳನ್ನೂ ಕೂಡ ಮರೆಯಲಾಗಿದೆ, ಜಾತಿಗಳ ಬಗೆಗಿನ ಅವರ ವಿಚಾರಧಾರೆ ಇಂದು ಯಾರನ್ನು ದಲಿತರೆಂದು ಕರೆಯಲಾಗುತ್ತಿದೆಯೋ

ಅವರ ಬಗೆಗಿನ ಕಾಳಜಿಯಿಂದ ಮೂಡಿದ ಉತ್ಕಟ ಅಭಿವ್ಯಕ್ತಿಗಳಷ್ಟೇ.. ಜವಹರಲಾಲ್ ನೆಹರೂ – ವೆರಿಯರ್ ಎಲ್ವಿನ್ ವಿಧಾನದಲ್ಲಿ ಸೂಚ್ಯವಾಗಿರುವ ಆದಿವಾಸಿಗಳ ಸ್ಮಾರಕೀಕರಣದ (museumisation) ವಿರುದ್ಧ ಲೋಹಿಯಾ ಅವರ ಪ್ರತಿಭಟನೆಯು ಸಮಕಾಲೀನ ಮಾನವಶಾಸ್ತ್ರಜ್ಞರಿಂದ ಗಮನಿಸಲ್ಪಟ್ಟಿಲ್ಲ.

ಲೋಹಿಯಾ ಅವರ ವಿಚಾರಗಳಿಗೆ ಸಾಕಷ್ಟು ಗಮನ ನೀಡದೇ ಇರುವುದು ಅವರ ಬೌದ್ಧಿಕ ಜೀವನ ಚರಿತ್ರೆಯ ಅಸಮರ್ಪಕ ಓದಿನಲ್ಲೂ ಕೂಡ ಪ್ರತಿಫಲಿಸಲ್ಪಟ್ಟಿದೆ. ತಮ್ಮ ವಿಚಾರಗಳ ಮೂಲವನ್ನು ಸೂಚಿಸುವಲ್ಲಿ ಅವರು ಅತ್ಯಂತ ಎಚ್ಚರಿಕೆ ವಹಿಸಿದ್ದರೆ, ಅವರ ಅನುಯಾಯಿಗಳು ಅವರನ್ನು ಕಾರ್ಲ್‌ಮಾರ್ಕ್ಸ್ ಮತ್ತು ಗಾಂಧಿಯವರನ್ನು ಹೊರತುಪಡಿಸಿ ಇತರೆ ಯಾರಿಂದಲೂ ಕಲಿತ ಪೂರ್ವನಿದರ್ಶನ ಇಲ್ಲದ ವಿಗ್ರಹಭಂಜಕ ಎಂಬಂತೆ ನೋಡುವುದನ್ನು ಮುಂದುವರಿಸಿಯೇ ಇದ್ದಾರೆ. ಇದು ಅವರ ಜರ್ಮನ್ ಮೂಲದ ಬಗೆಗೆ, ೧೯೩೦ ಮತ್ತು ೧೯೪೦ರ ಕಾಲದಲ್ಲಿ ಅವರ ವಿಚಾರಗಳು ವಿಕಾಸವಾದದ್ದರ ಮತ್ತು ಅಂಬೇಡ್ಕರ್ ಹಾಗೂ ಪೆರಿಯಾರ್ ಅವರುಗಳ ಜೊತೆಗಿನ ಅವರ ಸಂವಾದವು ಅವರ ಮೇಲೆ ಉಂಟುಮಾಡಿದ ಪರಿಣಾಮಗಳ ಬಗ್ಗೆ ಸಾಕಷ್ಟು ಗಮನ ದೊರೆಯದಿರುವುದಕ್ಕೆ, ಕಾರಣವಾಗಿದೆ. ಲೋಹಿಯಾ ಅವರ ವಿಚಾರಗಳು ಜಯಪ್ರಕಾಶ್ ನಾರಾಯಣ್, ಅಶೋಕ ಮೆಹ್ತಾ ಮುಂತಾದ ಅವರ ಸ್ವಂತ ಸಹವರ್ತಿಗಳ ಅಂತರಿಕ ವಿಮರ್ಶೆಯ ರೂಪದಲ್ಲಿ ಮೂಡಿತು ಎಂಬುದು ಚೆನ್ನಾಗಿ ಗೊತ್ತಿರುವ ವಿಚಾರವೇ. ಅದನ್ನು ವಿವರವಾಗಿ ಪ್ರತಿಪಾದಿಸುವುದಕ್ಕೆ ಅವರಿಗೆ ಇಚ್ಛೆ ಇರಲಿಲ್ಲ. ಆದರೆ ಲೋಹಿಯೋತ್ತರ ವಿದ್ವಾಂಸರೂ ಇದನ್ನು ಮಾಡಲಿಲ್ಲ. ಅವರು ಗೌರವದಿಂದ ಅಂಗೀಕರಿಸುತ್ತಿದ್ದ ಸೋಷಿಯಲಿಸ್ಟ್ ಪಕ್ಷದ ಒಬ್ಬ ನಾಯಕರಾದ ನರೇಂದ್ರ ದೇವ ಅವರಿಂದ ಲೋಹಿಯಾ ಅವರು ಹೇಗೆ ಕಲಿತರೆಂಬುದರ ಬಗ್ಗೆ ನಮಗೆ ಹೆಚ್ಚು ತಿಳಿದಿಲ್ಲ. ಒಟ್ಟಾರೆ ಲೋಹಿಯಾ ಅವರನ್ನು ಅವರ ಬೌದ್ಧಿಕ ಪರಿಪ್ರೇಕ್ಷ್ಯದಲ್ಲಿ, ವಿಶೇಷವಾಗಿ, ಭಾರತದ ೨೦ನೆಯ ಶತಮಾನದ ಸಮಾಜವಾದಿ ಪರಿವೇಶದಲ್ಲಿ ಇರಿಸುವುದು ಆಗಬೇಕಾಗಿರುವ ಕೆಲಸ

ಇದು ಲೋಹಿಯಾ ಅವರ ನಿಜವಾದ ಕೊಡುಗೆಯನ್ನು ನಿರ್ಣಯಿಸಲು ಅವರ ವಿಚಾರಗಳ, ಅವರ ರಾಜಕಾರಣದ ತಿಳುವಳಿಕೆಯುಳ್ಳ ವಿಮರ್ಶೆಯನ್ನು ಅಭಿವೃದ್ಧಿಪಡಿಸುವ ಗಂಭೀರವಾದ ಸವಾಲಿಗೆ ಸಂಬಂಧ ಪಟ್ಟಿದ್ದು. ತಮ್ಮ ಬರಹಗಳು ಒಂದು ಸಿದ್ಧಗೊಂಡ ಭಾಗ ಎಂಬುಕ್ಕಿಂತ ಹೆಚ್ಚಾಗಿ ಅವು ಕರಡು ಪ್ರತಿ, ರೂಪುರೇಷೆ ಮಾತ್ರ ಎಂಬುದನ್ನು ಲೋಹಿಯಾ ಅವರೇ ಒಪ್ಪಿಕೊಳ್ಳುತ್ತಿದ್ದರು. ಇದು ಲೋಹಿಯಾ ಅವರ ಚಿಂತನೆಗಳಲ್ಲಿ ಬಿಟ್ಟ ಸ್ಥಳಗಳನ್ನು ತುಂಬಿಸುವ, ಬರೀ ಸುಳಿವುಗಳನ್ನು ಮಾತ್ರ ನೀಡಿರುವ ಪರಿಸರ ಮತ್ತು ತಂತ್ರಜ್ಞಾನಗಳ ಕ್ಷೇತ್ರಗಳನ್ನು ವಿಸ್ತರಿಸುವ ಕೆಲಸವನ್ನು ಬೇಡುತ್ತದೆ. ಕೆಲವು ಆಲೋಚನೆಗಳು ಇತರೆಯವುಗಳಿಗಿಂತ ಭಿನ್ನವಾಗಿ ನಿಲ್ಲುವ

ಅವರ ಚಿಂತನೆಗಳನ್ನು ಸಮನ್ವಯಗೊಳಿಸುವ ಕೆಲಸದ ಅಗತ್ಯವೂ ಇದೆ. ಚೀನೀ ಆಕ್ರಮಣಕ್ಕೆ ಅವರ ಶಾಂತಿವಾದ, ಮತ್ತು ಆಕ್ರಮಣಕಾರಿ ಪ್ರತಿಕ್ರಿಯೆಗಳು, ಸಂಸ್ಕೃತಿಗಳ ಏಕೀಕರಣಕ್ಕೆ ಅವರ ವಿರೋಧ ಮತ್ತು ಕೆಲವು ಸಣ್ಣ ಭಾಷೆಗಳ ಮತ್ತು ಈಶಾನ್ಯ ಭಾಷೆಗಳ ಸಮೀಕರಣದ ಪ್ರತಿಪಾದನೆ, ವಿಚಾರಗಳು ಪಾಕಿಸ್ತಾನ ಅಥವಾ ಈಶಾನ್ಯ ಭಾರತದಲ್ಲಿ ಭಾರತದ ವಿಸ್ತರಣೆಗೆ ಸಂಬಂಧಿಸಿದ್ದಾಗ ಅವರ ಸರ್ವಮುಕ್ತಿ ತತ್ವ ಮತ್ತು ಪ್ರಾಂತೀಯ ರಾಷ್ಟ್ರೀಯತೆಯ ಪ್ರತಿಪಾದನೆ ಅವರ ಚಿಂತನೆಗಳ ಸ್ವಯಂವೈರುಧ್ಯಕ್ಕೆ ಉದಾಹರಣೆಗಳು. ವೇಗವಾಗಿ ಜಾಗತಿಕವಾಗುತ್ತಿರುವ, ಸೋವಿಯತೋತ್ತರ ಪ್ರಪಂಚದಲ್ಲಿ ಲೋಹಿಯಾ ಅವರ ರಾಜಕಾರಣವನ್ನು ಮರುನಿರ್ಮಿಸುವುದು ಇನ್ನೂ ಹೆಚ್ಚಿನ ಗಮನ ಅಪೇಕ್ಷಿಸುವ ಕಾರ್ಯವಾಗುವುದು. ಮಧು ಲಿಮಯೆ ಮತ್ತು ಕಿಷನ್ ಪಟ್ನಾಯಕ್ ಅವರ ಬರಹಗಳಲ್ಲಿ ಇಂತಹ ಪ್ರಯತ್ನದ ಹೊಳಹುಗಳು ಕಾಣುತ್ತವೆ. ಅದರೆ ಇವು ನಿಯಮ ಎನ್ನುವುದಕ್ಕಿಂತ ವಿನಾಯಿತಿ ಎನ್ನಬಹುದು.

ಚಿಂತಕ/ನಾಯಕ

ಕೊನೇ ಪಕ್ಷ ಅಂಶಿಕವಾಗಿಯಾದರೂ ಲೋಹಿಯ ಅವರ ಬಗೆಗಿನ ವಿಕೃತ ನೆನಪು ಒಬ್ಬ ಚಿಂತಕರಾಗಿ ಲೋಹಿಯಾ ಮತ್ತು ರಾಜಕಾರಣಿಯಾಗಿ ಲೋಹಿಯಾ– ಇವುಗಳ ನಡುವಿನ ಮೂಲಭೂತ ವ್ಯತ್ಯಾಸದಿಂದ ಬಂದಿದೆ. ಇದು ಉನ್ನತ ತತ್ವ ಮತ್ತು ಕನಿಷ್ಠ ಆಚರಣೆಯಿಂದಾಗಿನ ರಾಜಕೀಯ ಪ್ರಪಂಚದಲ್ಲಿನ ಬೂಟಾಟಿಕೆಯ ಕಾರಣದಿಂದ ಬರುವ ಮಾಮೂಲು ಕರ್ಷಣೆ ಅಲ್ಲ. ತಮ್ಮ ಸಮಕಾಲೀನರಿಗೆ ಲೋಹಿಯಾ ಅವರನ್ನು ಆಕರ್ಷಕವನ್ನಾಗಿ ಮಾಡಿದ್ದ–ಅವರ ವಿರೋಧಿಗಳಿಗೆ ಅಸ್ವಸ್ಥತೆಯನ್ನು ಉಂಟು ಮಾಡುತ್ತಿದ್ದ–ಅಂಶವೆಂದರೆ ಅವರಲ್ಲಿ ಬೂಟಾಟಿಕೆ ಇಲ್ಲದಿದ್ದುದು. ಅವರು ಯೋಚಿಸುತ್ತಿದ್ದ ಹಾಗೆ ಬರೆಯುತ್ತಿದ್ದರು, ಮಾತನಾಡುತ್ತಿದ್ದರು, ಅದನ್ನವರು ಸಾರ್ವಜನಿಕವಾಗಿ ಮಾಡಿ ತಮ್ಮ ನಂಬಿಕೆಗಳಿಗೆ ಬೆಲೆಯನ್ನು ತೆರಲು ಸಿದ್ಧವಿದ್ದರು. ಅವರು ಇತರರಿಗೆ ಏನನ್ನು ಬೋಧಿಸುತ್ತಿದ್ದರೋ ಅದನ್ನು ತಮ್ಮ ಜೀವನದಲ್ಲೇ ಆಚರಿಸುತ್ತಿದ್ದರು. ಅವರ ರಾಜಕೀಯ ಕಾರ್ಯಕ್ರಮಗಳು ಅವರ ಸಿದ್ಧಾಂತಗಳಿಂದ ಮೂಡುತ್ತಿದ್ದವು. ತಮ್ಮದೇ ಪಕ್ಷವು ತತ್ವಗಳಿಂದ ದೂರ ಸರಿದಾಗ ಅವರು ಕಟುವಾಗಿ ಟೀಕಿಸುತ್ತಿದ್ದರು. ಚಿಂತಕ ಲೋಹಿಯಾ ಮತ್ತು ನಾಯಕರಾದ ಲೋಹಿಯಾ ಅವರ ನಡುವೆ ಇದ್ದ ಕಂದಕವು ಮನೋಭಾವ ಮತ್ತು ಶೈಲಿಗಳ ವಿಷಯಕ್ಕೆ ಸಂಬಂಧಿಸಿದ್ದು. ಚಿಂತಕ ಲೋಹಿಯಾ ಸಂಕೋಚ ಪ್ರವೃತ್ತಿಯ(self conscious) "ತಾತ್ವಿಕ ಉದಾರವಾದಿ" ವ್ಯಕ್ತಿಯಾಗಿದ್ದರೆ, ನಾಯಕ ಲೋಹಿಯಾ "ಲೌಕಿಕ ತೀವ್ರವಾದಿ" ವ್ಯಕ್ತಿಯಾಗಿದ್ದರು ಮತ್ತು ಅವರು ಬುದ್ಧಿಪೂರ್ವಕವಾಗಿಯೇ ಹಾಗಿರುತ್ತಿದ್ದರು(ಮಾರ್ಕ್ಸ್, ಗಾಂಧಿ, ಮತ್ತು ಸಮಾಜವಾದ : xxi). ಚಿಂತಕರಾಗಿ ಅವರು ಬೌದ್ಧಿಕ ಭಿನ್ನಾಭಿಪ್ರಾಯಗಳ ಬಗ್ಗೆ ಅಪಾರವಾದ ಸಹನೆ ಹೊಂದಿರುತ್ತಿದ್ದರು.

ವಿರುದ್ಧವಾದ ದೃಷ್ಟಿಕೋನಗಳನ್ನು ಸಂಶ್ಲೇಷಿಸಲು ಪಯತ್ನಿಸಿದರೆ ಒಬ್ಬ ನಾಯಕರಾಗಿ ಅವರು ಅಸಹನೆಯುಳ್ಳವರಾಗಿ ಪಕ್ಷಪಾತಿಯಾಗಿ ವಿಭಜಕ ಪ್ರಭಾವವಾಗಿ ಕಂಡುಬರುತ್ತಿದ್ದರು. ಚಿಂತಕರಾಗಿ ಅವರು ಸಾಕ್ಷಿಗಳನ್ನು ಸಂಗ್ರಹಿಸುವ ವಿಚಾರದಲ್ಲಿ ನಿಖರವಾಗಿದ್ದು, ಅವನ್ನು ತೂಗಿನೋಡುವಲ್ಲಿ ಜವಾಬ್ದಾರಿಯುತವಾಗಿದ್ದು, ತಾವು ಹೇಳಿದ್ದನ್ನು ನಿರೂಪಿಸುತ್ತಿದ್ದರು. ನಾಯಕರಾಗಿ ತ್ವರಿತ ತೀರ್ಮಾನ, ಪ್ರಬಲವಾದ ನಿರ್ಣಯ, ಕೆಟ್ಟ ಕೋಪ ಅವರ ಲಕ್ಷಣಗಳಾಗಿರುತ್ತಿದ್ದವು.

ಇಂದು ಲೊಹಿಯಾ ಅವರ ಬಗೆಗಿನ ಸಾಮೂಹಿಕ ನೆನಪು ಬಹುತೇಕ ಅವರ ರಾಜಕಾರಣಿ ಜೀವನವನದಿಂದ ಹೆಕ್ಕಿ ತೆಗೆದ ಪ್ರಸರ ಸಮಯಗಳಿಂದ ಮೂಡಿದ್ದರೆ, ಭಾಗಶಃ ಅದಕ್ಕೆ ಕಾರಣ ಅವರ ರಾಜಕೀಯ ನಡೆಗಳು ಮತ್ತು ಕಾರ್ಯಕ್ರಮಗಳು ಪ್ರತ್ಯಕ್ಷವೂ ಮತ್ತು ಅವರ ವಿಚಾರಗಳಿಗಿಂತಲೂ ಹೆಚ್ಚಾಗಿ ನೆನಪಿಸಿಕೊಳ್ಳಲು ಸುಲಭವೂ ಆಗಿದ್ದು, ವಾಸ್ತವದಲ್ಲಿ ಲೋಹಿಯಾ ಅವರು ಬಯಸಿದ್ದೂ ಅದು ಹೀಗಿರಬೇಕೆಂಬುದನ್ನೇ. ಬಹುಶಃ ಏಕೆಂದರೆ ಅವರು ತಮ್ಮ ಕೆಲವು ದೂರದೃಷ್ಟಿಯ ವಿಚಾರಗಳ ತಕ್ಷಣದ ಸೀಮಿತ ಪರಿಣಾಮಗಳ ಬಗ್ಗೆ ಅರಿತಿದ್ದರು. ಅವರ ಕ್ರಿಯೆಗಳ ರಾಜಕೀಯ ಸಾಂಕೇತಿಕತೆಯು ಅವುಗಳ ಗಮನಸೆಳೆಯುವ ಮತ್ತು ನೆನಪಿನಲ್ಲಿ ಉಳಿಯುವ ಮೌಲ್ಯಗಳಿಗಾಗಿ, ಅವರ ವಿಚಾರಗಳನ್ನು ಅರ್ಥಮಾಡಿಕೊಳ್ಳಲಾಗದ ಹಿಂಬಾಲಕರನ್ನು ಗಳಿಸುವ ಉದ್ದೇಶದಿಂದ ರಚಿಸಲ್ಪಟ್ಟಿದ್ದವು. ಲೋಹಿಯಾ ಅವರ ಅನುಯಾಯಿಗಳೇ ಅವರ ರಾಜಕೀಯ ಕ್ರಿಯೆಯಲ್ಲಿ ಸುಪ್ತವಾಗಿದ್ದ 'ದೌರ್ಬಲ್ಯ'ವನ್ನು ತಮ್ಮ ನಡೆ ನುಡಿಗಳಲ್ಲಿ ಎತ್ತಿತೋರಿಸುವ ಮೂಲಕ, ಅವರ ವಿಚಾರಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವ ಪದಗುಚ್ಛಗಳ ಮಟ್ಟಕ್ಕೆ ಇಳಿಸುವ ಮೂಲಕ ಈ ವಿಕೃತಿಗೆ ಕೊಡುಗೆ ನೀಡಿದ್ದಾರೆ.

ಏನೇ ಅದರೂ ಇಂದು ಲೋಹಿಯಾ ಅವರನ್ನು ಹೇಗೆ ನೆನಪಿಸಿಕೊಳ್ಳಲಾಗುತ್ತಿದೆಯೋ ಅದಕ್ಕೆ ಕಾರಣವನ್ನು ಹುಡುಕುವುದಾದರೆ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅಭಿಪ್ರಾಯ ನಿರ್ಮಾಣ ಮಾಡುವ ವರ್ಗದೊಂದಿಗೆ ಅವರು ಸಂಬಂಧ ಕಳೆದುಕೊಂಡಿದ್ದೇ ಆಗಿರಬೇಕು. ಅವರು ಈ ಅಭಿಪ್ರಾಯ ನಿರ್ಮಾಣ ಮಾಡುವ ವರ್ಗವು ಎಂದೂ ಕ್ಷಮಿಸಲಾರದ ತಮ್ಮ ಮೂರು "ಪಾಪಗಳಿಗಾಗಿ" ಬೆಲೆ ತೆರಬೇಕಾಯಿತು–ನೆಹರೂ ಅವರನ್ನು ದೇವರಂತೆ ಕಾಣಲಾಗುತ್ತಿದ್ದ ಕಾಲದಲ್ಲಿ ಪದೇ ಪದೇ ಅವರ ಮೇಲೆ ವೈಯಕ್ತಿಕ ಮಟ್ಟದಲ್ಲಿ, ಕಟುವಾಗಿ ದಾಳಿ ಮಾಡುತ್ತಿದ್ದರು, ಕಂದು ಸಾಹೇಬ ರಾಗಿರುವವರಿಗೆ ಬಹಳ ಬೆಲೆಯಿದ್ದ ವಸಾಹತೋತ್ತರ ಸಂಸ್ಕೃತಿಯಲ್ಲಿ ಇಂಗ್ಲಿಷ್‌ನ ವಿರುದ್ಧವಾಗಿ, ನಿರಂತರ, ಪ್ರಬಲ ಪ್ರಚಾರ ನಡೆಸಿದರು, ಮೇಲ್ವರ್ಗದ ಪ್ರಾಬಲ್ಯವನ್ನು ಸಾರ್ವಜನಿಕವಾಗಿ ಪ್ರಶ್ನಿಸಿದರು, ಜಾತಿಯ ಬಗ್ಗೆ ಮಾತನಾಡುವುದು ನಿಷೇಧವಾಗಿದ್ದ ಕಾಲದಲ್ಲಿ ಅವರು ಜಾತ್ಯಾಧಾರಿತ ಸಕಾರಾತ್ಮಕ ಕ್ರಿಯೆಯ ಪರ ವಾದಿಸಿದರು. ಕಾಂಗ್ರೆಸ್‌ನಿಂದ ಹಿಡಿದು ಕಮ್ಯೂನಿಸ್ಟರವರೆಗೆ ಇಂಗ್ಲಿಷ್ ಮಾತನಾಡುವ

ಮೇಲುವರ್ಗಕ್ಕೆ ಲೋಹಿಯಾ ಅವರು ಬೇಡದ ವ್ಯಕ್ತಿಯಾಗಿದ್ದುದು ಆಶ್ಚರ್ಯದ ವಿಷಯವಲ್ಲ. ನೆಹರೂ-ಎಡ ಪ್ರಾಬಲ್ಯದ ಶೈಕ್ಷಣಿಕವಲಯ ಮತ್ತು ಮಾಧ್ಯಮವು ಲೋಹಿಯಾ ಅವರ ವ್ಯಂಗ್ಯ ಚಿತ್ರವೇ ಅವರ ಪ್ರಧಾನ ಚಿತ್ರವಾಗುವಂತೆ ನೋಡಿಕೊಂಡವು.

ಲೋಹಿಯಾ ಅವರ ಜನ್ಮಶತಮಾನೋತ್ಸವದೊಂದಿಗೆ ಬೆಸೆದುಕೊಂಡಿರುವ ಬಿರುಸಿನ ಚಟುವಟಿಕೆಗಳು ಇದನ್ನು ಬದಲಾಯಿಸಬಹುದೇ? ಲೋಹಿಯಾ ಅವರ ಜನ್ಮಶತಮಾನೋತ್ಸವಕ್ಕೆ ಸಂಬಂಧಿಸಿದಂತೆ ಹಲವಾರು ಚಟುವಟಿಕೆಗಳು ಇತ್ತೀಚೆಗೆ ಎಂದೂ ಇಲ್ಲದಿದ್ದ ರೀತಿಯಲ್ಲಿ ಲೋಹಿಯಾ ಅವರ ಜೀವನ ಮತ್ತು ಕೃತಿಗಳ ಕಡೆ ಗಮನ ಹರಿಸಲು ಕಾರಣವಾಗಿವೆ. ಅದರೆ ಈ ಗಮನವು ರಾಜಕೀಯ ಕಾರ್ಯಕರ್ತರ, ಅಭಿಪ್ರಾಯ ನಿರ್ಮಿಸುವವರ ಸಣ್ಣ ವಲಯದ ಆಚೆಗಿನ ಯುವ ವರ್ಗದ ಪ್ರಜೆಗಳಿಗೆ, ಕಾರ್ಯಕರ್ತರಿಗೆ, ವಿದ್ವಾಂಸರಿಗೆ ಹರಡಿದೆಯೇ ಎಂಬುದು ಸ್ಪಷ್ಟವಾಗಿಲ್ಲ. ಜನ್ಮ ಶತಮಾನೋತ್ಸವದ ಚಟುವಟಿಕೆಗಳು ಅವುಗಳ ಬಹಳಷ್ಟು ಶಕ್ತಿಯನ್ನು ಲೋಹಿಯಾ ಅವರ ನೇತ್ಯಾತ್ಮಕ ಚಿತ್ರಣಕ್ಕೆ ಕಾರಣರಾದ ಅವರ ವಾರಸುದಾರರಿಂದಲೇ ಪಡೆಯ ಬೇಕಾಗಿದೆ. ಇದೂ ಅಲ್ಲದೆ ಈ ಹೊಸ ಗಮನದ ಬಹುಪಾಲು ಅವರ ವಿಚಾರಗಳಿಗಿಂತ ಹೆಚ್ಚಾಗಿ ಅವರ ವ್ಯಕ್ತಿತ್ವ ಮತ್ತು ರಾಜಕೀಯ ಚಟುವಟಿಕೆಗಳ ಮೇಲೆ ಕೇಂದ್ರೀಕರಿಸಲ್ಪಟ್ಟಿದೆ. ಖಚಿತವಾಗಿ ಹಿಂದಿಯಲ್ಲಿ ಅವರ ಬರಹಗಳ, ಮತ್ತು ಅನುವಾದಗಳ ಒಂಭತ್ತು ಸಂಪುಟಗಳ ಕೃತಿ 'ರಚನಾವಳಿ' ಮತ್ತು ಬಹಳ ದಿನಗಳಿಂದ ನಿರೀಕ್ಷಿಸಲಾಗುತ್ತಿದ್ದ ಅವರ ಇಂಗ್ಲಿಷ್ ಬರಹಗಳ ಸಂಗ್ರಹ ಒಂದು ಮಹತ್ವಪೂರ್ಣ ಮೈಲಿಗಲ್ಲು. ಈ ಹಂತದಲ್ಲಿ ನಾವು ಅಂಬೇಡ್ಕರ್ ಅವರ ಜನ್ಮಶತಮಾನೋತ್ಸವದ ವಿಚಾರದಲ್ಲಿ ನಡೆದಂತೆ ಲೋಹಿಯಾ ಅವರ ಬಗೆಗೂ ಈ ಜನ್ಮಶತಮಾನೋತ್ಸವು ಲೋಹಿಯಾ ಅವರ ಬಗೆಗಿನ ಆಸಕ್ತಿ ಹೆಚ್ಚುವಂತೆ ಮಾಡುತ್ತದೆ ಮತ್ತು ಈ ಸಂಪನ್ಮೂಲವು ಲೋಹಿಯಾ ಅಭಿಮಾನಿಗಳ ಸಣ್ಣ ವಲಯದ ಆಚೆಗೂ ಬಳಕೆಯಾಗಬಹುದು ಎಂದು ಆಶಿಸಬಹುದು. ಆಧುನಿಕ ಭಾರತೀಯ ರಾಜಕೀಯ ಚಿಂತನೆಯ ಅಧ್ಯಯನದ ಪುನರುತ್ಥಾನದ ಪ್ರಾರಂಭದಂತೆ ಏನು ಕಾಣುತ್ತಿದೆಯೋ ಅದರಿಂದಲೂ ನಾವು ತುಸು ನಂಬಿಕೆಯನ್ನು ಪಡೆದುಕೊಳ್ಳಬಹುದು. ಇವೆಲ್ಲವುಗಳ ಜೊತೆ ಮೂಲಭೂತ ರಾಜಕೀಯ ವಲಯಗಳಲ್ಲಿ ಲೋಹಿಯಾ ಅವರ ಬಗ್ಗೆ ಬೆಳೆಯುತ್ತಿರುವ ರಾಜಕೀಯ ಕುತೂಹಲವು ಸೇರಿದರೆ ಅವರ ರಾಜಕಾರಣ ಮತ್ತು ವಿಚಾರಗಳ ಬಗೆಗಿನ ಒಂದು ಗಂಭೀರವಾದ, ಸೂಕ್ಷ್ಮವಾದ ಪಾಂಡಿತ್ಯವು ಮೂಡಬಹುದು ಎಂದು ನಂಬಬಹುದು.

(ಯೋಗೇಂದ್ರ ಯಾದವ್ ನಮ್ಮ ನಡುವಿನ ಸಮರ್ಥ ರಾಜಕೀಯ ಚಿಂತಕರೂ, 'ಸ್ವರಾಜ್ ಇಂಡಿಯಾ' ಅಭಿಯಾನ'ದ ರಾಷ್ಟ್ರೀಯ ಸಂಚಾಲಕರೂ ಆಗಿದ್ದಾರೆ)

(ಕನ್ನಡಕ್ಕೆ: ಎಂ. ರಾಜು).

◆◆

ಅನುಬಂಧ

ಭಾರತದ ವಿಭಜನೆಯ ಅಪರಾಧಿಗಳು

(ಆಯ್ದ ಭಾಗ)

ರಾಮಮನೋಹರ ಲೋಹಿಯಾ

ಭಾರತದ ವಿಭಜನೆಯಾದದ್ದು ೧೯೪೭ರಲ್ಲಿ. ಅದು ಭಾರತದ ಸ್ವಾತಂತ್ರ್ಯದ ಸವಿಯನ್ನೇ ಕೆಡಿಸಿತ್ತು. ಇದರ ಪರಿಣಾಮಗಳನ್ನು ನಾವು ಹಲವು ರೂಪಗಳಲ್ಲಿ ಇಂದೂ ಎದುರಿಸುತ್ತಿದ್ದೇವೆ. ದೇಶದಲ್ಲಿ ಪದೇ ಪದೇ ಸ್ಫೋಟಗೊಳ್ಳುವ ಕೋಮು ಗಲಭೆಗಳು, ಕೋಮುವಾದಿ ರಾಜಕಾರಣ ಮತ್ತು ಕಾಶ್ಮೀರದ ಸಂಕಟಗಳು ಈ ವಿಭಜನೆ ಕೃತಕ, ಹಾಗಾಗಿ ಅಸ್ಥಿರ ಮತ್ತು ಅಪೂರ್ಣವೂ ಆಗಿದೆ ಎಂಬುದನ್ನು ಸೂಚಿಸುತ್ತಿರುವಂತಿದೆ. ವಿಭಜನೆ ಎಂಬ ಈ ದುರಂತದ ಕಥೆಯನ್ನ ಈವರೆಗೆ ಹಲವಾರು ಜನ ಸಾಕ್ಷಿದಾರರಾಗಿ, ಇನ್ನು ಕೆಲವರು ಇತಿಹಾಸಕಾರರಾಗಿ ವಿವಿಧ ಆವೃತ್ತಿಗಳಲ್ಲಿ ಹೇಳಿದ್ದಾರೆ. ಸ್ವಾತಂತ್ರ ಹೋರಾಟಗಾರ ಮತ್ತು ಸಮಾಜವಾದಿ ನಾಯಕ ಡಾ.ರಾಮಮನೋಹರ ಲೋಹಿಯಾ ವಿಭಜನೆಯ ಸಾಕ್ಷಿದಾರರಾಗಿ ತಮ್ಮ **Guilty men of partition** ಪುಸ್ತಕದ ಮೂಲಕ ತಮ್ಮ ಆವೃತ್ತಿಯನ್ನು ದಾಖಲಿಸಿದ್ದಾರೆ.

ಹಾಗೆ ನೋಡಿದರೆ ಈ ಪುಸ್ತಕ ವಿಭಜನೆಯನ್ನು ಕುರಿತ ನಿರೂಪಣೆಯಲ್ಲ. ಅವರು ಮೌಲಾನಾ ಅಬ್ದುಲ್ ಕಲಾಂ ಆಜಾದ್ ಅವರ **India wins freedom** ಎಂಬ ಪುಸ್ತಕವನ್ನು ವಿಮರ್ಶಿಸುತ್ತಾ ಆರಂಭಿಸಿ ಅದು ಏಕೋ ಈ ಕಥೆಯಾಗಿ ಮಾರ್ಪಾಡಾಯಿತು ಎನ್ನುತ್ತಾರೆ. ವಿಭಜನೆಯ ನಿರ್ಣಯದ ಬಗ್ಗೆ ಚರ್ಚಿಸಲು ಸೇರಿದ್ದ

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಗೆ ವಿಶೇಷ ಆಹ್ವಾನಿತರಾಗಿ ಹೋಗಿದ್ದ ಲೋಹಿಯಾ ಈ ಕಥೆಯನ್ನು ಸಾಕ್ಷಿದಾರರಾಗಿ ಹೇಳುವಾಗಲೂ, ನಿರ್ಭಿಡೆಯೂ ನಿಷ್ಠುರವೂ ಆದ ಶೈಲಿಯಲ್ಲಿ ಹೇಳಿದ್ದಾರೆ. ಅವರ ಪ್ರಕಾರ ಈ ವಿಭಜನೆಗೆ ಕ್ರಮವಾಗಿ ಈ ಎಂಟು ಕಾರಣಗಳಿವೆ; ಬ್ರಿಟಿಷರ ಕುತಂತ್ರ, ಕಾಂಗ್ರೆಸ್ ನಾಯಕತ್ವದ ಇಳಿ ವಯಸ್ಸಿನ ಬಳಲಿಕೆ, ಹಿಂದೂ-ಮುಸ್ಲಿಂ ದಂಗೆಯ ವಸ್ತುನಿಷ್ಠ ಪರಿಸ್ಥಿತಿ, ಜನತೆಯಲ್ಲಿನ ದೃಢನಿಶ್ಚಯ ಮತ್ತು ಕಸುವಿನ ಕೊರತೆ, ಗಾಂಧೀಜಿಯ ಅಹಿಂಸೆ, ಮುಸ್ಲಿಂಲೀಗ್‌ನ ಪ್ರತ್ಯೇಕತಾವಾದ, ಅವಕಾಶ ಎದುರಾದಾಗ ಅದನ್ನು ಸದ್ಬಳಕೆ ಮಾಡಿಕೊಳ್ಳುವ ಅಸಾಮರ್ಥ್ಯ ಮತ್ತು ಹಿಂದೂ ಗರ್ವ ಇದನ್ನು ಈ ಪುಸ್ತಕದಲ್ಲಿ ಲೋಹಿಯಾ ವಿವರಿಸಿದ್ದಾರೆ. ಈ ಪುಸ್ತಕದ ಒಂದು ಸಣ್ಣ ಮುಖ್ಯ ಭಾಗವನ್ನು ಆಯ್ದು ಅನುವಾದಿಸಿ ಇಲ್ಲಿ ನೀಡಲಾಗಿದೆ.)

ತಾವು ನಿರ್ಗಮಿಸುತ್ತಿರುವ ಇಂಡಿಯಾದಿಂದ ಗರಿಷ್ಠ ಮಟ್ಟದ ಲಾಭ ಪಡೆಯುವ ಉದ್ದೇಶದ ಯೋಜನೆಗಳನ್ನು ಸಿದ್ಧಪಡಿಸಿ, ಜಾರಿಗೊಳಿಸುವುದು ಬ್ರಿಟಿಷರಿಗೆ ಸಹಜವಾಗಿತ್ತು. ಅದು ಈ ದೇಶವನ್ನು ಎಷ್ಟು ಘಾಸಿಗೊಳಿಸಿದರೂ ಸರಿಯೇ. ದೇಶ ವಿಭಜನೆಯ ಯೋಜನೆಯು ಇನ್ನಿತರ ಕೆಲವು ಯೋಜನೆಗಳಂತೆಯೇ ಈ ದೇಶವನ್ನು ಘಾಸಿಗೊಳಿಸಿತ್ತು. ಇದು ಭಾರತದ ಮಣ್ಣಿನ ಮೇಲಿನ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕೊನೆಯ ಮತ್ತು ಅತಿ ನಾಚಿಕೆಗೇಡಿನ ಕೃತ್ಯವಾಗಿತ್ತು. ಕಾಲಚಕ್ರ ಉರುಳಿದಂತೆ, ತಾವಾಗಿಯೇ ನೀಡಿದ ಸ್ವಾತಂತ್ರದ ಥಳುಕಿನ ಕೀರ್ತಿ, ನೆಮ್ಮದಿಗೆಡಿಸಿರುವ ದೇಶ ವಿಭಜನೆಯ ಕುಖ್ಯಾತಿಯ ಎದುರು ಮಾಸುತ್ತಾ ಹೋಗುತ್ತದೆ.

ಸ್ವಾತಂತ್ರ್ಯ ಚಳುವಳಿಯ ನಾಯಕತ್ವ, ಸಾಮ್ರಜ್ಯಶಾಹಿಯ ಈ ಕುಖ್ಯಾತಿಯ ಯೋಜನೆಯಲ್ಲಿ ಪಾಲ್ಗೊಳ್ಳುವಷ್ಟು ದುಷ್ಟವಾದದ್ದಾದರೂ ಹೇಗೆ ಎಂದು ಇತಿಹಾಸಜ್ಞರು ಶೋಧಿಸುತ್ತಾರೆ ಮತ್ತು ಅಚ್ಚರಿ ಪಡುತ್ತಾರೆ. ಸರ್ಕಾರಗಳು ರೂಪಿಸುವ ಯೋಜನೆಗಳು, ಸಲಹೆಗಳು ಮತ್ತು ಅವುಗಳನ್ನು ಜಾರಿಗೊಳಿಸುವ ದಲ್ಲಾಳಿಗಳು ಹಾಗೂ ಪ್ರತಿನಿಧಿಗಳ ಬಗ್ಗೆ ಪ್ರಸ್ತಾಪಿಸುತ್ತಲೇ, ಇಂಡಿಯಾದ ಪ್ರಸ್ತುತ ಶತಮಾನದ ರಾಜಕೀಯ ಚಳುವಳಿಗಳು ಯಾವ ರೀತಿಯ ನಿರ್ಲಕ್ಷ್ಯತೆಯಿಂದ ತಮ್ಮ ಯೋಜನೆಗಳನ್ನು ಹಾಗೂ ನಿರ್ಣಯಗಳನ್ನು ಸಿದ್ಧಪಡಿಸಿದರೆಂಬುದರ ಬಗ್ಗೆಯೂ ಯೋಚಿಸಬೇಕಾಗುತ್ತದೆ. ನಿರ್ಣಯವೊಂದನ್ನು ಘೋಷಿಸುವುದು, ನಂತರ ಸುಮ್ಮನೆ ಕುಳಿತು ಪ್ರತಿಕ್ರಿಯೆಗಳನ್ನು ಗಮನಿಸುವುದು ಮತ್ತು ತಮ್ಮ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವ ಪೂರ್ವ ಸಿದ್ಧತೆಗಳನ್ನೂ ಮಾಡದೇ ಯಾವುದೋ ರೀತಿಯ ಅನುಕಂಪ ಸಹಾನುಭೂತಿಗಳ ಸರಮಾಲೆಯಂತೆ, ತಮ್ಮ ನಿರ್ಣಯಗಳಿಗೆ ಅನುಗುಣವಾಗಿ ಸಂಗತಿಗಳು ಘಟಿಸುವವು ಎಂದು ನಿರೀಕ್ಷಿಸುವುದು.

ಇದರ ಬಗ್ಗೆ ಕಿಂಚಿತ್ತೂ ಅರಿವಿರದ ಮಿ. ಆಜಾದ್‌ರು ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಗೆ ಸಂಬಂಧಿಸಿದಂತೆ ತಮ್ಮ ಬಹು ಮೌಲಿಕವಾದ ಸತ್ಯವೊಂದನ್ನು ಹೊರಗೆಡವಿದ್ದಾರೆ. ಬ್ರಿಟಿಷ್ ಸರ್ಕಾರವು ತನ್ನ ಯೋಜನೆಗಳ್ಳು ಕಾಂಗ್ರೆಸ್ ಪಕ್ಷದ

ಮರ್ಜಿಯಂತೆ ಸಿದ್ಧಪಡಿಸಿದ್ದಾರೆಂದು ನಂಬಿದ್ದರಿಂದ ತಮ್ಮ ಉಪಮೇಯಾತ್ಮಕ ಚಿಂತನೆಯಲ್ಲಿ ಪ್ರಾಯಶಃ ಅವರು ಎಡವಿದರೇನೋ. ಮಹತ್ವದ ಘಟನೆಯೊಂದು ಸಂಭವಿಸುವ ಮುನ್ನ, ಸಕ್ರಿಯ ಪೂರ್ವಸಿದ್ಧತೆ ಹಾಗೂ ಸಂಘಟನೆಯ ಕೊರತೆಯಿಂದ ಇಂಡಿಯಾದ ರಾಜಕಾರಣ ನರಳುತ್ತಿರುವುದೇಕೆಂದರೆ, ಬಹುಶಃ ಪೂರ್ವಸಿದ್ಧತೆಯ ಕ್ರಿಯೆ ಹಾಗೂ ಸಂಘಟನೆಯನ್ನು ಕಡೆಗಣಿಸುವ, ಆಡುವ ಮಾತು ಹಾಗೂ ಉತ್ಸುಕತೆಗೆ ನೀಡುವ ಮಿತಿ ಮೀರಿದ ಪ್ರಾಮುಖ್ಯತೆಯಿಂದಲೇ ಇರಬೇಕು. ಮೌಲಾನ್‌ಅಜಾದ್‌ರವರ "ಮಹಾತ್ಮಗಾಂಧಿ ಮತ್ತು ಮಹಾಯುದ್ಧದ ದಿನಗಳು" ಕುರಿತ ವಿಶ್ಲೇಷಣೆಯನ್ನು ಪರಿಶೀಲಿಸುವ ಘಟ್ಟದಲ್ಲಿ ಮತ್ತೆ ಭಾರತದ ಈ ದುಸ್ಥಿತಿಯ ಬಗ್ಗೆ ಪ್ರಸ್ತಾಪಿಸುತ್ತೇನೆ.

ಬ್ರಿಟಿಷರ ಈ ದುಷ್ಕೃತ್ಯದಲ್ಲಿ ಸರ್ದಾರ್ ಪಟೇಲರು ಭಾಗಿಯಾಗಿದ್ದಾದರೂ ಹೇಗೆ? ನಾನು ಇದಕ್ಕೆ ಉತ್ತರವನ್ನು ಊಹಿಸುವುದು, ಅವರ ನಿಕಟವರ್ತಿಯೂ ಅತೀ ಪ್ರಭಾವ ಶಾಲಿಯೂ ಆದ ನೆಹರೂರವರ ನಡಾವಳಿಯನ್ನು ಪರಿಶೀಲಿಸುವ ಮೂಲಕ ಮಾತ್ರ. ಮತ್ತು ಅವರಿಗೆ ಸಂಬಂಧಿಸಿದಂತಹ ಸತ್ಯಾಂಶಗಳು ನನಗೆ ಚೆನ್ನಾಗಿಯೇ ಗೊತ್ತಿರುವುದರಿಂದಲೂ ಕೂಡ. ಇಂತಹದೊಂದು ಪರೀಕ್ಷೆಗೊಳಪಡುವ ಮುನ್ನ, ದೇಶ ವಿಭಜನೆಯ ಯೋಜನೆಯನ್ನು ಅನುಮೋದಿಸಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯ ವಿವರಗಳನ್ನು ನೀಡ ಬಯಸುತ್ತೇನೆ.

ಸಮಾಜವಾದಿಗಳಾದ ನನ್ನನ್ನ ಮತ್ತು ಜಯಪ್ರಕಾಶ್ ನಾರಾಯಣರನ್ನ ಈ ಸಭೆಗೆ ವಿಶೇಷವಾಗಿ ಆಹ್ವಾನಿಸಿದ್ದರು. ನಾವಿಬ್ಬರೂ, ಮಹಾತ್ಮಗಾಂಧಿ ಮತ್ತು ಅಬ್ದುಲ್ ಗಫಾರ್ ಖಾನ್‌ರನ್ನು ಬಿಟ್ಟರೆ ಮತ್ತಿನ್ಯಾರೂ ವಿಭಜನೆಯನ್ನು ವಿರೋಧಿಸಿ ಚಕಾರವೆತ್ತಲಿಲ್ಲ.

ನಮ್ಮೆಲ್ಲರನ್ನೂ ಇಡುಕಿರಿದಿದ್ದ ಆ ಸಣ್ಣ ಕೋಣೆಯ ಮೂಲೆಯೊಂದರ ಖುರ್ಚಿಯಲ್ಲಿ ಆ ಎರಡೂ ದಿವಸ ಕುಳಿತು, ಕೊನೆಯಿಲ್ಲದಂತೆ ಸಿಗರೇಟ್‌ಗಳನ್ನು ದಹಿಸಿ ಹೊಗೆಯುಗುಳುತ್ತಿದ್ದ ಮೌಲಾನಾ ಆಜಾದ್ ಒಂದು ಮಾತನ್ನೂ ಆಡಲಿಲ್ಲ. ಅವರಿಗೆ ನೋವಾಗಿರಬಹುದು. ಆದರೆ ವಿಭಜನೆಯನ್ನು ವಿರೋಧಿಸುತ್ತಿದ್ದುದು ಅವರೊಬ್ಬರೇ ಎಂಬಂತೆ ತೋರ್ಪಡಿಸಿಕೊಳ್ಳುವ ಪ್ರಯತ್ನ ಮಾತ್ರ ಸಣ್ಣತನದ್ದಾಗಿತ್ತು. ಸಭೆಯುದ್ದಕ್ಕೂ ತಮ್ಮ ಮೌನವ್ರತವನ್ನು ಮುರಿಯದ ಅವರು, ನಂತರ ವಿಭಜಿತ ಭಾರತದ ಮಂತ್ರಿ ಪದವಿಯಲ್ಲಿ ಒಂದು ದಶಕಕ್ಕೂ ಹೆಚ್ಚುಕಾಲ ಅಧಿಕಾರ ಅನುಭವಿಸಿದರು. ಅನೌಪಚಾರಿಕ ಮಾತುಕತೆ–ಆಪ್ತ ಸಮಾಲೋಚನೆಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಅವರು ವಿಭಜನೆಯನ್ನು ವಿರೋಧಿಸುತ್ತಿದ್ದರು ಎಂಬುದನ್ನು ಒಪ್ಪಿಕೊಳ್ಳುತ್ತೇನೆ ಮತ್ತು ಅರ್ಥ ಮಾಡಿಕೊಂಡಿದ್ದೇನೆ ಕೂಡ. ಆದರೆ ಅವರ ಈ ವಿರೋಧ, ಯಾವುದನ್ನು ವಿರೋಧಿಸ ಬೇಕೋ ಅದರ ಸೇವೆಯಲ್ಲಿರುವುದಕ್ಕೆ ತಕರಾರನ್ನೇ ಎತ್ತದಂತಹ–ಅವರ ಅಸಾಧಾರಣ ವಿವೇಕ ಅಥವಾ ಅಸಾಧಾರಣ ಹೊಂದಾಣಿಕೆಯ ಮನಸಾಕ್ಷಿಯಲ್ಲಿ–ಒಂದು ವಿಚಿತ್ರ ರೀತಿಯ ವಿರೋಧ ಮತ್ತು ಸೇವೆಯ ಕಲಬೆರಕೆಯಾಗಿತ್ತು. ಮೌಲಾನಾ ಆಜಾದ್‌ರ

ಅಂತಃಸಾಕ್ಷಿಯನ್ನು ಶೋಧಿಸುವುದು ಕುತೂಹಲಕಾರಿಯಾಗಬಹುದು, ಏಕೆಂದರೆ ಬುದ್ಧಿವಂತಿಕೆ ಮತ್ತು ಹೊಂದಾಣಿಕೆ ಜೊತೆಜೊತೆಯಲ್ಲೇ ಸಾಗುತ್ತವೆಯೋ ಎಂದು ಕೆಲವೊಮ್ಮೆ ನಾನು ಸಂಶಯ ಪಡುತ್ತೇನೆ.

ಈ ಸಭೆಯಲ್ಲಿ ಆಚಾರ್ಯ ಕೃಪಲಾನಿ ಶೋಚನೀಯ ಸ್ಥಿತಿಯಲ್ಲಿದ್ದರು. ಅವರು ಕಾಂಗ್ರೆಸ್ ಪಕ್ಷದ ಅಂದಿನ ಅಧ್ಯಕ್ಷರು. ಈ ಸಭೆಯುದ್ದಕ್ಕೂ ತೂಕಡಿಸುತ್ತಾ ಒರಗಿಕೊಂಡು ಕುಳಿತುಬಿಟ್ಟಿದ್ದರು. ಚರ್ಚೆಯ ಒಂದು ಹಂತದಲ್ಲಿ ಮಹಾತ್ಮಗಾಂಧಿ ಬಳಲಿ ಬೆಂಡಾಗಿದ್ದ ಕಾಂಗ್ರೆಸ್ ಅಧ್ಯಕ್ಷರನ್ನು ಗಮನದಲ್ಲಿಟ್ಟು ಪ್ರಸ್ತಾಪಿಸಿದಾಗ ನಾನು ತುಂಬಾ ಮುಜುಗರ ದಿಂದಲೇ ಅವರ ಕೈ ಹಿಡಿದೆಳೆದೆ. ಅತಿಯಾದ ತಲೆನೋವಿನಿಂದ ಬಳಲುತ್ತಿದ್ದೇನೆಂದು ತಾವಾಗಿಯೇ ತಿಳಿಸಿದರು. ವಿಭಜನೆಯ ಬಗೆಗಿನ ಅವರ ವಿರೋಧ ಪ್ರಾಮಾಣಿಕ ವಾಗಿದ್ದಿರಲೇಬೇಕು, ಏಕೆಂದರೆ ಅದು ವೈಯಕ್ತಿಕವೂ ಆಗಿತ್ತು. ಆದರೆ ವೃದ್ಧಾಪ್ಯದ ವ್ಯಾಧಿ ಹಾಗೂ ದಣಿವು, ಸ್ವಾತಂತ್ರ್ಯ ಹೋರಾಟದ ಈ ಸಂಘಟನೆಯ ಅತ್ಯಂತ ತಲ್ಲಣದ ಸ್ಥಿತಿಯಲ್ಲಿ ಅವರನ್ನು ಆವರಿಸಿಕೊಂಡು ಬಿಟ್ಟಿತ್ತು.

ಖಾನ್ ಅಬ್ದುಲ್ ಗಫಾರ್‌ಖಾನ್‌ರು ಎರಡೇ ಮಾತು ಆಡಿದರು. ತಮ್ಮ ಸಹವರ್ತಿಗಳು ದೇಶ ವಿಭಜನೆಯ ಯೋಜನೆಯನ್ನು ಅನುಮೋದಿಸಿದ್ದಕ್ಕೆ ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಸಣ್ಣ ದಯೆ ತೋರಿ ಎಂಬಂತೆ, ಜನಾಭಿಪ್ರಾಯ ಸಂಗ್ರಹಣೆಯ ಸಮಯದಲ್ಲಿ ವಾಯುವ್ಯ ಗಡಿನಾಡಿನ ಜನತೆಗೆ, ಭಾರತ ಅಥವಾ ಪಾಕಿಸ್ತಾನದಲ್ಲಿ ವಿಲೀನವಾಗುವುದನ್ನು ಬಿಟ್ಟು ಮತ್ತೊಂದು ಸ್ವತಂತ್ರ ಬದಲಿ ಆಯ್ಕೆಗೆ ಅವಕಾಶ ಕಲ್ಪಿಸಲು ಬೇಡಿಕೊಂಡರು. ಇನ್ಯಾವ ಸಂದರ್ಭದಲ್ಲಿಯೂ ಅವರು ಇನ್ನೊಂದು ಮಾತನಾಡಲಿಲ್ಲ, ಬಹುಶಃ ಅವರು ತೀವ್ರ ವೇದನೆಗೊಳಗಾಗಿರಬೇಕು.

ಮಿ. ಜಯಪ್ರಕಾಶ್ ನಾರಾಯಣರು ಒಂದೇ ಬೀಸಿನಲ್ಲಿ ವಿಭಜನೆಯ ವಿರುದ್ಧ ಕೆಲವು ಸಂಕ್ಷಿಪ್ತವಾದ ಆದರೆ ಖಚಿತವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಸಭೆಯ ಉಳಿದ ಭಾಗದುದ್ದಕ್ಕೂ ಮೌನವಾಗಿಬಿಟ್ಟರು. ಅವರು ಈ ರೀತಿ ವರ್ತಿಸುವಂತೆ ಮಾಡಿದ್ದಾದರೂ ಏನು? ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ದೇಶದ ವಿಭಜನೆಯ ವ್ಯವಹಾರವನ್ನು ನಿರ್ವಹಿಸುತ್ತಿರುವ ರೀತಿಯ ಬಗ್ಗೆ ಜಿಗುಪ್ಸೆಗೊಂಡಿದ್ದರೋ? ಅಥವಾ ವಿಭಜನೆಯನ್ನು ಒಪ್ಪಿಕೊಳ್ಳುವ ತೀವ್ರ ಹಠದಿಂದ ಒಗ್ಗೂಡಿದ್ದ ನಾಯಕತ್ವದೆದುರು ಸುಮ್ಮನಿರುವುದೇ ವಿವೇಕವೆಂದು ಭಾವಿಸಿದರೋ? ಅವರ ಸ್ವಭಾವವೆಂದರೆ, ಬಹುಶಃ ಕೆಲವೊಮ್ಮೆ ಆರೋಗ್ಯಕರ ಪ್ರತಿಸ್ಪಂದನಗಳನ್ನು ನೀಡಿ ಬಹಳಷ್ಟು ಮಟ್ಟಿಗೆ ಮುತ್ಸದ್ದಿತನ ದಿಂದ ಮೌನವಾಗಿರುವ ಮಿಶ್ರಣವಾಗಿತ್ತು. ಅನುಮಾನವೇ ಬೇಡ, ಬಹಳ ಕಿರಿಕಿರಿ ಉಂಟು ಮಾಡುವ ಈ ಜಾಯಮಾನದಿಂದ ನಾನು ಪದೇ ಪದೇ ಅವರ ಮೇಲೆ ಅತಿಯಾಗಿ ಸಿಟ್ಟಾಗುವಂತಾಗುತ್ತಿತ್ತು.

ವಿಭಜನೆಯನ್ನು ಕುರಿತ ನನ್ನ ವಿರೋಧ ಹಿಡಿದಪಟ್ಟು ಬಿಡದಂತೆ, ಸ್ಪಷ್ಟವಾಗಿತ್ತು ಮತ್ತು ಗಟ್ಟಿ ದನಿಯದಾಗಿತ್ತು. ಆದರೆ ಅದು ಅಷ್ಟು ಗಂಭೀರವಾಗಿ ಪರಿಣಾಮಕಾರಿಯಾಗಿ ಇರಲಿಲ್ಲವೇನೋ ಮತ್ತು ಈಗ ನೆನಪಾಗುವಂತೆ ಆ ದನಿಯಲ್ಲಿ ಕೆಲವು ಹುಸಿ ಎಳೆಗಳಿದ್ದವು. ಏನೇ ಆದರೂ ನನ್ನ ವಿರೋಧ ಬೆಟ್ಟಗಳನ್ನು ಅಲುಗಾಡಿಸುವಷ್ಟು ಶಕ್ತಿಯುತವಾಗೇನೂ ಇರಲಿಲ್ಲ. ಯಾವುದೇ ಪ್ರಭಾವವಿಲ್ಲದ ಸ್ವಾತಂತ್ರ್ಯ ಹೋರಾಟಗಾರ ನೊಬ್ಬನ ಆರೋಗ್ಯಕರ ವಿರೋಧದ ನಿಲುವಾಗಿ ದಾಖಲಾಗಲಷ್ಟೇ ಸಾಧ್ಯವಾಗಬಹು ದಾಗಿತ್ತು. ಆದರೂ ಕೂಡ ಕಿಂಚಿತ್ತೂ ಸ್ವಾರ್ಥವಿಲ್ಲದ, ಯಾವುದೇ ಮಸಲತ್ತು ಮಾಡದ ನನ್ನಂತಹ ಮನುಷ್ಯನ ವಿರೋಧದ ನಡುವೆಯೂ ಕೊರತೆಯಾಗಿ ತೋರಿದ್ದೇನೆಂದರೆ– ಒಬ್ಬ ಸಾಮಾನ್ಯ ಮನುಷ್ಯನಾಗಿ ನಾನು ಸೇರಿದಂತೆ ನಮ್ಮ ಇಡೀ ಜನ ಸಮೂಹ ಯಾವ ಬಗೆಯ ಅಧೈರ್ಯ ಮತ್ತು ಬಲಹೀನತೆಯ ಆಳಕ್ಕೆ ಕುಸಿದಿದ್ದಾರೆಂಬುದನ್ನು. ನನ್ನ ವಿರೋಧದ ಕೆಲವು ಮಗ್ಗುಲುಗಳನ್ನು ತೋರ್ಪಡಿಸುವ ಸಂದರ್ಭವೊಂದು ಮುಂದೆ ಒದಗಿ ಬರಬಹುದು. ಆದರೆ ಮಹಾತ್ಮ ಗಾಂಧಿಯವರು ಈ ಸಭೆಯಲ್ಲಿ ಮಧ್ಯ ಪ್ರವೇಶಿಸಿದ್ದರ ತಾತ್ಪರ್ಯವಾದರೂ ಏನು?

ಗಾಂಧೀಜಿ ಈ ಸಭೆಯಲ್ಲಿ ಪ್ರಸ್ತಾಪಿಸಿದ ಎರಡು ಅಂಶಗಳ ಬಗ್ಗೆ ವಿಶೇಷವಾಗಿ ಗಮನಸೆಳೆಯಬಯಸುತ್ತೇನೆ. ಅವರು ಮಿ.ನೆಹರೂ ಹಾಗೂ ಸರ್ದಾರ್ ಪಟೇಲರನ್ನು, ವಿಭಜನೆಯ ಯೋಜನೆಗೆ ಒಪ್ಪಿಗೆಯನ್ನು ಕೊಡುವ ಮುನ್ನ ತಮಗೆ ಅದರ ಪೂರ್ಣ ಮಾಹಿತಿ ನೀಡಿರಲಿಲ್ಲ ಎಂದು ಮೃದುವಾಗಿ ದೂರಿದರು. ಗಾಂಧೀಜಿ ತಮ್ಮ ಮಾತನ್ನು ಪೂರ್ತಿಯಾಗಿ ಸ್ಪಷ್ಟಪಡಿಸುವ ಮೊದಲೇ ನೆಹರೂ ಸ್ವಲ್ಪ ಆವೇಗ ಆವೇಶದಿಂದಲೇ, ಈ ಮಾಹಿತಿಯನ್ನು ತಮ್ಮ ಗಮನಕ್ಕೆ ತಂದಿದ್ದೆ ಎಂದು ತಡೆಯೊಡ್ಡಿದರು. ಯಾವಾಗ ಮಹಾತ್ಮಗಾಂಧಿ ತಮಗೆ ಪೂರ್ಣ ಮಾಹಿತಿ ಇರಲಿಲ್ಲ ಎಂದು ಪುನರುಚ್ಚರಿಸಿದರೋ ಆಗ ಮಿ.ನೆಹರೂ ತಮ್ಮ ವರಸೆಯನ್ನು ಸ್ವಲ್ಪ ಬದಲಾಯಿಸಿದರು. ನೌಖಾಲಿ ಬಹಳ ದೂರವಿದ್ದುದಾಗಿಯೂ ಮತ್ತು ವಿವರವಾಗಿ ಅಲ್ಲದಿದ್ದರೂ ವಿಶಾಲಾರ್ಥದಲ್ಲಿ ವಿಭಜನೆಯ ಬಗ್ಗೆ ತಮಗೆ ನಾನು ಬರೆದು ತಿಳಿಸಿದ್ದೆ ಎಂದರು.

ಇದಕ್ಕೆ ಸಂಬಂಧಿಸಿದಂತೆ ನಾನು ಗಾಂಧೀಜಿಯವರ ಮಾತನ್ನು ಒಪ್ಪುತ್ತೇನೆ, ಮಿ.ನೆಹರೂ ಅವರ ಮಾತನ್ನಲ್ಲ. ಯಾರು ತಾನೇ ಒಪ್ಪಲಾರರು? ನೆಹರೂರವರನ್ನು ಸುಳ್ಳುಗಾರ ಎಂದು ಯಾರೇನು ತಳ್ಳಿ ಹಾಕಬೇಕಿಲ್ಲ. ಇರುವ ವಿಷಯವೇನೆಂದರೆ ದೇಶ ವಿಭಜನೆಯನ್ನು ನೆಹರೂ ಮತ್ತು ಸರ್ದಾರ್ ಪಟೇಲ್ ಒಪ್ಪಿಕೊಂಡು ಬರುವ ಮುನ್ನ ಗಾಂಧೀಜಿಯವರಿಗೆ ಅದರ ಬಗ್ಗೆ ತಿಳಿದಿತ್ತೋ ಇಲ್ಲವೋ ಎಂಬುದು. ಆದರೆ ಮಹಾತ್ಮ ಗಾಂಧಿಯವರಿಗೆ ಬರೆದಿರಬಹುದಾದ ಸ್ಪಷ್ಟತೆ ಇಲ್ಲದ ಪತ್ರಗಳನ್ನು ಪ್ರಕಟಿಸಿ, ಊಹಾತ್ಮಕವಾದ ಮತ್ತು ಸತ್ವವಿಲ್ಲದ ಮಾಹಿತಿಯನ್ನು ಬಹಿರಂಗಗೊಳಿಸುವುದು

ನೆಹರೂರವರಿಗೆ ತಕ್ಕದಾದುದಲ್ಲ. ಈ ವಹಿವಾಟಿನ ಮೂಲೆಯಲ್ಲೇನೋ ಕರಾಮತ್ತಿರುವುದು ಖಂಡಿತ. ಮಿ. ನೆಹರೂ ಮತ್ತು ಸರ್ದಾರ್ ಪಟೇಲರು ವಿಭಜನೆಯ ಒಪ್ಪಂದ ಸ್ಪಷ್ಟರೂಪ ತಾಳುವ ಮುನ್ನವೇ ಇದನ್ನು ಹೇಳಿ ಗಾಂಧೀಜಿಯವರನ್ನು ಬೆಚ್ಚಿ ಬೀಳಿಸದಿರುವುದು ಒಳ್ಳೆಯದೆಂದು ತಮ್ಮ-ತಮ್ಮಲ್ಲೇ ತೀರ್ಮಾನಿಸಿಕೊಂಡಿರಲೇಬೇಕು.

ಮಿ. ನೆಹರೂ ಮತ್ತು ಪಟೇಲರತ್ತಲೇ ಮುಖಮಾಡಿದ್ದ ಗಾಂಧೀಜಿ, ತಮ್ಮ ಎರಡನೇ ಅಂಶವನ್ನು ಪ್ರಸ್ತಾಪಿಸಿದರು. ಕಾಂಗ್ರೆಸ್ ಪಕ್ಷವು ತನ್ನ ನಾಯಕರು ಕೊಟ್ಟ ಮಾತನ್ನು ಗೌರವಿಸಬೇಕೆಂಬುದು ಅವರ ಇಂಗಿತವಾಗಿತ್ತು. ಆದ್ದರಿಂದ ಕಾಂಗ್ರೆಸ್ ದೇಶ ವಿಭಜನೆಯ ತತ್ವ ಉದ್ದೇಶಗಳಿಗೆ ಒಪ್ಪಿಗೆ ನೀಡುವಂತೆ ತಿಳಿಸಿದರು. ಒಪ್ಪಿಗೆ ನೀಡಿದ ನಂತರ ವಿಭಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ಸೂಕ್ತವಾದ ಘೋಷಣೆಗಳನ್ನು ಮಾಡಲು ಸೂಚಿಸಿದರು. ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ವಿಭಜನೆಯ ಒಪ್ಪಂದಕ್ಕೆ ಅಂಗೀಕಾರದ ಮುದ್ರೆಯನ್ನು ಒತ್ತಿದ ಬಳಿಕ ಬ್ರಿಟಿಷ್ ಸರ್ಕಾರ ಹಾಗೂ ವೈಸ್‌ರಾಯ್ ಅಧಿಕಾರ ಬಿಟ್ಟು ಪಕ್ಕಕ್ಕೆ ಸರಿಯುವಂತೆ ಕಾಂಗ್ರೆಸ್ ಪಕ್ಷ ಆಗ್ರಹಿಸಬೇಕು. ಮೂರನೆಯವರ ಮಧ್ಯಸ್ಥಿಕೆ, ಹಸ್ತಕ್ಷೇಪವಿಲ್ಲದಂತೆ ಕಾಂಗ್ರೆಸ್ ಪಕ್ಷ ಮತ್ತು ಮುಸ್ಲಿಂ ಲೀಗ್‌ನ ಜಂಟಿ ನೇತೃತ್ವದಲ್ಲಿ ವಿಭಜನೆಯನ್ನು ಪೂರ್ಣಗೊಳಿಸಬೇಕು. ಇದು ಮಾತ್ರ, ಅತ್ಯಂತ ಜಾಣ ತಂತ್ರಗಾರಿಕೆಯ ಪ್ರಯೋಗವಾಗಿತ್ತು ಎಂದು ಅಂದು ಮತ್ತು ಇಂದೂ ಕೂಡ ನಾನೆಂದುಕೊಂಡಿದ್ದೇನೆ. ಸಂತನೊಬ್ಬ ಜೊತೆಜೊತೆಗೆ ಚಾಣಾಕ್ಷ ತಂತ್ರಗಾರನೂ ಆಗಿದ್ದರ ಬಗ್ಗೆ ಬಹಳಷ್ಟು ಮಾತು ಚಾಲ್ತಿಯಲ್ಲಿದೆ. ಆದರೂ ಇಂತಹ ಸೊಗಸಾದ ಮತ್ತು ವಂಚನೆಯ ದಾಳ ಉರುಳಿಸಿದ್ದರ ಬಗ್ಗೆ ನನಗೆ ತಿಳಿದಿರುವಂತೆ, ಇಲ್ಲಿಯವರೆಗೂ ಎಲ್ಲಿಯೂ ದಾಖಲಾಗಿಲ್ಲ.

ಮೊಟ್ಟ ಮೊದಲಿಗೆ ಗಡಿನಾಡ ಗಾಂಧಿಯ ಹಿರಿಯಣ್ಣ ಡಾ॥ ಖಾನ್ ಸಾಹೇಬ್ ಮತ್ತು ಅವರೊಬ್ಬರೇ, ಈ ವಿಭಜನೆಯು, ಅತ್ಯಂತ ಅಪ್ರಾಯೋಗಿಕವೂ, ಎಳ್ಳಷ್ಟೂ ಕಾರ್ಯಸಾಧುವಲ್ಲದ್ದು ಎಂದು ಗುಡುಗಿದ್ದು. ಇನ್ನುಳಿದವರಾರಿಗೂ ವಿಭಜನೆಯನ್ನು ವಿರೋಧಿಸುವ ಅಗತ್ಯವೇ ಇರಲಿಲ್ಲ. ಅದನ್ನು ಪರಿಗಣಿಸಲೂ ಇಲ್ಲ. ಈ ಪ್ರಸ್ತಾವನೆಯ ಮರ್ಮ ನಿರ್ದಿಷ್ಟವಾಗಿ ಅದರ ಅಪ್ರಾಯೋಗಿಕತೆಯಲ್ಲೇ ಇದೆ ಎಂದು ನಾನು ಡಾ॥ ಖಾನರಿಗೆ ಎದುರಾಡುತ್ತಾ, "ದೇಶವನ್ನು ಬ್ರಿಟೀಷರ ಸಹಾಯವಿಲ್ಲದೆ ಯಾವ ರೀತಿ ವಿಭಜಿಸಬೇಕೆಂಬುದಕ್ಕೆ ಜಿನ್ನಾ ಮತ್ತು ಕಾಂಗ್ರೆಸ್ ಪ್ರತಿನಿಧಿಗಳು ಒಪ್ಪದಿದ್ದರೆ ಇಂಡಿಯಾಕ್ಕೇನೂ ನಷ್ಟವಿಲ್ಲ" ಎಂದು ಎಚ್ಚರಿಸಿದೆ. ಆದರೆ ಈ ಎಚ್ಚರಿಕೆಯ, ಆಕ್ಷೇಪದ ಮಾತುಗಳಿಗೆ ಕಿವಿಗೊಡುವವರಾದರೂ ಯಾರು? ಈ ಪ್ರಸ್ತಾವನೆಯೇ ವಂಚನೆಯಿಂದ ಕೂಡಿತ್ತಾದರೂ, ಒಗ್ಗಟ್ಟನ್ನೂ, ಅಖಂಡತೆಯನ್ನು ಬಲಿ ಕೊಟ್ಟು ದೇಶ ವಿಭಜನೆಗೆ ದೃಢನಿರ್ಧಾರ ಕೈಗೊಂಡಿದ್ದ ಕಾಂಗ್ರೆಸ್ ನಾಯಕತ್ವಕ್ಕೆ ಅದೆಲ್ಲವೂ ಕೆಲಸಕ್ಕೆ ಬಾರದ

ಅರ್ಥಹೀನ ವಿಷಯವಾಗಿತ್ತು. ಯಾವ ರೀತಿ ಕಾರ್ಯಸಾಧುವಾಗಿಸಬೇಕೆಂಬ ದೃಷ್ಟಿಯಿಂದಲಾದರೂ ಗಾಂಧೀಜಿಯವರು ತಮ್ಮ ಸಲಹೆಯನ್ನು ನೀಡಿದ್ದರೆ ಅದಕ್ಕೊಂದು ಅರ್ಥವಾದರೂ ಇರುತ್ತಿತ್ತು.

ವಿಭಜನೆಯಿಂದ ಬಹಳವಾಗಿ ಕಳೆದುಕೊಳ್ಳಲಿದ್ದ ಡಾ॥ ಖಾನರು ಈ ಯೋಜನೆಯ ಅಪ್ರಾಯೋಗಿಕತೆಯ ಬಗ್ಗೆ ತಿಳಿಹೇಳಲು ಅದೇಕೆ ಅಷ್ಟು ಕಾತುರರಾಗಿದ್ದರು ಎಂದು ಕೆಲವೊಮ್ಮೆ ಅಚ್ಚರಿಗೊಂಡಿದ್ದೇನೆ. ಬಹಳಷ್ಟು ಮಂದಿ ಸರಳ ಮನೋಭಾವದವರು. ರೂಢಿಗತವಾಗಿ ಪ್ರತಿಕ್ರಿಯಿಸುತ್ತಾರೆ. ಆದರೆ ಅವರು ತಾವಾಗಿಯೇ-ಪ್ರಸ್ತಾಪಿತ ವಿಷಯವೊಂದರ ನೇರ ಪರಿಣಾಮಗಳ ಸಂಪೂರ್ಣ ಚಿತ್ರವನ್ನಾಗಲೀ, ಅದರ ಆರಂಭ, ಮುಂದುವರಿದ ಭಾಗವನ್ನಾಗಲೀ ಗಮನಿಸದೆ ಎಂದಿನ ತಮ್ಮ ಅಭ್ಯಾಸಗಳಿಗನು ಗುಣವಾಗಿ ಪರಿಗಣಿಸಿಬಿಡುತ್ತಾರೆ. ಮಿ. ಜಿನ್ನಾರವರನ್ನು ಒಪ್ಪಿಕೊಳ್ಳುವುದು ಅಸಾಧ್ಯವಾಗಿತ್ತು. ಅಂತಯೇ ಬಹುತೇಕ ಕಾಂಗ್ರೆಸ್ ನಾಯಕರನ್ನೂ ಕೂಡ. ಅದರಲ್ಲೂ ವಿಶೇಷವಾಗಿ ಮುಸ್ಲಿಂ ನಾಯಕರನ್ನೂ ಕೂಡ. ಡಾ. ಖಾನ್‌ರು ರೂಢಿಗತವಾಗಿ ಪ್ರತಿಕ್ರಿಯಿಸುತ್ತಿದ್ದರಷ್ಟೇ. ಈ ಅಸಾಧ್ಯ ಎನ್ನಲಾಗುವ ಜಿನ್ನಾ ಕೂಡ, ಗಾಂಧೀಜಿ ಪ್ರಸ್ತಾವನೆಯ ಅಡಿಯಲ್ಲಿ ತಮ್ಮ ಅಸಾಧ್ಯ ವ್ಯಕ್ತಿತ್ವದ ಕಾರಣದಿಂದಾಗಿಯೇ ಭಾರತವನ್ನು ವಿಭಜನೆಯಿಂದ ಪಾರು ಮಾಡಿ ರಕ್ಷಿಸಬಲ್ಲರೆಂಬುದನ್ನು ಡಾ. ಖಾನ್ ಅರಿಯಲಾರದೆ ಹೋದರು.

ಮಿ. ನೆಹರೂ ಮತ್ತು ಪಟೇಲರೂ ಗಾಂಧೀಜಿಯವರ ವಿರುದ್ಧ ಸ್ವಲ್ಪ ಉಗ್ರವಾಗಿಯೇ ಹರಿಹಾಯ್ದಿದ್ದರು, ಅವರಿಬ್ಬರಿಗೂ ನನಗೂ ಸ್ವಲ್ಪ ಮಾತಿನ ಜಟಾಪಟಿಯಾಯಿತು. ಅದಕ್ಕೆ ಸಂಬಂಧಿಸಿದ ಕೆಲವನ್ನು ಪ್ರಸ್ತಾಪಿಸುತ್ತೇನೆ. ಅಂದು ನಾನು ದಂಗಾಗಿ ಹೋದರೂ, ಇಂದು ಸ್ವಲ್ಪಮಟ್ಟಿಗೆ ಸರಿಯಾಗಿ ಅರ್ಥವಾಗುತ್ತಿರುವುದು ಏನೆಂದರೆ, ಈ ಇಬ್ಬರೂ ಆಯ್ದ ಆಪ್ತ ಅನುಯಾಯಿಗಳು ತಮ್ಮ ನಾಯಕನತ್ತ ಮಿತಿ ಮೀರಿದ ಒರಟು ವರ್ತನೆಯನ್ನು ತೋರುತ್ತಿದ್ದರು ಎಂಬುದು. ಅದರಲ್ಲೇನೋ ಒಂದು ಬಗೆಯ ಮಾನಸಿಕ ಉದ್ವಿಗ್ನತೆ, ಅಸ್ವಸ್ಥತೆಯಿತ್ತು. ಅವರಿಬ್ಬರು ಯಾವುದರ ಮೇಲೋ ತಮ್ಮ ಗುರಿನೆಟ್ಟು, ಗಾಂಧೀಜಿ ಅದಕ್ಕೆ ಅಡ್ಡಿಪಡಿಸುವರೆಂಬ ಸುಳಿವು ಸಿಕ್ಕೊಡನೆ, ಅವರನ್ನು ವಿರೋಧಿಸುತ್ತ ವ್ಯಗ್ರರಾಗಿ ಕೂಗಾಡುತ್ತಿದ್ದರು.

ಇವರ ವಿಚಿತ್ರ ವರ್ತನೆ, ನಡವಳಿಕೆಗಳ ಕುರಿತಂತೆ ಹಲವು ಪುರಾವೆಗಳು ಈಗ ಒದಗುತ್ತಿವೆ. ನಾನು ಇಲ್ಲಿಯವರೆಗೂ ಹೇಳಿಕೊಂಡು ಬಂದ ಹಾಗೆ, ೧೯೪೭ರ ಕೆಲವು ತಿಂಗಳುಗಳಲ್ಲಿ ಮಿ. ನೆಹರುರವರು ಒಬ್ಬ ಸಮರ್ಥ ಶಾಮೀಲುದಾರರಾಗಿದ್ದರು ಎಂಬುದಕ್ಕೆ ಮೌಲಾನಾ ಅಜಾದ್ ಕೂಡ ತಮ್ಮ ಹೇಳಿಕೆಯ ಸಾಕ್ಷಿಯನ್ನು ನೀಡಿದ್ದಾರೆ. ಗೆಲ್ಲುವ ಕಡೆ ಶಾಮೀಲಾಗುವವರು ಯಾರೂ ಇರಲಿಲ್ಲ. ಅಲ್ಲೇನಿದ್ದರೂ ಮಿತ್ರ

ರಾಷ್ಟ್ರಗಳ ಒಕ್ಕೂಟವಿತ್ತು ಮತ್ತು ಸ್ವಾತಂತ್ರ್ಯ ಹೋರಾಟಗಾರರಿದ್ದರು. ಮಿತ್ರ ರಾಷ್ಟ್ರಗಳು ಮತ್ತು ಬ್ರಿಟಿಷರು ಯುದ್ಧವನ್ನು ಗೆದ್ದರು. ಈ 'ಶಾಮೀಲುದಾರ' ಎಂಬುದು ಶತ್ರು ರಾಷ್ಟ್ರ ಗಳೊಡನೆ ಕೈ ಜೋಡಿಸಿದ ಫ್ರೆಂಚರು ಮತ್ತು ಪೂರ್ವ ಯುರೋಪಿಯನ್ನರಿಗೆ ಅನ್ವಯವಾಗುತ್ತದೆ. ಆದರೆ ಅವಶ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಆಕ್ರಮಿಸಿ ಕೊಳ್ಳುವ ಪ್ರಭುತ್ವದೊಡನೆ ಶಾಮೀಲಾಗುವ ಬಗ್ಗೆ.

ಮಿ. ನೆಹರೂರವರು ಈ ರೀತಿ ಪ್ರಭುತ್ವದೊಡನೆ ಶಾಮೀಲಾಗಲು ಸಿದ್ಧರಾಗೇ ಇದ್ದರು. ಮಿ. ಅಜಾದ್ ಹೇಳಿರುವಂತೆ ಮಿ.ನೆಹರುರವರು ವೈಸರಾಯ್‌ನ ವಿಸ್ತೃತ ಕಾರ್ಯಕಾರಿ ಪರಿಷತ್ತಿಗೆ ಸೇರಿಕೊಳ್ಳಬಯಸಿದ್ದರು. ಅದೂ, ಈ ಪರಿಷತ್ತು ಯುದ್ಧದ ದಿನಗಳಲ್ಲಿ ಮಂತ್ರಿ ಮಂಡಲದಂತೆ ಕಾರ್ಯನಿರ್ವಹಿಸಿ, ಶಾಂತಿಯನ್ನು ಸಾಧಿಸಿದೊಡನೆ ಭಾರತ ಸ್ವತಂತ್ರವಾಗುವುದೆಂಬ ಬ್ರಿಟಿಷ್ ಸರ್ಕಾರದ ಯಾವುದೇ ಭರವಸೆ, ಘೋಷಣೆಯಿಲ್ಲದೆಯೇ. ಮಿ.ನೆಹರು ಒಂದೋ ಅಧಿಕಾರವನ್ನು ಸುಖಿಸುವ ಹೆಚ್ಚು ಸ್ವಾರ್ಥವಿರುವ ಗುರಿಗಾಗಿಯೋ ಇಲ್ಲಾ ಸರ್ವಾಧಿಕಾರಿ ಮತ್ತು ಮೂಲಭೂತವಾದಿ ಶತ್ರುಗಳನ್ನು ಸೋಲಿಸುವ ಆಕಾರವಿಲ್ಲದ ಗುರಿಗಾಗಿಯೋ ಹಸಿದಿದ್ದರೆಂದು ಕಾಣುತ್ತದೆ. ಈ ಎರಡೂ ಗುರಿಗಳ ನಡುವೆ ಹೋಲಿಕೆಯೇ ಇಲ್ಲದಿರುವುದು ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ ಈ ಎರಡು ಗುರಿಗಳ ನಡುವೆ ಒಂದೇ ಉದ್ದೇಶದ ಬಂಧವೇನಾದರೂ ಇತ್ತೋ?

ಇತ್ತೀಚೆಗೆ ಕೆಲವರು ನನ್ನ ಗಮನಕ್ಕೆ ತಂದಂತೆ ೧೯೪೨ರ ಆರಂಭದಲ್ಲಿ ಮಿ. ನೆಹರುರವರು, ಜಪಾನಿಯರನ್ನು ಸೆದೆಬಡಿಯಲು ಲಕ್ಷಗಟ್ಟಲೆ ಗೆರಿಲ್ಲಾ ಯೋಧರನ್ನು ಸಂಘಟಿಸುವ ಸಾಮರ್ಥ್ಯ ತನಗಿದೆ ಎಂದು ಸಾರ್ವಜನಿಕವಾಗಿ ಘೋಷಿಸುವ ಹುಚ್ಚು ಹುಚ್ಚು ಪ್ರತಿಕ್ರಿಯೆಗಳು ಸ್ವಲ್ಪಮಟ್ಟಿಗೆ ಮಿ. ಸುಭಾಷ್‌ಚಂದ್ರ ಬೋಸ್‌ರ ಬಗೆಗಿನ ಮಾತ್ಸರ್ಯದಿಂದ ಪ್ರೇರಿತವಾಗಿರಬೇಕು. ಮಿ. ಬೋಸ್ ಆಗಲೇ ಶತ್ರು ರಾಷ್ಟ್ರಗಳಿಗೆ ಹೋಗಿದ್ದರು. ಭಾರತ ರಾಷ್ಟ್ರೀಯ ಸೇನೆಯನ್ನು ಕಟ್ಟಿ ಸಂಘಟಿಸುತ್ತಿರುವ ಬಗ್ಗೆ ಅವರು ಸಾರ್ವಜನಿಕವಾಗಿ ಹೇಳಿಕೊಂಡಿದ್ದರು. ಆದರೆ ನೆಹರುರವರ ವರ್ತನೆಗಳು ಬ್ರಿಟೀಷ್ ಸಾಮ್ರಾಜ್ಯಶಾಹಿಯ ಸೇವೆಗನುಗುಣವಾಗಿತ್ತು. ಮಿ.ನೆಹರು ಹಾಗೂ ಮಿ. ಬೋಸ್‌ರ ನಡುವಿನ ಗುಪ್ತಗಾಮಿಯಾದ ಮಾತ್ಸರ್ಯ ಅವರಿಬ್ಬರ ಸಂಬಂಧವನ್ನು ಹದಗೆಡಿಸುತ್ತಿತ್ತೆಂಬುದನ್ನು ಈಗ ಯಾರೂ ಅಲ್ಲಗಳೆಯಲಾರರು. ೧೯೪೨ರ ಈ ಭಯಾನಕವಾದ ಕೆಲವು ತಿಂಗಳುಗಳಲ್ಲಿ ಮಿ.ನೆಹರು ಜಪಾನಿಯರ ಆಕ್ರಮಣಕ್ಕೆ ಸಿಲುಕಿ ನಾಶವಾಗುವ ಭೀತಿಯಲ್ಲಷ್ಟೇ ಅಲ್ಲದೇ ತಮ್ಮ ಹಳೆಯ ಪ್ರತಿಸ್ಪರ್ಧಿಯಿಂದಲೂ ಧೂಳಿಪಟವಾಗುವ ಭಯದಲ್ಲಿ ತತ್ತರಿಸಿರಬೇಕು. ಇಂಡಿಯಾ, ಮಿತ್ರ ರಾಷ್ಟ್ರಗಳ ಕಾಲಡಿಯಲ್ಲಿ ಅಂಗಾತಾಗಿ ಬಿದ್ದು ಒದ್ದಾಡುತ್ತಿರುವಾಗಲೂ ಕೂಡ, ಶತ್ರು ರಾಷ್ಟ್ರಗಳ

ವಿರುದ್ಧ ಮಿತ್ರರಾಷ್ಟ್ರಗಳ ಬೆಂಬಲಕ್ಕೆ, ಉನ್ಮಾದದ ಸ್ಥಿತಿಯಲ್ಲಿ ನಿಂತಿರುವಲ್ಲಿ, ಯಾವುದೋ ವೈಯಕ್ತಿಕ ಖಾಸಗಿ ಕಾರಣಗಳು ಅಡಗಿರಲೇ ಬೇಕು. ಆದರೆ ಈ ಕಾರಣಗಳಿಗೆ ನಾನೇನು ಅಂತಹ ಪ್ರಾಮುಖ್ಯತೆ ನೀಡಲಾರೆ. ಇವೇನಿದ್ದರೂ ಉರಿಯುತ್ತಿರುವ ಬೆಂಕಿಗೆ ಎಣ್ಣೆ ಸುರಿದಿರಬೇಕೆ ಹೊರತು, ಅದಾಗಿಯೇ ಬೆಂಕಿಯನ್ನೇನೂ ಹುಟ್ಟು ಹಾಕಿರಲಿಲ್ಲ.

ಮಿ. ನೆಹರು ಬಹಳ ಕಾಲದಿಂದಲೂ ಸರ್ವಾಧಿಕಾರವನ್ನು ವಿರೋಧಿಸುತ್ತಾ ಬಂದವರು. ಇಪ್ಪತ್ತರ ದಶಕದಲ್ಲಿ ಹೇಗೆ ಮುಸಲೋನಿಯನ್ನು ಭೇಟಿ ಮಾಡಲು ಅವರು ನಿರಾಕರಿಸಿದ್ದರು ಮತ್ತು ಅವರು ಬಹುಕಾಲದಿಂದಲೂ ಬ್ರಿಟಿಷ್ ಎಡಪಕ್ಷಗಳ ಮಿತ್ರರೂ ಕೂಡ ಎಂಬುದನ್ನು ನೆನಪಿಸಿಕೊಳ್ಳಬಹುದು. ಅವರ ಈ ಸರ್ವಾಧಿಕಾರಿ ಧೋರಣೆಯ ವಿರೋಧ ಹಾಗೂ ಬ್ರಿಟಿಷ್ ಎಡಪಕ್ಷಗಳೊಡನೆ ಅವರ ಅಸಾಮಾನ್ಯ ಗೆಳೆತನದ ಮೂಲ ಕಾರಣಗಳನ್ನು ಕಂಡುಕೊಳ್ಳುವುದು ಸೂಕ್ತ ಎನಿಸುತ್ತದೆ. ಆದರೆ ಈಗ ಅದರ ಗೊಡವೆಗೆ ನಾನು ಹೋಗುವುದಿಲ್ಲ. ಮಿ. ಬೋಸ್‌ರ ಬಗೆಗಿನ ಮಾತ್ಸರ್ಯವೇ ಇದಕ್ಕೆ ಪ್ರಮುಖ ಕಾರಣವಾಗಿರಬಹುದು, ಆದರೆ ಅದಕ್ಕೇನೂ ಅಂತಹ ಮಹತ್ವ ನೀಡಬೇಕಿಲ್ಲ.

ಮಿ. ಬೋಸ್‌ರ ಬದಲಿಗೆ ನೆಹರುರವರನ್ನು ನಿರಂತರವಾಗಿ ಇಷ್ಟಪಡುವ ಮೂರ್ಖ ನಾನಾಗಿದ್ದೆ. ಈ ತಪ್ಪಿಗೆ ಮತ್ತೊಂದು ಬಲವಾದ ಕಾರಣವೆಂದರೆ ಮಹಾತ್ಮಗಾಂಧಿ. ಆದರೆ ೧೯೪೨ರ ಆರಂಭದಲ್ಲಿ ಶ್ರೀ ನೆಹರುರವರ ಸ್ವಭಾವ, ವರ್ತನೆಯನ್ನು ಕುರಿತು ನನ್ನ ಬಲವಾದ ವಿರೋಧವನ್ನು ಅದುಮಿಡಲಾಗಲಿಲ್ಲ. ಆಲ್ಮೋರ ಜಿಲ್ಲಾ ರಾಜಕೀಯ ಸಮ್ಮೇಳನದ, ನನ್ನ ಅಧ್ಯಕ್ಷೀಯ ಭಾಷಣದಲ್ಲಿ ನೆಹರುರವರನ್ನು "ಬೇಗ ಬಣ್ಣ, ರೂಪ ಬದಲಾಯಿಸುವ ಚತುರ ನಟ" ಎಂದು ಬಣ್ಣಿಸಿ, ಅವರಿಗೆ ನೀಡಿದ ಎಚ್ಚರಿಕೆ ಏನೆಂದರೆ – "ನೆಹರು ತಮ್ಮ ಸ್ವಭಾವವನ್ನು ತಿದ್ದಿಕೊಳ್ಳದಿದ್ದರೆ ಈ ದೇಶದ ಜನತೆ ಅದರಲ್ಲೂ ವಿಶೇಷವಾಗಿ ಯುವ ಸಮೂಹ ಇಲ್ಲಿಯವರೆಗೂ ಇಬ್ಬರೂ ನಾಯಕರ ಮಾತಿಗೆ ಕಿವಿಗೊಡುತ್ತಿದ್ದು ಇನ್ನು ಮುಂದೆ ಕೇವಲ ಒಬ್ಬರ ಮಾತಿಗೆ ಬೆಲೆಕೊಡು ವಂತಾಗುತ್ತದೆ" ಎಂದು. ನಾನಂತೂ ನಿರಂತರವಾಗಿ ಶ್ರೀ ನೆಹರುರವರ ವಿರುದ್ಧ ಸಾರ್ವಜನಿಕವಾಗಿಯೂ, ಖಾಸಗಿಯಾಗಿಯೂ ಆಕ್ಷೇಪಿಸುತ್ತಲೇ ಬಂದಿದ್ದೆ – ಅದರಲ್ಲೂ ನನ್ನ ಯೌವ್ವನದ ದಿನಗಳಲ್ಲಿ ಬ್ರಿಟೀಷರ ಹಾಗೂ ಮಿತ್ರ ರಾಷ್ಟ್ರಗಳ ಪರವಾದ ನೆಹರುರವರ ಸನ್ನಿಹಿಡಿದಂತಹ ಹುಚ್ಚುತನದ ಬೆಂಬಲವನ್ನು ಕಟುವಾಗಿಯೇ ಟೀಕಿಸುತ್ತಿದ್ದೆ.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಗಳು ಅಲಹಾಬಾದಿನಲ್ಲಿ ಪ್ರಾರಂಭವಾದ ದಿನವೇ ಅಲ್ಲಿನ ಕೆಲವು ದಿನಪತ್ರಿಕೆಗಳು "ಬೇಗ ಬಣ್ಣ, ರೂಪ ಬದಲಾಯಿಸುವ ಚತುರ ನಟ" ಎಂಬ ನನ್ನ ಭಾಷಣವನ್ನು ಮುಖಪುಟದಲ್ಲಿ ಪ್ರಕಟಿಸಿದ್ದವು. ನಂತರ

ನನಗೆ ಯಾರೋ ಹೇಳಿದಂತೆ ಮಿ.ನೆಹರುರವರ ಕೆಲವು ಗೆಳತಿಯರು ಅದನ್ನೇ ಒಂದು ಪ್ರೀತಿಯ ಅಂಕಿತನಾಮದಂತೆ ಭಾವಿಸಿ, ನೆಹರೂ ಸುತ್ತ ಪ್ರತಿಷ್ಠೆಯ ಪ್ರಭೆಯೊಂದನ್ನು ಸೃಷ್ಟಿಸಿದರಂತೆ. ನಾನು ಆಲ್ಮೋರದಿಂದ ಹಿಂತಿರುಗಿದ ನಂತರ ಶ್ರೀ ನೆಹರುರವರನ್ನು ಭೇಟಿಯಾಗಲು ಮುಜುಗರವಾಯಿತು. ಆದರೆ ಅವರೊಡನೆ ನನ್ನ ಸಂಬಂಧ ಎಂತಹದಿತ್ತೆಂದರೆ, ನಾನು ಅವರನ್ನು ಭೇಟಿಯಾಗಲೇಬೇಕಾಗಿತ್ತು. ಅಂತೆಯೇ ಆ ಮಧ್ಯಾಹ್ನ ಅವರನ್ನು ಭೇಟಿಯಾಗಲು ಹೋದೆ. ಅವರು ತಮ್ಮ ಕೋಣೆಯಲ್ಲಿರಲಿಲ್ಲ.

ನಾನು ಹೊರಟುಹೋಗಲು ಸಿದ್ಧನಾಗುತ್ತಿದ್ದೆ. ಆದರೆ ಬಂದ ಕೆಲಸ ಆಗಲಿಲ್ಲ ಎಂಬಂತೇನೂ ಅಲ್ಲ. ಆಗ ತಾನೆ ತಮ್ಮ ಕೊಠಡಿಯಿಂದ ಹೊರಬರುತ್ತಿದ್ದ ಮೌಲಾನಾ ಅಜಾದ್ ಹಿಂದಿನಿಂದ ನನ್ನನ್ನು ಕೂಗಿ ಕರೆದು ಮಾತನಾಡಿಸುತ್ತ, ನನ್ನ ಭಾಷಣದ ಬಗ್ಗೆ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮೌಲಾನಾರವರ ಈ ಸಂತಸದ ಕಾರಣ ನನಗೆ ಅರ್ಥವಾಗಲಿಲ್ಲ. ಆದರೆ, ಅವರಿಗೆ ವ್ಯಂಗ್ಯದ ಪ್ರತ್ಯುತ್ತರವನ್ನು ಕೊಡುವ ನನ್ನ ಆಸೆಯನ್ನು ಹತ್ತಿಕ್ಕಿದೆ. ಗಾಂಧೀಜಿ ಹಾಗೂ ಭಾರತದ ಜನತೆಯ ಸ್ವಾತಂತ್ರ್ಯದ ಅದಮ್ಯ ಆಶಯವನ್ನು ಏಮಾರಿಸುವಲ್ಲಿ ಮಿ.ಆಜಾದ್ ಹಾಗೂ ಮಿ.ನೆಹರು ಚೆನ್ನಾಗಿಯೇ ಒಗ್ಗೂಡಿದ್ದರು. ಮೌಲಾನಾರವರ ಪುಸ್ತಕ, ಈ ಪ್ರಕರಣ ಕುರಿತಂತೆ ನನಗೆ ಸ್ಪಷ್ಟತೆ ನೀಡಿದೆ. ಮಿ. ನೆಹರು, ಮಿ. ಆಜಾದರವರ ಸ್ವಭಾವಗಳಲ್ಲಿ ಸ್ವಲ್ಪ ಮಾತ್ರವೇ ವ್ಯತ್ಯಾಸವಿತ್ತು.

ಇಂಡಿಯಾದ ಸ್ವಾತಂತ್ರ್ಯ ಮತ್ತು ಸ್ವತಂತ್ರ ಸರ್ಕಾರಕ್ಕೆ ತತ್‌ಕ್ಷಣ ಪ್ರಾಪ್ತಿಯಾಗಲಿರುವ ಅಧಿಕಾರಗಳ ಬಗ್ಗೆ ಮಿ.ಆಜಾದ್ ರವರಿಗೆ ಮಿ.ನೆಹರುರವರಿಗಿಂತ ಹೆಚ್ಚಿನ ಕಾಳಜಿ ಇತ್ತು. ಮಿ.ಆಜಾದ್ ತಮ್ಮ ಪುಸ್ತಕದಲ್ಲಿ ತಿಳಿಸಿದಂತೆ ಎಲ್ಲಿಯವರೆಗೂ – ನಿಯೋಜಿತ ಭಾರತ ಸರ್ಕಾರವು ಯಾವಾಗ ಸ್ವತಂತ್ರ ಮಂತ್ರಿಮಂಡಲವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಯಾವಾಗ ಸಂಪೂರ್ಣ ಸ್ವಾತಂತ್ರ್ಯ ಹೊಂದುತ್ತದೆ ಎಂಬ ಸ್ಪಷ್ಟನೆ ನೀಡುವವರೆಗೂ ಬ್ರಿಟಿಷರ ಪ್ರಸ್ತಾವನೆಗಳನ್ನು ಒಪ್ಪಲು ಸಿದ್ಧರಿರಲಿಲ್ಲ.

ಮಿ.ನೆಹರುರವರಂತೂ ಬ್ರಿಟಿಷರ ಪ್ರಸ್ತಾವನೆಯನ್ನು ನೇರವಾಗಿ, ಇದ್ದದ್ದು ಇದ್ದಹಾಗೆ ಒಪ್ಪಿಕೊಳ್ಳುವುದರ ಪರವಾಗಿದ್ದರು. ಆ ಕಾಲದಲ್ಲಿ ಇಂಡಿಯಾದಲ್ಲಿದ್ದ ಬ್ರಿಟಿಷ್ ವರದಿಗಾರನೊಬ್ಬ, ಈ ಪ್ರಸ್ತಾವನೆಯಲ್ಲಿ ಬ್ರಿಟಿಷರ ವೈರಿಗಳ ಕೈವಾಡವಿದೆ ಎಂದು ಆರೋಪಿಸಿದ್ದೇನೋ ಹೌದು. ನಿಜವಾಗಲೂ ಆ ಕೆಲವು ತಿಂಗಳುಗಳಲ್ಲಿ ಮಿ. ನೆಹರು ಬಹಳ ಕೆಳಮಟ್ಟಕ್ಕೆ ಇಳಿದುಬಿಟ್ಟಿದ್ದರು. ಮಿ. ಆಜಾದರು ನನ್ನ ತೋಳು ಹಿಡಿದೆಳೆದು ಮಿ. ನೆಹರುರವರು ತಮ್ಮ ಸಮೀಪವರ್ತಿಗಳೊಡನೆ ಚಹ ಸೇವಿಸುತ್ತಿದ್ದ ಕೋಣೆಗೆ ನನ್ನನ್ನು ತಳ್ಳಿದರು. ಮಿ. ನೆಹರುರವರ ನಿವಾಸದಲ್ಲಿ ನಾನು ಕುಡಿದ ಅತ್ಯಂತ ತಣ್ಣನೆಯ ಚಹಾ ಅದಾಗಿತ್ತು. ಆದರೆ ಭೇಟಿಯ ಕೊನೆಯಲ್ಲಿ ಅವರು ಚೇತೋಹಾರಿ

ಆತ್ಮೀಯತೆಯನ್ನು ತೋರಿದರು ಎಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು. ಅದು ಅವರ ವ್ಯಕ್ತಿತ್ವದ ಬಲಿಷ್ಠ ಅಂಶವಾಗಿತ್ತು. ಸಂದರ್ಭಕ್ಕೆ ತಕ್ಕಂತೆ ಬದಲಾಗಬಲ್ಲ ಅಸಾಮಾನ್ಯ ಹೊಂದಾಣಿಕೆಯ ಸ್ವಭಾವ ಅವರದಾಗಿತ್ತು ಅಥವಾ ಎಷ್ಟೇ ಪಾಷಂಡಿಯಾಗಿದ್ದರೂ ನಾನಿನ್ನೂ ಅವರ ಶಿಷ್ಯ ಎಂಬ ಕಾರಣಕ್ಕಾಗಿಯಾದರೂ ಇರಬಹುದು. ಈ ರೀತಿಯ ಅಸಾಮಾನ್ಯ ಹೊಂದಾಣಿಕೆ ಹಾಗೂ ಜಾಯಮಾನ ಬದಲಾಯಿಸುವ ಗುಣವೇ ಮಿ.ನೆಹರುರವರನ್ನು ಪ್ರಪಾತಕ್ಕೆ ಉರುಳಿ ಹೋಗಿ ಕೊಳೆತು ಸರ್ವನಾಶವಾಗುವ ಅಪಾಯದಿಂದ ತಪ್ಪಿಸಿತು. ೧೯೪೭ರಲ್ಲಿದ್ದ ಅವರ ಹಳೆಯ ಸ್ವಭಾವ ವರ್ತನೆಗಳಿಗೆ ಅಂಟಿಕೊಂಡು ಮುಂದೆ ಸಾಗಿದ್ದರೆ, ಖಂಡಿತ ಅದೇ ಗತಿ ಅವರದ್ದಾಗಿರುತ್ತದೆ.

(ಕನ್ನಡಕ್ಕೆ: ಬಿ.ಎಸ್. ದಿವಾಕರ)

◆◆

ಲೋಹಿಯಾ ಪ್ರಕಾಶನ

'ಕ್ಷಿತಿಜ', ಕಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ 583 102

08392–257412, 99007 50549

ಒಟ್ಟು ಪ್ರಕಟಣೆಗಳು 185, ಲಭ್ಯವಿರುವವು 33

1.	ಲೋಹಿಯಾ	ಅನು: ಹಸನ್ ನಯೀಂ ಸುರಕೋಡ	ರೂ.150
2.	ಅಮೃತ ಮತ್ತು ವಿಷ	ರಂಜನಾ ದರ್ಗಾ	ರೂ.125
3.	ಖರೇ ಖರೇ ಸಂಗ್ಯಾ–ಬಾಳ್ಯಾ	ಡಾ.ಎಂ.ಎಂ.ಕಲಬುರ್ಗಿ	ರೂ.30
4.	ಶಿವಾಜಿ ಮೂಲ ಕನ್ನಡ ನೆಲ	ಡಾ. ಸರಜೂ ಕಾಟ್ಕರ್	ರೂ.125
5.	ಕರ್ನಾಟಕ ಏಕೀಕರಣ ಬಳ್ಳಾರಿ ಜಿಲ್ಲೆ ಹಿನ್ನೆಲೆಯಲ್ಲಿ	ಕೋ.ಚೆನ್ನಬಸಪ್ಪ	ರೂ.60
6.	ನಾನು ಪಾಟೀಲ ಪುಟ್ಟಪ್ಪ(ಭಾಗ–1)	ನಿರೂಪಣೆ: ಡಾ.ಸರಜೂ ಕಾಟ್ಕರ್	ರೂ.250
7.	ನಾನು ಪಾಟೀಲ ಪುಟ್ಟಪ್ಪ(ಭಾಗ–2)	ನಿರೂಪಣೆ: ಡಾ.ಸರಜೂ ಕಾಟ್ಕರ್	ರೂ.250
8.	ಎರಡು ಕಿರು ನಾಟಕಗಳು	ಎಸ್.ಮಾಲತಿ	ರೂ.25
9.	ನೆನಪುಗಳು: ಚಂಪಾ ಲಿಮಯೆ	ಅನು: ಡಾ.ಸರಜೂ ಕಾಟ್ಕರ್ ಪ್ರೊ.ಎ.ಬಿ.ಘಾಟಗೆ	ರೂ.60
10.	ಅರ್ಥನೀತಿ	ಡಾ.ಹ.ಸೋಮಶೇಖರ	ರೂ.75
11.	ಸೌಹಾರ್ದ ಸೌರಭ	ರಂಜನಾ ದರ್ಗಾ	ರೂ.50
12.	ಇವರು ನಮ್ಮ ಜನರು	ನಾಡೋಜ ಡಾ.ಪಾಟೀಲ ಪುಟ್ಟಪ್ಪ	ರೂ.60
13.	ಗೊಂದಲಿಗ್ಯಾ	ಎ.ಎಂ.ಮದರಿ	ರೂ.150
14.	ಗಾಂಧಿಗೆ ಸಾವಿಲ್ಲ	ಅನು: ಹಸನ್ ನಯೀಂ ಸುರಕೋಡ	ರೂ.50
15.	ಚಾತುರ್ವರ್ಣ ಧರ್ಮದರ್ಶನ	ಕುಮಾರ ಕಕ್ಕಯ್ಯ ಪೋಳ	ರೂ.100

ಚಿಕ್ಕಗೌಡ್ರ ನಾಗನಗೌಡ–ಶಿವಮ್ಮ–ದತ್ತಿಯ ಪ್ರಕಟಣೆಗಳು

೧.	ಬಸವಪ್ರಜ್ಞೆ	ರಂಜನಾ ದರ್ಗಾ	ರೂ.೧೫
೨.	ಬಸವಣ್ಣನವರ ದೇವರು	ರಂಜನಾ ದರ್ಗಾ	ರೂ.೧೫
೩.	ಬಸವಧರ್ಮದ ವಿಶ್ವಸಂದೇಶ	ರಂಜನಾ ದರ್ಗಾ	ರೂ.೧೫
೪.	ಲಿಂಗವಪೂಜಿಸಿ ಫಲವೇನಯ್ಯಾ?	ರಂಜನಾ ದರ್ಗಾ	ರೂ.೨೫
೫.	ನಡೆನುಡಿ ಸಿದ್ಧಾಂತ	ರಂಜನಾ ದರ್ಗಾ	ರೂ.೨೫
೬.	ಜಾತಿವ್ಯವಸ್ಥೆಗೆ ಸವಾಲಾದ ಶರಣರು	ರಂಜನಾ ದರ್ಗಾ	ರೂ.೩೦
೭.	ಶರಣರ ಸಮಗ್ರ ಕ್ರಾಂತಿ	ರಂಜನಾ ದರ್ಗಾ	ರೂ.೯೦
೮.	ಸಲ್ಲಿಲಿತ ಸನ್ಮಾರ್ಗ	ಚೆನ್ನಬಸವಪ್ಪ ಬೆಟ್ಟದೂರು	ರೂ.೩೦
೯.	ಜಯದೇವಿ ತಾಯಿ ಲಿಗಾಡೆ	ಡಾ.ರಾಮಕೃಷ್ಣ ಮರಾಠೆ	ರೂ.೪೫
೧೦.	ಸೇನೆಯಿಲ್ಲದ ಕದನ	ಡಾ.ರಂಗನಾಥ ಕಂಟನಕುಂಟೆ	ರೂ.೫೦
೧೧.	ಗಾಂಧಿಯೊಂದಿಗೆ ಒಬ್ಬ ನಾಸ್ತಿಕ	ವೆಂಕಟೇಶ ಮಾಚಕನೂರ	ರೂ.೩೦
೧೨.	ನನ್ನ ಬದುಕು	ಎ.ಎಸ್.ಹಿಪ್ಪರಗಿ	ರೂ.೩೦
೧೩.	ಅವಿಶ್ರಾಂತ	ಡಾ.ಲಕ್ಷ್ಮಣ ಕೌಂಟೆ	ರೂ.೨೦೦
೧೪.	ಮೌಢ್ಯಾಚರಣೆ ನಿಷೇಧ ಕಾಯ್ದೆ ಔಚಿತ್ಯ	ಡಾ.ಕೋಚೆ	ರೂ.೪೦
೧೫.	ಲಿಂಗಾಯತ ಹಿಂದೂ ಅಲ್ಲ ವೀರಶೈವವು ಅಲ್ಲ	ಡಾ.ಕೋಚೆ	ರೂ.೧೮
೧೬.	ಮಹಾತ್ಮಗಾಂಧಿ ರಾಮಮನೋಹರ ಲೋಹಿಯಾ ಅವರು ಕಂಡಂತೆ	ಅನು: ಬಿ.ಎ.ಸನದಿ	ರೂ.೨೨
೧೭.	ರಸಿಕ ರುದ್ರತಪಸ್ವಿ ಲೋಹಿಯಾ	ಸಂ: ಡಿ.ಎಸ್.ನಾಗಭೂಷಣ	ರೂ.೫೧
೧೮.	ಸಾಮಾಜವಾದದ ಸಾಲುದೀಪಗಳು	ಸಂ: ಡಿ.ಎಸ್.ನಾಗಭೂಷಣ	ರೂ.೫೧



ಇಲ್ಲಿನ ಲೇಖನಗಳ ಲೇಖಕರ ವೈವಿಧ್ಯ ಮತ್ತು ಅವರು ಬರೆಯಲು ಆಯ್ದುಕೊಂಡಿರುವ ವಿಷಯಗಳೇ, ಸಂದರ್ಭಗಳೇ ಲೋಹಿಯಾ ಅವರ ಬದುಕಿನ ಮೇರೆವರಿಯದ ಎಲ್ಲೆಗಳ ಪರಿಚಯ ಮಾಡಿಕೊಡುವಂತಿದೆ. ಈ ಪುಸ್ತಕದ ಶೀರ್ಷಿಕೆಗೆ ಕಾರಣವಾಗಿರುವ ಮರಾಠಿಯ ಖ್ಯಾತ ಲೇಖಕ ಪು.ಲ. ದೇಶಪಾಂಡೆಯವರು ಲೋಹಿಯಾ ಅವರ ಒಡನಾಟವನ್ನು ಬಣ್ಣಿಸಿದ ರೀತಿ ನಮ್ಮ ಗೋಪಾಲಕೃಷ್ಣ ಅಡಿಗರು ಅವರನ್ನು ಈತ ರಾಜಕಾರಣಕ್ಕೆ ಬರದಿದ್ದಲ್ಲಿ ಓರ್ವ ಮಹಾಕವಿಯಾಗುತ್ತಿದ್ದ ಎಂದಿದ್ದುದನ್ನು ನೆನಪಿಸುತ್ತದೆ. ಕಲಾವಿದನ ಸೂಕ್ಷ್ಮ ಮನಸ್ಸನ್ನೂ, ಜೀವನ ಪ್ರೀತಿಯನ್ನೂ ಸಮೃದ್ಧವಾಗಿ ಹೊಂದಿದ್ದ ಈ ರಾಜಕಾರಣಿ ಜನಸಮ್ಮುಖ ರಾಜಕಾರಣಿಯೂ ಆಗಿದ್ದ ವಿವಿಧ ಪರಿಗಳನ್ನು ಹಿಂದಿಯ ಖ್ಯಾತ ಲೇಖಕ ಧರ್ಮವೀರ ಭಾರತಿ ತಮ್ಮ ಲೇಖನದಲ್ಲಿ ನಿರೂಪಿಸಿದ್ದಾರೆ. ಉಳಿದಂತೆ ಎಸ್.ಆರ್. ನೇನೆ, ಮಸ್ತ್ರಾಂ ಕಪೂರ್, ಜಯಾ ಶ್ರೀವಾಸ್ತವ, ಯೋಗೇಂದ್ರ ಯಾದವ್ ಮತ್ತು ರಜನಿ ಭಕ್ಷಿ ಅವರ ಲೇಖನಗಳು ಲೋಹಿಯಾ ಅವರ ರಾಜಕಾರಣದ ಸರ್ವಾವೃತ ಗುಣವನ್ನು ಹಲವು ಪಕ್ಕಗಳಿಂದ ವಿಶ್ಲೇಷಣೆ ಮಾಡುತ್ತವೆ.

ISBN-978-81-87731-60-3

ಲೋಹಿಯಾ ಪ್ರಕಾಶನ, ಬಳ್ಳಾರಿ

ಬೆಲೆ ರೂ. 51/-